ಬುಧವಾರ, ನವೆಂಬರ್ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 323 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಅವರ ಪರಿಸ್ಥಿತಿ ತಿಳಿಯಲು ಸ್ಕ್ಯಾನ್ ಮಾಡಿ
ಸ್ಟ್ರೋಕ್ ಚಿಕಿತ್ಸೆಗೆ ಮಣಿಪಾಲ್ ಹಾಸ್ಪಿಟಲ್ಸ್ ಸದಾ ಸನ್ನದ್ಧ
MARS
080 2222 1111

ಆಳ-ಅಗಲ
ಕಚ್ಚಾ ಬಾಂಬ್: ಬಳಕೆ ಹೆಚ್ಚಳ
ನಿವೃತ್ತ ಇನ್‌ಸ್ಪೆಕ್ಟರ್ ಬಳಿ ಲಂಚ: ಗೃಹರಕ್ಷಕ ಬಂಧನ 5
49 ತಾಲ್ಲೂಕು: ಅಂತರ್ಜಲ ಪಾತಾಳಕ್ಕೆ 8
ಇಂದು ತಂತ್ರಜ್ಞಾನ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,418 ▲	18,244 ▲	₹54,120 (ಬೆಂಗಳೂರು) ▼	₹63,200 (ಬೆಂಗಳೂರು)	81.67 ▲

15 ಆರ್‌ಒಗಳಿಗೆ ಪೊಲೀಸರ ನೋಟಿಸ್ • ರಾಜ್ಯಕ್ಕೆ ಬಂದ ಕೇಂದ್ರ ತಂಡ

‘ಚಿಲುಮೆ’ ಆಡಳಿತಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ‘ಚಿಲುಮೆ’ ಸಂಸ್ಥೆಯ ಆಡಳಿತಾಧಿಕಾರಿ ಕೆ.ಎಂ. ಲೋಕೇಶ್ ಅವರನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದಾರೆ.

‘ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಲೋಕೇಶ್, ನಗರದ ಪ್ರದೇಶವೊಂದರಲ್ಲಿ ಮಂಗಳವಾರ ಸಂಜೆ ಕಾಣಿಸಿಕೊಂಡಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸಂಸ್ಥೆಯ ಸಂಸ್ಥಾಪಕ ರವಿ ಕುಮಾರ್, ಈತನ ಸಹೋದರ ಕೆಂಪೇಗೌಡ ಸೇರಿದಂತೆ ಏಳು ಜನರನ್ನು ಈಗಾಗಲೇ ಬಂಧಿಸಿ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ. ಲೋಕೇಶ್ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ, ಕಸ್ಟಡಿಗೆ ಪಡೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದೂ ತಿಳಿಸಿದರು.

‘ಚಿಲುಮೆ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ಆಡಳಿತಾಧಿಕಾರಿ ಲೋಕೇಶ್, ಬಿಬಿಎಂಪಿ ಅಧಿಕಾರಿಗಳ ಜೊತೆ ಒಡನಾಟ ಹೊಂದಿದ್ದ. ಬಿಬಿಎಂಪಿ ವ್ಯಾಪ್ತಿಯ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವ ಕೆಲಸ ಕೈಗೊಳ್ಳಲು ಚಿಲುಮೆ ಸಂಸ್ಥೆಗೆ ಅನುಮತಿ ನೀಡಲಾಗಿತ್ತು. ಇದರ ಉಸ್ತುವಾರಿಯನ್ನು ಲೋಕೇಶ್ ವಹಿಸಿಕೊಂಡಿದ್ದ’ ಎಂದು ಹೇಳಿದರು.

‘ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಹಾಗೂ ಮತದಾರರ ನೋಂದಣಾಧಿಕಾರಿ ಸಹಯೋಗದಲ್ಲಿ ಕೆಲಸ ಮಾಡುವ ಷರತ್ತು ವಿಧಿಸಲಾಗಿತ್ತು. ಆದರೆ, ಆರೋಪಿ ಲೋಕೇಶ್ ಷರತ್ತು ಉಲ್ಲಂಘಿಸಿ ಸಿಬ್ಬಂದಿಗಳ ಮೂಲಕ ಕೆಲಸ ಮಾಡಿಸಿದ್ದ. ಮತದಾರರ ಮಾಹಿತಿಯನ್ನು ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡಿದ ಕೃತ್ಯದಲ್ಲೂ ಈತ ಪ್ರಮುಖ ಪಾತ್ರ ವಹಿಸಿದ್ದ’ ಎಂದರು.

‘ಕೃತ್ಯದ ಬಗ್ಗೆ ದೂರು ನೀಡಿದ್ದ ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ ಹಾಗೂ ಚುನಾವಣೆ) ರಂಗಪ್ಪ, ಚಿಲುಮೆ ಸಂಸ್ಥೆ ಹಾಗೂ ಲೋಕೇಶ್ ಹೆಸರು ಪ್ರಸ್ತಾಪಿಸಿದ್ದರು. ಇದೀಗ ಲೋಕೇಶ್ ಬಂಧನವಾಗಿದ್ದು, ಈತನ ವಿಚಾರಣೆಯಿಂದ ಮತ್ತಷ್ಟು ಮಾಹಿತಿ ತಿಳಿಯಬೇಕಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

15 ಆರ್‌ಒಗಳಿಗೆ ನೋಟಿಸ್: ‘ಚಿಲುಮೆ ಸಂಸ್ಥೆ ಸಂಸ್ಥಾಪಕರು ಹಾಗೂ ಸಿಬ್ಬಂದಿಯ ಕೆಲಸದ ಬಗ್ಗೆ ಮಾಹಿತಿ ಪಡೆಯುವುದಕ್ಕಾಗಿ ಬಿಬಿಎಂಪಿ ವ್ಯಾಪ್ತಿಯ 15 ಆರ್‌ಒಗಳಿಗೆ (ಮತದಾರರ ನೋಂದಣಾಧಿಕಾರಿ) ಹಲಸೂರು ಗೇಟ್ ಠಾಣೆ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಚಿಲುಮೆ ಸಂಸ್ಥೆಯ ಸಿಬ್ಬಂದಿ, ಮತದಾರರ ವೈಯಕ್ತಿಕ ಮಾಹಿತಿ ಸಂಗ್ರಹಿಸುತ್ತಿದ್ದ ವಿಷಯ ಆರ್‌ಒಗಳಿಗೆ ಗೊತ್ತಿತ್ತು. ಇಷ್ಟಾದರೂ ಅವರು ಹಿರಿಯ ಅಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡಿರಲಿಲ್ಲ. ಕೃತ್ಯದಲ್ಲಿ ಆರ್‌ಒಗಳ ಪಾತ್ರವಿರುವ ಅನುಮಾನವಿದೆ. ವಿಚಾರಣೆಯಿಂದ ಸತ್ಯ ತಿಳಿಯಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾಹಿತಿ ಪಡೆದ ಅಧಿಕಾರಿಗಳು’

ಮತದಾರರ ಮಾಹಿತಿ ಕಳವು ಮತ್ತು ಮಾರಾಟದ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದು, ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಮಂಗಳವಾರ ಕರ್ನಾಟಕಕ್ಕೆ ಬಂದಿದ್ದು, ಮಾಹಿತಿ ಕಲೆ ಹಾಕಿದ್ದಾರೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಭೇಟಿ ಕೊಟ್ಟ ಅಧಿಕಾರಿಗಳು, ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಂದ ಮಾಹಿತಿ ಪಡೆದರು. ಬಳಿಕ, ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರನ್ನು ಕರೆಯಿಸಿಕೊಂಡು ಅವರಿಂದಲೂ ತನಿಖಾ ಪ್ರಗತಿಯ ವಿವರ ಪಡೆದರು.

‘ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಪ್ರಕರಣ ಗಂಭೀರವಾಗಿದೆ. ಹೀಗಾಗಿ, ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ರಾಜ್ಯಕ್ಕೆ ಬಂದು ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾಹಿತಿ ಸಂಗ್ರಹಕ್ಕೆ ಕೆಲವರ ಒತ್ತಡ’

ಚಿಲುಮೆ ಸಂಸ್ಥೆಯ ಸಂಸ್ಥಾಪಕ ರವಿಕುಮಾರ್ ಅವರನ್ನು ಕಸ್ಟಡಿಗೆ ಪಡೆದಿರುವ ಪೊಲೀಸರು, ವಿಚಾರಣೆ ಮುಂದುವರಿಸಿದ್ದಾರೆ. ಜೊತೆಗೆ, ಅವರಿಂದ ಪ್ರಾಥಮಿಕ ಹೇಳಿಕೆ ಪಡೆದು ಪರಿಶೀಲನೆ ನಡೆಸುತ್ತಿದ್ದಾರೆ.

‘ಮತದಾರರ ವೈಯಕ್ತಿಕ ಮಾಹಿತಿ ಮಾರಾಟ ಮಾಡಿ, ತಪ್ಪು ಮಾಡಿದ್ದೇನೆ. ನನ್ನ ಮೇಲೆ ಕೆಲವರ ಒತ್ತಡವಿತ್ತು. ಹೀಗಾಗಿ, ಮಾಹಿತಿ ಸಂಗ್ರಹಿಸುವ ಕೆಲಸ ಮಾಡಬೇಕಾಯಿತು’ ಎಂದು ರವಿಕುಮಾರ್ ಹೇಳಿಕೆ ನೀಡಿರುವುದಾಗಿ ಗೊತ್ತಾಗಿದೆ.

ಚುನಾವಣಾ ಆಯೋಗಕ್ಕೆ ಬಿಜೆಪಿ ಪತ್ರ

ಬೆಂಗಳೂರು: 2017 ರಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತದಾರರ ಪಟ್ಟಿಯನ್ನು ತಮಗೆ ಬೇಕಾದಂತೆ ಪರಿಷ್ಕರಿಸಲು ಚಿಲುಮೆ ಎಂಬ ಸಂಸ್ಥೆಯನ್ನು ಸರ್ಕಾರಿ ಆದೇಶದ ಮೂಲಕ ನೇಮಿಸಿಕೊಂಡಿದ್ದರು. ಆದ್ದರಿಂದ, ಸಿದ್ದರಾಮಯ್ಯ ಮತ್ತು ಅದರಲ್ಲಿ ಭಾಗಿಯಾಗಿದ್ದ ಎಲ್ಲರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಅವರು ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ. 2018 ರ ವಿಧಾನಸಭಾ ಚುನಾವಣೆಗಾಗಿ ಮತದಾರ ಪಟ್ಟಿಯಿಂದ ಹೆಸರುಗಳನ್ನು ಕೈಬಿಡಲು ಮತ್ತು ಸೇರಿಸಲು ಸಿದ್ದರಾಮಯ್ಯ ಅವರು ಆಡಳಿತ ಯಂತ್ರವನ್ನು ದುರುಪಯೋಗ ಮಾಡಿಕೊಂಡಿದ್ದರು ಎಂದು ಅವರು ಹೇಳಿದ್ದಾರೆ.

3ನೇ ಪುಟ ನೋಡಿ

ಭಾರತಕ್ಕೆ ಕಿವೀಸ್ ನೆಲದಲ್ಲಿ ಸರಣಿ ಕಿರೀಟ

ನೇಪಿಯರ್ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕತ್ವದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಮೂರು ಪಂದ್ಯಗಳ ಟಿ20 ಸರಣಿಯನ್ನು 1–0ಯಿಂದ ಜಯಿಸಿತು. ಮಂಗಳವಾರ ನಡೆದ ಸರಣಿಯ ಕೊನೆಯ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಡಿಎಲ್‌ಎಸ್ ನಿಯಮ ಅನ್ವಯಿಸಲಾಯಿತು. ಪಂದ್ಯ ಟೈನಲ್ಲಿ ಮುಕ್ತಾಯವಾಯಿತು.

ನ್ಯೂಜಿಲೆಂಡ್
160 (19.4 ಓವರ್‌ಗಳಲ್ಲಿ)

ಭಾರತ
4ಕ್ಕೆ75 (9 ಓವರ್‌ಗಳಲ್ಲಿ)
ಫಲಿತಾಂಶ: ಟೈ (ಡಿಎಲ್‌ಎಸ್)

ಅರ್ಷದೀಪ್ ಸಿಂಗ್

4 ಓವರ್
37 ರನ್
4 ವಿಕೆಟ್

ಭಾರತದ ಬೌಲರ್ ಮೊಹಮ್ಮದ್ ಸಿರಾಜ್ (ಮಧ್ಯ) ಅವರನ್ನು ಅಭಿನಂದಿಸಿದ ಸೂರ್ಯಕುಮಾರ್ ಯಾದವ್ ಹಾಗೂ ಯಜುವೇಂದ್ರ ಚಾಹಲ್ –ಎಎಫ್‌ಪಿ ಚಿತ್ರ

14

ಕರ್ನಾಟಕಕ್ಕೆ ಮತ್ತೆ ನೆಲ–ಜಲ ಸಂಕಷ್ಟ

ಶಿಂದೆ ಧೋರಣೆಗೆ ಬೊಮ್ಮಾಯಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜ್ಯಗಳ ನಡುವೆ ವ್ಯಾಜ್ಯಕ್ಕೆ ಪ್ರಚೋದಿಸುವ ಕೆಲಸವನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ಮಾಡಬಾರದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ- ಮಹಾರಾಷ್ಟ್ರ ರಾಜ್ಯಗಳ ಗಡಿ ವಿವಾದ ಬುಧವಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುವ ಹಿನ್ನೆಲೆಯಲ್ಲಿ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಪ್ರಚೋದಿತ ಹೇಳಿಕೆಗೆ ಬೊಮ್ಮಾಯಿ ಅವರು ಮಂಗಳವಾರ ಈ ಪ್ರತಿಕ್ರಿಯೆ ನೀಡಿದರು.

ಮಹಾರಾಷ್ಟ್ರವು ತನ್ನದೆನ್ನುತ್ತಿರುವ ನೆರೆ ರಾಜ್ಯಗಳಲ್ಲಿನ ಪ್ರದೇಶಗಳಲ್ಲಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ಯೋಜನೆ ಮತ್ತು ಈ ಪ್ರದೇಶದ ನಿವಾಸಿಗಳಿಗೆ ಮಹಾತ್ಮ ಫುಲೆ ಜನ ಆರೋಗ್ಯ ಯೋಜನೆ ಜಾರಿಗೊಳಿಸುವುದಾಗಿ ಶಿಂದೆ ಸೋಮವಾರ ಹೇಳಿದ್ದರು.

‘ಮಹಾರಾಷ್ಟ್ರದ ಜತ್ ತಾಲ್ಲೂಕು ಕರ್ನಾಟಕಕ್ಕೆ ಸೇರಬೇಕೆಂದು ಅಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿಗಳು ನಿರ್ಧರಿಸಿದ್ದವು. ನಾವು ಅದನ್ನು ಗಂಭೀರವಾಗಿ ಪರಿಗಣಿಸುತ್ತಿದ್ದೇವೆ’ ಎಂದು ಬೊಮ್ಮಾಯಿ ಹೇಳಿದರು. ‘ಏಕೀಕರಣ, ಸ್ವಾತಂತ್ರ್ಯ ಹೋರಾಟ ಹಾಗೂ ಗೋವಾ ವಿಮೋಚನೆಗೆ ಶ್ರಮಿಸಿದ ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ಪಿಂಚಣಿ ನೀಡಲಾಗುವುದು’ ಎಂದರು.

ಗಡಿ ವಿವಾದ: ಇಂದು ವಿಚಾರಣೆ

ಬೆಂಗಳೂರು: ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ಕುರಿತು ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿದ ಅರ್ಜಿಯು ಬುಧವಾರ ವಿಚಾರಣೆಗೆ ಬರಲಿದೆ. 2004 ರಲ್ಲಿ ಸಲ್ಲಿಕೆಯಾದ ಅರ್ಜಿಯ ವಿಚಾರಣೆ 18 ವರ್ಷಗಳ ಬಳಿಕ ನಡೆಯಲಿದೆ. ಬೆಳಗಾವಿ, ಬೀದರ್, ಭಾಲ್ಕಿ, ಕಾರವಾರ ಸೇರಿದಂತೆ 865 ಹಳ್ಳಿಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬುದು ಆ ರಾಜ್ಯದ ವಾದ.

‘ಮೇಕೆದಾಟು: ಕಾವೇರಿ ಪ್ರಾಧಿಕಾರಕ್ಕಿಲ್ಲ ಅಧಿಕಾರ’

ನವದೆಹಲಿ: ‘ಕಾವೇರಿ ಜಲ ವಿವಾದ ನ್ಯಾಯಾಧಿಕರಣವು 2007ರ ಫೆಬ್ರುವರಿ 2ರಂದು ನೀಡಿರುವ ಅಂತಿಮ ಆದೇಶವನ್ನು ಅನುಷ್ಠಾನ ಮಾಡಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು (ಸಿಡಬ್ಲ್ಯುಎಂಎ) ರಚಿಸಲಾಗಿದೆ. ಮೇಕೆದಾಟು ಸಮತೋಲನ ಜಲಾಶಯ ಸೇರಿದಂತೆ ಹೊಸ ಯೋಜನೆಗಳ ಬಗ್ಗೆ ಚರ್ಚೆ ನಡೆಸುವ ಅಧಿಕಾರ ಈ ಪ್ರಾಧಿಕಾರಕ್ಕೆ ಇಲ್ಲ. ಒಂದು ವೇಳೆ ಚರ್ಚೆ ನಡೆಸಿದರೆ ನ್ಯಾಯಾಂಗ ನಿಂದನೆ ಯಾಗುತ್ತದೆ’ ಎಂದು ತಮಿಳುನಾಡು ಸರ್ಕಾರ ಹೇಳಿದೆ.

‘ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಅವಕಾಶ ನೀಡಬಾರದು ಹಾಗೂ ಈ ಯೋಜನೆಯ ಸಮಗ್ರ ಯೋಜನಾ ವರದಿಯ ಬಗ್ಗೆ ಪ್ರಾಧಿಕಾರದಲ್ಲಿ ಚರ್ಚಿಸಬಾರದು. ಈ ಬಗ್ಗೆ ನಿರ್ದೇಶನ ನೀಡಬೇಕು’ ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ಬಗ್ಗೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಂದ ಅಭಿಪ್ರಾಯ ಕೋರಲಾಗಿತ್ತು. ಜುಲೈ 26ರಂದು ಪ್ರಾಧಿಕಾರಕ್ಕೆ ಅಭಿಪ್ರಾಯ ನೀಡಿದ್ದ ಸಾಲಿಸಿಟರ್ ಜನರಲ್, ‘ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಮಾರ್ಪಾಡಾಗಿರುವ ಅಂತಿಮ ತೀರ್ಪಿನ ಪ್ರಕಾರ, ಪ್ರಾಧಿಕಾರಕ್ಕೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇದೆ’ ಎಂದು ತಿಳಿಸಿದ್ದರು. ಈ ಅಭಿಪ್ರಾಯದ ಆಧಾರದಲ್ಲಿ ಪ್ರಾಧಿಕಾರವು ಸೆಪ್ಟೆಂಬರ್ 7ರಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು. ಇದಕ್ಕೆ ಪ್ರತಿಯಾಗಿ ತಮಿಳುನಾಡು ಸರ್ಕಾರವು 155 ಪುಟಗಳ ಪ್ರಮಾಣಪತ್ರವನ್ನು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಸಲ್ಲಿಸಿದೆ.

8ನೇ ಪುಟ ನೋಡಿ

ಬಿಬಿಎಂಪಿ ಮೀಸಲಾತಿ ಕಾಲಾವಕಾಶ ಕೋರಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ವಾರ್ಡ್‌ಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲು ಮೂರು ತಿಂಗಳು ಕಾಲಾವಕಾಶ ನೀಡಬೇಕು ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದೆ.

ಡಿಸೆಂಬರ್ 30ರೊಳಗೆ ಬಿಬಿಎಂಪಿಗೆ ಚುನಾವಣೆ ನಡೆಸಬೇಕು ಎಂದು ರಾಜ್ಯ ಚುನಾವಣೆ ಆಯೋಗಕ್ಕೆ ಹೈಕೋರ್ಟ್ ಸೆ.30ರಂದು ಸೂಚನೆ ನೀಡಿತ್ತು. ಜತೆಗೆ, ನ.30ರೊಳಗೆ ಮೀಸಲಾತಿ ಹೊರಡಿಸುವಂತೆ ಸರ್ಕಾರಕ್ಕೆ ಆದೇಶಿಸಿತ್ತು.

ರಾಜ್ಯ ಸರ್ಕಾರದ ಅಡ್ವೊಕೇಟ್ ಜನರಲ್ ಅವರು ಮಂಗಳವಾರ ಹೈಕೋರ್ಟ್‌ಗೆ ಕಾಲಾವಕಾಶ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ.

‘ಹೈಕೋರ್ಟ್ ಅವಲೋಕಿಸಿದಂತೆ ಕೆಲವು ವಿಷಯಗಳ ಬಗೆಗಿನ ವರದಿಯನ್ನು ಮರು ವಿಮರ್ಶಿಸಲು ನ್ಯಾಯಮೂರ್ತಿ ಕೆ. ಭಕ್ತವತ್ಸಲ ಆಯೋಗ ಹೆಚ್ಚುವರಿ ಸಮಯವನ್ನು ಕೇಳಿದೆ. ಕೋರ್ಟ್ ಆದೇಶದಂತೆ ಸರ್ಕಾರ ಮಹಿಳಾ ಮೀಸಲಾತಿಯನ್ನು ಮತ್ತೆ ನಿರ್ಧರಿಸಲು ಕೆಲವು ಪ್ರಕ್ರಿಯೆ ನಡೆಸಿದೆ. ಆಯೋಗಕ್ಕೆ ಹೆಚ್ಚಿನ ಸಮಯ ಬೇಕಿರುವುದರಿಂದ ಮೀಸಲಾತಿ ಪ್ರಕಟಿಸಲು ಕಾಲಾವಕಾಶ ಬೇಕು’ ಎಂದು ಮಧ್ಯಂತರ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಫಿಫಾ: ಮೆಸ್ಸಿ ಬಳಗಕ್ಕೆ ಆಘಾತ

ಲುಸೈಲ್, ಕತಾರ್ (ರಾಯಿಟರ್ಸ್/ಎಎಫ್‌ಪಿ): ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡಕ್ಕೆ ಮಂಗಳವಾರ ಫಿಫಾ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಸೌದಿ ಅರೇಬಿಯಾ ಆಘಾತ ನೀಡಿತು.



‘ಸಿ’ ಗುಂಪಿನ ಪಂದ್ಯದಲ್ಲಿ 51ನೇ ರ‍್ಯಾಂಕ್‌ನಲ್ಲಿರುವ ಸೌದಿ ತಂಡವು ಮೂರನೇ ಶ್ರೇಯಾಂಕದ ಅರ್ಜೆಂಟೀನಾವನ್ನು 2–1 ಗೋಲುಗಳಿಂದ ಸೋಲಿಸಿತು. ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ದಾಖಲಾದ ಅತಿದೊಡ್ಡ ಅಚ್ಚರಿಗಳಲ್ಲಿ ಈ ಪಂದ್ಯವೂ ಒಂದು.

13

ಕೊಯಮತ್ತೂರು ಸ್ಫೋಟಕ್ಕೂ ಆರೋಪಿಗೂ ನಂಟು?

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಗರೋಡಿಯಲ್ಲಿ ನ.19ರಂದು ಆಟೊರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿದ ಪ್ರಕರಣದ ಆರೋಪಿ ಮೊಹಮ್ಮದ್ ಶಾರಿಕ್‌ಗೂ (24) ತಮಿಳುನಾಡಿನ ಕೊಯಮತ್ತೂರಿನಲ್ಲಿ ಕಳೆದ ತಿಂಗಳು (ಅ.23ರಂದು) ನಡೆದಿದ್ದ ಸ್ಫೋಟ ಪ್ರಕರಣಕ್ಕೂ ನಂಟು ಇರುವ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕೊಯಮತ್ತೂರಿನಲ್ಲಿ ಸ್ಫೋಟ ಸಂಭವಿಸುವುದಕ್ಕೆ ಸುಮಾರು ಒಂದೂವರೆ ತಿಂಗಳ ಹಿಂದೆ ಶಾರಿಕ್ ಕೊಯಮತ್ತೂರಿಗೆ ಹೋಗಿದ್ದ. ಗುರುತಿನ ಬಗ್ಗೆ ಸುಳ್ಳು ಮಾಹಿತಿ ನೀಡಿ, ತಾನು ಹಿಂದೂ ಎಂದು ಪರಿಚಯಿಸಿಕೊಂಡು ಮೂರು ನಾಲ್ಕು ದಿನ ಅಲ್ಲಿಯೇ ಬಾಡಿಗೆ ಕೊಠಡಿಯಲ್ಲಿ (ಡಾರ್ಮೆಟರಿ) ನೆಲೆಸಿದ್ದ. ಇದಕ್ಕಾಗಿ ಆತ ಸಂಡೂರಿನ ಅರುಣ್ ಕುಮಾರ್ ಗಾವಳಿ ಅವರ ಆಧಾರ್ ಕಾರ್ಡ್ ದುರ್ಬಳಕೆ ಮಾಡಿದ್ದ. ಅರುಣ್ ಕುಮಾರ್ ಗಾವಳಿ ಅವರನ್ನು ಪೊಲೀಸರು ವಿಚಾರಣೆ ನಡೆಸಿದಾಗ ಅವರ ಆಧಾರ್ ಕಾರ್ಡ್ 6 ತಿಂಗಳ ಹಿಂದೆ ಕಳವಾಗಿದ್ದು ಗೊತ್ತಾಗಿತ್ತು. ಅವರು ಕೊಯಮತ್ತೂರಿಗೆ ಹೋಗಿಯೇ ಇರಲಿಲ್ಲ.

ಕೊಯಮತ್ತೂರಿನಲ್ಲಿ ಶಾರಿಕ್ ನೆಲೆಸಿದ್ದ ಒಂದೂವರೆ ತಿಂಗಳ ನಂತರ ಕೊಯಮತ್ತೂರು ಸೋಮನಾಥೇಶ್ವರ ದೇವಸ್ಥಾನದ ಬಳಿ ಕಾರಿನಲ್ಲಿ ಸಿಲಿಂಡರ್ ಸ್ಫೋಟಗೊಂಡು ಜಮೀಶಾ ಮುಬಿನ್ (29) ಎಂಬಾತ ಮೃತಪಟ್ಟಿದ್ದ. ಆತನೇ ಆ ಸ್ಫೋಟದ ಸೂತ್ರಧಾರಿ ಎಂಬುದು ಬಳಿಕ ಗೊತ್ತಾಗಿತ್ತು. ಆತ ವಾಸವಿದ್ದ ಮನೆಯಲ್ಲೇ ಬಾಂಬ್ ತಯಾರಿಗೆ ಬಳಸುವ ರಾಸಾಯನಿಕಗಳು ಪತ್ತೆಯಾಗಿದ್ದವು. ಸ್ಫೋಟ ಸಂಬಂಧ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣ ಸಂಬಂಧ ಆರು ಮಂದಿಯನ್ನು ಸ್ಥಳೀಯ ಪೊಲೀಸರು ಬಂಧಿಸಿದ್ದರು. ಬಳಿಕ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಕೊಯಮತ್ತೂರಿನಲ್ಲಿರುವ ಪ್ರಸಿದ್ಧ ಧಾರ್ಮಿಕ ಕೇಂದ್ರ (ಈಶ ಫೌಂಡೇಷನ್) ವೊಂದನ್ನು ಗುರಿಯಾಗಿಸಿ ಬಾಂಬ್ ಸ್ಫೋಟ ನಡೆಸುವ ಸಂಚು ನಡೆದಿದ್ದನ್ನು ಖಚಿತಪಡಿಸಿತ್ತು.

6ನೇ ಪುಟ ನೋಡಿ

ಚರ್ಮಗಂಟು ರೋಗ: ಅಧಿಕಾರಿಗಳ ಅಳಲು

ಲಸಿಕೆ ಹಾಕಲು ಸಿಬ್ಬಂದಿ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಗಡಿಭಾಗದಲ್ಲಿ ಚರ್ಮಗಂಟು ರೋಗದ ವೈರಾಣುಗಳು ತೀವ್ರಗತಿಯಲ್ಲಿ ಹರಡುತ್ತಿರುವುದರಿಂದ ಜಾನುವಾರುಗಳ ಸಾವಿನ ಪ್ರಮಾಣ ಹೆಚ್ಚಾಗುತ್ತಿದೆ. ಆದರೆ, ಲಸಿಕೆ ಹಾಕಲು ಸಿಬ್ಬಂದಿ ಸಾಲುತ್ತಿಲ್ಲ’ ಎಂದು ಅಧಿಕಾರಿಗಳು ಅಳಲು ತೋಡಿಕೊಂಡರು.

ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ಪಶುಸಂಗೋಪನೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖೆ ಸಚಿವ ಪ್ರಭು ಚವ್ಹಾಣ ಅವರು, ‘ಚರ್ಮಗಂಟು ರೋಗದ ಉಲ್ಬಣದಿಂದ ಜಾನುವಾರುಗಳ ಸಾವಿನ ಸಂಖ್ಯೆ ಹೆಚ್ಚುತ್ತಿದೆ. ನಿಯಂತ್ರಣ ಏಕೆ ಸಾಧ್ಯವಾಗುತ್ತಿಲ್ಲ’ ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಇಲಾಖೆ ನಿರ್ದೇಶಕ ಡಾ.ಮಂಜುನಾಥ್ ಪಾಳೇಗಾರ್, ‘ರಾಜ್ಯದಲ್ಲಿ ಈವರೆಗೆ ಚರ್ಮಗಂಟು ರೋಗಕ್ಕೆ 51 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. ಆದರೆ ಸಿಬ್ಬಂದಿ ಇಲ್ಲದಿರುವ ಕಾರಣ ಲಸಿಕೆ ನೀಡುವ ಪ್ರಕ್ರಿಯೆ ತಡವಾಗುತ್ತಿದೆ’ ಎಂದರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಇಲಾಖೆ ಕಾರ್ಯದರ್ಶಿ ಡಾ.ಸಲ್ಮಾ ಕೆ.ಫಾಹಿಮಾ, ಚರ್ಮಗಂಟು ರೋಗ ಮತ್ತು ಕಾಲುಬಾಯಿ ರೋಗ ಲಸಿಕೆ ನೀಡುವ ಪ್ರಕ್ರಿಯೆಗೆ ಪಶುವೈದ್ಯ ವಿದ್ಯಾರ್ಥಿಗಳು ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳನ್ನು ಒದಗಿಸುವಂತೆ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ವೀರಣ್ಣ ಅವರಿಗೆ ಸೂಚಿಸಿದರು.

‘ಈಗಾಗಲೇ ಪಶುವೈದ್ಯ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳನ್ನು ಲಸಿಕಾಕರಣ ಮತ್ತು ರೋಗ ನಿಯಂತ್ರಣ ಪ್ರಕ್ರಿಯೆಗಳಲ್ಲಿ ತೊಡಗಿಸಲಾಗಿದೆ’ ಎಂದು ವೀರಣ್ಣ ವಿವರಿಸಿದರು.

ಗೋಶಾಲೆ– ಸಚಿವರ ಗಡುವು: ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಗಳನ್ನು ಡಿಸೆಂಬರ್ ಅಂತ್ಯದೊಳಗೆ ಆರಂಭಿಸಬೇಕು ಎಂದು ಸಚಿವ ಪ್ರಭು ಚವ್ಹಾಣ ಅಧಿಕಾರಿಗಳಿಗೆ ಗಡುವು ನೀಡಿದರು. ಸರ್ಕಾರಿ ಜಿಲ್ಲಾ ಗೋಶಾಲೆಗಳ ಈಗಿನ ಸ್ಥಿತಿಗತಿಗಳ ಕುರಿತು ಮಾಹಿತಿ ಪಡೆದು ಅಧಿಕಾರಿಗಳ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದರು.

‘ಏಳೇ ದಿನಗಳಲ್ಲಿ ಖಾತೆ ಬದಲಾವಣೆ’

ಬೆಂಗಳೂರು: ಸ್ಥಿರಾಸ್ತಿಗಳ ಮಾರಾಟದ ಕ್ರಯಪತ್ರಗಳು ನೋಂದಣಿಯಾದ ಏಳು ದಿನಗಳೊಳಗೆ ಖರೀದಿದಾರರ ಹೆಸರಿಗೆ ಖಾತೆ ಮತ್ತು ಪಹಣಿ ಬದಲಾವಣೆ ಮಾಡುವುದನ್ನು ಕಡ್ಡಾಯಗೊಳಿಸುವ ಕ್ರಮ ಜಾರಿಗೆ ತರಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಈಗ ನೋಂದಣಿ ಪ್ರಕ್ರಿಯೆ ನಡೆದ ನಂತರದ 34 ದಿನಗಳೊಳಗೆ ಖಾತೆ ಬದಲಾವಣೆ ಮಾಡಬೇಕೆಂಬ ನಿಯಮವಿದೆ. ಇದರಿಂದ ಆಸ್ತಿ ಖರೀದಿದಾರರಿಗೆ ಸಮಸ್ಯೆಯಾಗುತ್ತಿದೆ. ತ್ವರಿತವಾಗಿ ಬ್ಯಾಂಕ್‌ಗಳಿಂದ ಸಾಲ ಪಡೆಯುವುದಕ್ಕೂ ಆಗುತ್ತಿಲ್ಲ. ಈ ಎಲ್ಲವನ್ನೂ ಪರಿಗಣಿಸಿ ಏಳು ದಿನಗಳೊಳಗೆ ಖಾತೆ ಮತ್ತು ಪಹಣಿ ಬದಲಾವಣೆ ಕಡ್ಡಾಯ ಮಾಡಲಾಗುವುದು’ ಎಂದರು.

ಮಸೂದೆ ಮಂಡನೆ: ಕಾಫಿ ಎಸ್ಟೇಟ್‌ಗಳ ಮಾಲೀಕರು ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಜಮೀನುಗಳನ್ನು ದೀರ್ಘಾವಧಿಗೆ ಅವರಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಲಾಗಿದೆ. ಸರ್ಕಾರಿ ಜಮೀನುಗಳನ್ನು ಗುತ್ತಿಗೆಗೆ ನೀಡಲು ಅವಕಾಶ ಕಲ್ಪಿಸುವುದಕ್ಕೆ ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತರಬೇಕಿದೆ. ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲಾಗುವುದು ಎಂದು ಸಚಿವರು ತಿಳಿಸಿದರು. ಸುಮಾರು ಒಂದು ಲಕ್ಷ ಎಕರೆ ಸರ್ಕಾರಿ ಜಮೀನನ್ನು ಕಾಫಿ ಎಸ್ಟೇಟ್‌ಗಳ ಮಾಲೀಕರಿಗೆ ಗುತ್ತಿಗೆಗೆ ನೀಡುವ ಪ್ರಸ್ತಾವವಿದೆ. ಇಲಾಖಾ ಹಂತದಲ್ಲಿ ಈಗಾಗಲೇ ತೀರ್ಮಾನ ಮಾಡಲಾಗಿದೆ. ತಿದ್ದುಪಡಿ ಮಸೂದೆ ಜಾರಿಗೆ ಬಂದ ಬಳಿಕ ಗುತ್ತಿಗೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ ಎಂದರು.

ಕಬಿನಿ ವನ್ಯಜೀವಿ ಧಾಮದಲ್ಲಿ ಸ್ಥಳಾಂತರಗೊಂಡ 34 ಹಾಡಿಗಳ ಜನರಿಗೆ ಅರಣ್ಯ ಇಲಾಖೆಯಿಂದ 1,100 ಎಕರೆ ಜಮೀನು ನೀಡಬೇಕಿತ್ತು. ಈವರೆಗೆ 800 ಎಕರೆ ಮಾತ್ರ ನೀಡಲಾಗಿದೆ. ಇನ್ನೂ 300 ಎಕರೆ ಜಮೀನನ್ನು ನೀಡಬೇಕಿದೆ. ಈ ಕುರಿತು ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಶೀಘ್ರದಲ್ಲಿ ಸಭೆ ನಡೆಸಲಾಗುವುದು ಎಂದು ಹೇಳಿದರು.

‘ಕಾಯ್ದೆ ತಿದ್ದುಪಡಿಗೆ ಪ್ರಕ್ರಿಯೆ ಆರಂಭ’: ‘ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ಹಾಡಿ, ಮಜರೆ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿ ಮತ್ತಿತರ ಜನವಸತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವುದಕ್ಕೆ ಪೂರಕವಾಗಿ ಕಾಯ್ದೆ ತಿದ್ದುಪಡಿ ಪ್ರಕ್ರಿಯೆ ಆರಂಭವಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು. ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಹಾವೇರಿ, ಗದಗ ಮತ್ತಿತರ ಜಿಲ್ಲೆಗಳ ಇಂತಹ ಜನವಸತಿಗಳ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಲು 2023ರ ಜನವರಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ವಿ.ವಿ. ಸಾಗರಕ್ಕೆ ಮೊದಲ ಬಾಗಿನ 7

ಅಸ್ಸಾಂ–ಮೇಘಾಲಯ ಗಡಿಯಲ್ಲಿ ಘರ್ಷಣೆ: 6 ಸಾವು 8

ದೇವಸ್ಥಾನ: ದಲಿತರಿಗೆ ನಿರ್ಬಂಧ 6

ALVA'S EDUCATION FOUNDATION (R.)
ALVA'S Education Foundation®
Vidyagiri-Moodubidire - 574 227

NEET 2022 RESULT
Above 600 Marks 31 Students
Above 500 Marks 237 Students
Above 400 Marks 576 Students
Above 300 Marks 1002 Students
Remarkable Achievement
377 Students joined MBBS this year 2022
ADMISSIONS OPEN
LONG TERM NEET 2023
REPEATERS' BATCH
25 YEARS EXPERIENCE IN COACHING FOR COMPETITIVE EXAMS
NEET RANK ENHANCEMENT PROGRAM
Special concession based on NEET marks
- Experienced Faculty.
- Weekly NEET mock tests.
- Cumulative testing.
- Affordable fees.
- Individual attention.
- Everyday Doubt solving Sessions.
- Daily guided study hours.
- Extensive chapterwise study material.
- Separate Hostel for Boys & Girls within Campus.
- More than 300 NTA-NEET model papers with solution.

Safe campus with 24x7 Medical Facility
6366377823, 6366377825, 6366377827, 9448915155
Visit: www.alvaspucollege.org
We have no other Branch

ನಾದವು ಪರಂಪರೆಯ ಜೀವನಾಡಿ: ಸದ್ಗುರು ಮಧುಸೂದನ ಸಾಯಿ

ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ): ನಾದಕ್ಕೆ ತಾನು ಬೆಳೆಯುತ್ತ ತನ್ನನ್ನು ಆಶ್ರಯಿಸುವ ಪ್ರತಿಯೊಬ್ಬರನ್ನು ಬೆಳೆಸುವ ಮಾಂತ್ರಿಕ ಶಕ್ತಿ ಇದೆ. ನಾದವು ದೇಶದ ಪರಂಪರೆಯ ಜೀವನಾಡಿ ಎಂದು ಸದ್ಗುರು ಮಧುಸೂದನ ಸಾಯಿ ಹೇಳಿದರು.

ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿ ಮಂಗಳವಾರ ಸತ್ಯಸಾಯಿ ಬಾಬಾ ಅವರ 97ನೇ ಜನ್ಮದಿನದ ಅಂಗವಾಗಿ ನಡೆದ ಭಾರತ ಶಾಸ್ತ್ರೀಯ ಸಂಗೀತ ಸಮ್ಮೇಳನದ ಸಮಾರೋಪ ಮತ್ತು ಸತ್ಯಸಾಯಿ ಸಂಗೀತ ಶಿರೋಮಣಿ ಪುರಸ್ಕಾರ ಪ್ರದಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪದ್ಮಶ್ರೀ ಅರುಣಾ ಸಾಯಿರಾಂ ಮತ್ತು ಪಂಡಿತ್ ತೇಜೇಂದ್ರ ನಾರಾಯಣ ಮಜುಂದಾರ್ ಅವರಿಗೆ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾನಿಲಯದಿಂದ ಸತ್ಯಸಾಯಿ ಸಂಗೀತ ಶಿರೋಮಣಿ ಪುರಸ್ಕಾರ ಪ್ರದಾನ ಮಾಡಲಾಯಿತು.

ಸಭಾ ವೇದಿಕೆಯಲ್ಲಿ ಉಸ್ತಾದ್ ಅಮ್ಜದ್ ಅಲಿ ಖಾನ್, ವಿವಿ ಕುಲಪತಿ ಬಿ.ಎನ್. ನರಸಿಂಹಮೂರ್ತಿ, ಸತ್ಯಸಾಯಿ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿ.ಶ್ರೀನಿವಾಸ್,ಮೈಸೂರು ಮಂಜುನಾಥ್, ಉಪ ಕುಲಪತಿ ಶ್ರೀಕಂಠ ಮೂರ್ತಿ ಇತರರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ನಡೆದ ಸಂಗೀತ ಸಮ್ಮೇಳನದಲ್ಲಿ ಮೈಸೂರು ಮಂಜುನಾಥ್, ಪಂಡಿತ್ ಚೇತನ್ ಜೋಷಿ, ಬಿ.ಸಿ. ಮಂಜುನಾಥ್ ಮೊದಲಾದ ಸಂಗೀತ ವಿದ್ವಾಂಸರು ವಿವಿಧ ವಿಚಾರಗಳ ಬಗ್ಗೆ ಉಪನ್ಯಾಸ ನೀಡಿದ್ದರು.

ನಿರ್ಮಲಾ ರಾಜಶೇಖರ್ ಅವರು ವೀಣಾ ವಾದನ ಕಛೇರಿ ನಡೆಸಿಕೊಟ್ಟರು.

ಚುನಾವಣಾ ಆಯೋಗಕ್ಕೆ ಬಿಜೆಪಿ ಪತ್ರ

ಒಂದನೇ ಪುಟದಿಂದ...

ಕಾನೂನು ಬಾಹಿರ ಕೆಲಸ ಮಾಡಲು ಚಿಲುಮೆ ಸಂಸ್ಥೆಯನ್ನು ನೇಮಿಸಿಕೊಂಡಿದ್ದರು. ಅಂದು ಅವರು ಮಾಡಿರುವ ಅಕ್ರಮದ ವಿರುದ್ಧ ಈಗ ಅವರೇ ದೂರು ನೀಡಿರುವುದು ವಿಪರ್ಯಾಸ ಎಂದಿದ್ದಾರೆ.

2023ರಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ರಾಜ್ಯ ಚುನಾವಣಾ ಆಯೋಗ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡುತ್ತಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೇನೂ ಇಲ್ಲ. ಮತದಾರರ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಯ ಹೆಸರು ಹಲವು ಕಡೆಗಳಲ್ಲಿ ಇದ್ದು, ಅವುಗಳನ್ನು ತೆಗೆದುಹಾಕಿದ್ದಾರೆ ಎಂದು ರವಿಕುಮಾರ್ ತಿಳಿಸಿದ್ದಾರೆ.

ಈ ಹಿಂದೆ ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗಿದ್ದ ಕಾಂಗ್ರೆಸ್ ಪಕ್ಷ ಈಗ ಚುನಾವಣಾ ಆಯೋಗದ ದಾರಿ ತಪ್ಪಿಸುವ ಮೂಲಕ ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ನಡೆಸಲು ಅಡ್ಡಿ ಉಂಟು ಮಾಡುತ್ತಿದೆ ಎಂದು ದೂರಿದ್ದಾರೆ.

ಚಿಲುಮೆ ಸಂಸ್ಥೆಯನ್ನು ಮತದಾರರ ಜಾಗೃತಿಗೆ ಎಂದು ಬಿಬಿಎಂಪಿ ನೇಮಕ ಮಾಡಿಕೊಂಡಿದ್ದರೂ, ತನ್ನ ಕಾರ್ಯವ್ಯಾಪ್ತಿ ಮೀರಿ ಕೆಲಸ ಮಾಡುತ್ತಿದ್ದ ಬಗ್ಗೆ ದೂರು ಬಂದ ಕಾರಣ ಆ ಸಂಸ್ಥೆ ವಿರುದ್ಧ ದೂರು ದಾಖಲಿಸಲಾಗಿದೆ. ಹಲವು ಉದ್ಯೋಗಿಗಳನ್ನೂ ಬಂಧಿಸಲಾಗಿದೆ ಎಂದು ರವಿಕುಮಾರ್ ತಿಳಿಸಿದ್ದಾರೆ.

27 ಲಕ್ಷ ಹೆಸರು ತೆಗೆದಿದ್ದು ಹೇಗೆ?: ಡಿ.ಕೆ. ಶಿವಕುಮಾರ್

ಬೆಂಗಳೂರು: 'ಮತದಾರರ ಪಟ್ಟಿಯಲ್ಲಿ ಹೆಸರು ತೆಗೆಯಲು ಅಥವಾ ಸೇರಿಸಲು ಅರ್ಜಿ ನಮೂನೆ 7 ಸಲ್ಲಿಸಬೇಕು. ಈ ಅರ್ಜಿಗಳು ಇಲ್ಲದೆ, ರಾಜ್ಯದಲ್ಲಿ 27 ಲಕ್ಷ ಮತದಾರರ ಹೆಸರು ತೆಗೆದಿದ್ದು ಹೇಗೆ. ಅವುಗಳಿಗೆ ಸಹಿ ಹಾಕಿದವರು ಯಾರು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಚಿಲುಮೆ ಸಂಸ್ಥೆಗೆ ಬೇರೆ ಬೇರೆ ಕೆಲಸವನ್ನು ಸರ್ಕಾರ ನೀಡಿರಬಹುದು. ಆದರೆ, ಆ ಕೆಲಸಗಳಿಗೂ, ಈ ಚುನಾವಣೆ ಸಂಬಂಧಿಸಿದ ಕೆಲಸಗಳಿಗೂ ಬಹಳ ವ್ಯತ್ಯಾಸವಿದೆ' ಎಂದರು. 'ಚುನಾವಣಾ ಆಯೋಗದ ಅಧಿಕಾರಿಗಳನ್ನು ಬುಧವಾರ ಭೇಟಿ ಮಾಡಿ ದೂರು ನೀಡುತ್ತೇವೆ. ದೂರು ಕೊಟ್ಟ ನಂತರ ಏನು ದೂರು ಕೊಟ್ಟಿದ್ದೇವೆಂದು ತಿಳಿಸುತ್ತೇವೆ. ಎಲ್ಲವನ್ನೂ ಈಗಲೇ ಬಹಿರಂಗ ಮಾಡುವುದಿಲ್ಲ' ಎಂದು ಅವರು ಹೇಳಿದರು.



ಹಳೆ ಮದ್ರಾಸ್ ರಸ್ತೆಯಲ್ಲಿ 'ರ್‍ಯಾಪಿಡ್ ರಸ್ತೆ' ನಿರ್ಮಾಣದ ಅಂಗವಾಗಿ ಪ್ಯಾನಲ್‌ಗಳನ್ನು ಅಳವಡಿಸಲು ಮುಂದಾಗಿದ್ದ ಸಿಬ್ಬಂದಿ (ಎಡಚಿತ್ರ) ಪ್ಯಾನಲ್ ಅಳವಡಿಕೆ ಕಾರ್ಯ ಪೂರ್ಣಗೊಂಡ ನಂತರ ಕಂಡುಬಂದ ರಸ್ತೆಯ ನೋಟ — ಪ್ರಜಾವಾಣಿ ಚಿತ್ರ

ಹೊಸ ತಂತ್ರಜ್ಞಾನ ಅಳವಡಿಕೆ; ಇನ್ನು ಮುಂದೆ ವೈಟ್ ಟಾಪಿಂಗ್ ಇಲ್ಲ

3 ದಿನದಲ್ಲಿ 'ರ್‍ಯಾಪಿಡ್ ರಸ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆಗಳ ನಿರ್ಮಾಣಕ್ಕೆ ತಿಂಗಳುಗಟ್ಟಲೆ ಕಾಯಬೇಕಾದ ಅಗತ್ಯ ಇಲ್ಲ. ಕಾಂಕ್ರೀಟ್ ಹಾಕಿ ಅದನ್ನು ತಿಂಗಳುಗಟ್ಟಲೆ ಕ್ಯೂರ್ ಮಾಡಬೇಕಾಗಿಯೂ ಇಲ್ಲ. ಈಗ ಮೂರೇ ದಿನಗಳಲ್ಲಿ ರಸ್ತೆ ಸಂಚಾರಕ್ಕೆ ಸಿದ್ಧವಾಗುತ್ತದೆ... ಅದಕ್ಕೆ 'ರ್‍ಯಾಪಿಡ್ ರಸ್ತೆ' ಎಂದು ಕರೆಯಲಾಗುತ್ತದೆ.

ಬಿಬಿಎಂಪಿ ಇಂತಹ ಕ್ಷಿಪ್ರಗತಿಯಲ್ಲಿ ನಿರ್ಮಾಣವಾಗುವ 'ರ್‍ಯಾಪಿಡ್ ರಸ್ತೆ'ಗಳನ್ನು ವೈಟ್ ಟಾಪಿಂಗ್ ರಸ್ತೆಗೆ ಪರ್ಯಾಯವಾಗಿ ಅನುಷ್ಠಾನಕ್ಕೆ ತರಲಿದೆ. ಹಳೇ ಮದ್ರಾಸ್ ರಸ್ತೆಯಲ್ಲಿ ಈ ಹೊಸ ತಂತ್ರಜ್ಞಾನದ ರಸ್ತೆಯನ್ನು ಪ್ರಾಯೋಗಿಕವಾಗಿ ನಿರ್ಮಿಸಲಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಹೊಸ ಬಿನ್ನಿಮಂಗಲ ವೃತ್ತದಲ್ಲಿ 500 ಮೀಟರ್ ರಸ್ತೆಯನ್ನು 'ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪೇವ್‌ಮೆಂಟ್' ತಂತ್ರಜ್ಞಾನದ 'ರ್‍ಯಾಪಿಡ್ ರಸ್ತೆ'ಯನ್ನು ಪ್ರಾಯೋಗಿಕವಾಗಿ ನಿರ್ಮಿಸಲಾಗಿದೆ. ಮುಖ್ಯ ಆಯುಕ್ತರು ಸೇರಿದಂತೆ ಪ್ರಧಾನ ಎಂಜಿನಿಯರ್ ಈ ರಸ್ತೆಯನ್ನು ಪರಿಶೀಲಿಸಿದ್ದು, ಮುಂದೆ ನಗರದಲ್ಲಿ ಇಂತಹದ್ದೇ ರಸ್ತೆ ನಿರ್ಮಿಸಲು ಯೋಜಿಸಲಾಗಿದೆ.

ಮೇಲ್ಸೇತುವೆ, ಮೆಟ್ರೊ ಹಳಿ ನಿರ್ಮಿಸುವ ಸಂದರ್ಭದಲ್ಲಿ ಪ್ರೀಕಾಸ್ಟ್ ಪ್ಯಾನಲ್‌ಗಳನ್ನು ಅಳವಡಿಸಲಾಗುತ್ತದೆ. ಅದೇ ರೀತಿಯಲ್ಲಿ ಇದೀಗ ರಸ್ತೆಯ ಮೇಲೆ 'ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪ್ಯಾನಲ್'ಗಳನ್ನು ಅಳವಡಿಸಲಾಗುತ್ತದೆ. ವಾಹನಗಳು ಇದರ ಮೇಲೆ ಸಂಚರಿಸುವಾಗ ಅದರ ಭಾರ ಪೂರ್ಣ ಈ ಪ್ಯಾನಲ್‌ಗಳ ಮೇಲೆ ಬೀಳುವಂತೆ ಪೋಸ್ಟ್ ಟೆನ್ಷನಿಂಗ್ ಮಾಡಲಾಗಿರುತ್ತದೆ. ಒಂದು ಪ್ಯಾನಲ್‌ನಿಂದ ಮತ್ತೊಂದು ಪ್ಯಾನಲ್‌ಗೆ ಸರಳುಗಳ ಸಂಪರ್ಕವಿರುತ್ತದೆ.

'ಮನೆಯಲ್ಲಿ ನೆಲಹಾಸಿಗೆ ಟೈಲ್ಸ್ ಅಥವಾ ಗ್ರಾನೈಟ್ ಹಾಕುವಂತೆಯೇ ಈ ಪ್ಯಾನಲ್‌ಗಳನ್ನು ರಸ್ತೆಯಲ್ಲಿ ಅಳವಡಿಸಲಾಗುತ್ತದೆ. ಪ್ಯಾನಲ್‌ಗಳ ನಡುವಿನ ಸರಳು ಅಳವಡಿಸುವುದರಿಂದ ಮತ್ತಷ್ಟು ಶಕ್ತಿಯುತವಾಗುತ್ತದೆ. 5 ಅಡಿ ಅಗಲ, 20 ಅಡಿ ಉದ್ದದ ಪ್ಯಾನಲ್ ಅನ್ನು ಫ್ಯಾಕ್ಟರಿಯಲ್ಲಿ ತಯಾರಿಸಲಾಗುತ್ತದೆ. ರಸ್ತೆಯ ಅಗತ್ಯಕ್ಕೆ ತಕ್ಕಂತೆವಿನ್ಯಾಸಗೊಳಿಸಿದ ಪ್ಯಾನಲ್‌ಗಳನ್ನೂ ತಯಾರಿಸಬಹುದಾಗಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ತಿಳಿಸಿದರು.

'ವೈಟ್‌ಟಾಪಿಂಗ್ ಮಾಡುವುದರಿಂದ ಅದರ ಬಾಳಿಕೆ ಹೆಚ್ಚು. ಆದರೆ, ವೈಟ್ ಟಾಪಿಂಗ್ ಮಾಡುವ ಸಂದರ್ಭದಲ್ಲಿ ತಿಂಗಳುಗಟ್ಟಲೆ ಸಂಚಾರವನ್ನು ತಡೆಹಿಡಿಯಬೇಕಾಗುತ್ತದೆ. ಇದರಿಂದ ಸಾಕಷ್ಟು ದಟ್ಟಣೆ ಉಂಟಾಗುತ್ತದೆ. ಇದಕ್ಕೆಲ್ಲ ಪರಿಹಾರ 'ರ್‍ಯಾಪಿಡ್ ರಸ್ತೆ'. ಮೂರು ದಿನದಲ್ಲಿ ರಸ್ತೆ ಸಿದ್ಧವಾಗಲಿದ್ದು, ವೈಟ್‌ಟಾಪಿಂಗ್ ರಸ್ತೆಗಿಂತ ಹೆಚ್ಚು ಬಾಳಿಕೆ ಬರಲಿದೆ' ಎಂದರು.

ಗುಂಡಿ ಬೀಳಲ್ಲ, ಹಾಳಾಗಲ್ಲ... ದೇಶದಲ್ಲೇ ಪ್ರಥಮ...

'ಆದಿತ್ಯ ಬಿರ್ಲಾ ಅಲ್ಟ್ರಾ ಟೆಕ್ ಸಂಸ್ಥೆ ಆರ್ ಆ್ಯಂಡ್ ಡಿ ಸಹಯೋಗದೊಂದಿಗೆ ಬಿಬಿಎಂಪಿ ಈ 'ರ್‍ಯಾಪಿಡ್ ರಸ್ತೆ' ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಈ ರಸ್ತೆಯಲ್ಲಿ ಎಂದಿಗೂ ಗುಂಡಿ ಬೀಳುವುದಿಲ್ಲ. ದೀರ್ಘಾವಧಿ ಬಾಳಿಕೆ ಬರುತ್ತದೆ. 100–200 ವರ್ಷವಾದರೂ ರಸ್ತೆ ಏನೂ ಆಗುವುದಿಲ್ಲ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದರು.

'ಅಲ್ಟ್ರಾ ಟೆಕ್‌ನಿಂದ ತಂತ್ರಜ್ಞಾನ ಅಳವಡಿಕೆಯಲ್ಲಿ ನೆರವು ನೀಡಲಾಗುತ್ತಿದೆ. ರಸ್ತೆ ಸಮತಟ್ಟು, ಇತರೆ ಸೌಲಭ್ಯಗಳನ್ನು ಒದಗಿಸಿ ರ್‍ಯಾಪಿಡ್ ರಸ್ತೆ ಆರೇಳು ದಿನದಲ್ಲಿ ನಿರ್ಮಾಣವಾಗುತ್ತದೆ. ಪ್ಯಾನಲ್ ಅಳವಡಿಸಿದ ಮೂರನೇ ದಿನಕ್ಕೇ ವಾಹನ ಸಂಚಾರ ಸಾಧ್ಯವಾಗುತ್ತದೆ. ಸೋಮವಾರ ಇಲ್ಲಿ ಕೆಲಸ ಆರಂಭಿಸಿದೆವು. ಸುಮಾರು 40 ಮೀಟರ್ ರಸ್ತೆ ಪೂರ್ಣಗೊಂಡಿದೆ. ಬುಧವಾರ ವಾಹನ ಸಂಚಾರ ಮಾಡಬಹುದು. ಸುಮಾರು 7 ಇಂಚು ದಪ್ಪದ ಪ್ಯಾನಲ್ ಇಲ್ಲಿ ಅಳವಡಿಸಲಾಗಿದೆ. ಮೆಟ್ರೊ ರೈಲು ಹಳಿ ನಿರ್ಮಾಣ ಮಾಡುವ ಈ ರಸ್ತೆಯಲ್ಲಿ ಪ್ಯಾನಲ್‌ಗಳನ್ನು ಒಂದಕ್ಕೊಂದು ಜೋಡಿಸಲಾಗುತ್ತದೆ. ಪ್ರತಿ 45 ಮೀಟರ್‌ಗೆ ಒಂದು ಪೋಸ್ಟ್ ಟೆನ್ಷನಿಂಗ್ ಮಾಡಲಾಗುತ್ತದೆ. ಇದು ದೇಶದಲ್ಲಿ ಪ್ರಥಮ ಬಾರಿಗೆ ಅನುಷ್ಠಾನಗೊಳಿಸಲಾಗಿದೆ' ಎಂದು ಅಲ್ಟ್ರಾ ಟೆಕ್‌ನ ತಾಂತ್ರಿಕ ತಜ್ಞ ಪಿ.ಎಂ. ಹಿರೇಮಠ ತಿಳಿಸಿದರು.

ವ್ಯತ್ಯಾಸ

	ವೈಟ್ ಟಾಪಿಂಗ್ ರಸ್ತೆ	ರ್‍ಯಾಪಿಡ್ ರಸ್ತೆ
ನಿರ್ಮಾಣ ಅವಧಿ	ಕನಿಷ್ಠ 30 ದಿನ	3 ದಿನ
ಒಂದು ಕಿ.ಮೀಗೆ	₹2.4 ಕೋಟಿ	ಶೇ18ರಿಂದ 20ರಷ್ಟು ಹೆಚ್ಚು

ಚಿತ್ರಾವಳಿ

ಡಾ.ಎಸ್‌.ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ) ಬಿ.ಎಸ್‌. ಪರಮಶಿವಯ್ಯ ಅವರನ್ನು ಸನ್ಮಾನಿಸಲಾಯಿತು. ಡಿ.ಕೆ. ಚಿತ್ತಯ್ಯ ಪೂಜಾರ್ ಮತ್ತು ಎಂ.ಜಿ. ನಾಗರಾಜ್ ಅವರಿಗೆ 'ವಿದ್ಯಾ ಶಂಕರ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಸಾಹಿತಿ ಪ್ರೊ.ಜಿ.ಎಸ್‌. ಸಿದ್ದಲಿಂಗಯ್ಯ, ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಪ್ರತಿಷ್ಠಾನದ ಅಧ್ಯಕ್ಷ ಆರ್‌.ಕೆ. ನಲ್ಲೂರು ಪ್ರಸಾದ್ ಹಾಗೂ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಇದ್ದಾರೆ. — ಪ್ರಜಾವಾಣಿ ಚಿತ್ರ

ನಗರದ ಆನಂದರಾವ್ ವೃತ್ತದಲ್ಲಿರುವ ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘದಲ್ಲಿ ಭಾನುವಾರ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬೆಸ್ಕಾಂ ಅಧಿಕಾರಿಗಳಾದ ಅರ್ಚನಾ ಬಿ.ಎಸ್‌., ಚರಣಕುಮಾರ ಸಿ., ಕಲಾವಿದೆ ಕವನಾ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಜಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ರಾಮಚಂದ್ರ ರೆಡ್ಡಿ ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತಿ ಆವರಣದಲ್ಲಿ ಮಂಗಳವಾರ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ಕುಲಸಚಿವ (ಮೌಲ್ಯಮಾಪನ) ಪ್ರೊ. ಜೆ.ಟಿ ದೇವರಾಜು, ಎನ್‌ಎಸ್‌ಎಸ್ ಸಮನ್ವಯ ಅಧಿಕಾರಿ ಡಾ. ಎಚ್‌.ಆರ್‌. ರವೀಶ್, ಬಯೋ ಪಾರ್ಕ್ ಸಂಚಾಲಕ ಡಾ. ಎಸ್‌.ಟಿ. ಗಿರೀಶ್ ಇದ್ದರು.

ಶಬರಿಮಲೆ ಯಾತ್ರಾರ್ಥಿಗಳಿಗೆ ಆರೋಗ್ಯ ಇಲಾಖೆ ಸಲಹೆ

ಬೆಂಗಳೂರು: ಉಸಿರಾಟದ ತೊಂದರೆ, ಹೃದ್ರೋಗ ಮತ್ತು ಇತರ ಗಂಭೀರ ಅನಾರೋಗ್ಯ ಸಮಸ್ಯೆ ಇರುವವರು ಬೆಟ್ಟವನ್ನು ಹತ್ತಬಾರದು ಎಂದು ಶಬರಿಮಲೆ ಯಾತ್ರಾರ್ಥಿಗಳಿಗೆ ಆರೋಗ್ಯ ಇಲಾಖೆ ಸಲಹೆ ನೀಡಿದೆ.

ಜ್ವರ, ಕೆಮ್ಮು, ಉಸಿರಾಟದ ತೊಂದರೆ, ಗಂಟಲು ನೋವಿನಂತಹ ರೋಗ ಲಕ್ಷಣಗಳನ್ನು ಹೊಂದಿರುವ ಯಾತ್ರಾರ್ಥಿಗಳು ಹೆಚ್ಚಿನ ಪ್ರಯಾಣ ಮಾಡಬಾರದು. ಮಧುಮೇಹ, ಅಧಿಕ ರಕ್ತದೊತ್ತಡ ಸೇರಿ ವಿವಿಧ ಕಾಯಿಲೆಗಳನ್ನು ಹೊಂದಿರುವ ಯಾತ್ರಾರ್ಥಿಗಳು ವೈದ್ಯರು ಸೂಚಿಸಿದ ಔಷಧಗಳು ಮತ್ತು ಚಿಕಿತ್ಸಾ ದಾಖಲೆಗಳನ್ನು ತಮ್ಮೊಂದಿಗೆ ಸದಾ ಇಟ್ಟುಕೊಂಡಿರಬೇಕು ಎಂದು ಇಲಾಖೆ ಸೂಚಿಸಿದೆ.

ತೀರ್ಥಯಾತ್ರೆಯ ಸಮಯದಲ್ಲಿ ನಿಯಮಿತವಾಗಿ ಔಷಧಗಳನ್ನು ಸೇವಿಸುತ್ತಾ ಇರಬೇಕು. ಯಾವುದೇ ಕಾರಣಕ್ಕೂ ಔಷಧ ಸೇವನೆ ನಿಲ್ಲಿಸಬಾರದು. ಆರೋಗ್ಯ ಸಮಸ್ಯೆ ಇರುವ ಯಾತ್ರಾರ್ಥಿಗಳು ತೀರ್ಥಯಾತ್ರೆಗೆ ಮುಂಚಿತವಾಗಿ ತಮ್ಮ ವೈದ್ಯರ ಸಲಹೆ ಪಡೆದುಕೊಳ್ಳಬೇಕು ಎಂದಿದೆ.

ಬೆಟ್ಟ ಹತ್ತಲಿಕ್ಕೆ ದೈಹಿಕ ಸದೃಢತೆಯನ್ನು ಹೊಂದಲು ತೀರ್ಥಯಾತ್ರೆಯ ಎರಡು ವಾರ ಮೊದಲು ದಿನಕ್ಕೆ ಕನಿಷ್ಠ ಅರ್ಧ ಗಂಟೆ ವಾಕಿಂಗ್ ಅಥವಾ ಜಾಗಿಂಗ್ ಮಾಡುವುದು ಉತ್ತಮ ಎಂದು ಇಲಾಖೆ ತಿಳಿಸಿದೆ.

'ಅಪರಾಧ ಪ್ರಕರಣ: ಪಾಸ್‌ಪೋರ್ಟ್ ನಿರಾಕರಣೆ ತಪ್ಪಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರಾಧ ಪ್ರಕರಣಗಳಲ್ಲಿ ಸಲ್ಲಿಸಲಾದ ಬಿ ರಿಪೋರ್ಟ್, ನ್ಯಾಯಾಲಯದ ಅಂಗೀಕಾರಕ್ಕೆ ಬಾಕಿ ಇರುವಾಗ ಆರೋಪಿತರು ಪ್ರಕರಣದಿಂದ ದೋಷಮುಕ್ತರಾಗಿದ್ದಾರೆ ಎಂದು ಅರ್ಥವಲ್ಲ. ಇಂತಹ ಸಂದರ್ಭಗಳಲ್ಲಿ ಆರೋಪಿಗೆ ಪಾಸ್‌ಪೋರ್ಟ್ ಅಥವಾ ಪ್ರಯಾಣ ದಾಖಲೆ ನಿರಾಕರಿಸಲು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮೈಸೂರಿನ ಕಾಜಲ್ ನರೇಶ್ ಕುಮಾರ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಪಾಸ್‌ಪೋರ್ಟ್ ಕಾಯ್ದೆ-1967ರ ಕಲಂ 6 (2)(ಎಫ್) ಪ್ರಕಾರ, ಕ್ರಿಮಿನಲ್ ಆರೋಪ ಹೊತ್ತಿರುವವರ ವಿರುದ್ಧ ಭಾರತದ ಯಾವುದೇ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿಯಿರುವಾಗ ಪಾಸ್‌ಪೋರ್ಟ್ ಅಥವಾ ಪ್ರಯಾಣ ದಾಖಲೆ ನಿರಾಕರಿಸುವ ಅಧಿಕಾರವನ್ನು ಪಾಸ್‌ಪೋರ್ಟ್ ಪ್ರಾಧಿಕಾರ ಹೊಂದಿರುತ್ತದೆ. ಆದರೆ, ವಿಚಾರಣಾ ಪ್ರಕ್ರಿಯೆ ಎದುರಿಸುತ್ತಿರುವ ಅರ್ಜಿದಾರರು, ಖುಲಾಸೆಗೊಂಡರೆ ಅಥವಾ ಆರೋಪ ಮುಕ್ತರಾದರೆ ಇಲ್ಲವೇ ಅವರ ವಿರುದ್ಧದ ಪ್ರಕರಣ ರದ್ದಾದರೆ, ಕಾಯ್ದೆಯ ಕಲಂ 6 (2) (ಎಫ್) ತೀವ್ರತೆ ಕಡಿಮೆಯಾಗುತ್ತದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಪಾಸ್‌ಪೋರ್ಟ್ ಅವಧಿ ಮುಗಿದ ಹಿನ್ನೆಲೆಯಲ್ಲಿ ಅರ್ಜಿದಾರರು ಮರು ವಿತರಣೆಗಾಗಿ ಅರ್ಜಿ ಸಲ್ಲಿಸಿದ್ದರು. ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ (ಆರ್‌ಪಿಒ) ಅರ್ಜಿದಾರರಿಗೆ ಪಾಸ್‌ಪೋರ್ಟ್ ಮರು ವಿತರಣೆ ಮಾಡಿದ್ದರು. ಏತನ್ಮಧ್ಯೆ, ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣವಿದ್ದ ಸಂಗತಿ ಬೆಳಕಿಗೆ ಬಂದಿತ್ತು. 'ಈ ವಿಚಾರ ಮುಚ್ಚಿಟ್ಟು ಪಾರ್ಸ್‌ಪೋರ್ಟ್ ಪಡೆದಿದ್ದೀರಿ. ಹಾಗಾಗಿ, ಪಾಸ್‌ಪೋರ್ಟ್ ಅನ್ನು ನಮ್ಮ ಸುಪರ್ದಿಗೆ ನೀಡಬೇಕು' ಎಂದು ಆರ್‌ಪಿಒ ಸೂಚಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಕಾಮಗಾರಿ ಪ್ಯಾಕೇಜ್ ಮಿತಿ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸೇರಿದಂತೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ಯಾಕೇಜ್ ಮೊತ್ತಕ್ಕೆ ಮಿತಿ ನಿಗದಿಪಡಿಸಿರುವ ಕಾರಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ (ಎಸ್ಸಿ-ಎಸ್ಟಿ) ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ಎಸ್ಸಿ-ಎಸ್ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎನ್. ಮಹದೇವಸ್ವಾಮಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆ, ಆರ್ಥಿಕ ಇಲಾಖೆ ಮತ್ತು ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 13ಕ್ಕೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: 'ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯ ಕಾಮಗಾರಿಗಳಿಗೆ ಬಿಬಿಎಂಪಿ, ನಗರಸಭೆ, ಪುರಸಭೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಮೊತ್ತಕ್ಕೆ ಮಿತಿ ಹೇರಿ ಮತ್ತು ಪ್ಯಾಕೇಜ್ ನಿಗದಿಪಡಿಸಲಾಗಿದೆ. ಈ ಕುರಿತಂತೆ 2022ರ ಜನವರಿ 14 ಮತ್ತು ಮೇ 11ರಂದು ಹೊರಡಿಸಿರುವ ಸುತ್ತೋಲೆಗಳನ್ನು ರದ್ದುಪಡಿಸಬೇಕು. ಟೆಂಡರ್ ಕರೆಯಲು ಹಾಗೂ ಪ್ಯಾಕೇಜ್ ಮೊತ್ತ ₹ 50 ಲಕ್ಷ ಮೀರದಂತೆ ಮಾರ್ಗಸೂಚಿ ರೂಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು. ಯೋಜನೆಯಡಿ ಅಕ್ಟೋಬರ್ 4ರಂದು ಕರೆಯಲಾಗಿರುವ ಅಲ್ಪಾವಧಿ ಟೆಂಡರ್‌ಗಳನ್ನು ರದ್ದುಗೊಳಿಸಬೇಕು' ಎಂದು ಅರ್ಜಿದಾರರ ಮನವಿ ಮಾಡಿದ್ದಾರೆ.

ಹೈಕೋರ್ಟ್ ಸುದ್ದಿಗಳು

ಮತ್ತೊಂದು ದೂರು 8 ಮಂದಿ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನ ಹುಲ್ಲೆಮನೆ ಕುಂದೂರಿನ ಅಡಿಕೆ ತೋಟದಲ್ಲಿ ನ.20ರಂದು ಆನೆ ದಾಳಿಯಿಂದ ಶೋಭಾ ಸಾವಿಗೀಡಾದಾಗ ಪ್ರತಿಭಟನೆ ವೇಳೆ ನಡೆದಿದ್ದ ಗಲಾಟೆಗೆ ಸಂಬಂಧಿಸಿದಂತೆ ಮತ್ತೊಂದು ಪ್ರಕರಣ ದಾಖಲಾಗಿದೆ.

ಹುಲ್ಲೆಮನೆ ಕುಂದೂರಿನ ಸಂತೋಷ, ಶಿವರಾಜ್, ಎಚ್.ಎ.ರವಿಕುಮಾರ್, ರಂಜಿತ್, ಗೋಪಾಲ, ಅನಿಲ್, ಕೆ.ಎಂ.ನಿಖಿಲ್ ಹಾಗೂ ಬೈರಿಗದ್ದೆಯ ಮಣಿಕಂಠ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವ ಆಚರಣೆ: ಅತಿಥಿಗಳು: ಎಂ. ಪ್ರಕಾಶಮೂರ್ತಿ, ಜಯಶ್ರೀ ಬಿ. ರಾಜ್, ಅಮಿತ್ ಕುಮಾರ್ ಝಾ. ಅಧ್ಯಕ್ಷತೆ: ಎಲ್. ಮಂಜುನಾಥ್, ಆಯೋಜನೆ: ಕನ್ನಡ ಸಂಘ ಜಿಪಿಒ, ಸ್ಥಳ: ಮೇಘಧೂತ್ ಸಭಾಂಗಣ, ಜಿಪಿಒ ಆವರಣ, ಮಧ್ಯಾಹ್ನ 3

ಕನ್ನಡ ರಾಜ್ಯೋತ್ಸವ ಆಚರಣೆ: ಅತಿಥಿಗಳು: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಎ.ಎಚ್. ರಾಮರಾವ್, ಉಪಸ್ಥಿತಿ: ಎಸ್.ಎನ್. ನಾಗರಾಜ ರೆಡ್ಡಿ, ಪಿ. ಸದಾನಂದ ಮಯ್ಯ, ವೈ.ಸಿ. ಕಮಲಾ, ಸಿ.ಆರ್. ಸಂಪತ್ ಕುಮಾರಿ, ಆಯೋಜನೆ: ನ್ಯಾಷನಲ್ ಕಾಲೇಜು ಮತ್ತು ನ್ಯಾಷನಲ್ ಪದವಿ ಪೂರ್ವ ಕಾಲೇಜು, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, ಜಯನಗರ ಮಧ್ಯಾಹ್ನ 3.30

'36 ಅಲ್ಲ 63' ನಾಟಕ ಪ್ರದರ್ಶನ: ನಿರ್ದೇಶನ: ಮಹೇಶ್ ಸಾಗರ್, ಆಯೋಜನೆ: ಕಲಾಸಾಗರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ಏಕಲವ್ಯ ನಾಟಕ ಪ್ರದರ್ಶನ: ಅತಿಥಿಗಳು: ನೀಲಮ್ಮ, ಸಿದ್ಧಲಿಂಗಯ್ಯ, ಸಿದ್ಧರಾಜು, ವೇಣುಗೋಪಾಲ್, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಲಾಸ್ಯರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

SBI
The banker to every Indian
Azadi Ka Amrit Mahotsav

ಭಾರತೀಯ ಸ್ಟೇಟ್ ಬ್ಯಾಂಕ್
ಸರ್ಕಾರಿ ವ್ಯವಹಾರ ಘಟಕ
ಸ್ಥಳೀಯ ಪ್ರಧಾನ ಕಛೇರಿ
ಬೆಂಗಳೂರು

ಪಿಂಚಣಿದಾರರಿಗೆ ಜಾಗೃತಿ ಅಭಿಯಾನ

ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಜೀವನ ಪ್ರಮಾಣ ಪತ್ರವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಲ್ಲಿಸಲು ಉತ್ತೇಜಿಸುವ ಸಲುವಾಗಿ ಭಾರತ ಸರ್ಕಾರದ ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ಸಚಿವಾಲಯದವರು ರಾಷ್ಟ್ರವ್ಯಾಪಿ ಅಭಿಯಾನವನ್ನು ಪ್ರಾರಂಭಿಸಿದ್ದಾರೆ. ನವೆಂಬರ್ 24 ಮತ್ತು 25, 2022 ರಂದು ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಭಾರತೀಯ ಸ್ಟೇಟ್ ಬ್ಯಾಂಕ್, ಮೈಸೂರು ಬ್ಯಾಂಕ್ ವೃತ್ತ, ಕೆ.ಜಿ. ರಸ್ತೆಯಲ್ಲಿರುವ ಆಡಳಿತ ಕಛೇರಿ ಆವರಣದಲ್ಲಿ ಜಾಗೃತಿ ಅಭಿಯಾನ ನಡೆಸಲಿದ್ದಾರೆ. ಎಲ್ಲಾ ಪಿಂಚಣಿದಾರರು ಡಿಜಿಟಲ್ ಮಾಧ್ಯಮದ ಮೂಲಕ ತಮ್ಮ ಜೀವನ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಕೇಂದ್ರಕ್ಕೆ ಭೇಟಿ ನೀಡಬಹುದು. ಈ ಮೊದಲು ಜೀವನ ಪ್ರಮಾಣ ಪತ್ರಗಳನ್ನು ಭೌತಿಕ ರೂಪದಲ್ಲಿ ಸಲ್ಲಿಸಬೇಕಾಗುತ್ತಿತ್ತು. ಇದು ವಯಸ್ಸಾದ ಪಿಂಚಣಿದಾರರಿಗೆ ವಿಳಂಬಕ್ಕೆ ಕಾರಣವಾಗುತ್ತಲಿತ್ತು. ಈಗ, ಜೀವನ ಪ್ರಮಾಣ ಪತ್ರಗಳನ್ನು ಒಂದು ಬಟನ್ ಕ್ಲಿಕ್ ಮಾಡುವ ಮೂಲಕ ಸಲ್ಲಿಸಬಹುದು. ಈ ಸೌಲಭ್ಯವು ರಾಜ್ಯ ಸರ್ಕಾರದ ಪಿಂಚಣಿದಾರರಿಗೆ ಲಭ್ಯವಿದೆ.

BOOK NOW: 7065233336 | Book Nissan Magnite | ALSO AVAILABLE IN CSD. | www.nissan.in | /NissanIndia | /Nissan _ India | /Nissan _ India

SCAN To Request A Call

AUTHORIZED NISSAN DEALERS: KARNATAKA: BANGALORE: BRIGADE ROAD: SURYA NISSAN- 9731161303, HOSUR ROAD: SURYA NISSAN- 9731161784, KANAKAPURA ROAD: SURYA NISSAN- 9731161104, HBR LAYOUT: SURYA NISSAN- 9731161202, WHITEFIELD: SURYA NISSAN- 9731161885, HOSPET: RAYSLINE NISSAN- 9108992650, BELGAUM: SWASTI NISSAN- 9731162374, HUBLI: SWASTI NISSAN- 9731162488, MYSORE: HONNASSIRI NISSAN- 9731153151.

*Terms & conditions apply. All prices ex-showroom Delhi. Features may vary from variant to variant. Colours are indicative only and may vary due to printing constraints. Accessories shown may not be part of standard fitment. The scheme is applicable on vehicles invoiced on or before 30th November' 22. Please visit your nearest Nissan dealer for more information.

NISSAN FINANCE

ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ 2022–23ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಡಿ. 31ರವರೆಗೆ ವಿಸ್ತರಿಸಿದೆ.

ಪಿಯುಸಿ, ಪದವಿ, ವೃತ್ತಿಪರ, ಸ್ನಾತಕೋತ್ತರ ಪದವಿಯಲ್ಲಿ ಶೇ 80ರಷ್ಟು ಅಂಕಗಳಿಸಿ, ವಿದ್ಯಾಭ್ಯಾಸ ಮುಂದುವರಿಸಲು ಬಯಸುವ, ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಅರ್ಹ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಅರ್ಹರು www.ksfkarnataka.com ವೆಬ್‌ಸೈಟ್ ಮೂಲಕ ಅರ್ಜಿ ಪಡೆದು, ಕೃಷಿಕ್ ಸರ್ವೋದಯ ಫೌಂಡೇಷನ್, ನಂ.15, 2ನೇ ಹಂತ, ಗಾಲ್ಫ್ ಅವೆನ್ಯೂ ರಸ್ತೆ, ಹಳೆಯ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು- 560008 ಈ ವಿಳಾಸಕ್ಕೆ ಸಲ್ಲಿಸಬಹುದು.

ಮಾಹಿತಿಗೆ ದೂರವಾಣಿ 080-25202299, ಮೊ 9481903019ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

27ಕ್ಕೆ ಮುಕುಲ ನೃತ್ಯೋತ್ಸವ

ಬೆಂಗಳೂರು: ಬಸವೇಶ್ವರ ನಗರದಲ್ಲಿರುವ ಸಾಧನಾ ಸಂಗಮ ನೃತ್ಯ ಕೇಂದ್ರವು ತನ್ನ ಕೇಂದ್ರದಲ್ಲಿ ಇದೇ ಭಾನುವಾರ ಮುಕುಲ ನೃತ್ಯೋತ್ಸವ ಹಮ್ಮಿಕೊಂಡಿದೆ.

ನೃತ್ಯ ಗುರು ಕರ್ನಾಟಕ ಕಲಾಶ್ರೀ ಜ್ಯೋತಿ ಪಟ್ಟಾಭಿರಾಮ್ ಅವರು ಸ್ಥಾಪಿಸಿರುವ ಈ ಕೇಂದ್ರ, 3 ದಶಕಗಳಿಂದ ವಿದ್ಯಾರ್ಥಿಗಳಿಗೆ ನೃತ್ಯ ತರಬೇತಿ ನೀಡುತ್ತಿದೆ. ನೃತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಲು ಸಜ್ಜಾಗುತ್ತಿರುವ ಬಾಲ ಪ್ರತಿಭೆಗಳಿಗೆ ಅವಕಾಶ ಒದಗಿಸುವುದು ಮುಕುಲ ನೃತ್ಯೋತ್ಸವದ ಉದ್ದೇಶವಾಗಿದೆ ಎಂದು ಕೇಂದ್ರದ ಕಾರ್ಯದರ್ಶಿ ತಿಳಿಸಿದ್ದಾರೆ.

ಬಿಜಿಎಸ್ ಮೇಲ್ಸೇತುವೆಯಲ್ಲಿ ಘಟನೆ • ಸಮಸ್ಯೆ ಪರಿಹರಿಸಲು ಶ್ರಮಿಸಿದ ಎಂಜಿನಿಯರ್‌ಗಳು

ಕಳಚಿದ ಮೇಲ್ಸೇತುವೆ ಬೋಲ್ಟ್; ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೈಸೂರು ರಸ್ತೆ ಮೇಲ್ಸೇತುವೆಯ (ಬಿಜಿಎಸ್) ಜಾಯಿಂಟ್‌ನಲ್ಲಿ ಮೂರ್ನಾಲ್ಕು ಬೋಲ್ಟ್‌ಗಳು ಹೊರಬಂದು ಮಂಗಳವಾರ ಸಂಚಾರದಲ್ಲಿ ಅಸ್ತವ್ಯಸ್ತ ಉಂಟಾಯಿತು.

ಬಿಬಿಎಂಪಿಯ ಯೋಜನೆ ವಿಭಾಗದ ಎಂಜಿನಿಯರ್‌ಗಳು ಮಂಗಳವಾರ ರಾತ್ರಿಯಿಡೀ ಈ ಸಮಸ್ಯೆಯನ್ನು ನಿವಾರಿಸಲು ಶ್ರಮಪಟ್ಟರು.

ಪುರಸಭೆ ಕಡೆಯಿಂದ ಮೇಲ್ಸೇತುವೆಯ ಜಾಯಿಂಟ್‌ನ ಒಂದು ಭಾಗದಲ್ಲಿ ನಾಲ್ಕು ಬೋಲ್ಟ್‌ಗಳು ಹೊರಬಂದಿರುವುದು ಮಂಗಳವಾರ ಮಧ್ಯಾಹ್ನ ಗಮನಕ್ಕೆ ಬಂದಿತ್ತು. ಸಂಚಾರ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿ, ವಾಹನ ಸವಾರರನ್ನು ಎಚ್ಚರಿಸಿದರು. ಒಂದು ಕಡೆ ಬ್ಯಾರಿಕೇಡ್ ಇದ್ದುದರಿಂದ ಉಂಟಾದ ವಾಹನ ದಟ್ಟಣೆ ಮಂಗಳವಾರ ಮಧ್ಯರಾತ್ರಿಯವರೆಗೂ ಮುಂದುವರಿದಿತ್ತು.

‘ಮೇಲ್ಸೇತುವೆ ಜಾಯಿಂಟ್‌ನಲ್ಲಿ ಬೋಲ್ಟ್ ಹೊರಬಂದಿದ್ದು ಅದನ್ನು ಮತ್ತೆ ಅಳವಡಿಸುವ ಕಾರ್ಯವನ್ನು ಆರಂಭಿಸಿದ್ದೇವೆ. ಇದರ ತಂತ್ರಜ್ಞಾನ ಹಾಗೂ ಅದಕ್ಕೆ ಬೇಕಿರುವ ಉಪಕರಣಗಳು ಸ್ಥಳೀಯವಾಗಿ ಸಿಗುವುದು ವಿರಳ. ಆದರೂ ತಂತ್ರಜ್ಞರನ್ನು ಹುಡುಕಿ ಕರೆತಂದಿದ್ದೇವೆ. ಅದನ್ನು ಅಳವಡಿಸಲು ಒಂದಷ್ಟು ಸಮಯ ಬೇಕಿದೆ. ಬುಧವಾರ ಬೆಳಿಗ್ಗೆವರೆಗೆ ಎಲ್ಲವೂ ಸರಿಯಾಗುತ್ತದೆ’ ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಎಸ್. ಸುಗೂರ್ ಹೇಳಿದರು.

‘ಮೇಲ್ಸೇತುವೆಯ ಈ ಕೆಲಸದ ನಿರ್ವಹಣೆ ಅವಧಿ ಮುಗಿದಿದೆ. ಇಂತಹ ಉಪಕರಣಗಳು ಸ್ಥಳೀಯವಾಗಿ ಲಭ್ಯವಿರದ ಕಾರಣ ತಕ್ಷಣವೇ ದುರಸ್ತಿ ಕಾರ್ಯ ಸಾಧ್ಯವಾಗಿರಲಿಲ್ಲ. ತಂತ್ರಜ್ಞರನ್ನು ಸಂಜೆ ವೇಳೆಗೆ ಕರೆತಂದು ದುರಸ್ತಿ ಕಾರ್ಯ ಆರಂಭಿಸಲಾಗಿದೆ’ ಎಂದರು.

‘ನಗರದ ಎಲ್ಲ 47 ಮೇಲ್ಸೇತುವೆಯಲ್ಲೂ ಪರಿವೀಕ್ಷಣೆ ಕಾರ್ಯ ನಡೆಸಲು ನಮ್ಮ ಎಂಜಿನಿಯರ್‌ಗಳಿಗೆ ಸೂಚಿಸಲಾಗುತ್ತದೆ. ಕಾಲಕಾಲಕ್ಕೆ ಇದರ ಬಗ್ಗೆ ಪರಿವೀಕ್ಷಣೆ ಆಗುತ್ತಿರಬೇಕು. ಮುಂಜಾಗ್ರತೆ ವಹಿಸಬೇಕು. ಈ ಬಗ್ಗೆ ಬುಧವಾರದಿಂದಲೇ ಕಾರ್ಯಾಚರಣೆ ಆರಂಭವಾಗಲಿದೆ’ ಎಂದರು.

ಮೈಸೂರು ರಸ್ತೆ ಮೇಲ್ಸೇತುವೆಯ ಜಾಯಿಂಟ್‌ನಲ್ಲಿ ಬೋಲ್ಟ್‌ಗಳು ಹೊರಬಂದಿರುವುದು

24ರಿಂದ ಬಿಜಿಎಸ್ ಸಂಸ್ಥಾಪಕರ ದಿನಾಚರಣೆ

ಬೆಂಗಳೂರು: ಬಿಜಿಎಸ್ ಸಂಸ್ಥೆಯು ತನ್ನ 14ನೇ ಸಂಸ್ಥಾಪಕರ ದಿನಾಚರಣೆ ಮತ್ತು ಸಾಂಸ್ಕೃತಿಕ ಉತ್ಸವವನ್ನು ನ. 24, 25ರಂದು ಕೆಂಗೇರಿಯ ಬಿಜಿಎಸ್ ಹೆಲ್ತ್ ಆ್ಯಂಡ್ ಎಜುಕೇಷನ್ ಸಿಟಿ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ.

ನ.24ರಂದು ಬಿಜಿಎಸ್ ಸಂಸ್ಥಾಪಕರ ದಿನಾಚರಣೆ, ಉತ್ಸವ, ಬಿಜಿಎಸ್ ಜಿಮ್ಸ್ ಕೇಂದ್ರೀಯ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದಾರೆ. ನಿರ್ಮಲಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ ಭಾಗವಹಿಸಲಿದ್ದಾರೆ.

ನ.25ರಂದು ಆಧುನಿಕ ಸ್ಕಿಲ್ ಲ್ಯಾಬ್ ಅನ್ನು ಇಶಾ ಫೌಂಡೇಷನ್ ಸಂಸ್ಥಾಪಕ ಜಗ್ಗಿ ವಾಸುದೇವ್ ಸದ್ಗುರು ಅವರು ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

BMS EDUCATIONAL TRUST ®
Post Box No 1908, Bull Temple Road, Bengaluru -560019
Late Sri. B.M.Sreenivasaiah, Founder
Late Sri. B.S.Narayan, Former Donor Trustee

BMS INSTITUTE OF TECHNOLOGY AND MANAGEMENT
ESTD : 2002
Avalahalli, Doddaballapur Road, Yelahanka, Bengaluru-560064
Ph: 080-29521171, 68730444 website : https://bmsit.ac.in email: principal@bmsit.in

BMS Institute of Technology & Management, Yelahanka, invites tenders from **CATERERS** specialising in South Indian, North Indian and Chines Cuisine to run the Food court at BMSIT&M, (Students & Staff Strength 4000) Yelahanka.

Caterers serving reputed Educational Institution/s and MNCs will be preferred.

Apply within Seven days to Administrative Officer email : ao@bmsit.in

Sd/- CHAIRMAN

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇ-ಜಿಎಸ್‌ಯು-ಇಎಲ್‌ಇ-2022-23-ಓಟಿ-3
ದಿನಾಂಕ : 16-11-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೈಯಪ್ಪನಹಳ್ಳಿ – ಚನ್ನಸಂದ್ರದ ಡಬ್ಲಿಂಗ್ ಸೆಕ್ಷನ್‌ಗಾಗಿ 25ಕೆವಿ, 50 ಹೆಚ್‌ಜ಼ೆಡ್, ಸಿಂಗಲ್ ಫೇಸ್ ಎಸಿ ಓವರ್‌ಹೆಡ್ ಉಪಕರಣಾ ವ್ಯವಸ್ಥೆಯ ವಿನ್ಯಾಸ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.	ರೂ. 9,99,01,282.40

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20-12-2022 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ. ಯಾವುದೇ ತಿದ್ದುಪಡಿಗಳಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಜಿಎಸ್‌ಯು
ಪಿಯುಬಿ/504/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಬೆಂಗಳೂರು
S.W.Railways SWRRLY SWRRLY

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS with BA/MA (Eng and SS) with BEd, Salary 14000 to 25000. Contact Sidhartha International School, Peenya, Dasarahalli. Contact Nos. 9620100046/ 9964670328

ST. FRANCIS COLLEGE
Affiliated to Bengaluru City University
Approved by AICTE
P.B.No.3417, 3rd Block, 8th Main, Koramangala, Bengaluru-560034.
FACULTY RECRUITMENT
Applications are invited for the post of Professors/ Associate/ Assistant Professors in the following departments.
MBA MCA M.Com
Qualification: PG with Ph.D. / NET/ SLET minimum of 55% Marks is required at PG level.
Experience : Above 5 Years
Job Location: Koramangala, Bengaluru
Interested and Eligible Candidates may send their resume along with recent passport size photograph, copies of qualification and experience certificate to the
Email: admin@stfranciscollege.edu.in
director@stfranciscollege.edu.in

WANTED TRAINED LADY TEACHERS: B.Sc. (PCM); B.A. English, S.S.; N.T.T.; D.Ed; P.E. INSTRUCTOR for Higher Primary School. Salary- Depending on experience and efficiency. Contact: 8884440214.

TEACHERS FOR subjects from one to tenth standards, including nursery (reputed CBSE school). Attend interview with originals. Attractive salary. 9449835744, 9535601743

RPES JNANA VIKAS HIGH SCHOOL
CA-2, 5th BLOCK, 69th Cross, Rajajinagar, Bangalore - 560010
Ph: 23353594 / 23502813
Required
ENGLISH TEACHER
for High School (Part Time/Full Time)
Qualification: BA, B.Ed,
Experience: 5 years
Walk-In-Interview on 24.11.2022 between 2.30 to 4.00 p.m.
Sd/- Secretary.

SHANTHINIKETHANA ENGLISH SCHOOL GIRINAGAR
Requires staff trained / experienced, fresher's can also apply. Age <35 years
VICE PRINCIPAL, ACADEMIC HEAD, COORDINATOR: FEMALE Candidate with of Min 4 Years of leadership experience Post Graduate with B.Ed.
CENTRE HEAD: ECCE qualified with Min 4 yrs of teaching experience & 2 yrs worked as Academic Coordinator.
RECEPTIONIST: Pleasing personality, graduate with good English communication & computer skills. Age <35 yrs.
Submit resume with recent photograph to:
SHANTHINIKETHANA SCHOOL
1341/A, 8th 'C' Cross, 8th Main, Girinagar 2nd Phase, Bengaluru-85, Phone: 7760202693, 080-26721334, 26420794
Email: hrdsgps@gmail.com
www.shanthiniketana.in

WANTED PRIMARY, D.Ed, Computers & Mathematics (for 10th Std) and also OFFICE ASSISTANT for Abdul Baris High School near Frazer Town. WhatsApp: 9353111888.

UJJVAL WORLD SCHOOL
wants you...
for the position of
Vice Principal
Minimum 5 years' experience
Post Graduate in Education or equivalent
Experience in Administration preferred
Proficiency in computer skills and fluency in English is must
Send in your applications with a recent passport size photograph by 3 December 2022 to:
The recruitment officer, Ujjval World School, Whitefield, Bangalore - 560066
Contact: +91 95350 11934
Email: jaiswal_neh@yahoo.co.in
Alembic Group Of Schools

IMPACT INSTITUTIONS
Sahakara Nagar, Bangalore
WANTED
FACULTY IN CS
Candidates with first class Diploma / BE or M.Tech in CS / IT
Call: 94487 48297
To schedule your interviews

Drivers

"WANTED FULL-TIME Experienced CAR DRIVER Salary-Rs.16000/-, staying near J.P.Nagar. Contact: 8088174438"

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Placement Bureaus/Consultants

WANTED EXPERIENCED Accountants, Receptionists, Electricians, Product Designers, Secretaries, Billing Clerks ANZ Consultants 23443555, 8183046799

SELF EMPLOYMENT Opportunity looking for LIC Agent Advisor, Full time/ Part time. Min. Qualification 10th Pass. Age: Above 18 years, training provided. Contact no.: 8310546679/ 8310521214.

Marketing & Sales

A Reputed Educational Institution in Bangalore requires experienced
MARKETING MANAGER
Candidates with any Degree with Marketing experience can apply
Email resumes to jobsblr2023@gmail.com

Engg/ Production Technical

REQUIRE ENGINEERS with Electrical, Mechanical Or equivalent with minimum experience, Project Engineers, B.Com-Graduates for Accounts, for our Motor and special-pumps Manufacturing-Unit at Devarachikkanahalli, Bannergatta Road, Bangalore. Email: flowoilpumps@hotmail.com

EDUWEFT SERVICES Pvt Ltd, requires Regional Sales Manager/ Executive (Male/ Female) -Franchisee/ Manchisee: Acquisition- Schools.- Pan India Any Graduate/ MBA- Marketing 2 years Experience in Education Industry. Good communication Skills in English is Must. Submit resume with recent photograph to: Eduweft Services Pvt Ltd/ Adelie International School, #4263, Opp. Swami Vivekananda Circle, Girinagar 1st Phase, Bengaluru-85. Phone: 9591622353/ 080-26420796/ 26724522, Email: hrdsgps@gmail.com; www.eduweft.com

General

Jobs
SUPERVISOR & SITE HEAD required for Corporate Travels
To Manage Employee Transportation and Cabs Booking at ITC / KR Puram. Exp: Min 1 year in same field. Salary: 18K - 30K
Ph: 7338 58 58 58 / 7338 59 59 59

WALK-IN ON 28th to 30th November, Methodex Systems Pvt. Ltd. India's leading direct sales organization. Opening for sales person at least 2 yrs experience in Office systems/Security products/CCM. Vacancies at Bangalore, Hubli and Mangalore. Near Indiranagar metro station, CMH Road. Mobile : 9393107087 hr@methodexsystems.com

REQUIRED LADY Candidate B.com Computer tally Experienced Public Relation Officer for ACE INDIA IAS/ IPS/KAS/ Groupc/ Banking Training Centre Apply within 7 days Panchasheela welfare Association #10, 23 Cross BHEL Layout RR.Nagar Bangalore-98. 9448669359 9845567355 9845655761

Security & Detectives

WANTED STATE Security Manager Post-1, Qualification: Ex- Serviceman, Ex-Police Person of Good Rank and District Security Manager Post-5, in Various Districts of Karnataka Ex-Police Person, Ex-Defence Person, Call:7702333901.

SAFEGUARD SYSTEMS Looking for SALES MANAGERS, OFFICE EXECUTIVES Graduates 5Years Experience 9343544350/8050035002 safeguard_systems@yahoo.com

Receptionist/ Secretary

WANTED FULL-TIME Male Office Secretary Knowledge in MS Excel, Salary Rs.12000/- staying near J.P.Nagar. Contact: 8088174438

RENTAL PROPERTIES

Accommodation Available

Commercial

FOR RENT in Davanagere on Old P.B. Road near Srigandha Lodge, Basement- 3900, Ground- 800, 1st floor- 3900, 2nd floor: 3900, Rooftop: 3900/ sqft. Contact: 9448028103.

REAL ESTATE BUYING

General

General

WE DO Agriculture Land Conversions, Change of Land Use,Phodi, Power Documentation Services and Marketable Title.Call Verna Developers, Barton Centre, MG-Road, Bengaluru. 9916310226/ 9620253180. www.vernadevelopers.com

REAL ESTATE SELLING

Industrial & Factory

Tumkur Road

SALE, 90 Acres, Dabaspet, Koratagere Road Suitable for Industry, Educational University, Form Layout. 9141326819

AUTOMOTIVE

Four Wheelers Selling

Mahindra

ACCIDENT DAMAGED Mahindra Verito Vibe/2014, KA-04 MN-1193 For Sale without RC, Last date: 26/11/2022. Contact: 9844387946, 9740644000

EDUCATIONAL

Admission

PASS IN ONE YEAR: LLB (Can Practice, Regular). All Under Graduate and Post Graduate Courses from Govt. Recognised Universities. Also offering BTech/BAMS/ BNYS/BUMS/Pharmacy Courses. Admissions shortly close. Asha Academy: 9448460103/ 7093438248

General

FACILITY AVAILABLE for running CET & NEET Classes including Boys & Girls Hostel in Bangalore with PUC College 9980342747

Language Classes

Fluent Spoken English In 60 Days. Coaching For Competitive Exams. IELTS Training.Overseas Job Placements Guidance. Tuitions IX, X All Syllabus.Basic Advanced Grammar Classes. Contact 9113883321

MATRIMONIAL

Brides Wanted

Brahmin

BRAHMIN BRIDE for Smartha brahmin, 33, Vasishta, Uttarashada, 5'9' Bangalore Employed, New Zealand graduate; 9845079340

BUSINESS

Business Offers

Finance

WANTED BUSINESS Partner Veg Hotel 3 Lakhs Investment Monthly Income 1 Lakhs Contact: 8892501007/ 9606701007

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. For Details call 9070990709

Machinery & Tools

FOR SALE- Billing Machine (POS), Brand: Posiflex, Android Operating System, 2.5 years old, Price: Rs. 25000. Display Refrigerator (Brand New), Suitable for Super Market/ Bakery, Brand: William Refrigiration, Model: Steffi 4R, Price: Rs.2,00,000. Contact: 9632615254.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ADMISSION CORNER

NARGUND COLLEGE OF PHARMACY
SET's Nargund College of Pharmacy, Bengaluru, Since 1992
ADMISSIONS OPEN 2022 - 2023 Intake
For B. Pharm, D. Pharm and Pharm. D
Limited Seats Only, Hurry Up!!
Call Now: 9739867524
2nd main, Dattatreyanagar, BSK 3rd stage, Bangalore-85
080 26720604 | 7019425622

PUBLIC NOTICE

PUBLIC NOTICE
This is to inform the general public that Mr Syed Yosuf and his wife Fazila Yosuf are the absolute owners of property No 122, 5th cross, Cambridge Layout, Bengaluru-560008. The allotment letter bearing No. A6/122/C.R.60-31 Dt 23-11-1960 and possession certificate No. PR=27/61 Dt 12-04-1961 issued by CITB in favour of Mr. V.Krishnaswamy Naidu has been lost while Transit. Finders please report within 10 days from the date of this advertisement to Muneer Ahmed Advocate & Notary No 48/1 Swamy Vivekand Road, Halasuru Bengaluru 560008
Contact: 9845712075

PERSONAL

Change of Name

YENECHAWANDIKAR PRAMILA BHARAT, Wife/o 14847725H, HAV, YENECHAWANDIKAR BHARAT MARUTI, Vill- Basarge BK, Gadhing Laj, Kolhapur, Maharashtra, changed name YENECHAWANDIKAR PRAMILA BHARAT to PRAMILA BHARAT YENECHAVANDIKAR, 19/11/2022, Notary K.V. Mani, Bangalore

I,DEVARAJA PATIL.M residing at No.201/1, Amogh Nilaya, Balegere Main Road, Vartur Hobli, Near Nayara Petrol Bunk, Vartur, Bengaluru-560087, have changed my minor daughter's name from VARDHA DEVARAJA PATIL to VARADA DEVARAJA PATIL ,vide affidavit 19/11/2022, before notary, Ramesh Kumar.K, Bengaluru

I, SHEELA R/@ 352, Sadashivanagar, Attibele, Bengaluru- 562107 have changed my name to SHEELA N.S vide affidavit dated- 22/11/2022 before notary K.V. Mani

CHANGE OF NAME
I, **Prakruthi Jain,** residing at #7, 1st Floor, Seethapathi Agrahara, Chamarajpet, Bangalore, Karnataka - 560 018 have changed my name to **PRAKRUTHI S.** vide affidavit dated: 19.11.2022 before Notary L. Shankaranarayana, Bangalore. Henceforth I shall be called as **PRAKRUTHI S.** only.

I, JOSEPH JOE JOSEPH NELLARY S/o Joseph Joseph Nellary, residing at No.304, A Block, MJ Lifestyle Azaliya, Choodasandra, Bangalore-560099 have changed my name to JOSEPH JOSEPH NELLARY vide affidavit dated 22.11.2022 sworn before notary B.M.Chandrashekar, Bangalore.

CHANGE OF NAME
I, **Srinivas R.** residing at: H.No. 31, 2nd Cross, Suryodaya Layout, Dr. Shivram Karanth Nagar, Bangalore - 560 077 have changed my daughter's name from **MANASVINI R.** to **SAATHVIKA R.** vide affidavit dated: 22.11.2022, before S.I. Balaguru, Bengaluru. Henceforth, she shall be called **SAATHVIKA R.** only.

I, ROHITH.R S/o Ramesh.P, Residing`No-H. No-54/1.4th Cross,`E`Main, Muneshwara Block,Place Guttahalli, Malleshwaram Bangalore-03 have Changed my name from R.SHARAVANA to ROHITH.R Vide affidavit dated-22.11.2022 Before Leela`Notary Bangalore

JC672923Y, SUB/MT, RAJESH KUMAR, Vill - Marara, Gurdaspur, Punjab, changed daughter's name VAISHNVEE to VAISHNAVI SAINI, 19/11/2022, Notary K.V. Mani, Bangalore

KUSUM GUASIN Wife/o 13624505M HAV, RAMESH SINGH, Vill- Udalt, Chornkhal (Patal), Pauri Garhwal, Uttarakhand, have changed name from KUSUM GUASIN to KUSUM DEVI, 19/11/2022, Notary K.V. Mani, Bangalore

6503286Y SEP/ ASH, GOHIL BHARAT KUMAR RANABHAI, Vill- Bukana, Wav, Banaskantha, Gujarat, changed daughter's name AARIKABEN to GOHIL AARIKABEN BHARATKUMAR, 19/11/2022, Notary K.V. Mani, Bangalore

I, SWATI SAHA, Residing at 6/4/14, Seals Garden Lane, Kolkata- 700002, have changed my name from ITI BHOWMICK to SWATI SAHA, vide affidavit dated 21/06/1990, before notary B.K. Banerjea, Kolkata.

Lost

LOST
I, **Afsar Begum,** residing at Door no. 4, near Laxmi Narsimha Swamy Temple, 4th Cross, Ramamurthnagar, Manjunathnagar, Kalkere extn., Bangalore, have lost my **Original Sale Deed (Document No./ Identification: 12139** while shifting residence. Finders please contact: **9535980879.**

DH ಪ್ರಜಾವಾಣಿ
BOOK YOUR CLASSIFIEDS ADVERTISEMENT
DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER				
PAY	2	And	GET	1 Free
PAY	3	And	GET	2 Free
PAY	5	And	GET	5 Free

conditions apply*
For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com

For Advt. Booking Contact : 9845114560

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH ಪ್ರಜಾವಾಣಿ

ಲಾಲ್‌ಬಾಗ್: ಸ್ವಚ್ಛತೆಗೆ ನಿರಾಸಕ್ತಿ, ಸಮಸ್ಯೆಗಳಿಗಿಲ್ಲ ಮುಕ್ತಿ

‘ಜನಸ್ಪಂದನ’ ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ ‘ಪ್ರಜಾವಾಣಿ’ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

‘ಪ್ರಜಾವಾಣಿ’ ಸಮೀಕ್ಷೆ: ಸಮಸ್ಯೆಗಳ ಚರ್ಚೆ

ಇಡೀ ಬೆಂಗಳೂರು ನಗರಕ್ಕೆ ರಮಣೀಯವಾದ ಸ್ಥಳಗಳೆಂದರೆ ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನ. ಇಲ್ಲಿರುವ ಮರಗಳು ಇಡೀ ನಗರಕ್ಕೆ ಆಮ್ಲಜನಕವನ್ನು ಪೂರೈಸುತ್ತವೆ. ಲಾಲ್‌ಬಾಗ್ ಪರಿಸರ ಪ್ರೇಮಿಗಳ, ವಾಯುವಿಹಾರಿಗಳ ನೆಚ್ಚಿನ ತಾಣವಾಗಿದೆ. ನಾನು 5-6 ವರ್ಷಗಳ ಹಿಂದೆ ಪಶ್ಚಿಮ ದ್ವಾರದಿಂದ ಭೇಟಿ ನೀಡಿದಾಗ, ಟೀಚರ್ಸ್ ಕಾಲೇಜ್ ಪಕ್ಕದಲ್ಲಿ ಅಲ್ಲಲ್ಲಿ ಕಸದ ರಾಶಿ ಒಣಗಿದ ಮರಗಳ ದಿಮ್ಮಿಗಳು ಬೆಟ್ಟದಂತೆ ಬಿದ್ದಿರುತ್ತಿದ್ದವು. ಈ ವರ್ಷ ಸುರಿದ ಮಳೆಯಿಂದಾಗಿ ಇಲ್ಲಿನ ರಸ್ತೆಗಳೆಲ್ಲ ಹಾಳಾಗಿದ್ದು, ಇವುಗಳನ್ನು ದುರಸ್ತಿಗೊಳಿಸಬೇಕು. ಇಲ್ಲಿನ ಪಾದಚಾರಿ ಮಾರ್ಗಕ್ಕೆ ಹೊಸಕೋಟೆಯ ಕೆಂಪು ಮಣ್ಣನ್ನು ತಂದು ಹಾಕಿದರೆ ವಾಯುವಿಹಾರಿಗಳಿಗೆ ಅನುಕೂಲವಾಗುತ್ತದೆ. ‘ಪ್ರಜಾವಾಣಿ’ ಪತ್ರಿಕೆಯ ಸಮೀಕ್ಷೆಯಿಂದ ಇಲ್ಲಿನ ಸಮಸ್ಯೆಗಳು ಚರ್ಚೆಯಾಗುತ್ತಿವೆ. ನಾಲ್ಕೈದು ವರ್ಷದ ಲಾಲ್‌ಬಾಗ್‌ಗೆ ಹೋಲಿಸಿದರೆ ಈಗ ಸ್ವಚ್ಛವಾಗಿದೆ.

ಆಲೂರು ನಾಗಪ್ಪ, ಜಾನಪದ ಕಲಾವಿದ

‘ಕೆಂಪೇಗೌಡರ ವೀಕ್ಷಣಾ ಗೋಪುರ ಸ್ವಚ್ಛಗೊಳಿಸಿ’



ಲಾಲ್‌ಬಾಗ್ ಬೆಟ್ಟದ ಮೇಲಿರುವ ಕೆಂಪೇಗೌಡರ ವೀಕ್ಷಣಾ ಗೋಪುರ ನಗರದ ಮಹತ್ವದ ಸ್ಥಳ. ಅದನ್ನು ಹತ್ತಿರದಿಂದ ಹೋಗಿ ನೋಡಿದರೆ ಗೋಪುರದೊಳಗೆ ಕಸ–ಕಡ್ಡಿ ಮತ್ತು ದೂಳು ತುಂಬಿಕೊಂಡಿರುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಗೋಪುರದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಪಿ.ಎನ್.ಎಂ. ಗುಪ್ತ

‘ಸಾರ್ವಜನಿಕರಿಂದ ಸಲಹೆ ಪಡೆದುಕೊಳ್ಳಿ’

ಲಾಲ್‌ಬಾಗ್ ಉದ್ಯಾನದಲ್ಲಿ ಅಪರೂಪದ ಗಿಡ ಮರಗಳು, ಸುಂದರವಾದ ಕೆರೆ, ಗುಡ್ಡ ಇವುಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ತೋಟಗಾರಿಕೆ ಇಲಾಖೆ ಸೇರಿದಂತೆ ನಮ್ಮೆಲ್ಲರ ಮೇಲಿದೆ. ಇಲಾಖೆ ಈ ಹೊಣೆಯಿಂದ ತಪ್ಪಿಸಿಕೊಳ್ಳುವಂತಿಲ್ಲ, ಇಲ್ಲಿನ ಸ್ವಚ್ಛತೆಗೆ ಆದ್ಯತೆ ನೀಡಬೇಕಾಗಿದೆ. ಎಲ್ಲೆಂದರಲ್ಲಿ ಕಸ ಬಿಸಾಡುವ ಅನಧಿಕೃತ ಬೀದಿ

ವ್ಯಾಪಾರಿಗಳ ನಿಯಂತ್ರಣ ಮಾಡಬೇಕಿದೆ. ಫಲ ಪುಷ್ಪ ಪ್ರದರ್ಶನ ಸಮಯದಲ್ಲಿ ಇವರ ಅಬ್ಬರ ಹೆಚ್ಚು. ಇಲಾಖೆಯೇ ಇವರ ಬೆಂಬಲಕ್ಕಿದೆ. ಬೀದಿ ನಾಯಿಗಳ ಉಪಟಳ ತಪ್ಪಿಸಲು ಕ್ರಮ ಕೈಗೊಳ್ಳಬೇಕು. ತೋಟಗಾರಿಕೆ ಸಚಿವರು ಮತ್ತು ಇಲಾಖೆಯು, ಉದ್ಯಾನದಲ್ಲಿರುವ ಅವ್ಯವಸ್ಥೆಯ ಬಗ್ಗೆ ಸಾರ್ವಜನಿಕರ ಸಲಹೆಗಳನ್ನು ಪಡೆದು ಲೋಪಗಳನ್ನು ಸರಿಪಡಿಸಿಕೊಳ್ಳಬೇಕು.

ಸೌಮ್ಯಶ್ರೀ ಆರ್., ಎನ್‌ಆರ್‌ಕಾಲೋನಿ

‘ಸಸ್ಯಕಾಶಿಯಲ್ಲಿ ಸ್ವಚ್ಛತೆಯ ಅಭಾವ’

ಉದ್ಯಾನ ನಗರಿಯಲ್ಲಿನ ಲಾಲ್‌ಬಾಗ್ ಬಗ್ಗೆ ನಾನು ಚಿಕ್ಕವನಿದ್ದಾಗ ಪಠ್ಯ ಪುಸ್ತಕದಲ್ಲಿ ಓದಿದ್ದೆ. ಕಳೆದ 8 ವರ್ಷಗಳಿಂದ ಬೆಂಗಳೂರಿನ ನಿವಾಸಿಯಾಗಿರುವ ನಾನು ಈ ಸಸ್ಯಕಾಶಿಗೆ ನಾಲ್ಕು ಬಾರಿ ಭೇಟಿ ನೀಡಿದ್ದೇನೆ. ನಾನು ಕಂಡುಕೊಂಡ ಅನುಭವ ಎಂದರೆ ಇಲ್ಲಿ ಸ್ವಚ್ಛತೆಯ ಅಭಾವ. ಇಲ್ಲಿ ಹೆಚ್ಚಿನ ಹೂತೋಟಗಳನ್ನು ನಿರ್ಮಿಸಬೇಕು.

ಅಭಿಷೇಕ್ ಎಂ. ಜೆ., ಬಿಟಿಎಂ ಲೇಔಟ್

ಪ್ರಜಾವಾಣಿ @75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಕಾಡಲಾರಂಭಿಸಿದ ವೈರಾಣು ಜ್ವರ

ಹವಾಮಾನ ವೈಪರೀತ್ಯ, ವಾತಾವರಣದಲ್ಲಿನ ದೂಳಿನ ಕಣಗಳಿಂದ ಸಮಸ್ಯೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹವಾಮಾನ ವೈಪರೀತ್ಯ ಹಾಗೂ ವಾತಾವರಣದಲ್ಲಿ ಹೆಚ್ಚಿದ ದೂಳಿನ ಕಣಗಳಿಂದಾಗಿ ನಗರದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಜ್ವರ ಪೀಡಿತರಾಗುತ್ತಿದ್ದಾರೆ. ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರರೋಗಿಗಳಲ್ಲಿ ಶೇ 30ರಷ್ಟು ಮಂದಿ ಜ್ವರ ಸಂಬಂಧಿ ಸಮಸ್ಯೆಗಳಿಗೆ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ.

ನಗರದಲ್ಲಿ ಮಳೆ ತಗ್ಗಿದ ಬೆನ್ನಲ್ಲಿಯೇ ತಾಪಮಾನ ದಿನೇ ದಿನೇ ಕುಸಿತ ಕಾಣುತ್ತಿದೆ. ಇದರಿಂದಾಗಿ ಚಳಿಯ ತೀವ್ರತೆಯೂ ಹೆಚ್ಚಾಗುತ್ತಿದೆ. ವಾರದಿಂದ ತಂಪಾದ ವಾತಾವರಣ ಕಂಡುಬರುತ್ತಿದ್ದು, ರಾತ್ರಿ ಹಾಗೂ ಮುಂಜಾನೆಯ ಅವಧಿಯಲ್ಲಿ ಚಳಿ ಹೆಚ್ಚಳವಾಗುತ್ತಿದೆ. ಗರಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ಇದ್ದರೇ, ಕನಿಷ್ಠ ತಾಪಮಾನ 14 ಡಿಗ್ರಿ ಸೆಲ್ಸಿಯಸ್‌ವರೆಗೂ ಇಳಿಕೆಯಾಗುತ್ತಿದೆ. ಈ ರೀತಿ ತಾಪಮಾನದಲ್ಲಿ ಆಗುತ್ತಿರುವ ವ್ಯತ್ಯಾಸಕ್ಕೆ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅಸ್ವಸ್ಥರಾಗುತ್ತಿದ್ದಾರೆ. ಆಸ್ಪತ್ರೆಗಳ ದಾಖಲಾತಿಯಲ್ಲಿ ಅರ್ಧದಷ್ಟು ಮಂದಿ ವೈರಾಣು ಸೇರಿ ವಿವಿಧ ಮಾದರಿಯ ಜ್ವರ ಹಾಗೂ ಉಸಿರಾಟ ಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯುತ್ತಿರುವವರಾಗಿದ್ದಾರೆ.

ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಜನರಲ್ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ವಿಕ್ಟೋರಿಯಾ, ವಾಣಿವಿಲಾಸ ಸೇರಿ ಪ್ರಮುಖ ಸರ್ಕಾರಿ ಆಸ್ಪತ್ರೆಗಳಿಗೆ ಪ್ರತಿನಿತ್ಯ ಸರಾಸರಿ 50 ಜ್ವರ ಪೀಡಿತರು ಭೇಟಿ ನೀಡುತ್ತಿದ್ದಾರೆ. ಅದೇ ರೀತಿ, ಮಣಿಪಾಲ್, ನಾರಾಯಣ ಹೆಲ್ತ್, ಅಪೋಲೊ, ಫೋರ್ಟಿಸ್, ಆಸ್ಟರ್ ಸೇರಿ ವಿವಿಧ ಖಾಸಗಿ ಆಸ್ಪತ್ರೆಗಳಿಗೂ ಜ್ವರದ ಚಿಕಿತ್ಸೆಗಾಗಿ ಬರುವವರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ವಿವಿಧ ಕ್ಲಿನಿಕ್‌ಗಳಲ್ಲಿ ಸಹ ರೋಗಿಗಳ ದಟ್ಟಣೆ ಹೆಚ್ಚಾಗುತ್ತಿದೆ.

ಚಿಕ್ಕ ಮಕ್ಕಳಿಗೆ ಸಮಸ್ಯೆ: ‘ಚಳಿಯಿಂದಾಗಿ 6 ತಿಂಗಳೊಳಗಿನ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ವಾರ್ಡ್‌ನಲ್ಲಿನ ರೋಗಿಗಳಲ್ಲಿ ಶೇ 50 ರಷ್ಟು ಮಂದಿ ಜ್ವರ ಹಾಗೂ ಉಸಿರಾಟ ಸಂಬಂಧಿ ಸಮಸ್ಯೆಗಳಿಗೆ ಬಂದವರಾಗಿದ್ದಾರೆ. ಚಳಿ ಮತ್ತು ಬೆಚ್ಚನೆಯ ವಾತಾವರಣಕ್ಕೆ ಒಮ್ಮೆಲೆಯೇ ಹೊಂದಿಕೊಳ್ಳಲು ಎಲ್ಲರಿಗೂ ಸಾಧ್ಯವಾಗದು. ಇದರಿಂದಾಗಿ ಕೆಲವರು ಜ್ವರ ಪೀಡಿತರಾಗುತ್ತಿದ್ದಾರೆ’ ಎಂದು ಕೆ.ಸಿ. ಜನರಲ್ ಆಸ್ಪತ್ರೆಯ ಮಕ್ಕಳ ತಜ್ಞ ಡಾ. ಲಕ್ಷ್ಮೀಪತಿ ತಿಳಿಸಿದರು.

‘ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಹಾಗಾಗಿ, ಸಾಮಾನ್ಯವಾಗಿ ಜ್ವರ ಮೊದಲು ಮಕ್ಕಳಿಗೆ ಬರುತ್ತದೆ. ಬಳಿಕ ಮನೆಮಂದಿಗೆಲ್ಲ ಹರಡುತ್ತದೆ. ನೆಗಡಿ, ಕೆಮ್ಮು, ಮೈ–ಕೈ ನೋವಿನಿಂದ ಪ್ರಾರಂಭವಾಗಿ, ಐದಾರು ದಿನ ಬಾಧಿಸುತ್ತದೆ. ಜ್ವರ ಗಂಭೀರ ಸ್ವರೂಪ ಪಡೆದಾಗ ನ್ಯುಮೋನಿಯಾ ಆಗುವ ಸಾಧ್ಯತೆಗಳಿವೆ’ ಎಂದರು.

‘ವೈರಾಣು ಹರಡುವಿಕೆಗೆ ಸಹಕಾರಿ’

‘ಚಳಿಗಾಲದ ಅವಧಿಯಲ್ಲಿ ದೂಳು ವಾತಾವರಣದಲ್ಲಿಯೇ ಇರಲಿದೆ. ಇದರಿಂದಾಗಿಯೂ ಜ್ವರ, ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳಬಹುದು. ತಾಪಮಾನದ ಏರಿಳಿತ ಮಾತ್ರ ವೈರಾಣು ಜ್ವರಕ್ಕೆ ಕಾರಣವಲ್ಲ. ಈ ಅವಧಿಯು ವೈರಾಣು ಹರಡುವಿಕೆಗೆ ಸಹಕಾರಿಯಾಗಿರುತ್ತದೆ. ಆದ್ದರಿಂದ, ವೈರಾಣು ಹರಡುವಿಕೆ ತಡೆಗೆ ಕ್ರಮ ವಹಿಸಬೇಕು. ವೈರಾಣು ಬದಲಾಗುತ್ತಾ ಇರುತ್ತದೆ’ ಎಂದು ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ತಜ್ಞ ವೈದ್ಯ ಡಾ. ನಿಜಗುಣ ತಿಳಿಸಿದರು.

‘ಈ ಜ್ವರವು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಮುಖಗವಸು ಧರಿಸುವಿಕೆಯಿಂದ ಸೋಂಕಿತ ವ್ಯಕ್ತಿ ಸೀನಿದಾಗ, ಕೆಮ್ಮಿದಾಗ ಹೊರಹೊಮ್ಮುವ ಹನಿ ಗಾಳಿ ಸೇರದಂತೆ ತಡೆಯಬಹುದು. ಅಂತರ ಕಾಯ್ದುಕೊಳ್ಳುವಿಕೆ, ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳುವಿಕೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮ ಅನುಸರಿಸಬೇಕು. ವೈರಾಣುವಿನಿಂದ ಹೆಚ್ಚಿನ ಪ್ರಮಾಣದಲ್ಲಿ ಅಸ್ವಸ್ಥರಾದವರಿಗೆ ಫ್ಲೂ ಲಸಿಕೆ ನೀಡಲಾಗುತ್ತದೆ’ ಎಂದು ಹೇಳಿದರು.

ವಾತಾವರಣದಲ್ಲಿನ ಬದಲಾವಣೆಯಿಂದ ವೈರಾಣು ಜ್ವರ ಹರಡುವಿಕೆ ಹೆಚ್ಚಾಗಿದೆ. ಈ ಅವಧಿಯಲ್ಲಿ ಬಿಸಿ ನೀರನ್ನು ಹೆಚ್ಚಾಗಿ ಕುಡಿಯಬೇಕು. ವೃದ್ಧರು ಪೌಷ್ಟಿಕ ಆಹಾರ ಸೇವಿಸಬೇಕು.

ಡಾ. ಸಂತೋಷ್ ಶಿವಸ್ವಾಮಿ, ಮಣಿಪಾಲ್ ಆಸ್ಪತ್ರೆ ಐಎನ್‌ಟಿ ಸಲಹೆಗಾರ

ಈ ಅವಧಿಯಲ್ಲಿ ತಾಪಮಾನದ ಏರಿಳಿತದಿಂದ ಕೆಲವರಿಗೆ ಜ್ವರ ಕಾಣಿಸಿಕೊಳ್ಳಲಿದೆ. ದೇಹದ ತಾಪಮಾನವನ್ನು ಕಾಯ್ದುಕೊಳ್ಳಬೇಕು. ಮುಂಜಾನೆ ಅವಧಿಯಲ್ಲಿ ಚಳಿಯಿಂದ ರಕ್ಷಣೆ ಮಾಡಿಕೊಳ್ಳಬೇಕು.

ಡಾ. ರಾಧಾಕೃಷ್ಣ, ಕೆ.ಸಿ. ಜನರಲ್ ಸಾರ್ವಜನಿಕ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ

ವೈರಾಣು ಜ್ವರದ ಪ್ರಮುಖ ಲಕ್ಷಣಗಳು

- ತೀವ್ರ ಆಯಾಸ, ದಣಿವು
- ಮೈ ಕೈ ನೋವು
- ತಲೆನೋವು
- ನೆಗಡಿ, ಜ್ವರ
- ಕೆಮ್ಮು
- ಮೂಗು ಕಟ್ಟುವುದು
- ಕಣ್ಣುಗಳಲ್ಲಿ ಅಸ್ವಸ್ಥತೆ
- ಗಂಟಲು ಉರಿ

‘ತ್ಯಾಗ ಮನೋಭಾವ ಬೆಳೆಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ತ್ಯಾಗ ಮನೋಭಾವ ಬೆಳೆಸಿಕೊಳ್ಳಬೇಕು’ ಎಂದು ದಕ್ಷಿಣ ಆಫ್ರಿಕಾದಲ್ಲಿರುವ ರಾಮಕೃಷ್ಣ ಕೇಂದ್ರದ ಅಧ್ಯಕ್ಷರಾದ ಸ್ವಾಮಿ ಸ್ವಾತ್ಮಾ ರಾಮಾನಂದ ಹೇಳಿದರು. ಇತ್ತೀಚಿಗೆ ನಡೆದ ಬಿಎನ್‌ಎಂ ವಿದ್ಯಾ ಸಂಸ್ಥೆ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದ ಅವರ ಆದರ್ಶ ಮತ್ತು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬಿಎನ್‌ಎಂ ಕಾಲೇಜನ್ನು ಆರಂಭದ ದಿನಗಳಲ್ಲಿ ಬಾಲಕಿಯರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಆರಂಭಿಸಿರುವುದು ಸಂತಸದ ಸಂಗತಿ. ಇಂದು ಈ ಕಾಲೇಜಿನಿಂದ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ಈ ಸಂಸ್ಥೆ ಶತಮಾನೋತ್ಸವ ಆಚರಣೆ ಮಾಡುವಂತೆ ಆಗಲಿ’ ಎಂದು ಶುಭ ಹಾರೈಸಿದರು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ (ಡಿಆರ್‌ಡಿಒ) ಪ್ರಧಾನ ನಿರ್ದೇಶಕಿ ಡಾ. ಜೆಸ್ಸಿ ಥಾಮಸ್ ಮಾತನಾಡಿ, ಇಂದು ಜ್ಞಾನ ಮತ್ತು ಆವಿಷ್ಕಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ’ ಎಂದರು. ಕಾರ್ಯಕ್ರಮದಲ್ಲಿ ಬಿಎನ್‌ಎಂ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಯಾದ ಸುನಂದಾ ಪ್ರಭಾಕರ ಜಾಧವ್ ಅವರನ್ನು ಅಭಿನಂದಿಸಲಾಯಿತು.

ಇತ್ತೀಚಿಗೆ ನಡೆದ ಬಿಎನ್‌ಎಂ ವಿದ್ಯಾಸಂಸ್ಥೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ದಕ್ಷಿಣ ಆಫ್ರಿಕಾದಲ್ಲಿರುವ ರಾಮಕೃಷ್ಣ ಕೇಂದ್ರದ ಅಧ್ಯಕ್ಷ ಸ್ವಾಮಿ ಸ್ವಾತ್ಮಾ ರಾಮಾನಂದ, ಡಿಆರ್‌ಡಿಒ ಪ್ರಧಾನ ನಿರ್ದೇಶಕಿ ಜೆಸ್ಸಿ ಥಾಮಸ್ ಸಂಸ್ಥೆ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಸುನಂದಾ ಪ್ರಭಾಕರ ಜಾಧವ, ಕಾರ್ಯದರ್ಶಿ ನಾರಾಯಣ ರಾವ್ ಮಾನೆ ಭಾಗವಹಿಸಿದ್ದರು.

ಸಚಿವ ಸುಧಾಕರ್ ಮಾಹಿತಿ • ಕಾರ್ಡ್ ವಿತರಣೆಯಲ್ಲಿ ರಾಮನಗರ ಮುಂದೆ

ಯುಡಿಐಡಿ ಕಾರ್ಡ್: 5.86 ಲಕ್ಷ ಅಂಗವಿಕಲರಿಗೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈವರೆಗೆ 5.86 ಲಕ್ಷ ಅಂಗವಿಕಲರಿಗೆ ಯುಡಿಐಡಿ ಕಾರ್ಡ್ (ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ) ವಿತರಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಯುಡಿಐಡಿ ಕಾರ್ಡ್ ವಿತರಣೆ ಪ್ರಕ್ರಿಯೆಯ ಬಗ್ಗೆ ಪ್ರಗತಿ ಪರಿಶೀಲಿಸಿದ ಅವರು, ‘ಅಂಗವಿಕಲರ ಸಬಲೀಕರಣ ಇಲಾಖೆಯ ಸಹಯೋಗದಲ್ಲಿ ನೀಡುವ ಯುಡಿಐಡಿ ಕಾರ್ಡ್ ವಿತರಣೆಯಲ್ಲಿ ಕರ್ನಾಟಕ ಉತ್ತಮ ಸಾಧನೆ ತೋರಿದೆ. ರಾಮನಗರ ಜಿಲ್ಲೆಯಲ್ಲಿ ಅತೀ ಹೆಚ್ಚು ಕಾರ್ಡ್‌ಗಳನ್ನು ವಿತರಿಸಲಾಗಿದೆ. ಚಿಕ್ಕಮಗಳೂರು ಎರಡನೇ ಸ್ಥಾನದಲ್ಲಿದ್ದು, ಬಾಗಲಕೋಟೆ, ಹಾವೇರಿ, ಉತ್ತರ ಕನ್ನಡ, ಬೆಳಗಾವಿ ಹಾಗೂ ಮಂಡ್ಯ ಜಿಲ್ಲೆಗಳು ನಂತರದ ಸ್ಥಾನಗಳಲ್ಲಿವೆ’ ಎಂದು ಹೇಳಿದರು.

‘ಅಂಗವಿಕಲರು ಕಡ್ಡಾಯವಾಗಿ ಯುಡಿಐಡಿ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಒಮ್ಮೆ ಲಾಗಿನ್ ಆದ ನಂತರ ಯುಡಿಐಡಿ ಕಾರ್ಡ್ ಪಡೆಯುವುದು ಸುಲಭವಾಗಲಿದೆ. ಇದರ ಮೂಲಕ ಸರ್ಕಾರದಿಂದ ಹಲವಾರು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಯುಡಿಐಡಿ ಕಾರ್ಡ್‌ನಿಂದ ಫಲಾನುಭವಿಗಳ ಸೌಲಭ್ಯಗಳನ್ನು ಟ್ರ್ಯಾಕ್ ಮಾಡಲಾಗುವುದು. ಪ್ರತಿಯೊಬ್ಬ ಅಂಗವಿಕಲರಿಗೂ ಯುಡಿಐಡಿ ಕಾರ್ಡ್‌ಗಳನ್ನು ವಿತರಿಸುವುದು ಸರ್ಕಾರದ ಗುರಿಯಾಗಿದ್ದು, ಇದಕ್ಕಾಗಿ ಎಲ್ಲ ವಲಯಗಳಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ’ ಎಂದು ಹೇಳಿದರು.

ದತ್ತಾಂಶ ಸಂಗ್ರಹ: ‘ಅಂಗವೈಕಲ್ಯದಲ್ಲಿ ಈ ಹಿಂದೆ 7 ಬಗೆಯ ನ್ಯೂನತೆಗಳನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. 2016ರ ಆರ್‌ಪಿಡಬ್ಲ್ಯುಡಿ ಕಾಯ್ದೆಗೆ ತಿದ್ದುಪಡಿ ತಂದ ನಂತರ 21 ರೀತಿಯ ನ್ಯೂನತೆಗಳನ್ನು ಗುರುತಿಸಲಾಗಿದೆ. ಅಂಗವಿಕಲರ ವೈಯಕ್ತಿಕ ಮತ್ತು ದೈಹಿಕ ನ್ಯೂನತೆಗಳ ಬಗ್ಗೆ ದತ್ತಾಂಶ ಸಂಗ್ರಹಿಸಲಾಗುತ್ತಿದೆ. ಶೈಕ್ಷಣಿಕ, ಉದ್ಯೋಗ ವಿವರಗಳನ್ನು ಸಹ ಇದು ಒಳಗೊಂಡಿದೆ’ ಎಂದು ತಿಳಿಸಿದರು.

‘ಶೇ 40ರಷ್ಟು ದೈಹಿಕ ನ್ಯೂನತೆ ಹೊಂದಿರುವವರನ್ನೂ ಅಂಗವಿಕಲರು ಎಂದು ಗುರುತಿಸಲಾಗುತ್ತಿದೆ. 2011ರ ಜನಗಣತಿ ಪ್ರಕಾರ ದೇಶದಲ್ಲಿ ಶೇ 2.21ರಷ್ಟು ಮಂದಿ ಅಂಗವಿಕಲರಿದ್ದಾರೆ. ಇವರಿಗೆ ಸೌಲಭ್ಯಗಳನ್ನು ದೊರಕಿಸಿಕೊಡಲು ವಿಶೇಷ ಒತ್ತು ನೀಡಲಾಗಿದೆ’ ಎಂದು ವಿವರಿಸಿದರು.

ಬಿಡಿಎ ಅಧಿಕಾರಿಗಳಿಂದ ವಿತರಣೆ; ಉನ್ನತಮಟ್ಟದ ತನಿಖೆಗೆ ಆದೇಶ

ನಕಲಿ ಎನ್‌ಒಸಿಗೆ ಕ್ರಿಮಿನಲ್ ಕೇಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಡಿಎ ಸ್ವಾಧೀನಪಡಿಸಿಕೊಂಡಿರುವ ಜಾಗಕ್ಕೆ ನಕಲಿ ಎನ್‌ಒಸಿ ನೀಡಿರುವ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ. ಆ ಜಾಗ ಬಳಸಿಕೊಂಡಿರುವವರ ಮೇಲೂ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಎಚ್ಚರಿಸಿದ್ದಾರೆ.

‘ಈ ಹಿಂದೆ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಹಣದಾಸೆಗೆ ಬಿದ್ದು ಪ್ರಭಾವಿಗಳು ಮತ್ತು ಭೂಕಬಳಿಕೆದಾರರಿಗೆ ನಕಲಿ ಎನ್‌ಒಸಿಗಳನ್ನು ಕೊಟ್ಟು ಬಿಡಿಎ ಜಾಗವನ್ನು ಅತಿಕ್ರಮಣವಾಗುವಂತೆ ಮಾಡಿದ್ದರು. ಇದೀಗ ಇಂತಹ ನಕಲಿ ಎನ್‌ಒಸಿ ಪ್ರಕರಣಗಳ ತನಿಖೆ ನಡೆಸಲಾಗುತ್ತಿದೆ. ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿ ತಪ್ಪೆಸಗಿದ್ದರೆ ಅಂತಹವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ’ ಎಂದರು.

‘ಬೆಂಗಳೂರು ದಕ್ಷಿಣ ಭಾಗದಲ್ಲಿ ನಿರ್ಮಿಸಿರುವ ಬಡಾವಣೆಗಳಲ್ಲಿ ಈ ಹಿಂದೆ ಅಧಿಕಾರಿಗಳು, ಎಂಜಿನಿಯರ್‌ಗಳು ನಕಲಿ ಎನ್‌ಒಸಿಗಳನ್ನು ನೀಡಿದ್ದಾರೆ. ಅವುಗಳು ಬಿಡಿಎ ದಾಖಲೆ, ಕಡತದಲ್ಲಿ ಇಲ್ಲ. ಇಂತಹ ಪ್ರಕರಣಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕಾಗಿದೆ. ಇದರಿಂದ ಎಲ್ಲ ಪ್ರಕರಣಗಳು ಬೆಳಕಿಗೆ ಬರಲಿವೆ’ ಎಂದರು.

‘ವಿಶೇಷ ತನಿಖಾ ತಂಡದಿಂದ’ (ಎಸ್‌ಐಟಿ) ನಕಲಿ ಎನ್‌ಒಸಿ ಪ್ರಕರಣವನ್ನು ತನಿಖೆ ಮಾಡಿಸಬೇಕು ಎಂದು ಯೋಜಿಸಲಾಗಿದೆ. ಇದಲ್ಲದಿದ್ದರೂ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಜತೆಗೆ 10 ವರ್ಷಗಳ ಹಿಂದಿನಿಂದ ನ್ಯಾಯಾಲಯದಲ್ಲಿದ್ದ ಪ್ರಕರಣಗಳ ಬಗ್ಗೆಯೂ ಪುನರ್ ವಿಮರ್ಶೆ ಮಾಡಲು ಕಾನೂನು ಕೋಶಕ್ಕೆ ಸೂಚನೆ ನೀಡಲಾಗಿದೆ’ ಎಂದರು.

‘ನಕಲಿ ಎನ್‌ಒಸಿ ಅಥವಾ ನಕಲಿ ದಾಖಲೆಗಳನ್ನು ಇಟ್ಟುಕೊಂಡು ಬಿಡಿಎ ಜಾಗದ ಮೇಲೆ ಹಿಡಿತ ಸಾಧಿಸುತ್ತಿರುವವರು ಕೂಡಲೇ ಅಂತಹ ದಾಖಲೆಗಳನ್ನು ನೀಡಿ ಬಿಡಿಎ ಜಾಗವನ್ನು ಬಿಟ್ಟುಕೊಡಬೇಕು. ಇಲ್ಲವಾದರೆ ಕಾನೂನು ರೀತಿಯಲ್ಲಿ ಶಿಸ್ತುಕ್ರಮ ಜರುಗಿಸಲಾಗುತ್ತದೆ’ ಎಂದರು.

‘ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಿಡಿಎ ಜಾಗದಲ್ಲಿ ಹಿಡಿತ ಸಾಧಿಸುತ್ತಿರುವವರ ಭೂಕಬಳಿಕೆದಾರರ ಬಗ್ಗೆ ಮಾಹಿತಿ ಮತ್ತು ದಾಖಲೆಗಳಿದ್ದರೆ ಬಿಡಿಎ ಅಧ್ಯಕ್ಷರು, ಆಯುಕ್ತರು ಮತ್ತು ಜಾಗೃತ ದಳದ ಪೊಲೀಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ತರಬೇಕು’ ಎಂದರು.

ಜೆ.ಪಿ. ನಗರ 9ನೇ ಹಂತದ 1ನೇ ಬ್ಲಾಕ್ ಆಲಹಳ್ಳಿಯಲ್ಲಿ 22 ಗುಂಟೆ ಜಾಗವನ್ನು ಬಿಡಿಎ ವಶಕ್ಕೆ ತೆಗೆದುಕೊಂಡಿತು.

₹30 ಕೋಟಿ ಮೌಲ್ಯದ ಆಸ್ತಿ ವಶ

ಜೆಪಿ ನಗರ 9 ನೇ ಹಂತದ 1 ನೇ ಬ್ಲಾಕ್ ನಲ್ಲಿನ ಆಲಹಳ್ಳಿ ಸರ್ವೆ ಸಂಖ್ಯೆ 4/1 ರಲ್ಲಿ 22 ಗುಂಟೆ ಜಮೀನನ್ನು ಬಿಡಿಎ ಮಂಗಳವಾರ ವಶಕ್ಕೆ ಪಡೆಯಿತು. ಇದರ ಮೌಲ್ಯ ₹30 ಕೋಟಿ.

‘ಈ ಜಾಗದಲ್ಲಿ ಹತ್ತು ವರ್ಷಗಳಿಂದ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಬಿಡಿಎ ಅಧ್ಯಕ್ಷ ಎಸ್. ಆರ್.ವಿಶ್ವನಾಥ್ ಅವರು ಬಿಡಿಎ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಪ್ರದೇಶಗಳಿಗೆ ಭೇಟಿ ನೀಡಿ, ಇಂತಹ ಜಾಗಗಳನ್ನು ಮರುವಶಕ್ಕೆ ಪಡೆದುಕೊಳ್ಳಬೇಕೆಂದು ಸೂಚಿಸಿದ್ದರು. ಅದರಂತೆ ಕಾರ್ಯಾಚರಣೆ ಮಾಡಲಾಗುತ್ತಿದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬಿಡಿಎ ಆಯುಕ್ತರ ಆದೇಶ ಪಡೆದ ಬಿಡಿಎ ಜಾಗೃತ ದಳದ ಪೊಲೀಸ್ ವರಿಷ್ಠಾಧಿಕಾರಿ ನಂಜುಂಡೇಗೌಡ ಮತ್ತು ಪೊಲೀಸ್ ಅಧಿಕಾರಿಗಳಾದ ರವಿಕುಮಾರ್, ಶ್ರೀನಿವಾಸ್ ಹಾಗೂ ಎಂಜಿನಿಯರ್ ಅಶೋಕ್ ನೇತೃತ್ವದಲ್ಲಿ 6 ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸಲಾಯಿತು.

1281 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ 12ನೇ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪೂರ್ಣಗೊಳಿಸಿದ 1281 ವಿದ್ಯಾರ್ಥಿಗಳಿಗೆ ಪದವಿಪ್ರದಾನ ಮಾಡಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ವಿವಿಧ ವಿಭಾಗಗಳಲ್ಲಿ ರ‍್ಯಾಂಕ್ ಪಡೆದ 16 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು.

ಪ್ರತಿ ಶೈಕ್ಷಣಿಕ ವರ್ಷದಲ್ಲೂ ಅತ್ಯುತ್ತಮ ಪ್ರಗತಿ ಸಾಧಿಸುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ ‘ನಿಟ್ಟೆ ಗುಲಾಬಿ ಶೆಟ್ಟಿ ಸ್ಮಾರಕ’ ಚಿನ್ನದ ಪದಕವನ್ನು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಚಂದ್ರಶೇಖರ್. ಎಲ್ ಗಳಿಸಿದರು. ಅತ್ಯುತ್ತಮ ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿನ ಸಾಧನೆ ಹಾಗೂ ಸನ್ನಡತೆಯನ್ನು ಆಧರಿಸಿ, ಬಾಲಕರ ವಿಭಾಗದಲ್ಲಿ ‘ಜಸ್ಟಿಸ್ ಕೆ.ಎಸ್.ಹೆಗ್ಡೆ ಸ್ಮಾರಕ’ ಚಿನ್ನದ ಪದಕವನ್ನು ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ವಿಭಾಗದ ಕರಣ್. ಆರ್ ಹಾಗೂ ಬಾಲಕಿಯರ ವಿಭಾಗದಲ್ಲಿ ಒಟ್ಟಾರೆ ಪ್ರಗತಿ ಸಾಧನೆಗಾಗಿ ‘ನಿಟ್ಟೆ ಮೀನಾಕ್ಷಿ ಹೆಗ್ಡೆ’ ಚಿನ್ನದ ಪದಕವನ್ನು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಅಲಿನಿ ಕ್ರೈಸ್ಟ್ ಪೌಲ್ ಪಡೆದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಮಾತನಾಡಿ, ‘ಹೊಸ ಆಲೋಚನೆಗಳು ನಮ್ಮನ್ನು ಮುನ್ನಡೆಸಬಲ್ಲವೇ ಹೊರತು, ಕೇವಲ ನಾವು ಗಳಿಸುವ ಪದವಿಗಳಲ್ಲ’ ಎಂದು ಹೇಳಿದರು.

ನಿಟ್ಟೆ ವಿ.ವಿಯ ಎನ್. ವಿನಯ ಹೆಗ್ಡೆ ,ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎನ್. ಆರ್.ಶೆಟ್ಟಿ, ಪ್ರಾಂಶುಪಾಲ ಡಾ.ಎಚ್. ಸಿ.ನಾಗರಾಜ್, ಶೈಕ್ಷಣಿಕ ವಿಭಾಗದ ಮುಖ್ಯಸ್ಥ ಡಾ.ವಿ.ಶ್ರೀಧರ್, ನಿಟ್ಟೆ ಎಜುಕೇಶನ್ ಟ್ರಸ್ಟ್ ಆಡಳಿತಾಧಿಕಾರಿ ರೋಹಿತ್ ಪೂಂಜ ಇದ್ದರು.

ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎನ್‌ಆರ್‌ಶೆಟ್ಟಿ ಅವರು, ‘ಜಸ್ಟಿಸ್ ಕೆ.ಎಸ್‌ ಹೆಗ್ಡೆ ಸ್ಮಾರಕ’ ಚಿನ್ನದ ಪದಕವನ್ನು ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಕರಣ್‌ ಆರ್ ಅವರಿಗೆ ವಿತರಿಸಿದರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್‌ವಿದ್ಯಾಶಂಕರ್ ಇದ್ದರು.

ಕಾರು– ಬೈಕ್ ಡಿಕ್ಕಿ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು, ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ನಾಗೇಶ್ (19) ಮೃತಪಟ್ಟಿದ್ದಾರೆ.

‘ಸ್ಥಳೀಯ ನಿವಾಸಿ ನಾಗೇಶ್, ಕೆಲಸ ನಿಮಿತ್ತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣ ಎನ್ನಲಾದ ಕಾರು ಚಾಲಕನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಾಗೇಶ್, ನೆಕ್ಕುಂದಿ–ದೊಮ್ಮಸಂದ್ರ ಬಡಾವಣೆ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಇದೇ ರಸ್ತೆಯಲ್ಲಿ ಹೊರಟಿದ್ದ ಚಾಲಕ, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದ. ಇದರಿಂದಾಗಿ ಕಾರು, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ದ್ವಿಚಕ್ರ ವಾಹನ ಸಮೇತ ರಸ್ತೆಗೆ ಬಿದ್ದ ನಾಗೇಶ್ ಅವರಿಗೆ ತೀವ್ರ ಗಾಯವಾಗಿತ್ತು’ ಎಂದು ತಿಳಿಸಿದ್ದಾರೆ.

‘ನಾಗೇಶ್ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ಸಂಪುಟ ನಿರ್ಣಯ ಶೀಘ್ರ ಜಾರಿಗೆ ಸಿ.ಎಸ್ ಸೂಚನೆ

ಬೆಂಗಳೂರು: ಸಚಿವ ಸಂಪುಟದ ಎಲ್ಲ ನಿರ್ಧಾರಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಆದೇಶ ಅಥವಾ ಅಧಿಸೂಚನೆ ಹೊರಡಿಸುವುದನ್ನು ತಡ ಮಾಡಬಾರದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ಸರ್ಕಾರದ ಎಲ್ಲಾ ಇಲಾಖೆಗಳ ಹೆಚ್ಚುವರಿ ಮುಖ್ಯಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ.

ಈ ಸಂಬಂಧ ಮಂಗಳವಾರ ಸುತ್ತೋಲೆ ಹೊರಡಿಸಿರುವ ಅವರು, ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 20ರಂತೆ ಆಡಳಿತ ಇಲಾಖೆಗಳಿಂದ ಸಚಿವ ಸಂಪುಟ ಪ್ರಸ್ತಾವನೆಗಳನ್ನು ಮಂಡಿಸಲಾಗುತ್ತದೆ. ಈ ಪ್ರಸ್ತಾವನೆಗಳಿಗೆ ಸಚಿವ ಸಂಪುಟವು ನಿರ್ಣಯಗಳನ್ನು ತೆಗೆದುಕೊಂಡ ನಂತರ, ಅದನ್ನು ಜಾರಿಗೊಳಿಸುವ ಜವಾಬ್ದಾರಿ ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಯವರದ್ದು ಎಂದು ಹೇಳಿದ್ದಾರೆ.

ಸಂಪುಟದಲ್ಲಿ ನಿರ್ಣಯವಾದ ನಂತರ, ಆದೇಶ, ಅಧಿಸೂಚನೆಗಳನ್ನು ತಡವಾಗಿ ಹೊರಡಿಸುತ್ತಿರುವುದನ್ನು ಗಮನಿಸಲಾಗಿದೆ. ಮೇಲ್ಕಂಡ ನಿಯಮಗಳ ನಿಯಮ 26ರಂತೆ ಸಚಿವ ಸಂಪುಟ ನಿರ್ಣಯಗಳನ್ನು ಸಂಬಂಧಿಸಿದ ಇಲಾಖೆಗಳು ಕೂಡಲೇ ಜಾರಿಗೊಳಿಸಬೇಕಾಗುತ್ತದೆ ಎಂದಿದ್ದಾರೆ.

ಆದ್ದರಿಂದ, ಸಂಪುಟದ ನಿರ್ಣಯಗಳು ಇಲಾಖೆಯಲ್ಲಿ ಸ್ವೀಕೃತವಾದ ಕೂಡಲೇ ಅವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸ ಲಾಗಿದೆ. ಸಚಿವ ಸಂಪುಟದ ನಿರ್ಣಯದಂತೆ ಹೊರಡಿಸಿರುವ ಆದೇಶದ ಕೊನೆಯಲ್ಲಿ ಸಚಿವ ಸಂಪುಟದ ಪ್ರಕರಣ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸುವಂತೆಯೂ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಹೆಗ್ಗೋಠಾರ ಪ್ರಕರಣ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಪರಿಶಿಷ್ಟ ಮಹಿಳೆ ನೀರು ಕುಡಿದರೆಂಬ ಕಾರಣಕ್ಕೆ ಕಿರು ನೀರು ಸರಬರಾಜು ಟ್ಯಾಂಕ್ ಖಾಲಿ ಮಾಡಿ ಶುದ್ಧೀಕರಿಸಿದ್ದ ಪ್ರಕರಣದ ಆರೋಪಿ ಮಹದೇವಪ್ಪ (55) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ನ.18ರಂದು ನಡೆದಿದ್ದ ಪ್ರಕರಣವು 19ರಂದು ಬೆಳಕಿಗೆ ಬರುತ್ತಲೇ ಆರೋಪಿ ತಲೆ ಮರೆಸಿಕೊಂಡಿದ್ದರು. ಅವರ ವಿರುದ್ಧ ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಭಾನುವಾರ ಎಫ್‌ಐಆರ್ ದಾಖಲಾಗಿತ್ತು. ಪೊಲೀಸರು ಸೋಮವಾರ ಗ್ರಾಮಕ್ಕೆ ತೆರಳಿ ವೀರಶೈವ–ಲಿಂಗಾಯತ ಸಮುದಾಯದವರೊಂದಿಗೆ ಸಭೆ ನಡೆಸಿದ್ದರು. ರಾತ್ರಿ 9 ಗಂಟೆಯ ಸುಮಾರಿಗೆ ಪೊಲೀಸರು ಅವರನ್ನು ಬಂಧಿಸಿದ್ದಾರೆ.

‘ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ತಿಳಿಸಿದ್ದಾರೆ.

ಮಹದೇವಪ್ಪ

ಶಿವಮ್ಮ

ಸಂತ್ರಸ್ತೆ ಹೇಳಿಕೆ: ಈ ಮಧ್ಯೆ, ಘಟನೆಯ ಸಂತ್ರಸ್ತೆ, ಎಚ್.ಡಿ.ಕೋಟೆ ತಾಲ್ಲೂಕು ಸರಗೂರಿನ ಶಿವಮ್ಮ ಅವರು ಮಂಗಳವಾರ ಡಿವೈಎಸ್‌ಪಿ ಕಚೇರಿಗೆ ಹಾಜರಾಗಿ ಘಟನೆಗೆ ಸಂಬಂಧಿಸಿ ಹೇಳಿಕೆ ನೀಡಿದರು.

ಅದಕ್ಕೂ ಮೊದಲು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ‘ಮದುವೆಯಲ್ಲಿ ಭಾಗವಹಿಸುವುದಕ್ಕಾಗಿ ಬಂದಿದ್ದೆ. ಮಧ್ಯಾಹ್ನ ಊಟ ಮಾಡಿ ವಾಹನಕ್ಕೆ ಹತ್ತುವ ಮೊದಲು ಟ್ಯಾಂಕ್‌ನಿಂದ ನೀರು ಕುಡಿದೆ. ಆಗ ಅಲ್ಲಿದ್ದ ವ್ಯಕ್ತಿ, ‘ನೀವು ಮುಟ್ಟಬೇಡಿ ಕಣಮ್ಮ, ನಿಮ್ಮ ಜಾತಿ ಯಾವುದು’ ಎಂದು ಕೇಳಿದರು. ‘ನಾನು ಎಸ್‌ಸಿ’ ಎಂದು ಹೇಳಿದಾಗ, ‘ನೀವು ಇಲ್ಲಿ ಕುಡಿಯಬಾರದು’ ಎಂದು ಹೇಳಿದರು’ ಎಂದು ನಡೆದ ಘಟನೆಯನ್ನು ವಿವರಿಸಿದರು.

ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ ಮಹಿಳೆ

ಬೆಂಗಳೂರು: ನಗರದ 23 ವರ್ಷದ ಮಹಿಳೆಯೊಬ್ಬರು ಮೂವರು ಮಕ್ಕಳಿಗೆ ಜನ್ಮ ನೀಡಿದ್ದಾರೆ.

ಸುಷ್ಮಾ ಆನಂದ್ ಅವರು 2 ಗಂಡು, ಒಂದು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ. ಜೆ.ಪಿ.ನಗರದ ಅರ್ಕಾ ಅನುಗ್ರಹ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಟ್ಟಿದ್ದ ಅವರಿಗೆ, ಅಲ್ಲಿನ ಸ್ತ್ರೀರೋಗ ತಜ್ಞೆ ಡಾ. ಸರಸ್ವತಿ ರಮೇಶ್ ಅವರ ಮಾರ್ಗದರ್ಶನದಲ್ಲಿ ವೈದ್ಯರು ಇದೇ 19ರಂದು ಹೆರಿಗೆ ಮಾಡಿಸಿದ್ದಾರೆ. ತಾಯಿ ಹಾಗೂ ಮಕ್ಕಳು ಆರೋಗ್ಯವಾಗಿದ್ದಾರೆ.

ಮೊದಲು ಜನಿಸಿದ ಗಂಡು ಮಗು 1.5 ಕೆ.ಜಿ ತೂಕ ಇದೆ. 30 ಸೆಕೆಂಡ್ ನಂತರ ಜನಿಸಿದ ಹೆಣ್ಣು ಮಗು 1.7 ಕೆ.ಜಿ ತೂಕವಿದ್ದು, ಮೂರನೇ ಮಗು 3.15 ನಿಮಿಷ ಅಂತರದಲ್ಲಿ ಜನಿಸಿದೆ. ಇದು 1.8 ಕೆ.ಜಿ. ತೂಕವಿದೆ. ಮೂರು ನವಜಾತ ಶಿಶುಗಳು ಜನಿಸಿದ ಕೂಡಲೇ ಅತ್ತಿವೆ. ಹಾಗಾಗಿ, ಇವರಿಗೆ ಯಾವುದೇ ರೀತಿಯ ತೊಂದರೆಯಿಲ್ಲ ಎನ್ನುವುದು ದೃಢಪಟ್ಟಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

‘ಮೂರು ಶಿಶುಗಳೂ ಆರೋಗ್ಯವಾಗಿವೆ. ಈ ರೀತಿಯ ಪ್ರಕರಣ ಅಪರೂಪ. 15 ವರ್ಷಗಳ ಹಿಂದೆ ಡಾ. ಸರಸ್ವತಿ ರಮೇಶ್ ಅವರು ಬಸವನಗುಡಿಯ ಎ.ವಿ. ಆಸ್ಪತ್ರೆಯಲ್ಲಿ ಮೂರು ಶಿಶುಗಳ ಹೆರಿಗೆ ಮಾಡಿಸಿದ್ದರು. ಆ ಮಕ್ಕಳು ಆರೋಗ್ಯವಾಗಿ ಇದ್ದಾರೆ’ ಎಂದು ಆಸ್ಪತ್ರೆಯ ಮಕ್ಕಳ ತಜ್ಞೆ ಡಾ. ಸ್ಮೃತಿ ಗೌರಂಗ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ತ್ರಿವಳಿ ಶಿಶುಗಳೊಂದಿಗೆ ತಾಯಿ ಸುಷ್ಮಾ, ತಂದೆ ಆನಂದ್, ವೈದ್ಯರಾದ ಡಾ. ಸರಸ್ವತಿ ರಮೇಶ್ ಹಾಗೂ ಡಾ. ಸ್ಮೃತಿ ಗೌರಂಗ್ ಇದ್ದಾರೆ.

ಮೇಲ್ಮನವಿ ಪುರಸ್ಕರಿಸಿದ ಹೈಕೋರ್ಟ್

ಅನುಕಂಪ ಆಧಾರಿತ ಹುದ್ದೆ: ದತ್ತು ಮಕ್ಕಳೂ ಅರ್ಹ

ಬೆಂಗಳೂರು: ‘ಅನುಕಂಪದ ಆಧಾರದಲ್ಲಿ ಪೋಷಕರ ಉದ್ಯೋಗ ಪಡೆಯಲು ದತ್ತು ಮಕ್ಕಳೂ ಅರ್ಹರಾಗಿರುತ್ತಾರೆ’ ಎಂದು ಹೈಕೋರ್ಟ್ ಆದೇಶಿಸಿದೆ.

‘ದತ್ತು ಮಕ್ಕಳಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ‘ ಎಂಬ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಬಾಗಲಕೋಟೆಯ ಬನಹಟ್ಟಿ ತಾಲ್ಲೂಕಿನ ನಿವಾಸಿ ಎಸ್. ಗಿರೀಶ್ (32) ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಮತ್ತು ಜಿ.ಬಸವರಾಜು ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

‘ದತ್ತು ಮಕ್ಕಳಿಗೆ ಅನುಕಂಪದ ಉದ್ಯೋಗ ನೀಡಲು ಅವಕಾಶವಿಲ್ಲ ಎಂದು 1996ರ ನಿಯಮಗಳು ತಿಳಿಸುತ್ತವೆ’ ಎಂಬ ಪ್ರಾಸಿಕ್ಯೂಷನ್ ವಾದವನ್ನು ಪೀಠ ತಿರಸ್ಕರಿಸಿದೆ.‘ಅನುಕಂಪದ ಉದ್ಯೋಗಕ್ಕೆ ಸಲ್ಲಿಸಿದ ಅರ್ಜಿ ಪರಿಗಣಿಸುವಾಗ ಸ್ವಾಭಾವಿಕ ಮಕ್ಕಳಿಗೆ ಸರಿಸಮನಾಗಿ ದತ್ತು ಮಕ್ಕಳನ್ನೂ ಪರಿಗಣಿಸಬೇಕು ಎಂದು 2021ರಲ್ಲಿ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಮೇಲ್ಮನವಿದಾರ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ನಂತರ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ ಎಂಬ ಕಾರಣಕ್ಕೆ ತಿದ್ದುಪಡಿ ನಿಯಮಗಳ ಲಾಭವನ್ನು ಮೇಲ್ಮನವಿದಾರನಿಗೆ ನಿರಾಕರಿಸುವಂತಿಲ್ಲ’ ಎಂದು ನ್ಯಾಯಪೀಠ ತಿಳಿಸಿದೆ.

‘ಮೇಲ್ಮನವಿದಾರ ಗಿರೀಶ್ (ದತ್ತುಪುತ್ರ) ಸಲ್ಲಿಸಿರುವ ಅರ್ಜಿಯನ್ನು 12 ವಾರಗಳಲ್ಲಿ ಪರಿಗಣಿಸಬೇಕು‘ ಎಂದು ಪ್ರಾಸಿಕ್ಯೂಷನ್ ಇಲಾಖೆಗೆ ನಿರ್ದೇಶಿಸಿದೆ.

ಆಕ್ಷೇಪಣೆಗೆ ಅವಧಿ ವಿಸ್ತರಣೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ನ. 30ರವರೆಗೂ ವಿಸ್ತರಿಸಲಾಗಿದೆ.

ಸರ್ಕಾರ, 15 ಸಾವಿರ ಶಿಕ್ಷಕರ ಹುದ್ದೆಗಳಿಗೆ ಸಿಇಟಿ ಮೂಲಕ ಆಯ್ಕೆ ಪ್ರಕ್ರಿಯೆ ನಡೆಸಿತ್ತು. 13,363 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ನ.18ರಂದು ಬಿಡುಗಡೆ ಮಾಡಿತ್ತು. ನ.19ರಿಂದ 23ರವರೆಗೆ ಆಕ್ಷೇಪಣೆಗೆಅವಕಾಶ ನೀಡಿತ್ತು. ಅಭ್ಯರ್ಥಿಗಳು 30ರವರೆಗೂ ಆಯಾ ಜಿಲ್ಲೆಗಳ ಉಪ ನಿರ್ದೇಶಕರ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬಹುದು.

ತಾಯಿ ಜತೆ ಶಾಲೆಗೆ ಹೊರಟಿದ್ದ ಲಯಶ್ರೀ • ಬಸ್ ಚಾಲಕ ವಶಕ್ಕೆ

ಬಿಎಂಟಿಸಿ ಬಸ್ ಡಿಕ್ಕಿ: ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ ಹಾಗೂ ಸ್ಕೂಟರ್ ನಡುವೆ ಮಂಗಳವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಲಯಶ್ರೀ (16) ಮೃತಪಟ್ಟಿದ್ದಾಳೆ.

'ಸೀಗೇಹಳ್ಳಿ ನಿವಾಸಿ ಲಯಶ್ರೀ, ಕೇಂದ್ರೀಯ ವಿದ್ಯಾಲಯದಲ್ಲಿ ಓದುತ್ತಿದ್ದಳು. ತಾಯಿ ಪ್ರಿಯದರ್ಶಿನಿ (45) ಹಾಗೂ ತಮ್ಮ ಯಶ್ವಿನ್ (11) ಜೊತೆ ಸ್ಕೂಟರ್‌ನಲ್ಲಿ ಶಾಲೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಪ್ರಿಯದರ್ಶಿನಿ ಹಾಗೂ ಯಶ್ವಿನ್ ಸಹ ಗಾಯಗೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅಪಘಾತಕ್ಕೆ ಕಾರಣವಾಗಿದ್ದ ಚಾಲಕ, ಸ್ಥಳದಲ್ಲಿ ಬಸ್ ಬಿಟ್ಟು ಪರಾರಿಯಾಗಿದ್ದ. ಈತನನ್ನು ಪತ್ತೆ ಮಾಡಿ ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ಲಯಶ್ರೀ

ಶಾಲಾ ವಾಹನ ಬದಲು ಸ್ಕೂಟರ್: 'ಲಯಶ್ರೀ ಹಾಗೂ ಯಶ್ವಿನ್ ನಿತ್ಯವೂ ಶಾಲಾ ವಾಹನದಲ್ಲಿ ಹೋಗಿ ಬರುತ್ತಿದ್ದರು. ಮಂಗಳವಾರ ಸಂಬಂಧಿಕರೊಬ್ಬರ ಕಾರ್ಯಕ್ರಮಕ್ಕೆ ಹೊರಟಿದ್ದ ತಾಯಿ ಪ್ರಿಯದರ್ಶಿನಿ, ತನ್ನದೇ ಸ್ಕೂಟರ್‌ನಲ್ಲಿ ಶಾಲೆವರೆಗೂ ಬಿಡುವುದಾಗಿ ಹೇಳಿ ಮಕ್ಕಳಿಬ್ಬರನ್ನು ಕರೆದೊಯ್ಯುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಭಟ್ಟರಹಳ್ಳಿ ಕಡೆಯಿಂದ ಟಿ.ಸಿ. ಪಾಳ್ಯದ ಕಡೆಗೆ ಸರ್ವಿಸ್ ರಸ್ತೆಯಲ್ಲಿ ಸ್ಕೂಟರ್ (ಕೆಎ 03 ಜೆಹೆಚ್ 9445) ಹೊರಟಿತ್ತು. ಟಿ.ಸಿ.ಪಾಳ್ಯದಿಂದ ಭಟ್ಟರಹಳ್ಳಿ ಕಡೆಗೆ ಬಿಎಂಟಿಸಿ ಬಸ್ (ಕೆಎ 01 ಎಫ್‌ಎ 1467) ಬರುತ್ತಿತ್ತು. ಚಾಲಕ, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ಇದರಿಂದಾಗಿ ಸ್ಕೂಟರ್‌ಗೆ ಬಸ್ ಡಿಕ್ಕಿ ಹೊಡೆದಿತ್ತು.'

'ರಸ್ತೆಯಲ್ಲಿ ಸ್ಕೂಟರ್ ಉರುಳಿಬಿದ್ದಿತ್ತು. ಪ್ರಿಯದರ್ಶಿನಿ ಹಾಗೂ ಯಶ್ವಿನ್, ರಸ್ತೆ ಬದಿಯಲ್ಲಿ ಬಿದ್ದಿದ್ದರು. ಲಯಶ್ರೀ, ಬಸ್ಸಿನ ಬಲಭಾಗದ ಮುಂದಿನ ಚಕ್ರದಡಿ ಸಿಲುಕಿ ತೀವ್ರ ಗಾಯಗೊಂಡಿದ್ದರು. ಗಾಯಾಳುಗಳನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು, ಲಯಶ್ರೀ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ವಿವರಿಸಿದರು.

'ಬಿಎಂಟಿಸಿ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ವಶಕ್ಕೆ ಪಡೆಯಲಾಗಿದೆ. ಬಸ್ ಸಹ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ ಬಸ್‌ಗಳಿಂದ 2022ರಲ್ಲಿ ಸಂಭವಿಸಿದ ಅಪಘಾತಗಳು

- **ನವೆಂಬರ್ 2:** ಹೊರವರ್ತುಲ ರಸ್ತೆಯ ಸುಮನಹಳ್ಳಿ ಮೇಲ್ಸೇತುವೆ ಬಳಿ ಬಿಎಂಟಿಸಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್ ಸವಾರ ಪ್ರಮೋದ್‌ಕುಮಾರ್ (25) ಮೃತಪಟ್ಟಿದ್ದರು
- **ಅಕ್ಟೋಬರ್ 10:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬಿಎಂಟಿಸಿ ಬಸ್ ಮೈ ಮೇಲೆ ಹರಿದಿದ್ದರಿಂದ ಎಂ.ಎಸ್ಸಿ ವಿದ್ಯಾರ್ಥಿನಿ ಶಿಲ್ಪಶ್ರೀ (22) ಎಂಬುವವರು ಮೃತಪಟ್ಟಿದ್ದರು
- **ಸೆಪ್ಟೆಂಬರ್ 30:** ಹೊರವರ್ತುಲ ರಸ್ತೆಯ ನಾಗರಬಾವಿ ವೃತ್ತದ ಬಳಿ ಬಿಎಂಟಿಸಿ ಬಸ್ ಗುದ್ದಿದ್ದರಿಂದ ಹೊಸಕೆರೆಹಳ್ಳಿ ಸರ್ಕಾರಿ ಶಾಲೆ ಶಿಕ್ಷಕ ಸಂತೋಷ್ (54) ಎಂಬುವವರು ಮೃತಪಟ್ಟಿದ್ದರು
- **ಜುಲೈ 25:** ಆರ್‌ಎಂಸಿ ಯಾರ್ಡ್ ಎದುರು ಬಿಎಂಟಿಸಿ ಬಸ್ ಗುದ್ದಿ ಪಾದಚಾರಿ ಅಂಬೇಡ್ಕರ್ ನಗರದ ನಿವಾಸಿ ಚಿನ್ನಪ್ಪ (72) ಮೃತಪಟ್ಟಿದ್ದರು
- **ಮೇ 23 :** ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಖಾಸಗಿ ಕಂಪನಿ ಉದ್ಯೋಗಿ ಗದಗಿನ ಮಂಜುನಾಥ್ (25) ಮೃತಪಟ್ಟಿದ್ದರು
- **ಜನವರಿ 24:** ಮಲ್ಲೇಶ್ವರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ, ಸವಾರ ಸುರೇಶ್ ಬಾಬು ಮೃತಪಟ್ಟಿದ್ದರು

ಮಂಗಳೂರು ಸ್ಫೋಟ: ರೈಲು ನಿಲ್ದಾಣದಲ್ಲಿ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಬೆನ್ನಲ್ಲೇ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಪೊಲೀಸರು, ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಮಂಗಳವಾರ ತಪಾಸಣೆ ನಡೆಸಿದರು.

ಸ್ಫೋಟದಿಂದ ಎಚ್ಚೆತ್ತುಕೊಂಡಿರುವ ಪೊಲೀಸರು, ಮಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ರಾಜ್ಯದ ಎಲ್ಲ ರೈಲು ನಿಲ್ದಾಣಗಳಲ್ಲಿ ಕಟ್ಟೆಚ್ಚರ ವಹಿಸಿದ್ದಾರೆ. ಇದರ ಭಾಗವಾಗಿ ಬೆಂಗಳೂರಿನ ನಿಲ್ದಾಣದಲ್ಲೂ ತಪಾಸಣೆ ನಡೆಯಿತು.

ರೈಲ್ವೆ ಎಸ್ಪಿ ಸೌಮ್ಯಲತಾ ನೇತೃತ್ವದಲ್ಲಿ ಸಿಬ್ಬಂದಿ ರೈಲು ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದರು. ಫ್ಲಾಟ್‌ಫಾರ್ಮ್, ರೈಲಿನ ಬೋಗಿಗಳು, ಪಾರ್ಸೆಲ್ ಇರಿಸುವ ಸ್ಥಳ, ಪ್ರಯಾಣಿಕರು ಕುಳಿತುಕೊಳ್ಳುವ ಸ್ಥಳ ಹಾಗೂ ಇತರೆ ಸ್ಥಳಗಳಲ್ಲಿ ಶೋಧ ನಡೆಸಿದರು. ಶ್ವಾನದಳದ ಸಿಬ್ಬಂದಿ ಕೂಡ ತಪಾಸಣೆಗೆ ಸಹಕಾರ ನೀಡಿದರು.

'ರೈಲು ನಿಲ್ದಾಣಕ್ಕೆ ಬರುವ ಪ್ರತಿಯೊಬ್ಬರ ಮೇಲೂ ನಿಗಾ ವಹಿಸಬೇಕು. ಅನುಮಾನ ಕಂಡುಬಂದಲ್ಲಿ, ಅಂಥವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕು' ಎಂದು ಎಸ್ಪಿ ಸೌಮ್ಯಲತಾ ಸಿಬ್ಬಂದಿಗೆ ಸೂಚನೆ ನೀಡಿದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಮಂಗಳವಾರ ತಪಾಸಣೆ ನಡೆಸಿದರು

ರಸ್ತೆಯಲ್ಲಿ ಯುವಕರ ಹೊಡೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಠಾಣೆ ವ್ಯಾಪ್ತಿಯಲ್ಲಿ ಯುವಕರಿಬ್ಬರು ಪರಸ್ಪರ ಹೊಡೆದಾಡಿಕೊಂಡಿದ್ದು, ತೀವ್ರ ಗಾಯಗೊಂಡಿರುವ ಯುವಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಸ್ಥಳೀಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಯುವಕರಿಬ್ಬರು, ಮಂಗಳವಾರ ಸಂಜೆ ರಸ್ತೆಯಲ್ಲಿ ಪರಸ್ಪರ ಗಲಾಟೆ ಮಾಡುತ್ತಿದ್ದರು. ಸ್ಥಳಕ್ಕೆ ಹೋದ ಪೊಲೀಸರು, ಪರಿಸ್ಥಿತಿ ತಿಳಿಗೊಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರತ್ಯಕ್ಷದರ್ಶಿಯೊಬ್ಬರು, 'ಯುವಕರಿಬ್ಬರ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ಜಗಳ ಶುರುವಾಗಿತ್ತು. ಇದು ವಿಕೋಪಕ್ಕೆ ಹೋಗಿ ಪರಸ್ಪರ ಕೈ ಕೈ ಮಿಲಾಯಿಸಿದ್ದರು. ಒಬ್ಬಾತ, ಇನ್ನೊಬ್ಬನ ಮೇಲೆ ಹಲ್ಲೆ ಮಾಡಿದ್ದ. ಮೈ ಮೇಲೆ ಕುಳಿತು ಕೂಗಾಡುತ್ತಿದ್ದ. ಬುದ್ದಿವಾದ ಹೇಳಲು ಹೋದ ಜನರ ಮೇಲೂ ಹರಿಹಾಯುತ್ತಿದ್ದ' ಎಂದರು.

'ಯುವಕರ ಬಳಿ ಹರಿತವಾದ ಆಯುಧಗಳಿರುವ ಅನುಮಾನದಿಂದಾಗಿ, ಯಾರೂ ಹತ್ತಿರಕ್ಕೆ ಹೋಗಿ ಹಿಡಿದುಕೊಳ್ಳಲು ಯತ್ನಿಸಲಿಲ್ಲ. ಯಾವ ಕಾರಣಕ್ಕೆ ಇಬ್ಬರು ಯುವಕರು ಹೊಡೆದಾಡುತ್ತಿದ್ದರೆಂಬುದು ಗೊತ್ತಾಗಿಲ್ಲ' ಎಂದು ಹೇಳಿದರು.

'ಪೊಲೀಸರು ಸ್ಥಳಕ್ಕೆ ಬಂದಾಗ, ಯುವಕ ಪ್ರಜ್ಞೆ ತಪ್ಪಿ ಬಿದ್ದಿದ್ದ. ಇದರ ವಿಡಿಯೊವನ್ನು ಪೊಲೀಸರು ಚಿತ್ರೀಕರಿಸಿಕೊಂಡಿದ್ದಾರೆ. ಕುಡಿದ ಅಮಲಿನಲ್ಲಾದ ಗಲಾಟೆಯೊ ಅಥವಾ ಬೇರೆ ಉದ್ದೇಶವಿದೆಯಾ? ಎಂಬುದು ಪೊಲೀಸರ ತನಿಖೆಯಿಂದಲೇ ತಿಳಿಯಬೇಕಿದೆ. ನಡುರಸ್ತೆಯಲ್ಲಿ ಯುವಕರು ಹೊಡೆದಾಡಿಕೊಂಡಿದ್ದರಿಂದ, ಸ್ಥಳೀಯರು ಆತಂಕಗೊಂಡಿದ್ದಾರೆ' ಎಂದು ತಿಳಿಸಿದರು.

ಕೋರಮಂಗಲದಲ್ಲಿ ಯುವಕರಿಬ್ಬರು ಮಂಗಳವಾರ ಪರಸ್ಪರ ಹೊಡೆದಾಡಿಕೊಂಡಿದ್ದು, ಹಲ್ಲೆಗೀಡಾದ ಯುವಕನ ಮೈ ಮೇಲೆ ಕುಳಿತಿದ್ದ ಮತ್ತೊಬ್ಬ ಯುವಕ ಸ್ಥಳೀಯರ ಜೊತೆ ವಾಗ್ವಾದ ನಡೆಸುತ್ತಿರುವುದು

– ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನಂಜನಗೂಡಿನಿಂದ ಕರೆತಂದು ಕೊಲೆ: ಪೊಲೀಸರಿಗೆ ಶರಣಾದ ಆರೋಪಿ

ಸ್ನೇಹಿತನ ಕೊಂದು, ಠಾಣೆಗೆ ಮೃತದೇಹ ತಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದರೆಂಬ ಕಾರಣಕ್ಕೆ ಸ್ನೇಹಿತನನ್ನೇ ಕೊಲೆ ಮಾಡಿರುವ ಆರೋಪಿ ಎಂ. ರಾಜಶೇಖರ್ (31), ತಮ್ಮದೇ ಕಾರಿನಲ್ಲಿ ಮೃತದೇಹವನ್ನು ರಾಮಮೂರ್ತಿನಗರ ಠಾಣೆಗೆ ತಂದು ಪೊಲೀಸರಿಗೆ ಶರಣಾಗಿದ್ದಾರೆ.

'ಜಯಂತಿನಗರದ ನಿವಾಸಿ ರಾಜಶೇಖರ್, ತನ್ನ ಸ್ನೇಹಿತನಾಗಿದ್ದ ನಂಜನಗೂಡು ಹಿಮನಗುಂಡಿ ಗ್ರಾಮದ ಮಹೇಶಪ್ಪ (49) ಅವರನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದಾನೆ. ಠಾಣೆಗೆ ಬಂದು ಶರಣಾಗಿದ್ದ ರಾಜಶೇಖರ್‌ನನ್ನು ಬಂಧಿಸಿ, ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ರಾಜಶೇಖರ್

ಮಹೇಶಪ್ಪ

'ವಿವಿಧ ಯೋಜನೆಯಡಿ ಸಾಲ ಕೊಡಿಸುವುದಾಗಿ ಹೇಳಿದ್ದ ಮಹೇಶಪ್ಪ, ಲಕ್ಷಾಂತರ ರೂಪಾಯಿ ಪಡೆದಿದ್ದ. ಸಾಲ ಕೊಡಿಸದೇ ವಂಚಿಸಿದ್ದ. ಕೋಪಗೊಂಡು ಕೊಲೆ ಮಾಡಿದ್ದೇನೆ' ಎಂದು ರಾಜಶೇಖರ್ ಹೇಳುತ್ತಿದ್ದಾರೆ. ಈ ಹೇಳಿಕೆ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಬೇರೆ ಕಾರಣವಿರಬಹುದೆಂಬ ಅನುಮಾನದಡಿ ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಮನೆ ಅಡವಿಟ್ಟು ಹಣ ನೀಡಿದ್ದ: 'ಸೊಸೈಟಿ, ಬ್ಯಾಂಕ್ ಹಾಗೂ ಇತರೆ ಹಣಕಾಸು ಸಂಸ್ಥೆಗಳಲ್ಲಿ ಪರಿಚಯಸ್ಥರಿದ್ದಾರೆಂದು ಮಹೇಶಪ್ಪ ಹೇಳಿಕೊಳ್ಳುತ್ತಿದ್ದ. ಕಮಿಷನ್ ರೂಪದಲ್ಲಿ ಮುಂಗಡವಾಗಿ ಹಣ ನೀಡಿದರೆ, ಸಾಲ ಮಂಜೂರು ಮಾಡಿಸುವುದಾಗಿ ತಿಳಿಸುತ್ತಿದ್ದ. ಇದನ್ನು ನಂಬಿ ಹಲವರು ಹಣ ಕೊಟ್ಟು ವಂಚನೆಗೀಡಾಗಿದ್ದರೆಂಬುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ಮಹೇಶಪ್ಪ ಹಾಗೂ ರಾಜಶೇಖರ್, 13 ವರ್ಷಗಳಿಂದ ಸ್ನೇಹಿತರಾಗಿದ್ದರು. ಆಗಾಗ ಭೇಟಿಯಾಗುತ್ತಿದ್ದರು. ಮೆಕ್ಯಾನಿಕ್ ಆಗಿದ್ದ ರಾಜಶೇಖರ್ ಹಾಗೂ ಅವರ ತಾಯಿ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಇದೇ ಕಾರಣಕ್ಕೆ ಸಾಲ ಕೊಡಿಸುವಂತೆ ಮಹೇಶಪ್ಪ ಅವರನ್ನು ಕೋರಿದ್ದರು.'

'ಸಾಲ ಕೊಡಿಸುವುದಾಗಿ ಹೇಳಿದ್ದ ಮಹೇಶಪ್ಪ, ರಾಜಶೇಖರ್ ಹಾಗೂ ಅವರ ತಾಯಿಯಿಂದ ಹಂತ ಹಂತವಾಗಿ ಲಕ್ಷಾಂತರ ರೂಪಾಯಿ ಪಡೆದಿದ್ದ. ಮನೆ ಅಡವಿಟ್ಟು ರಾಜಶೇಖರ್ ಹಣ ನೀಡಿದ್ದರು. ಹಲವು ದಿನವಾದರೂ ಸಾಲ ಕೊಡಿಸದಿದ್ದರಿಂದ ರಾಜಶೇಖರ್ ಬೇಸತ್ತಿದ್ದರು. ಹಲವು ಬಾರಿ ಎಚ್ಚರಿಕೆಯನ್ನೂ ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಮನೆಯಿಂದ ಕರೆತಂದು ಕೊಲೆ: 'ಮಹೇಶಪ್ಪ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ರಾಜಶೇಖರ್, ನಂಜನಗೂಡು ಹಿಮನಗುಂಡಿ ಗ್ರಾಮಕ್ಕೆ ಹೋಗಿದ್ದರು. ಸಾಲ ಮಂಜೂರು ಮಾಡಿಸಲು ಮತ್ತಷ್ಟು ಹಣ ನೀಡುವುದಾಗಿ ಹೇಳಿ ಮಹೇಶಪ್ಪ ಅವರನ್ನು ತನ್ನದೇ ಕಾರಿನಲ್ಲಿ ಬೆಂಗಳೂರಿಗೆ ಸೋಮವಾರ ಕರೆದುಕೊಂಡು ಬಂದಿದ್ದರು' ಎಂದು ಪೊಲೀಸರು ಹೇಳಿದರು.

'ಆವಲಹಳ್ಳಿ ಬಳಿ ಕಾರು ನಿಲ್ಲಿಸಿ, ಇಬ್ಬರೂ ಮಾತನಾಡುತ್ತಿದ್ದರು. ಜಗಳವೂ ಆರಂಭವಾಗಿತ್ತು. ಇದೇ ಸಂದರ್ಭದಲ್ಲೇ ರಾಜಶೇಖರ್, ರಾಡ್‌ನಿಂದ ಮಹೇಶಪ್ಪ ತಲೆಗೆ ಹೊಡೆದಿದ್ದರು. ತೀವ್ರ ರಕ್ತಸ್ರಾವವಾಗಿ ಮಹೇಶಪ್ಪ ಸ್ಥಳದಲ್ಲೇ ಮೃತಪಟ್ಟಿದ್ದರು' ಎಂದು ತಿಳಿಸಿದರು.

'ಮೃತದೇಹವನ್ನು ಕಾರಿನಲ್ಲಿರಿಸಿಕೊಂಡು ಸೋಮವಾರ ತಡರಾತ್ರಿ ಠಾಣೆಗೆ ಬಂದಿದ್ದ ರಾಜಶೇಖರ್, ಸ್ನೇಹಿತನನ್ನು ಕೊಲೆ ಮಾಡಿರುವುದಾಗಿ ಶರಣಾಗಿದ್ದ. ರಾತ್ರಿ ಕರ್ತವ್ಯದಲ್ಲಿದ್ದ ಪೊಲೀಸರು, ರಾಜಶೇಖರ್ ಅವರನ್ನು ವಶಕ್ಕೆ ಪಡೆದು ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದರು' ಎಂದು ಹೇಳಿದರು.

ಜೈಲಿನಿಂದ ಹೊರಬಂದು 42 ವಾಹನ ಕದ್ದಿದ್ದ 'ಡಾಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಎನ್. ಪ್ರಶಾಂತ್ ಅಲಿಯಾಸ್ ಡಾಲಿಯನ್ನು (25) ಮಹದೇವಪುರ ಪೊಲೀಸರು ಬಂಧಿಸಿದ್ದಾರೆ.

'ಅತ್ತಿಬೆಲೆ ಹೋಬಳಿ ಬಿದರಗುಪ್ಪೆಯ ಎನ್. ಪ್ರಶಾಂತ್, ಅಪರಾಧ ಹಿನ್ನೆಲೆಯುಳ್ಳವ. ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದು ಹಳೇ ಚಾಳಿ ಮುಂದುವರಿಸಿದ್ದ. ಈತನಿಂದ ₹ 25 ಲಕ್ಷ ಮೌಲ್ಯದ 42 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಆರ್‌ಎಚ್‌ಬಿ ಕಾಲೊನಿ ಮುಖ್ಯರಸ್ತೆಯ ಹೋಟೆಲ್ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ನ. 7ರಂದು ಕಳ್ಳತನ ಆಗಿತ್ತು. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದರು.

'ಮನೆಗಳ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಹ್ಯಾಂಡಲ್ ಲಾಕ್ ಮುರಿದು ಆರೋಪಿ ಕಳ್ಳತನ ಮಾಡುತ್ತಿದ್ದ. ಅದೇ ವಾಹನಗಳನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದ' ಎಂದು ಪೊಲೀಸರು ಹೇಳಿದರು.

ನಿವೃತ್ತ ಇನ್‌ಸ್ಪೆಕ್ಟರ್ ಬಳಿ ಲಂಚ: ಗೃಹರಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಕಚೇರಿ ಹೊಂದಿರುವ ಗೃಹ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಸತೀಶ್ ಎಂಬ ಗೃಹರಕ್ಷಕ ಸಿಬ್ಬಂದಿಯನ್ನು ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರ ವೈದ್ಯಕೀಯ ವೆಚ್ಚದ ಬಿಲ್ಲಿನ ಮರುಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ₹ 20,000 ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಪೊಲೀಸ್ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿದ್ದು ನಿವೃತ್ತರಾಗಿರುವ ಪಿ.ಎನ್. ಗಣೇಶ್ ಎಂಬುವವರು ತಮ್ಮ ವೈದ್ಯಕೀಯ ವೆಚ್ಚದ ಬಿಲ್ಲನ್ನು ಮರುಪಾವತಿ ಮಾಡುವಂತೆ ಕೋರಿ ಗೃಹ ಇಲಾಖೆಗೆ ಮನವಿ ಸಲ್ಲಿಸಿದ್ದರು. ಸಂಬಂಧಿಸಿದ ಅಧಿಕಾರಿಯ ಜತೆ ಮಾತನಾಡಿ, ಬಿಲ್ ಮೊತ್ತ ಮರುಪಾವತಿಗೆ ಮಂಜೂರಾತಿ ಕೊಡಿಸಲು ₹ 20,000 ಲಂಚ ನೀಡುವಂತೆ ಆರೋಪಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

'ಗಣೇಶ್ ಅವರನ್ನು ಪರಾಗ್ ಹೋಟೆಲ್ ಬಳಿಗೆ ಮಂಗಳವಾರ ಕರೆಸಿಕೊಂಡ ಸತೀಶ್, ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು, ಆರೋಪಿಯನ್ನು ಬಂಧಿಸಿದರು. ಪ್ರಾಥಮಿಕ ವಿಚಾರಣೆ ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಅಶೋಕ್ ಕೆ.ವಿ. ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಅಂತೋನಿ ಜಾನ್, ಇನ್‌ಸ್ಪೆಕ್ಟರ್ ಬಾಲಾಜಿ ಬಾಬು ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಸಿನಿಮಾ, ವೆಬ್ ಸರಣಿ ತಡೆಯಾಜ್ಞೆ ತೆರವು

ಬೆಂಗಳೂರು: ಎಎಂಆರ್ ಪಿಕ್ಚರ್ಸ್ ನಿರ್ಮಿಸುತ್ತಿರುವ 'ವೀರಪ್ಪನ್ ಹಂಗರ್ ಫಾರ್ ಕಿಲ್ಲಿಂಗ್' ಚಿತ್ರ ಮತ್ತು ವೆಬ್ ಸರಣಿಗಿದ್ದ ತಡೆಯಾಜ್ಞೆಯನ್ನು ನ.15ರಂದು ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯ ತೆರವುಗೊಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಂಆರ್ ಪಿಕ್ಚರ್ಸ್ ಸಂಸ್ಥೆಯ ನಿರ್ದೇಶಕ ಮತ್ತು ನಿರ್ಮಾಪಕ ಎ.ಎಂ. ಆರ್. ರಮೇಶ್, 'ವೀರಪ್ಪನ್ ಪತ್ನಿ ಮುತ್ತುಲಕ್ಷ್ಮಿ ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿ ತಡೆಯಾಜ್ಞೆ ತಂದಿದ್ದರು. ಈಗ ತಡೆಯಾಜ್ಞೆಯನ್ನು ವಜಾಗೊಳಿಸಿ ಎ.ಎಂ.ಆರ್. ಪಿಕ್ಚರ್ಸ್ ಪರವಾಗಿ ತೀರ್ಪು ನೀಡಿದ್ದು, ಯಾವುದೇ ಅಡೆತಡೆಯಿಲ್ಲದೆ ಚಿತ್ರೀಕರಣಕ್ಕೆ ಅನುಮತಿ ನೀಡಿದೆ' ಎಂದು ಮಾಹಿತಿ ನೀಡಿದರು.

'ವೀರಪ್ಪನ್ ಹಂಗರ್ ಫಾರ್ ಕಿಲ್ಲಿಂಗ್ ಚಿತ್ರ ಮತ್ತು ವೆಬ್ ಸರಣಿ 'ಅಟ್ಟಹಾಸ' ಚಿತ್ರದ ಮುಂದುವರಿದ ಭಾಗವಾಗಿದೆ' ಎಂದು ತಿಳಿಸಿದರು.

'2023 ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ತುಮಕೂರು ವಿಭಾಗ (ಸಂಚಾರ ಶಾಖೆ), ತುಮಕೂರು

ಸಂ.: ಕರಾಸಾ/ತುವಿ/ಸಂ/ವಾ/ಇ-ಟೆಂ/ಹ&ಟೆಂ/3234/3235/3236/2022-23 ದಿನಾಂಕ: 21.11.2022

"ಇ-ಟೆಂಡರ್ & ಸಂಧಾನ ಪ್ರಕಟಣೆ"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ತುಮಕೂರು ವಿಭಾಗದ ವ್ಯಾಪ್ತಿಗೆ ಬರುವ **ಗುಬ್ಬಿ, ನಿಟ್ಟೂರು, ಕುಣಿಗಲ್, ಅಮೃತೂರು, ಹುಲಿಯೂರುದುರ್ಗ, ನೊಣವಿನಕೆರೆ, ತುರುವೇಕೆರೆ, ಸಿ.ಎಸ್. ಪುರ, ಡಾಬಾಸ್‌ಪೇಟೆ, ಕಡಬ, ತಿಪಟೂರು, ಕೊರಟಗೆರೆ, ಸಿರಾ, ಕಳ್ಳಂಬೆಳ್ಳ ಮತ್ತು ತುಮಕೂರು ತಾತ್ಕಾಲಿಕ** ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **"ಇ-ಟೆಂಡರ್, ಮ್ಯಾನ್ಯುಯಲ್ ಮತ್ತು ಸಂಧಾನ"** ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ದಿ: **13.12.2022**ರ **17:00 ಗಂಟೆಯೊಳಗಾಗಿ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ತುಮಕೂರು ವಿಭಾಗ, ಮಧುಗಿರಿ ಮುಖ್ಯರಸ್ತೆ, ಎ.ಪಿ.ಎಂ.ಸಿ ಮಾರ್ಕೆಟ್ ಹತ್ತಿರ, ಅಂತರಸನಹಳ್ಳಿ, ತುಮಕೂರು-572106**ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ: **7760990902** (ವಿಭಾಗೀಯ ಸಂಚಲನಾಧಿಕಾರಿಗಳು).

ಸಹಿ/-,
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ತುಮಕೂರು ವಿಭಾಗ, ತುಮಕೂರು

ವಾಸಾಸಂಇ/ವಾಪ್ರ/ಎಲ್‌ಸಿ/3202/2022-23

ನೈಋತ್ಯ ರೈಲ್ವೆ

Azadi Ka Amrit Mahotsav

ಇ-ಟೆಂಡರ್ ಪ್ರಕಟಣೆ ಸಂ. 18/ಎಸ್‌ಬಿಸಿ/22 ದಿನಾಂಕ : 15-11-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಕೋಲಾರ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 7,22,27,849/-
2	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ವೈಟ್‌ಫೀಲ್ಡ್ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 9,80,80,650/-
3	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಬೆಂಗಳೂರು ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 12,35,88,492/-
4	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಬಂಗಾರಪೇಟ್ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 7,48,98,030/-
5	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಕುಪ್ಪಂ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 7,13,19,994/-
6	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಕೆಂಗೇರಿ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 9,96,33,562/-
7	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಮಂಡ್ಯ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 9,98,98,792/-
8	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಹಿಂದೂಪುರ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 9,91,51,766/-
9	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಪೆನುಕೊಂಡ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 9,99,01,884/-
10	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ತುಮಕೂರು (ಪಶ್ಚಿಮ) ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 7,14,43,139/-
11	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ತುಮಕೂರು (ಪೂರ್ವ) ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 8,81,28,952/-
12	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಶ್ರೀ ಸತ್ಯ ಸಾಯಿ ಪ್ರಶಾಂತಿ ನಿಲಯಂ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 5,96,09,628/-
13	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಯಲಹಂಕ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 9,18,14,444/-
14	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಯಶವಂತಪುರ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 8,87,10,360/-
15	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಕುಣಿಗಲ್ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 6,08,24,479/-
16	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಹೊಸೂರ್ ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 8,83,05,091/-
17	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಧರ್ಮಪುರಿ (ಉತ್ತರ) ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 7,35,97,723/-
18	**ಬೆಂಗಳೂರು ವಿಭಾಗ** - ಎಸ್‌ಎಸ್‌ಇ/ಪಿ.ವೇ/ಧರ್ಮಪುರಿ (ದಕ್ಷಿಣ) ಸೆಕ್ಷನ್‌ನಲ್ಲಿ ಎರಡು ವರ್ಷಗಳ ಅವಧಿಗಾಗಿ ಶಾಶ್ವತ ಹಾದಿ ನಿರ್ವಹಣಾ ಗುತ್ತಿಗೆ.	ರೂ. 7,53,47,918/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08-12-2022 ರಂದು 15:00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/498/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಬೆಂಗಳೂರು

S.W.Railways sw_rly SWRRLY southwesternrailway SWRRLY

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (**'ಕಕ್ಷಿದಾರ'**) ಈ ಕೆಳಕಂಡ **"ಷೆಡ್ಯೂಲ್"** ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಸದರಿ ಮಾಲೀಕರಾದ ಜಿ.ಬಿ.ಗ್ಲೋಬಲ್ ಲಿಮಿಟೆಡ್, ಇದರ ನೋಂದಾಯಿತ ಕಛೇರಿ ಪ್ಲಾಟ್ ನಂ. ಸಿ-3, ಎಂ.ಐ.ಡಿ.ಸಿ. ತಾರಪುರ್ ಕೈಗಾರಿಕ ಪ್ರದೇಶ, ಬೊಯ್ಸರ್ (**'ಮಾಲೀಕರು'**) ಇವರೊಡನೆ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಷೆಡ್ಯೂಲ್ ಸ್ವತ್ತಿಗೆ ನಾವುಗಳೇ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಕ್ಲೇಮ್‌ಗಳನ್ನು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ಮಾರಾಟ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಅಧಿಕಾರ ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ಮಾರಾಟ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಖಸಬ ಹೋಬಳಿ, ಅರೇಹಳ್ಳಿ-ಗುಡ್ಡದಹಳ್ಳಿ ಗ್ರಾಮದಲ್ಲಿ ಬರುವ ಅಪ್ಪಾರೆಲ್ ಪಾರ್ಕ್ 2ನೇ ಘಟ್ಟ ಕೈಗಾರಿಕ ಪ್ರದೇಶ (ಸರ್ವೆ ನಂಬರುಗಳು 71,72 ಮತ್ತು 76 ರ ಸ್ವತ್ತಿನಲ್ಲಿ ಬರುವ) ಸ್ಥಿರಾಸ್ತಿ ಸ್ವತ್ತಿನ ಪ್ಲಾಟ್ ನಂ. ಎಸ್.ಡಬ್ಲ್ಯೂ-49 ಮತ್ತು ಎಸ್.ಡಬ್ಲ್ಯೂ-50, ರ ಒಟ್ಟಾರೆ ವಿಸ್ತೀರ್ಣ 20,267 ಚದರ ಮೀಟರ್‌ಗಳು ಜೊತೆಗೆ ಕಟ್ಟಡವನ್ನು ನಿರ್ಮಾಣ ಹೊಂದಿರುವ ಸ್ವತ್ತಿಗೆ ಚೆಕ್ಕುಬಂದಿ :

ಪೂರ್ವಕ್ಕೆ : ಪ್ಲಾಟ್ ನಂ. ಎಸ್.ಡಬ್ಲ್ಯೂ-45 ರಿಂದ 48,
ಪಶ್ಚಿಮಕ್ಕೆ : 12 ಮೀಟರ್ ಅಗಲದ ಕೆ.ಐ.ಎ.ಡಿ.ಬಿ ರಸ್ತೆ,
ಉತ್ತರಕ್ಕೆ : 30 ಮೀಟರ್ ಅಗಲದ ಕೆ.ಐ.ಎ.ಡಿ.ಬಿ ರಸ್ತೆ ನಂ.4 ಮತ್ತು
ದಕ್ಷಿಣಕ್ಕೆ : ಕೆ.ಐ.ಎ.ಡಿ.ಬಿ ಜನರಲ್ ಐಎ.

ದಿನಾಂಕ: 23.11.2022
ಸ್ಥಳ : ಬೆಂಗಳೂರು

ಸಹಿ/-
ಶ್ರೀನಿವಾಸ್ ಬಿ.ಆರ್ ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7, ಬ್ರೈಂಟನ್ ರಸ್ತೆ, ಬೆಂಗಳೂರು - 560025, ದೂ. ಸಂ. +91-80-6836-1111

NOTICE INVITING APPLICATIONS FOR ALLOTMENT OF SHOPS AT TB-III, MEG & CENTRE, BANGALORE – 560033

1. CO, Trg Bn-III, MEG & Centre, Bangalore -33 invites applications for allotment of various Regimental shops on rental basis at this Bn. Shops would be allotted to the highest bidder based on undermentioned priority in descending order of applications.
   (a) War widows/widows of def personnel killed while on duty
   (b) Disabled Soldiers (c) Ex-Servicemen
   (d) Spouse/ Widow of ex-servicemen
2. Details of shops are as under:-

Ser No.	Bldg No	Type of Shop	Sqft
(a)	T-21/5	Cafeteria	250
(b)	T-28/1	Boot Repair Shop	250
(c)	T-28/2	Gen Store	250
(d)	T-29/2	Cafeteria	250
(e)	T-29/3	Tailor Shop	250
(f)	T-31/2	Tailor Shop	190
(g)	T-103/1	Gen Store	250
(h)	P-280	Fast Food Corner	72

3. The license fees and rebate will be intimated during collection of applications form.
4. Application forms will be available at 'Q' Br of this Bn. The same may be obtained by drawing DD on all working days:-

(a) Issue of Application form : 23 Nov 22 to 30 Nov 22 (0900h to 1300h)
(b) Date of receipt of application : 08 Dec 22 (upto 1000h)
(c) DD in favour of : Regt Fund Acct TB-III MEG & Centre Payable at SBI TB-III MEG & Centre
(d) DD Amount : 500/- Non refundable).

ಉದ್ಯೋಗ ವಾಣಿ

II VISHWA VIDYAPEETH II
GROUP OF SCHOOLS
CAREER OPPORTUNITY
INVITING APPLICATIONS FOR THE BELOW MENTIONED POSTS [ICSE/CBSE/IGCSE]
TEACHER (PRT/TGT/PGT) - ENGLISH, MATHEMATICS, SCIENCE, SOCIAL STUDIES, ECONOMICS, BUSINESS STUDIES, HINDI, KANNADA, FRENCH, PHYSICAL EDUCATION, DANCE, ART & CRAFT, MUSIC
COORDINATOR - ACADEMIC COORDINATOR, ADMISSION COORDINATOR
OTHER POSTS - PRE-PRIMARY TEACHERS, ADMIN EXECUTIVE, CONTENT WRITER & SOCIAL MEDIA DESIGNER, LIBRARIAN, NURSE, LABASSISTANT, DAY CARE IN-CHARGE
EXPERTISE IN HANDLING SIMILAR ROLE WITH WORK EXPERIENCE OF MINIMUM 3 YEARS AT A REPUTED SCHOOL
PRINCIPAL FOR ICSE & IGCSE [YELAHANKA] WITH MINIMUM 3 YEARS OF EXPERIENCE
VICE PRINCIPAL FOR ICSE [YELAHANKA]

YELAHANKA [WALK-IN INTERVIEW]
27th November, 2022 (Sunday)
at 9:30 a.m. to 2:00 p.m.
Contact: 76762 27477
Email: careers@vishwavidyapeeth.edu.in

VARTHUR [WALK-IN INTERVIEW]
3rd December, 2022 (Saturday)
at 9:30 a.m. to 2:00 p.m.
Contact: 76762 27483
Email: myjobs@vishwavidyapeeth.edu.in

Let's create excellence together!

Recruiting Sales Professionals in and around Bangalore

Qualification: Any Graduation

Experience required:
Sales Professionals: 0 - 3 years
Relationship Manager: 3 - 9 years

Walk-ins on:
24th and 25th November, 2022
10:00 A.M. to 4:00 P.M.

Venue:
Axis Bank Ltd., 3rd Floor, Nitesh Times Square, M.G. Road, Bangalore – 560 001.
Axis Bank Ltd., Plot No. 41, Sheshadri Road, Anand Rao Circle, Majestic, Bangalore – 560 009.



#ComeAsYouAre

All age groups, LGBTQIA+ or PwD candidates can apply!

AXIS BANK

ಅಂದಾನಪ್ಪ ದೊಡ್ಡಮೇಟಿ ಅವರ ಕಲ್ಪನೆಯಂತೆ ಮೂಡಿದ್ದ ಭುವನೇಶ್ವರಿ ಚಿತ್ರ

ಮೊದಲ ತೈಲವರ್ಣ ಚಿತ್ರ ಬಳಕೆಗೆ ಆಗ್ರಹ

• ಚಂದ್ರು ಎಂ. ರಾಥೋಡ್

ನರೇಗಲ್ (ಗದಗ ಜಿಲ್ಲೆ): ಐವರು ಕಲಾವಿದರ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿರುವ ನಾಡದೇವತೆಯ ಅಧಿಕೃತ ಚಿತ್ರ ಬಳಕೆಗೆ ಗದಗ ಸಾಹಿತಿಗಳು, ಕನ್ನಡಪರ ಹೋರಾಟಗಾರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಜಕ್ಕಲಿ ಗ್ರಾಮದಲ್ಲಿ ಸಮಗ್ರ ಕರ್ನಾಟಕದ ಕಲ್ಪನೆಯಂತೆ ರಚಿಸಲಾದ ಭುವನೇಶ್ವರಿಯ ಮೊದಲ ತೈಲವರ್ಣದ ಚಿತ್ರವನ್ನೇ ಅಧಿಕೃತಗೊಳಿಸಿ, ಕಡ್ಡಾಯ ಬಳಕೆಗೆ ಮುಂದಾಗಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.

1953ರ ಜನವರಿ 11ರಂದು ಜಕ್ಕಲಿಯ ಅನ್ನದಾನೇಶ್ವರ ಮಠದಲ್ಲಿ, ಏಕೀಕರಣದ ರೂವಾರಿ ದಿ.ಅಂದಾನಪ್ಪ



ಗದುಗಿನ ಚಿತ್ರಕಲಾವಿದ ಸಿ.ಎನ್. ಪಾಟೀಲ ಅವರು 1953ರಲ್ಲಿ ರಚಿಸಿರುವ ಭುವನೇಶ್ವರಿ ತೈಲವರ್ಣ ಚಿತ್ರ

ದೊಡ್ಡಮೇಟಿ ಕಲ್ಪನೆಯಂತೆ ಗದುಗಿನ ಚಿತ್ರಕಲಾವಿದ ಸಿ.ಎನ್. ಪಾಟೀಲ ಆರು ಅಡಿ ಎತ್ತರದ ಭುವನೇಶ್ವರಿ ತೈಲವರ್ಣದ ಚಿತ್ರ ರಚಿಸಿದ್ದರು.

‘ಮುಖ್ಯವಾಗಿ ಭುವನೇಶ್ವರಿ ನಿಂತ ಭಂಗಿಯೇ ಕರ್ನಾಟಕ ನಕ್ಷೆಯಾಗಿದೆ. ಎಡಗೈಯಲ್ಲಿ ಪುಸ್ತಕವಿದೆ ಹೀಗಾಗಿ ಸರಸ್ವತಿ ಎನ್ನಬಹುದು, ಇನ್ನೊಂದು ಕೈಯಲ್ಲಿ ತ್ರಿಶೂಲ ಹಿಡಿದಿರುವುದರಿಂದ ಪರಮೇಶ್ವರಿ ಎನ್ನಬಹುದು. ಮತ್ತೊಂದು ಕೈಯಲ್ಲಿ ಕಮಲ ಹಿಡಿದಿರುವುದರಿಂದ ಲಕ್ಷ್ಮಿ ಎನ್ನಬಹುದು. ಬಿಳಿ ಸೀರೆ, ಹಸಿರು ಕುಪ್ಪಸ ತೊಡಿಸಲಾಗಿದೆ. ಸುತ್ತಲೂ ಹೊಯ್ಸಳರ ಲಾಂಛನ, ಬನಶಂಕರಿ ದೇವಸ್ಥಾನ, ಮೈಸೂರಿನ ಚಾಮುಂಡೇಶ್ವರಿ, ಶೃಂಗೇರಿ ಶಾರದಾಂಬೆ, ಚಾಲುಕ್ಯರ ಶಿಲ್ಪಕಲೆ, ಹಂಪಿ ಕಡಲೆಕಾಳು ಗಣಪ, ಶ್ರವಣಬೆಳಗೊಳ, ಜೋಗ, ಗೋಳಗುಮ್ಮಟ, ಕರಾವಳಿ ಹಾಗೂ ಹಸಿರು ಸಿರಿಯನ್ನು ಚಿತ್ರಿಸಲಾಗಿದೆ. ಜತೆಗೆ ರತ್ನಖಚಿತ

> **ಏಕೀಕರಣ ರೂವಾರಿ ಅಂದಾನಪ್ಪ ದೊಡ್ಡಮೇಟ ಅವರ ಪರಿಕಲ್ಪನೆಯಲ್ಲಿ ಕಲಾವಿದ ಸಿ.ಎನ್.ಪಾಟೀಲರು ರಚಿಸಿದ ಭುವನೇಶ್ವರಿ ಚಿತ್ರವನ್ನೇ ಸರ್ಕಾರ ಅಧಿಕೃತ ಚಿತ್ರವೆಂದು ಘೋಷಿಸಬೇಕು**
> **ವಿವೇಕಾನಂದಗೌಡ ಪಾಟೀಲ**
> ಜಿಲ್ಲಾ ಕಸಾಪ ಅಧ್ಯಕ್ಷ

ಮೆಟ್ಟಿಲುಗಳ ಮೇಲೆ ಭುವನೇಶ್ವರಿ ಕುಳಿತಿದ್ದಾಳೆ. ಮುಖದಲ್ಲಿ ಸ್ವಾಭಾವಿಕ ಸೌಂದರ್ಯ ಮತ್ತು ದೈವಿ ಭಾವವಿದೆ. ಹೀಗಾಗಿ ಈ ಚಿತ್ರ ವಾಸ್ತವಿಕತೆಗೆ ಹತ್ತಿರವಾಗಿದೆ’ ಎಂಬುದು ಅವರ ಅಭಿಪ್ರಾಯವಾಗಿದೆ.

‘ದೊಡ್ಡಮೇಟಿಯವರ ಕರ್ನಾಟಕ ಮಹಿಮ್ನಃ ಸ್ತೋತ್ರ ರಚನೆಗೆ ಮೂಲ ಆಕಾರವೆಂದು ಡಾ.ಸಿ.ಆರ್. ಗೋವಿಂದರಾಜು ಅವರ ‘ಕನ್ನಡಮ್ಮ’ ಕೃತಿ ದಾಖಲಿಸಿದೆ. ಈ ಕುರಿತು ಅ.ನ.ಕೃಷ್ಣರಾಯರ ‘ಕನ್ನಡಮ್ಮನ ಗುಡಿ’ ಕಾದಂಬರಿಯಲ್ಲಿಯೂ ಕಾಣಬಹುದಾಗಿದೆ. ಸಂಶೋಧಕ ಎಂ. ಚಿದಾನಂದ ಮೂರ್ತಿಯವರು ತಮ್ಮ ಪುಸ್ತಕವೊಂದಕ್ಕೆ ಈ ಚಿತ್ರವನ್ನು ಬಳಕೆ ಮಾಡಿರುವ ದಾಖಲೆಯು ಇದೆ’ ಎನ್ನುತ್ತಾರೆ ನಿವೃತ್ತ ಶಿಕ್ಷಕ ಎಂ.ಎಸ್.ಧಡೆಸೂರಮಠ.

‘ಹೀಗಾಗಿ ಇದೇ ಚಿತ್ರವನ್ನು ಕರ್ನಾಟಕ ಮಾತೆಯ ಚಿತ್ರವೆಂದು ಅಧಿಕೃತಗೊಳಿಸಬೇಕು. ಇಲ್ಲವಾದರೆ ಹೋರಾಟಕ್ಕೆ ಮುಂದಾಗುತ್ತೇವೆ’ ಎನ್ನುತ್ತಾರೆ ಕರ್ನಾಟಕ ಅಭಿವೃದ್ಧಿ ವೇದಿಕೆ ಅಧ್ಯಕ್ಷ ವಿನಾಯಕ ಜರತಾರಿ.

ಅಂದು ರಚಿಸಿದ ನಾಡದೇವತೆ ಭುವನೇಶ್ವರಿಯ ತೈಲವರ್ಣಚಿತ್ರ ಜಕ್ಕಲಿ ಗ್ರಾಮದ ದೊಡ್ಡಮೇಟಿ ಅವರ ಮನೆಯಲ್ಲಿ ಈಗಲೂ ಇದೆ. ದೊಡ್ಡಮೇಟಿ ಅವರ ಮೊಮ್ಮಕ್ಕಳು ಭುವನೇಶ್ವರಿಗೆ ನಿತ್ಯವೂ ಪೂಜೆ ಸಲ್ಲಿಸುತ್ತಾರೆ.

ಕೊಯಮತ್ತೂರು ಸ್ಫೋಟಕ್ಕೂ ಆರೋಪಿಗೂ ನಂಟು?

ಒಂದನೇ ಪುಟದಿಂದ

ಕೊಯಮತ್ತೂರು ಬಾಂಬ್ ಸ್ಫೋಟದ ಆರೋಪಿಗಳಿಗೂ ಶಾರಿಕ್‌ಗೂ ನಂಟು ಇರುವ ಬಗ್ಗೆ ಪೊಲೀಸರಿಗೆ ಬಲವಾದ ಸಂಶಯ ಇದೆ. ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟದಲ್ಲಿ ಶಾರಿಕ್ ಗಾಯಗೊಂಡ ಮಾಹಿತಿ ಸಿಗುತ್ತಿದ್ದಂತೆಯೇ ಕೊಯಮತ್ತೂರು ಪೊಲೀಸರ ತಂಡವೂ ಮಂಗಳೂರಿಗೆ ಧಾವಿಸಿದೆ. ಶಾರಿಕ್ ಮೈಸೂರಿನಲ್ಲಿ ವಾಸವಿದ್ದ ಬಾಡಿಗೆ ಮನೆಯಲ್ಲಿ ಪತ್ತೆಯಾದ ಸಾಮಗ್ರಿಗಳು, ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ಸ್ಥಳದಲ್ಲಿ ಸಿಕ್ಕ ಪುರಾವೆಗಳನ್ನು ಹಾಗೂ ಕೊಯಮತ್ತೂರಿನಲ್ಲಿ ಘಟನೆಯ ಸ್ಥಳದಲ್ಲಿ ಸಿಕ್ಕ ವಸ್ತುಗಳ ನಡುವೆ ಹೋಲಿಕೆಗಳಿವೆಯೇ ಎಂದೂ ಪರಿಶೀಲಿಸುತ್ತಿದ್ದಾರೆ.

‘ಆರೋಪಿ ಭಾಗಿಯಾಗಿರಬಹುದಾದ ಎಲ್ಲ ಕೃತ್ಯಗಳ ಸಮಗ್ರ ತನಿಖೆಯನ್ನು ನಡೆಸುತ್ತಿದ್ದೇವೆ. ಕೊಯಮತ್ತೂರಿನ ಸ್ಫೋಟ ಪ್ರಕರಣದ ಆಯಾಮದಲ್ಲೂ ತನಿಖೆ ನಡೆಯಲಿದೆ. ಮಂಗಳೂರಿನ ಘಟನೆ ನಡೆಯುವುದಕ್ಕೆ ಮುನ್ನ ಆರೋಪಿ ಯಾವೆಲ್ಲ ಪ್ರದೇಶಗಳಿಗೆ ಭೇಟಿ ನೀಡಿದ್ದ, ಯಾರನ್ನೆಲ್ಲ ಭೇಟಿ ಮಾಡಿದ್ದ ಎಂಬ ಮಾಹಿತಿ ಕಲೆ ಹಾಕುತ್ತಿದ್ದೇವೆ’ ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

‘ರಿಕ್ಷಾ ಚಾಲಕನ ಆರೋಗ್ಯ ಸುಧಾರಣೆ’

ಕುಕ್ಕರ್ ಬಾಂಬ್ ಸ್ಫೋಟದಿಂದ ಗಾಯಗೊಂಡಿರುವ ರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.

ಫಾದರ್ ಮುಲ್ಲರ್ಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಆರೋಪಿಯನ್ನು ಹಾಗೂ ರಿಕ್ಷಾ ಚಾಲಕನನ್ನು ನಗರ ಪೊಲೀಸ್ ಆಯುಕ್ತರು ಮಂಗಳವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

‘ಪುರುಷೋತ್ತಮ ಪೂಜಾರಿ ಅವರ ಆರೋಗ್ಯ ಚೇತರಿಸಿಕೊಂಡಿದೆ’ ಎಂದು ಶಶಿಕುಮಾರ್ ತಿಳಿಸಿದರು

ಎರಡೂ ಕೈಗಳು, ಬೆನ್ನು, ಮುಖ ಸೇರಿದಂತೆ ಪುರುಷೋತ್ತಮ ಅವರ ದೇಹದಲ್ಲಿ ಶೇ 25 ರಷ್ಟು ಸುಟ್ಟ ಗಾಯಗಳಾಗಿದ್ದವು.

ಚೇತರಿಸಿಕೊಳ್ಳದ ಆರೋಪಿ;ತನಿಖೆಗೆ ತೊಡಕು

ಆರೋಪಿ ಶಾರಿಕ್ ಚೇತರಿಸಿಕೊಳ್ಳದಿರುವುದರಿಂದ ಪೊಲೀಸರು ಪ್ರಕರಣದ ತನಿಖೆಗೆ ಆತನಿಂದ ಪೂರಕ ಮಾಹಿತಿ ಪಡೆಯಲು ಸಾಧ್ಯವಾಗುತ್ತಿಲ್ಲ. ನಗರದ ನಾಗುರಿಯಲ್ಲಿ ಬಸ್‌ನಿಂದ ಇಳಿದು ರಿಕ್ಷಾ ಹತ್ತಿದ ಬಳಿಕ ಆತ ಪಂಪ್‌ವೆಲ್‌ಗೆ ಹೋಗುವಂತೆ ಸೂಚಿಸಿದ್ದ. ಅದು ಬಿಟ್ಟರೆ ಚಾಲಕನ ಬಳಿ ಬೇರೇನೋ ಹೇಳಿರಲಿಲ್ಲ. ಆತ ಎಲ್ಲಿ ಬಾಂಬ್ ಇಡುವ ಉದ್ದೇಶ ಹೊಂದಿದ್ದ. ಆತ ಯಾವ ಜನನಿಬಿಡ ಪ್ರದೇಶವನ್ನು ಗುರಿಯಾಗಿಸಿದ್ದ ಎಂಬುದು ನಿಗೂಢವಾಗಿಯೇ ಉಳಿದಿದೆ.

ಸ್ಫೋಟದಿಂದ ಶಾರಿಕ್‌ನ ಎರಡೂ ಕೈಗಳು, ಎರಡೂ ಕಾಲುಗಳು, ಬೆರಳುಗಳು, ಮುಖ ಹಾಗೂ ಬೆನ್ನು ಸೇರಿದಂತೆ ದೇಹದಲ್ಲಿ ಶೇ 45ರಷ್ಟು ಭಾಗದಲ್ಲಿ ಸುಟ್ಟ ಗಾಯಗಳಾಗಿವೆ.

‘ಆರೋಪಿಯು ಪೊಲೀಸರ ಪ್ರಶ್ನೆಗಳಿಗೆ ಉತ್ತರಿಸುತ್ತಿಲ್ಲ. ಘಟನೆ ನಡೆದ ದಿನದಿಂದ ಆತನ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಲ್ಲ. ವಿಚಾರಣೆ ನಡೆಸುವಷ್ಟರ ಮಟ್ಟಿಗೆ ಆತನ ಆರೋಗ್ಯ ಸುಧಾರಿಸಿದೆ ಎಂದು ವೈದ್ಯರು ದೃಢಪಡಿಸುವವರೆಗೂ ಆತನನ್ನು ವಿಚಾರಣೆ ನಡೆಸಲು ಸಾಧ್ಯವಾಗುತ್ತಿಲ್ಲ’ ಎಂದು ಶಶಿಕುಮಾರ್ ಹೇಳಿದರು.

‘ಆರೋಪಿ ನಿಜಕ್ಕೂ ಉತ್ತರಿಸುವ ಸ್ಥಿತಿಯಲ್ಲಿಲ್ಲವೇ ಅಥವಾ ಬೇಕೆಂದೇ ವಿಚಾರಣೆಗೆ ಸ್ಪಂದಿಸುತ್ತಿಲ್ಲವೇ ಎಂದು ತಿಳಿಯುತ್ತಿಲ್ಲ. ಆದರೂ ಸದ್ಯಕ್ಕಂತೂ ಆತನನ್ನು ಬಲವಂತಪಡಿಸುವಂತಿಲ್ಲ. ಆತ ವಿಚಾರಣೆಗೆ ಸ್ಪಂದಿಸುವಂತಾದರೆ ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ಸಿಗಲಿದೆ. ಆತ ಆದಷ್ಟು ಬೇಗ ಚೇತರಿಸಿಕೊಳ್ಳುವಂತೆ ಮಾಡಲು ಎಲ್ಲ ಕ್ರಮ ಕೈಗೊಳ್ಳುತ್ತಿದ್ದೇವೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ದೇವನಹಳ್ಳಿ: ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಸಂಧಾನ

ದೇವಸ್ಥಾನ: ದಲಿತರಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕುಂದಾಣ ಹೋಬಳಿ ಶಾನಪ್ಪನಹಳ್ಳಿಯ ಚನ್ನಕೇಶವ ಸ್ವಾಮಿ ದೇಗುಲಕ್ಕೆ ಕಾರ್ತಿಕ ಸೋಮವಾರ ಸಂಜೆ ದೀಪ ಬೆಳಗಲು ಆಗಮಿಸಿದ್ದ ದಲಿತರಿಗೆ ದೇವಾಲಯದ ಪ್ರವೇಶ ನಿರಾಕರಿಸಲಾಗಿದೆ.

ಮುಜರಾಯಿ ಇಲಾಖೆ ವ್ಯಾಪ್ತಿಯ ಒಳಪಡುವ ಚನ್ನಕೇಶವ ದೇಗುಲಕ್ಕೆ ತೆರಳಿದ್ದ ಪಕ್ಕದ ಸೋಲೂರಿನ ದಲಿತ ಯುವಕರನ್ನು ಅದೇ ಗ್ರಾಮದ ಒಕ್ಕಲಿಗ ಸಮುದಾಯದ ಮಹಿಳೆಯರು ಹಾಗೂ ಮುಖಂಡರು ದೇಗುಲದೊಳಗೆ ಪ್ರವೇಶಿಸದಂತೆ ತಡೆದಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಸ್ಥಳೀಯ ಮುಖಂಡರು ತಹಶೀಲ್ದಾರ್‌ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ತಕ್ಷಣವೇ ಪೊಲೀಸರು ಸ್ಥಳಕ್ಕೆ ತೆರಳಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ತಹಶೀಲ್ದಾರ್ ಶಿವರಾಜ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಎಚ್.ಡಿ. ವಸಂತ್ ಕುಮಾರ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಉಮಾಪತಿ ನೇತೃತ್ವದ ತಂಡ ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಿತು.

‘ದಲಿತರೆಂಬ ಕಾರಣಕ್ಕೆ ಯಾವುದೇ ದೇಗುಲಕ್ಕೆ ಪ್ರವೇಶ ನಿಷೇಧಿಸಬಾರದು. ಶಾಂತಿ ಭಂಗವಾಗುವಂತೆ ವರ್ತಿಸಿದರೆ ಕಾನೂನು ಕ್ರಮಕ್ಕೆ ಮುಂದಾಗುತ್ತೇವೆ. ಸೌಹಾರ್ದಯುತವಾಗಿ ಎಲ್ಲರೂ ಬಾಳಬೇಕು’ ಎಂದು ಅಧಿಕಾರಿಗಳು ಗ್ರಾಮಸ್ಥರಿಗೆ ಎಚ್ಚರಿಕೆ ನೀಡಿದ್ದಾರೆ.

> **ತಿಳಿವಳಿಕೆ ಇಲ್ಲದ ಅನಕ್ಷರಸ್ಥರು ಈ ರೀತಿ ವರ್ತನೆ ಮಾಡಿದ್ದು, ಮಾತುಕತೆ ನಡೆಸಿ, ತಿಳಿ ಹೇಳಲಾಗಿದೆ. ದೇಗುಲ ಪ್ರವೇಶಕ್ಕೆ ಅಡ್ಡಿಯಾಗದಂತೆ ಮನವರಿಕೆ ಮಾಡಲಾಗಿದ್ದು ಪರಿಸ್ಥಿತಿ ತಿಳಿಯಾಗಿದೆ.**
> **ಶಿವರಾಜ್, ತಹಶೀಲ್ದಾರ್**
> ದೇವನಹಳ್ಳಿ

> **ಅಧಿಕಾರಿಗಳ ನಿಯೋಗದೊಂದಿಗೆ ದೇಗುಲಕ್ಕೆ ಭೇಟಿ ನೀಡಿ ಸ್ಥಳೀಯರೊಂದಿಗೆ ಮಾತನಾಡಿದ್ದೇವೆ. ದಲಿತರಿಗೆ ಮುಕ್ತ ಪ್ರವೇಶಕ್ಕೆ ಸೂಚನೆ ನೀಡಲಾಗಿದ್ದು, ಗ್ರಾಮಸ್ಥರು ಸಹಮತ ವ್ಯಕ್ತಪಡಿಸಿದ್ದಾರೆ.**
> **ಉಮಾಪತಿ,** ಸಹಾಯಕ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ

ಮತ್ತೊಬ್ಬ ಡೆಲಿವರಿ ಬಾಯ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಜೊತೆ ಒಡನಾಟ ಹೊಂದಿದ್ದ ಆರೋಪದಡಿ ಡೆಲಿವರಿ ಬಾಯ್ ರೊಹುಲ್ಲಾ ಎಂಬಾತನನ್ನು ಮಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮೈಸೂರಿನ ನಿವಾಸಿ ರೊಹುಲ್ಲಾ, ಬೆಂಗಳೂರಿನ ಕೆ.ಜಿ.ಹಳ್ಳಿಯಲ್ಲಿರುವ ಸಂಬಂಧಿಕರೊಬ್ಬರ ಮನೆಗೆ ಭಾನುವಾರ ಬಂದಿದ್ದ. ಮಂಗಳೂರು ಪೊಲೀಸರು ನೀಡಿದ್ದ ಮಾಹಿತಿಯಂತೆ ಈತನನ್ನು ವಶಕ್ಕೆ ಪಡೆಯಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರೊಹುಲ್ಲಾನನ್ನು ಸುಪರ್ದಿಗೆ ಪಡೆದಿದ್ದ ಮೈಸೂರು ಪೊಲೀಸರು, ಆತನ ಮನೆಗೆ ಕರೆದೊಯ್ದು ಪರಿಶೀಲನೆ ನಡೆಸಿದ್ದರು. ಇದಾದ ನಂತರ, ಮಂಗಳೂರು ಪೊಲೀಸರು ರೊಹುಲ್ಲಾನನ್ನು ವಶಕ್ಕೆ ಪಡೆದು ತಮ್ಮೂರಿಗೆ ಕರೆದೊಯ್ದಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ವಿಚಾರಣೆಯಿಂದ ಮತ್ತಷ್ಟು ಮಾಹಿತಿ ಲಭ್ಯವಾಗಬೇಕಿದೆ’ ಎಂದು ಮೂಲಗಳು ಹೇಳಿವೆ.

ಮಂಗಳೂರು: ಗೃಹಸಚಿವರ ಸಭೆ ಇಂದು

ಮಂಗಳೂರು: ನಗರದ ಗರೋಡಿಯಲ್ಲಿ ಆಟೊರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಹಾಗೂ ಕರಾವಳಿಗೆ ಭಯೋತ್ಪಾದನಾ ಚಟುವಟಿಕೆಗಳ ನಂಟಿನ ಕುರಿತು ಗೃಹಸಚಿವ ಆರಗ ಜ್ಞಾನೇಂದ್ರ ಅವರು ಪೊಲೀಸ್ ಅಧಿಕಾರಿಗಳ ಜೊತೆ ನಗರದಲ್ಲಿ ಬುಧವಾರ ಬೆಳಿಗ್ಗೆ 10 ಗಂಟೆಗೆ ಸಭೆ ನಡೆಸಲಿದ್ದಾರೆ.

ಬಾಂಬ್ ಸ್ಫೋಟದಿಂದ ಗಾಯಗೊಂಡಿರುವ ರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಹಾಗೂ ಆರೋಪಿ ಶಾರಿಕ್ ಚಿಕಿತ್ಸೆ ಪಡೆಯುತ್ತಿರುವ ಕಂಕನಾಡಿಯ ಫಾದರ್ ಮುಲ್ಲರ್ಸ್ ಆಸ್ಪತ್ರೆಗೆ ಗೃಹಸಚಿವರು ಭೇಟಿ ನೀಡಲಿದ್ದಾರೆ. ಬಳಿಕ ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಭಯೋತ್ಪಾದಕರನ್ನು ಮುಸ್ಲಿಂ ಸಮಾಜದಿಂದ ಬಹಿಷ್ಕರಿಸಿ’

ದಾವಣಗೆರೆ: ‘ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾದ ಮುಸ್ಲಿಮರನ್ನು ಸಮುದಾಯದಿಂದ ಬಹಿಷ್ಕರಿಸಬೇಕು. ಅವರನ್ನು ಮುಸ್ಲಿಂ ಸಮಾಜದ ದ್ರೋಹಿಗಳು, ದೇಶದ್ರೋಹಿಗಳು ಎಂದು ಘೋಷಿಸಬೇಕು. ಅಂಥ ಚಟುವಟಿಕೆಯಲ್ಲಿ ತೊಡಗದಂತೆ ಯುವಜನರಲ್ಲಿ ಅರಿವು ಮೂಡಿಸಬೇಕು’ ಎಂದು ಜಿಲ್ಲಾ ವಕ್ಫ್ ಕಮಿಟಿ ಮೂಲಕ ರಾಜ್ಯ ವಕ್ಫ್ ಕಮಿಟಿಗೆ ಉಮ್ಮತ್ ಚಿಂತಕರ ವೇದಿಕೆ ಮನವಿ ಸಲ್ಲಿಸಿದೆ.

ಇತ್ತೀಚೆಗೆ ಕೆಲವರು ಪ್ರಚೋದನೆಗೆ ಒಳಗಾಗಿ ಇಸ್ಲಾಂ ಧರ್ಮದ ಸಿದ್ಧಾಂತದ ವಿರುದ್ಧ ಸಾಗುತ್ತಿದ್ದಾರೆ. ಇಸ್ಲಾಂ ಧರ್ಮದ ಮೂಲ ಆಶಯಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಇಂಟರ್‌ನೆಟ್, ಮೊಬೈಲ್‌ಗಳಲ್ಲಿ ಬರುವ ಸಂದೇಶಗಳು ಮತ್ತು ವಿಡಿಯೊಗಳನ್ನು ನೋಡಿ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿ ಭಯ ಹುಟ್ಟುವಂತೆ ಮಾಡುತ್ತಿದ್ದಾರೆ. ಇದು ಹೆತ್ತವರಿಗಷ್ಟೇ ಅಲ್ಲ ಮುಸ್ಲಿಂ ಸಮಾಜಕ್ಕೆ ಕಪ್ಪುಚುಕ್ಕೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಭಾರತದ ಏಕತೆ ಮತ್ತು ಅಖಂಡತೆಯನ್ನು ಕಾಪಾಡಬೇಕು. ಭಯೋತ್ಪಾದನೆ ಚಟುವಟಿಕೆಗಳ ವಿರುದ್ಧ ಪ್ರತಿ ಊರಿನಲ್ಲಿ ಅರಿವು ಮೂಡಿಸುವ ಅಭಿಯಾನವನ್ನು ವಕ್ಫ್ ಕಮಿಟಿ ಹಮ್ಮಿಕೊಳ್ಳಬೇಕು. ಇಸ್ಲಾಂನ ಶಾಂತಿ ಮತ್ತು ಸೌಹಾರ್ದದ ಸಂದೇಶವನ್ನು ಸಾರಬೇಕು ಎಂದು ಒತ್ತಾಯಿಸಿದೆ.

ಉಮ್ಮತ್ ಚಿಂತಕರ ವೇದಿಕೆಯ ಅಧ್ಯಕ್ಷ ಅನೀಸ್ ಪಾಷ, ಆಡಿಟರ್ ಬಾಷಾ, ಹಯಾತ್ ಸಾಬ್, ಮೊಹಮ್ಮದ್ ಬಾಷಾ, ನಿಜಾಮುದ್ದೀನ್, ಮುಸ್ತಫಾ ಮತ್ತಿತರರು ಇದ್ದರು.

ಮೇಲ್ಮನವಿ ಪುರಸ್ಕರಿಸಿದ ಹೈಕೋರ್ಟ್

‘ಸ್ವಂತ ಮಗ ಅಥವಾ ಮಗಳಾಗಲಿ, ದತ್ತು ಮಗ ಇಲ್ಲವೇ ದತ್ತು ಮಗಳಾಗಲಿ, ಅವರೂ ಮಕ್ಕಳೇ ಆಗಿರುತ್ತಾರೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟದೆ

ಅನುಕಂಪ ಆಧಾರಿತ ಹುದ್ದೆ: ದತ್ತು ಮಕ್ಕಳೂ ಅರ್ಹ

ಬೆಂಗಳೂರು: ‘ಅನುಕಂಪದ ಆಧಾರದಲ್ಲಿ ಪೋಷಕರ ಉದ್ಯೋಗ ಪಡೆಯಲು ದತ್ತು ಮಕ್ಕಳೂ ಅರ್ಹರಾಗಿರುತ್ತಾರೆ’ ಎಂದು ಹೈಕೋರ್ಟ್ ಆದೇಶಿಸಿದೆ.

‘ದತ್ತು ಮಕ್ಕಳಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ‘ ಎಂಬ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಬಾಗಲಕೋಟೆಯ ಬನಹಟ್ಟಿ ತಾಲ್ಲೂಕಿನ ನಿವಾಸಿ ಎಸ್. ಗಿರೀಶ್ (32) ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಮತ್ತು ಜಿ.ಬಸವರಾಜು ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

‘ದತ್ತು ಮಕ್ಕಳಿಗೆ ಅನುಕಂಪದ ಉದ್ಯೋಗ ನೀಡಲು ಅವಕಾಶವಿಲ್ಲ ಎಂದು 1996ರ ನಿಯಮಗಳು ತಿಳಿಸುತ್ತವೆ’ ಎಂಬ ಪ್ರಾಸಿಕ್ಯೂಷನ್ ವಾದವನ್ನು ಪೀಠ ತಿರಸ್ಕರಿಸಿದೆ.‘ಅನುಕಂಪದ ಉದ್ಯೋಗಕ್ಕೆ ಸಲ್ಲಿಸಿದ ಅರ್ಜಿ ಪರಿಗಣಿಸುವಾಗ ಸ್ವಾಭಾವಿಕ ಮಕ್ಕಳಿಗೆ ಸರಿಸಮನಾಗಿ ದತ್ತು ಮಕ್ಕಳನ್ನೂ ಪರಿಗಣಿಸಬೇಕು ಎಂದು 2021ರಲ್ಲಿ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಮೇಲ್ಮನವಿದಾರ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ನಂತರ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ ಎಂಬ ಕಾರಣಕ್ಕೆ ತಿದ್ದುಪಡಿ ನಿಯಮಗಳ ಲಾಭವನ್ನು ಮೇಲ್ಮನವಿದಾರನಿಗೆ ನಿರಾಕರಿಸುವಂತಿಲ್ಲ’ ಎಂದು ನ್ಯಾಯಪೀಠ ತಿಳಿಸಿದೆ.

‘ಮೇಲ್ಮನವಿದಾರ ಗಿರೀಶ್ (ದತ್ತುಪುತ್ರ) ಸಲ್ಲಿಸಿರುವ ಅರ್ಜಿಯನ್ನು 12 ವಾರಗಳಲ್ಲಿ ಪರಿಗಣಿಸಬೇಕು‘ ಎಂದು ಪ್ರಾಸಿಕ್ಯೂಷನ್ ಇಲಾಖೆಗೆ ನಿರ್ದೇಶಿಸಿದೆ.

ಆಕ್ಷೇಪಣೆಗೆ ಅವಧಿ ವಿಸ್ತರಣೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ನ. 30ರವರೆಗೂ ವಿಸ್ತರಿಸಲಾಗಿದೆ.

15 ಸಾವಿರ ಶಿಕ್ಷಕರ ಹುದ್ದೆಗಳಿಗೆ ಇದೇ ವರ್ಷದ ಮಾರ್ಚ್‌ನಲ್ಲಿ ಅಧಿಸೂಚನೆ ಹೊರಡಿಸಿದ್ದ ಸರ್ಕಾರ, ಸಿಇಟಿ ಮೂಲಕ ಆಯ್ಕೆ ಪ್ರಕ್ರಿಯೆ ನಡೆಸಿತ್ತು. 13,363 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ನ.18ರಂದು ಬಿಡುಗಡೆ ಮಾಡಿತ್ತು.ನ.19ರಿಂದ 23ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅಭ್ಯರ್ಥಿಗಳು 30ರವರೆಗೂ ಆಯಾ ಜಿಲ್ಲೆಗಳ ಉಪ ನಿರ್ದೇಶಕರ ಕಚೇರಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಹಾಬಾದ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಸಂಖ್ಯೆ: ಶಿಅಯೋಶಾ/ಕೋಮೊಸಟೆಂ/ಅಮಾಮಾಸೆ/ದಿಪಪ್ರ/2022-23
ದಿನಾಂಕ : 19-11-2022
ಮಾರ್ಪಾಡು/ಸೇರ್ಪಡೆ ಟೆಂಡರ ಪ್ರಕಟಣೆ
ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:ಶಿಅಯೋಶಾ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022-23 ದಿನಾಂಕ : 07-11-2022 ರಲ್ಲಿ ಕೋಳಿ ಮೊಟ್ಟೆಗಳನ್ನು ಖರೀದಿಸಲು ಇ-ಟೆಂಡರ್ ಕರೆಯಲಾಗಿದ್ದು, ಅದರ ಅರ್ಹತಾ ಕ್ರಮ ಸಂಖ್ಯೆ 6, 8, 9ನ್ನು ಮಾರ್ಪಾಡುಗೊಳಿಸಲಾಗಿದೆ ಮತ್ತು ಕ್ರಮ ಸಂಖ್ಯೆ 14ನ್ನು ಸೇರ್ಪಡೆಗೊಳಿಸಲಾಗಿದೆ. ಭಾಗವಹಿಸಲು ಇಚ್ಛೆ ಇರುವ ಟೆಂಡರ್‌ದಾರರು ಇ-ಟೆಂಡರ್ ಪೋರ್ಟಲ್‌ನಲ್ಲಿ ನೋಡಿಕೊಳ್ಳತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಹಾಬಾದ ಕಛೇರಿಗೆ ಸಂಪರ್ಕಿಸಲು ತಿಳಿಸಿದೆ.
ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಶಹಾಬಾದ, ಜಿ॥ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/866/ಎಂ.ಸಿ&ಎ/2022-23

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN No. U93000KA2009SGC049213
ಸೈರ್‌ಬಾಗ್, ನಂ.19/4, 2ನೇ ಮಹಡಿ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-52 ಫೋನ್ ನಂ: 22285561, 62, 63, 65
ಇ-ಮೇಲ್: ktdclit@gmail.com ವೆಬ್‌ಸೈಟ್: www.banjarathanda.kar.nic.in
ಸಂ: ಕತಾಅನಿನಿ/ಯೋಸಂ/ಸಿ.ಆರ್-53/2022-23 ದಿನಾಂಕ: 22.11.2022
ಪ್ರಕಟಣೆ
"ಬಂಜಾರರ ಬಹುಮುಖಿ ಕಲಾ ಪ್ರತಿಭಾನ್ವೇಷಣೆ"-ಕಲಾಮಳಾವ್
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು, ತಾಂಡಾಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದರ ಜೊತೆಗೆ ಬಂಜಾರ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಬಂಜಾರರ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಕಲೆಗಳನ್ನು ಉಳಿಸಿ-ಬೆಳಸಿ, ಪುನಶ್ಚೇತನಗೊಳಿಸುವ ಉದ್ದೇಶದಿಂದ ಮತ್ತು ಬಂಜಾರ ಕಲಾವಿದರ ಪ್ರತಿಭೆಯನ್ನು ಹೊರಹೊಮ್ಮಿಸಲು, ಬಂಜಾರರ ಬಹುಮುಖಿ ಕಲಾ ಪ್ರತಿಭಾನ್ವೇಷಣೆ - ಕಲಾಮಳಾವ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬಂಜಾರರ ಬಹುಮುಖಿ ಕಲಾ ಪ್ರಕಾರಗಳಾದ (1) ವಾಜಾವಾದ್ಯ ಕಲೆ (2) ಕಥನ ಗಾಯನ (ಸಣ್ಣವಾಜಾ) (3) ಲೇಂಗಿ ನೃತ್ಯ (4) ನಂಗಾರ ಢೋಳಿ ಬಿಡಿಸುವ ನೃತ್ಯ (5) ಮಹಿಳೆಯರ ಸಾಂಪ್ರದಾಯಿಕ ನೃತ್ಯ (6) ಘೂಮರ್ ನೃತ್ಯ (7) ಯುವತಿಯರ ಜನಪದ ನೃತ್ಯ (8) ಮಹಿಳೆಯರ ಸಾಂಪ್ರದಾಯಿಕ ಗಾಯನ (9) ಬಂಜಾರರ ಸುಗಮ ಸಂಗೀತ (10) ಬಾಲಕಿಯರ ಬಂಜಾರ ನೃತ್ಯ (11) ಬಾಲಕರ ಲೇಂಗಿ ನೃತ್ಯಗಳಲ್ಲಿ ಬಂಜಾರ ಕಲಾವಿದರು ಭಾಗವಹಿಸಿ ತಮ್ಮಲ್ಲಿ ಹುದುಗಿರುವ ಕಲಾ ಪ್ರತಿಭೆಯನ್ನು ಪ್ರದರ್ಶಿಸಿ ಪ್ರಶಸ್ತಿ ಪಡೆಯಲು 2022-23ನೇ ಸಾಲಿನಲ್ಲಿ ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಅರ್ಹ ಮತ್ತು ಆಸಕ್ತ ಬಂಜಾರ ಕಲಾವಿದರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ: **08.12.2022** ರೊಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ಕಳುಹಿಸಲು ತಿಳಿಸಿದೆ. ಕಳೆದ ಸಾಲಿನ ಕಲಾಮಳಾವ್ ಕಾರ್ಯಕ್ರಮದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ತಂಡದ ಕಲಾವಿದರು ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
ಸಹಿ/- (ಯು. ಚಂದ್ರಾನಾಯಕ್)
ವ್ಯವಸ್ಥಾಪಕ ನಿರ್ದೇಶಕರು

ಅರ್ಜಿ ನಮೂನೆ
ಗೆ,
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ
ಸೈರ್‌ಬಾಗ್, ನಂ-19/4, 2ನೇ ಮಹಡಿ,
ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು-560052

1.	ಕಲಾ ಪ್ರಕಾರದ ಹೆಸರು	
2.	ಕಲಾ ತಂಡದ ಮುಖ್ಯಸ್ಥರ ಹೆಸರು ಮತ್ತು ದೂರವಾಣಿ ಸಂಖ್ಯೆ	
3.	ಕಲಾ ತಂಡದ ಸದಸ್ಯರ ಹೆಸರು ಮತ್ತು ದೂರವಾಣಿ ಸಂಖ್ಯೆ 1. 2. 3. 4. 5. 6. 7. 8. 9. 10.	ಕಲಾ ತಂಡದ ವಿಳಾಸ 1. ತಾಂಡಾ : 2. ಅಂಚೆ : 3. ತಾಲ್ಲೂಕು : 4. ಜಿಲ್ಲೆ : 5. ಪಿನ್ ಕೋಡ್ : 6. ಮೊಬೈಲ್ ನಂ :

ತಂಡದ ಮುಖ್ಯಸ್ಥರ ಸಹಿ

ಸಮಾಜ ಕಲ್ಯಾಣ ಇಲಾಖೆ
ಆಯುಕ್ತರ ಕಛೇರಿ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-01
ಸಂಖ್ಯೆ: ಸಕಇ/ಪಪೂತಕೇಂ/S-6/CR-4/ಪ್ರಬುದ್ಧ/2022-23 ದಿನಾಂಕ: 21.11.2022
ಪ್ರಕಟಣೆ
QS/US News Overall Global Ranking 500 ರೊಳಗೆ ಸ್ಥಾನ ಪಡೆದ ವಿದೇಶಿ ವಿಶ್ವವಿದ್ಯಾಲಯಗಳಿಂದ Unconditional Offer letter ಪಡೆದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆ ಮಾಡಿ ಧನ ಸಹಾಯ ನೀಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ಮತ್ತು ಅರ್ಜಿ ಸಲ್ಲಿಸಲು ಇಲಾಖೆಯ ವೆಬ್‌ಸೈಟ್ **www.sw.kar.nic.in** ನ್ನು ನೋಡುವುದು. ಹೆಚ್ಚಿನ ಮಾಹಿತಿಗಾಗಿ **ಮುಖ್ಯ ಆಡಳಿತಾಧಿಕಾರಿಗಳ ಕಛೇರಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು** ರವರನ್ನು ಸಂಪರ್ಕಿಸುವುದು.
ಸಹಾಯವಾಣಿ ಸಂಖ್ಯೆ: 9482 300 400
ಕಛೇರಿ ದೂರವಾಣಿ ಸಂಖ್ಯೆ: 080-22207784
ಸಹಿ/-, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/3199/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಆಡುಗೋಡಿ, ಲಶ್ಕರ್ ಹೊಸೂರು ರಸ್ತೆ, ಬೆಂಗಳೂರು-560 030.
ಸಂಖ್ಯೆ:ಕಾಅ/(ಬಿಟಿಎಂ)/ಎಇ/ಇ-ಪ್ರೊಕ್ಯೂರ್/14/2022-23 ದಿನಾಂಕ: 22-11-2022
ಟೆಂಡರ್ ಪ್ರಕಟಣೆ : (ದ್ವಿ ಲಕೋಟೆ ಪದ್ಧತಿ) 1ನೇ ಕರೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ಇವರು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಅಥವಾ ಯಾವುದೇ ಪ್ರತಿಷ್ಠಿತ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ನಿಗದಿಪಡಿಸಿದ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1)	ವಾರ್ಡ್ ನಂ.188ರ ಲಕ್ಕಸಂದ್ರದಲ್ಲಿರುವ ಮುನಿಚಿನ್ನಪ್ಪ ಶಾಲಾ ಮೈದಾನದ ಗ್ಯಾಲರಿಗೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳು ಮತ್ತು ಇತರ ಸುಧಾರಣೆಗಳು.	99.00	198000/-
2)	ವಾರ್ಡ್ ನಂ.189ರ ಎಸ್ ಜಿ ಪಾಳ್ಯ, ಬಾಲಾಜಿನಗರ, ಭಾರತಿ ಬಡಾವಣೆ, ಭವಾನಿ ನಗರ, ವೆಂಕಟೇಶ್ವರ ಬಡಾವಣೆ, ಭೋವಿ ಕಾಲೋನಿ, ತಾವರೆಕೆರೆ, ಮದ್ದೂರಮ್ಮನಗರ, ಕೃಷ್ಣಮೂರ್ತಿ ಬಡಾವಣೆ, ಚಿಕ್ಕಲಕ್ಷ್ಮಯ್ಯ ಬಡಾವಣೆ, ಮಹಾಲಿಂಗೇಶ್ವರ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಕೋಬಲ್ ಸ್ಟೋನ್, ಡಾಂಬರೀಕರಣ, ಸಿಸಿ ರಸ್ತೆಗಳು ಮತ್ತು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಒದಗಿಸುವುದು ಮತ್ತು ಇತರ ಸುಧಾರಣಾ ಕಾಮಗಾರಿಗಳು.	99.00	198000/-
3)	ವಾರ್ಡ್ ನಂ.189ರ ಎಸ್ ಜಿ ಪಾಳ್ಯದಲ್ಲಿರುವ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ಹೊರಾಂಗಣ ವ್ಯಾಯಾಮ ಶಾಲೆಗೆ ಸಲಕರಣೆಗಳನ್ನು ಒದಗಿಸುವುದು.	55.00	110000/-
4)	ವಾರ್ಡ್ ನಂ.190ರ ಮಡಿವಾಳದಲ್ಲಿ ತಾವರೆಕೆರೆ 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ, ಚನ್ನಮ್ಮ ಬಡಾವಣೆ ಮತ್ತು ಸುತ್ತಮುತ್ತಲಿನ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸುಧಾರಣೆ.	99.00	198000/-
5)	ವಾರ್ಡ್ ನಂ.191ರ ಜಕ್ಕಸಂದ್ರದಲ್ಲಿ 4ನೇ ಬೆಟಾಲಿಯನ್ ಗೇಟ್ ಪ್ರವೇಶ ದ್ವಾರದಲ್ಲಿ ರಸ್ತೆಗಳಿಗೆ ಮತ್ತು ಕೆಎಸ್‌ಆರ್‌ಪಿ 4ನೇ ಬೆಟಾಲಿಯನ್‌ನಲ್ಲಿ ಸಂಪರ್ಕ ರಸ್ತೆಗಳಿಗೆ ಡಾಂಬರೀಕರಣ ಒದಗಿಸುವುದು.	57.00	114000/-
6)	ವಾರ್ಡ್ ನಂ.192ರ ಬಿಟಿಎಂ ಬಡಾವಣೆಯ ಬ್ಯಾಂಕ್ ಕಾಲೋನಿ, ಮಂಜುನಾಥ ಬಡಾವಣೆ, ಜೈಭೀಮನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸುಧಾರಣೆ.	90.00	180000/-
7)	ವಾರ್ಡ್ ನಂ.173ರ ಜಕ್ಕಸಂದ್ರದ ಟ್ಯಾಕ್ಸ್ ಕಛೇರಿ ಕಟ್ಟಡಕ್ಕೆ ಆರ್ಚ್ ಗೇಟ್ ಮತ್ತು ಕಾರ್ಮಲ್ ಶಾಲೆಯ ಮೈದಾನಕ್ಕೆ ಕಾಂಪೌಂಡ್ ಗೋಡೆಗೆ ಹೆಚ್ಚುವರಿ ಗ್ರಿಲ್ ಮತ್ತು ಇತರ ಸಂಬಂಧಿತ ಕೆಲಸಗಳನ್ನು ಒದಗಿಸುವುದು.	60.00	120000/-

ಟೆಂಡರ್‌ನ ಕಾರ್ಯಸೂಚಿ: 1. ಭರ್ತಿಯಾದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 09-12-2022ರ ಸಂಜೆ 4:00 ಗಂಟೆಯವರೆಗೆ. 2. ಪೂರ್ವ ಬಿಡ್ ಸಭೆಯು ದಿನಾಂಕ: 03-12-2022ರ ಮಧ್ಯಾಹ್ನ 3:00 ಗಂಟೆಗೆ. 3. ಟೆಂಡರ್ ದಾಖಲಾತಿಗಳನ್ನು ತೆರೆಯುವ ದಿನಾಂಕ: 12-12-2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡ ರಸ್ತೆ, ಮಾಗಡಿ ರಸ್ತೆ, ಬೆಂಗಳೂರು - 560023
ಫೋನ್: 080-29557021 ಇ-ಮೇಲ್ : pdksaps@gmail.com
ಸಂಖ್ಯೆ: ಕೆಎಸ್‌ಎಪಿಎಸ್/ಜೆಡಿ(ಎಫ್)/01/2017-18(ಪಿ) ದಿನಾಂಕ: 22-11-2022
ಎಕ್ಸ್‌ಪ್ರೆಷನ್ ಆಫ್ ಇಂಟ್‌ರೆಸ್ಟ್ (ಇಒಐ)
ವಿವಿಧ ಎನ್‌ಜಿಒ/ಸಿಬಿಒಗಳ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸುವ ಸಂಬಂಧ ಸಿಎಜಿ ಯಲ್ಲಿ ನೋಂದಣಿಯಾಗಿರುವ ಚಾರ್ಟೆಡ್ ಅಕೌಂಟೆಂಟ್‌ರವರನ್ನು ನೇಮಿಸುವ ಕುರಿತು ಇಒಐ ಕರೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ : https://ksaps.karnataka.gov.in ನಿಂದ ಪಡೆಯುವುದು. ಇಒಐ ಸಲ್ಲಿಸಲು ಕಡೆಯ ದಿನಾಂಕ: 23/12/2022 ಸಂಜೆ 5.30 ಗಂಟೆ.
ಸಹಿ/-
ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು
DIPR/CP/VCPL/3192/2022-23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂ: ಕೃಉಮಾಸ/ಶಿ/ಅಭಿಕೆ/1822/2022-23
ದಿನಾಂಕ: :18-11-2022
“ಸಂಕ್ಷಿಪ್ತ ಟೆಂಡರ್ ಪ್ರಕಟಣೆ”
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ಪ್ರಕಾರ ಆಕ್ಟ್ 2000 ನಿಯಮದಂತೆ Standard Tender Document KW-3 ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ, ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ 2022-23 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದ 3 ನೇ ಗೇಟಿನ ಹತ್ತಿರ ಇರುವ “ಸಿ” ಮತ್ತು “ಡಿ” ದರ್ಜೆ ನೌಕರರ ವಸತಿ ಗೃಹಗಳ ಮೇಲ್ಚಾವಣೆಗೆ ಗ್ಯಾಲೋನಿಯಮ್ ಶೀಟ್ ಅಳವಡಿಸಿ ಅಭಿವೃದ್ಧಿಪಡಿಸುವ ಕಾಮಗಾರಿಯ ಟೆಂಡರ್‌ನ್ನು ಸಂಬಂಧಪಟ್ಟ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ. ಕಾಮಗಾರಿಯ ಒಟ್ಟು ಮೊತ್ತ ರೂ. 83.55 ಲಕ್ಷಗಳು ಇ.ಎಂ.ಡಿ. ಮೊತ್ತ ರೂ. 1,67,100-00 ಭರ್ತಿ ಮಾಡಿದ ಟೆಂಡರ್ ಬಿಡ್‌ಗಳನ್ನು ಇ- ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ:12-12-2022 ರಂದು ಅಪರಾಹ್ನ 4-30 ಘಂಟೆಯವರೆಗೆ ಟೆಂಡರ್‌ಗೆ ಸಂಬಂಧಪಟ್ಟಂತೆ ಪೂರ್ವಭಾವಿ ಸಭೆಯನ್ನು ದಿನಾಂಕ:01-12-2022 ರಂದು ಕಾರ್ಯದರ್ಶಿಗಳ ಕಛೇರಿಯಲ್ಲಿ ನಡೆಸಲಾಗುವುದು. ಗುತ್ತಿಗೆದಾರರು ಇ-ಪೋರ್ಟಲ್ ಮುಖಾಂತರ ಸಲ್ಲಿಸಿದ ತಾಂತ್ರಿಕ ಬಿಡ್‌ಗಳನ್ನು ದಿನಾಂಕ:14-12-2022 ರ ಪೂರ್ವಾಹ್ನ 11.00 ಘಂಟೆಗೆ ಕಾರ್ಯದರ್ಶಿಯವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್ ಅಪ್‌ಲೋಡಿಂಗ್‌ಗೆ ಸಂಬಂಧಿಸಿದಂತೆ ಇ-ಪೋರ್ಟಲ್ ದೂರವಾಣಿ 080-22485867 080-25501216 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗೆ www.eproc.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ ಇವರನ್ನು ಕಛೇರಿ ವೇಳೆ ಸಂಪರ್ಕಿಸಬಹುದು.
ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ., ಶಿವಮೊಗ್ಗ.
ಸಹಿ/- ಆಡಳಿತಾಧಿಕಾರಿಗಳು ಕೃ.ಉ.ಮಾ.ಸ., ಶಿವಮೊಗ್ಗ.
ವಾ.ಸಾ.ಸಂ.ಇ/ಎಂಸಿಎ/ಶಿ/127/11/22-23/1297

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.2/ಟೆಂಡರ/2022-23/2963 ದಿನಾಂಕ: 22-11-2022
ಅಲ್ಪಾವಧಿ ಇ-ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ
Standard Bid Document KW- 3 [ದ್ವಿಲಕೋಟೆ ಪದ್ಧತಿ]
ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-3ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ-ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ **11** ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: **2022-23ನೇ ಸಾಲಿನ 5054-03-337-0-75 ವಿಶೇಷ ಅನುದಾನ ಯೋಜನೆ ಅಡಿ** ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟಲ್, **https://eproc.karnataka.gov.in** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
Indent Nos :
RDPR/2022-23/RD/WORK_INDENT 93939/call-2 and 96905
ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **68.66** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **74.11** ಲಕ್ಷಗಳು
ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಇ-ಪ್ರೋಕ್ಯೂರಮೆಂಟನಂತೆ, ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.
ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **23-11-2022** ರಿಂದ **29-11-2022** ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30-11-2022** ರಂದು 16.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **01-12-2022** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/447/2022-23

ಸುವರ್ಣ ಕರ್ನಾಟಕ
ನಗರ ಸಭೆ ಕಾರ್ಯಾಲಯ,ಬಾಗಲಕೋಟ-587103
ಜಿಲ್ಲಾ:ಬಾಗಲಕೋಟ (ಕರ್ನಾಟಕ:ರಾಜ್ಯ)
Post Box NO:19 STD: 08354 235011
Website:www.bagalkotecity.gov.in. FAX NO. 235732.
E-mail ID:itstaff ulb-bagalkote@yahoo.co.in HELP Line: 235792
ಕ್ರ.ಸಂ:ನಸಬಾ/ಲೋ.ವಿ/TND/2022-23/1009 ದಿನಾಂಕ:21-11-2022
ಮರು ಟೆಂಡರ್ ಪ್ರಕಟಣೆ
E-Procurement portal ಮುಖಾಂತರ
e-protal: https://eproc.karnataka.gov.in
ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ **1999,** ನಿಯಮಾವಳಿಗಳು **2000** ರಂತೆ ಬಾಗಲಕೋಟ ನಗರಸಭೆ ವ್ಯಾಪ್ತಿಯಲ್ಲಿ ಸನ್ **14ನೇ** ಮತ್ತು **15ನೇ** ಹಣಕಾಸು ಮತ್ತು ನಗರಸಭೆಯ ನಿಧಿಯೋಜನೆಯಡಿಯಲ್ಲಿ ರೂ. **19.38** ಲಕ್ಷದಿಂದ **47.80** ಲಕ್ಷದವರೆಗೆ ಒಟ್ಟು ರೂ **67.18** ಲಕ್ಷದ **2** ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ/**E-Proceurement portal** ನಲ್ಲಿ ನೋಂದಾಯಿತ **Standard Tender Documents Kw-1& Kw-2** ರಂತೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರ ಸಲ್ಲಿಸುವ ವಿವರ ಕೆಳಗಿನಂತಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ **http://eproc.karnataka.gov.in** ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.
1) Last date for submission of bid through E. procurement portal before: 12-12-2022 **At** 16.30 hours.
2) Opening of Technical and Financial bid is on or after : **14-12-2022 at 11.30 AM**
ಸಹಿ/-ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರಸಭೆ ಬಾಗಲಕೋಟೆ
ಸಹಿ/- ಪೌರಾಯುಕ್ತರು ನಗರಸಭೆ ಬಾಗಲಕೋಟೆ
ವಾ.ಸಾ.ಇ/ಬಾಗಲಕೋಟೆ/618/2022-23/ದೇಶಪಾಂಡೆಪಬ್ಲಿಸಿಟಿ

'ಮುಸ್ಲಿಮರಿಗೆ ಸಿ.ಎಂ ಪಟ್ಟ ನೀಡಲು ಮುಕ್ತ'

ಕೋಲಾರ: 'ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ಮುಸ್ಲಿಂ ಸಮುದಾಯಕ್ಕೆ ಮುಖ್ಯಮಂತ್ರಿ ಪಟ್ಟ ನೀಡುವ ಮುಕ್ತ ಅವಕಾಶ ನಮ್ಮ ಪಕ್ಷದಲ್ಲಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಮಂಗಳವಾರ ತಾಲ್ಲೂಕಿನ ಕ್ಯಾಲನೂರಿನಲ್ಲಿ ಗ್ರಾಮ ವಾಸ್ತವ್ಯದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕುಮಾರಸ್ವಾಮಿ ದೆಹಲಿಗೆ ಹೋದರೆ ತಾವೇ ಮುಖ್ಯಮಂತ್ರಿ ಆಗಬಹುದೆಂದು ಸಿ.ಎಂ.ಇಬ್ರಾಹಿಂ ಹೇಳಿದ್ದಾರೆ. ಈ ರೀತಿ ಚರ್ಚೆ ಮಾಡಲು ಅವಕಾಶ ಇರುವುದು ನಮ್ಮ ಪಕ್ಷದಲ್ಲಿ ಮಾತ್ರ' ಎಂದರು.

'ಮುಸ್ಲಿಮರೂ ನಮ್ಮವರೇ. ಅವರೂ ಕನ್ನಡಿಗರು. ಆ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಬಾರದೆಂದೇನೂ ಇಲ್ಲ. ಒಬ್ಬ ವ್ಯಕ್ತಿಗೆ ಅವಕಾಶ ನೀಡುವ ಪ್ರಶ್ನೆ ಇದಲ್ಲ. ಆ ಸಮುದಾಯಗಳಲ್ಲಿನ ಸಮಸ್ಯೆಗೆ ಪರಿಹಾರ ಸಿಗಬೇಕು' ಎಂದರು.

'ದಲಿತರು ಹಾಗೂ ಮಹಿಳೆಯರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲು ಸಿದ್ಧ. ದಲಿತರ ಮತ ಪಡೆಯಲು ಈ ಘೋಷಣೆ ಮಾಡಿಲ್ಲ. ಇದು ಸ್ವಯಂ ಪ್ರೇರಣೆಯಿಂದ ಮಾಡಿದ ಘೋಷಣೆ ಅಲ್ಲ. ಆ ಸಮುದಾಯದ ಯುವಕನೊಬ್ಬ ತಾನು ಎದುರಿಸಿರುವ ಸಮಸ್ಯೆ ಹೇಳಿಕೊಂಡ. ಎಲ್ಲಾ ರಾಜಕೀಯ ಪಕ್ಷಗಳು ದಲಿತರನ್ನು ಅಸಡ್ಡೆಯಿಂದ ನೋಡುತ್ತಿರುವುದಾಗಿ ಬೇಸರ ವ್ಯಕ್ತಪಡಿಸಿದ' ಎಂದರು.

ಬಾಗಿನ ಅರ್ಪಿಸುವ ಭಾಗ್ಯ ನನಗೆ ಸಿಕ್ಕಿದ್ದು ಐತಿಹಾಸಿಕ ಕ್ಷಣ: ಸಿ.ಎಂ

ವಿ.ವಿ. ಸಾಗರಕ್ಕೆ ಮೊದಲ ಬಾಗಿನ

ಪ್ರಜಾವಾಣಿ ವಾರ್ತೆ

ವಿ.ವಿ. ಸಾಗರ (ಚಿತ್ರದುರ್ಗ): 89 ವರ್ಷಗಳ ನಂತರ ಭರ್ತಿಯಾಗಿರುವ ಇಲ್ಲಿನ ವಾಣಿವಿಲಾಸ (ವಿ.ವಿ) ಸಾಗರ ಜಲಾಶಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ಬಾಗಿನ ಅರ್ಪಿಸಿದರು.

ತರಹೇವಾರಿ ಪುಷ್ಪಗಳಿಂದ ಜಲಾಶಯವನ್ನು ಅಲಂಕರಿಸಲಾಗಿತ್ತು. ಪುಷ್ಪಾರ್ಚನೆ ಮಾಡಿ, ಹಾಲು ತುಪ್ಪ ಸುರಿದು ಗಂಗೆಗೆ ನಮಿಸಲಾಯಿತು.

'ಮೈಸೂರು ಅರಸರ ಆಡಳಿತದ ಅವಧಿಯಲ್ಲಿ ನಿರ್ಮಾಣವಾದ ಜಲಾಶಯ ಭವ್ಯವಾಗಿದ್ದು, ಮಧ್ಯ ಕರ್ನಾಟಕಕ್ಕೆ ಉಪಯುಕ್ತವಾಗಿದೆ. ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿಗೆ ಭರ್ತಿಯಾಗಿದ್ದು, ಬಾಗಿನ ಅರ್ಪಿಸುವ ಭಾಗ್ಯ ನನಗೆ ಸಿಕ್ಕಿದ್ದು ಐತಿಹಾಸಿಕ ಕ್ಷಣ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರು ಸಂತಸ ವ್ಯಕ್ತಪಡಿಸಿದರು.

'ಜಲಾಶಯ ಭರ್ತಿ ಆಗಿರುವುದರಿಂದ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಜನರಿಗೆ ಅನುಕೂಲವಾಗಿದೆ. ಕುಡಿಯುವ ನೀರು ಹಾಗೂ ನೀರಾವರಿ ಸೌಲಭ್ಯ ದೊರೆಯಲಿದೆ. ಆರ್ಥಿಕ ಸಂಕಷ್ಟದ ನಡುವೆಯೂ ಜಲಾಶಯ ನಿರ್ಮಾಣಕ್ಕಾಗಿ ಮನೆತನದ ಆಭರಣಗಳನ್ನು ಮಾರಾಟ ಮಾಡಿ ಹಣ ಒದಗಿಸಿದ ಮಹಾರಾಜರ ಕಾಳಜಿ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಅವರು ಹೇಳಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಕೆ. ಪೂರ್ಣಿಮಾ, ಜಿ.ಎಚ್. ತಿಪ್ಪಾರೆಡ್ಡಿ, ಎಂ. ಚಂದ್ರಪ್ಪ, ಟಿ. ರಘುಮೂರ್ತಿ, ವಿಧಾನಪರಿಷತ್ತಿನ ಸದಸ್ಯರಾದ ಕೆ.ಎಸ್. ನವೀನ್, ವೈ.ಎ. ನಾರಾಯಣಸ್ವಾಮಿ ಇದ್ದರು.

ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ಜಲಾಶಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಬಾಗಿನ ಅರ್ಪಿಸಿದರು. ಶಾಸಕರಾದ ಎಂ.ಚಂದ್ರಪ್ಪ, ಜಿ.ಎಚ್.ತಿಪ್ಪಾರೆಡ್ಡಿ, ಎನ್‌.ರವಿಕುಮಾರ್ ಕೆ.ಪೂರ್ಣಿಮಾ, ಬಿ.ಎಸ್ ಯಡಿಯೂರಪ್ಪ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಶಾಸಕರಾದ ವೈ.ಎ.ನಾರಾಯಣಸ್ವಾಮಿ, ಟಿ.ರಘುಮೂರ್ತಿ ಇದ್ದಾರೆ. –ಪ್ರಜಾವಾಣಿ ಚಿತ್ರ– ವಿ.ಚಂದ್ರಪ್ಪ

ಶಾಸಕ ಗೂಳಿಹಟ್ಟಿ ಶೇಖರ್ ಗೈರು

ವಿ.ವಿ. ಸಾಗರ ಜಲಾಶಯ ಹೊಸದುರ್ಗ ತಾಲ್ಲೂಕು ಸರಹದ್ದಿಗೆ ಸೇರಿರುವುದಾಗಿ ಬಲವಾಗಿ ಪ್ರತಿಪಾದಿಸುತ್ತಿರುವ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಗೈರಾಗಿದ್ದರು.

ವಿ.ವಿ. ಸಾಗರ ಜಲಾಶಯದ ಸರಹದ್ದಿಗೆ ಸಂಬಂಧಿಸಿದ ವಿವಾದ ಸೃಷ್ಟಿಯಾದ ಬಳಿಕ ಮುಖ್ಯಮಂತ್ರಿ ಬಾಗಿನ ಅರ್ಪಣೆ ಸಮಾರಂಭ ಕುತೂಹಲ ಕೆರಳಿಸಿತ್ತು. 'ಜಲಾಶಯವು ಹೊಸದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿದೆ. ಹಿರಿಯೂರು ತಾಲ್ಲೂಕಿನಲ್ಲಿ ಅಲ್ಲ' ಎಂದು ಗೂಳಿಹಟ್ಟಿ ಶೇಖರ್ ಹೇಳಿದ್ದರು.

ಬಾಲಕಿ ಮೇಲೆ ಅತ್ಯಾಚಾರ, ಮತಾಂತರಕ್ಕೆ ಒತ್ತಡ; ಬಂಧನ

ನಾಗಮಂಗಲ (ಮಂಡ್ಯ ಜಿಲ್ಲೆ): ಪೋಷಕರು ಪ್ರವಾಸಕ್ಕೆ ತೆರಳಿದ್ದಾಗ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಯೂನುಸ್ ಪಾಷಾ (25) ಎಂಬಾತನನ್ನು ಪಟ್ಟಣ ಠಾಣೆ ಪೊಲೀಸರು ಈಚೆಗೆ ಬಂಧಿಸಿದ್ದು, ಪೋಕ್ಸೊ ಅಡಿ ಪ್ರಕರಣ ದಾಖಲಿಸಿದ್ದಾರೆ.

ವಿವಾಹಿತನಾಗಿರುವ ಆರೋಪಿಯು ಬಾಲಕಿಗೆ ಮೊಬೈಲ್ ಫೋನ್ ಕೊಡಿಸಿ ಸ್ನೇಹಗಳಿಸಿದ್ದ. ವಿಡಿಯೊ ಕರೆ ಮಾಡಿ ಅಶ್ಲೀಲ ದೃಶ್ಯಗಳನ್ನು ರೆಕಾರ್ಡ್ ಮಾಡಿಕೊಂಡಿದ್ದ. ಪೋಷಕರು ಪ್ರವಾಸದಲ್ಲಿದ್ದಾಗ ಬಾಲಕಿ ಅಜ್ಜಿ ಮನೆಯಲ್ಲಿದ್ದಳು. ಅಲ್ಲಿಗೇ ತೆರಳಿದ್ದ ಆರೋಪಿಯು ಅಜ್ಜಿಗೆ ಬಾಲಕಿಯಿಂದಲೇ ನಿದ್ದೆ ಮಾತ್ರೆ ಕೊಡಿಸಿ ಅತ್ಯಾಚಾರ ಎಸಗಿದ್ದ. ಮದುವೆಯಾಗುವುದಾಗಿ ನಂಬಿಸಿ, ಮುಸ್ಲಿಂ ಧರ್ಮಕ್ಕೆ ಮತಾಂತರಗೊಳ್ಳುವಂತೆ ಒತ್ತಡ ಹಾಕಿದ್ದ. ಇಲ್ಲದಿದ್ದರೆ ಅಶ್ಲೀಲ ದೃಶ್ಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕುವುದಾಗಿ ಬೆದರಿಕೆ ಹಾಕಿದ್ದ.

'ಪ್ರವಾಸದಿಂದ ಬಂದ ಪೋಷಕರಿಗೆ ಆಕೆ ಎಲ್ಲವನ್ನೂ ವಿವರಿಸಿದ್ದಳು. ನಂತರ ಅವರು ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–6/.ಟೆಂಡರ್.ಅಧಿಸೂಚನೆ/2022–23/5947 ದಿನಾಂಕ: 21.11.2022

ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ (01) ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ: 160710 ಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ರೂ. 132.28 ಲಕ್ಷಗಳು**, 3) ಗುತ್ತಿಗೆದಾರರ ಅರ್ಹತೆ ವಿವರ: "ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, "ಕ್ಲಾಸ್–I: ಯಾವುದೇ ಮೊತ್ತಕ್ಕೆ ಭಾಗವಹಿಸಬಹುದು, "ಕ್ಲಾಸ್–II: ಕಾಮಗಾರಿ ಮೊತ್ತ ರೂ. 5.00 ಕೋಟಿಯವರೆಗೆ, "ಕ್ಲಾಸ್–III: ಕಾಮಗಾರಿ ಮೊತ್ತ ರೂ. 2.00 ಕೋಟಿಯವರೆಗೆ "ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು", 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ರೂ. 2,00,000.00, 5) ಪ್ರೀ ಬಿಡ್ ಮಿಟಿಂಗ : **14/12/2022 (11.00 ಗಂಟೆ)**, 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **15/12/2022 (17.30 ಗಂಟೆಯ ವರಿಗೆ)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **16/12/2022 (16.00 ಗಂಟೆಯ ವರಿಗೆ)**, 8) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ: **17/12/2022 (16.30 ಗಂಟೆ)**, 9) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ: **19/12/2022 (16.30 ಗಂಟೆ)**, 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ವಾ.ಸಾ.ಸಂ.ಇ/ಕಲಬುರಗಿ/861/ಎಂ.ಸಿ.&ಎ/2022–23 ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ಪಾಟಿ ಸವಾಲಿಗೆ ಉತ್ತರಿಸಲು ಪರದಾಡಿದ ಪ್ರಜ್ವಲ್ ರೇವಣ್ಣ

ಬೂಸಾ ಖರೀದಿಗೆ ಕೊಟ್ಟಿದ್ದು ₹ 1.20 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮ ಕಥೆ-ಚಿತ್ರಕಥೆ-ಸಂಭಾಷಣೆ ಎಲ್ಲಾ ನಮಗೆ ಬೇಡ. ವಕೀಲರು ಕೇಳಿದ ಪ್ರಶ್ನೆಗಷ್ಟೇ ಉತ್ತರ ಕೊಡಿ. ನೀವು ಏನು ಉತ್ತರಿಸುತ್ತೀರೋ ಅದನ್ನಷ್ಟೇ ನಾವು ದಾಖಲಿಸಿಕೊಳ್ಳುತ್ತೇವೆ...!', ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಹೈಕೋರ್ಟ್ ಕಿವಿ ಹಿಂಡಿದ ಪರಿಯಿದು.

'ಪ್ರಜ್ವಲ್ ರೇವಣ್ಣ ಹಾಸನ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದಾರೆ. ಅವರು ಚುನಾವಣೆಯಲ್ಲಿ ಸಾಕಷ್ಟು ಅಕ್ರಮ ಎಸಗಿದ್ದು ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ವಿಚಾರಣೆ ವೇಳೆ ಕಟಕಟೆಯಲ್ಲಿ ನಿಂತ ಪ್ರಜ್ವಲ್ ರೇವಣ್ಣ ಅವರನ್ನು ಅರ್ಜಿದಾರರ ಪರ ಹಿರಿಯ ವಕೀಲ ಪ್ರಮೀಳಾ ನೇಸರ್ಗಿ ಸುದೀರ್ಘ ಪಾಟಿ ಸವಾಲಿಗೆ ಗುರಿಪಡಿಸಿ, 'ಚುನಾವಣಾ ಅಧಿಕಾರಿಗಳ ತಂಡವು 2019ರ ಏಪ್ರಿಲ್ 17ರಂದು ಹೊಳೆನರಸೀಪುರದ ಚನ್ನಾಂಬಿಕಾ ಥಿಯೇಟರ್ ಒಳಗೆ ನಿಂತಿದ್ದ ಕೆಎ01ಎಂಬಿ 4477 ಇನ್ನೋವಾ ಕಾರಿನಲ್ಲಿದ್ದ ₹ 1.20 ಲಕ್ಷ ಮೊತ್ತವನ್ನು ವಶಪಡಿಸಿಕೊಂಡಿತ್ತು. ಹೌದಲ್ಲವೇ...' ಎಂದು ಪ್ರಶ್ನಿಸಿದರು.

'ಹೌದು' ಅಥವಾ 'ಇಲ್ಲ' ಎಂಬ ಕ್ಲುಪ್ತ ಉತ್ತರ ನೀಡುವ ಬದಲಿಗೆ ಪ್ರಜ್ವಲ್ ರೇವಣ್ಣ, 'ಇಲ್ಲ ಸರ್, ಕಾರು ಥಿಯೇಟರ್ ಒಳಗೆ ನಿಂತಿರಲಿಲ್ಲ. ಕಾಂಪೌಂಡ್ ಒಳಗೆ ನಿಂತಿತ್ತು!. ಅವತ್ತು ಆ ಹಣವನ್ನು ಐಟಿ (ಆದಾಯ ತೆರಿಗೆ) ಅಧಿಕಾರಿಗಳು ತಂದು ಕಾರಿನಲ್ಲಿ ದುರುದ್ದೇಶದಿಂದ ಇರಿಸಿ ದೂರು ದಾಖಲಿಸಿದ್ದರು. ಅಂದು ನನ್ನ ತಂದೆ ಲೋಕೋಪಯೋಗಿ ಸಚಿವರಾಗಿದ್ದು, ಅವರ ಎಸ್ಕಾರ್ಟ್‌ನವರಿಗೆ ಸೇರಿದ ಸರ್ಕಾರಿ ಕಾರಾಗಿತ್ತು, ಅಷ್ಟಕ್ಕೂ ಆ ಹಣವನ್ನು ನನ್ನ ತಾಯಿ ನಮ್ಮ ಮನೆಯ ಸೇವಕನೊಬ್ಬನಿಗೆ ಹಸುಗಳಿಗೆ ಬೂಸಾ ತರಲು ನೀಡಿದ್ದರು. ಈಗಾಗಲೇ ಈ ದೂರಿನ ತನಿಖೆ ನಡೆದಿದ್ದು ನ್ಯಾಯಾಲಯದಲ್ಲಿ ಬಿ ರಿಪೋರ್ಟ್ ಸಲ್ಲಿಸಲಾಗಿದೆ...!!' ಎಂದು ವಿವರಿಸಿದರು.

ಪದೇ ಪದೇ ಪ್ರತಿಯೊಂದು ಪ್ರಶ್ನೆಗೂ ವಿವರಣೆ ನೀಡಲು ಉತ್ಸಾಹ ತೋರುತ್ತಿದ್ದ ಪ್ರಜ್ವಲ್ ರೇವಣ್ಣ ಅವರಿಗೆ ನ್ಯಾಯಮೂರ್ತಿಗಳು, 'ರೀ, ಕಥೆ ಹೇಳೋದೇನೂ ಬೇಡ. ಕೇಳಿದ್ದಷ್ಟು ಮಾತ್ರಕ್ಕೆ ಉತ್ತರ ನೀಡಿ' ಎಂದು ಮಾತಿನಲ್ಲೇ ತಿವಿದರು.

ಚುನಾವಣೆ ದಿನಾಂಕ ಘೋಷಣೆ ಆದ ಮೇಲೆ ತಮ್ಮ ಕರ್ನಾಟಕ ಬ್ಯಾಂಕ್ ಖಾತೆಗೆ ತಂದೆ ಎಚ್.ಡಿ.ರೇವಣ್ಣ, ತಾಯಿ ಭವಾನಿ ರೇವಣ್ಣ ಸೇರಿದಂತೆ ಒಟ್ಟು 16 ಜನರಿಂದ ಸಂದಾಯವಾಗಿದ್ದ ಸಾಲ ರೂಪದ ಹಣ ಎಂದು ಪ್ರತಿಪಾದಿಸಲಾದ ₹ 27 ಲಕ್ಷದ ಮೊತ್ತಕ್ಕೆ ಸ್ಪಷ್ಟ ಉತ್ತರ ನೀಡಲು ಪರದಾಡಿ ದಾಖಲೆಗಳನ್ನು ಪುನಃ ಪುನಃ ತಿರುವಿ ಹಾಕಿದ ಪ್ರಜ್ವಲ್ ರೇವಣ್ಣ ಕೊನೆಗೆ, 'ನನಗೆ ಹಾಲು ಮಾರಾಟದಿಂದ ಮತ್ತು ಕೃಷಿಯಿಂದ ಬಂದ ಆದಾಯವಿದೆ' ಎಂದು ವಿವರಿಸಿದರು.

ಕೆಲವೊಂದು ಪ್ರಶ್ನೆಗಳಿಗೆ, 'ಇದು ನನಗೆ ಗೊತ್ತಿಲ್ಲ. ನನ್ನ ಲೆಕ್ಕಪರಿಶೋಧಕರು ಹಾಗೂ ಬ್ಯಾಂಕ್ ಅಧಿಕಾರಿಗಳಿಂದ ವಿವರಣೆ ಪಡೆದುಕೊಂಡು ಬಂದು ಉತ್ತರಿಸುತ್ತೇನೆ' ಎಂದು ಪ್ರಜ್ವಲ್ ಹೇಳಿದರು. ಈ ಮಾತಿಗೆ ನ್ಯಾಯಪೀಠ, 'ರೀ, ನೀವು ಮನೆಗೆ ಹೋಗಿ ನಿಮ್ಮ ಅಮ್ಮನ ಬಳಿ ಉತ್ತರ ಪಡೆದು ಬಂದು ತಿಳಿಸುತ್ತೇನೆ ಎಂದು ಮಗುವಿನ ರೀತಿಯಲ್ಲಿ ಹೇಳುತ್ತಿದ್ದೀರಲ್ಲಾ. ಇದು ಪರೀಕ್ಷೆ ಇದ್ದಂತೆ' ಎಂದು ಚುಚ್ಚಿತು.

ಸುದೀರ್ಘ ವಿಚಾರಣೆಯ ನಂತರ ಪ್ರಮೀಳಾ ನೇಸರ್ಗಿ, 'ಪ್ರತಿವಾದಿಗಳು ಚುನಾವಣಾ ಆಯೋಗಕ್ಕೆ ಸಾಕಷ್ಟು ಸುಳ್ಳು ದಾಖಲೆಗಳನ್ನು ಒದಗಿಸಿದ್ದಾರೆ. ಇನ್ನೂ ಕೆಲವು ಡಿಜಿಟಲ್ ಸಾಕ್ಷ್ಯಗಳನ್ನು ಪ್ರದರ್ಶಿಸಬೇಕಿದ್ದು ಅದಕ್ಕೆ ಮುಂದಿನ ಮುದ್ದತಿನಲ್ಲಿ ಅವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ, 'ನಿಮ್ಮ ಡಿಜಿಟಲ್ ಸಾಕ್ಷ್ಯಗಳನ್ನು ತೆರೆದ ನ್ಯಾಯಾಲಯದಲ್ಲಿ ನಾನು ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ. ಚೇಂಬರ್‌ನ ಒಳಗಡೆ ಪರಿಶೀಲಿಸುತ್ತೇನೆ. ಅಷ್ಟರೊಳಗೆ ನೀವು ಪ್ರತಿವಾದಿ ವಕೀಲರಿಗೂ ನೀಡಿ ಆದಷ್ಟು ಬೇಗನೆ ಪಾಟಿ ಸವಾಲು ಮುಗಿಸಿ' ಎಂದು ತಾಕೀತು ಮಾಡಿತು. ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಲಾಗಿದೆ.

ರಾಜ್ಯದತ್ತ ಕಾಂಗ್ರೆಸ್‌ನ ಮೂರು ಮಾಜಿ ಸಂಸದರ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಬಯಸಿ ಕಾಂಗ್ರೆಸ್‌ನ ಮೂವರು ಮಾಜಿ ಸಂಸದರು ಅರ್ಜಿ ಸಲ್ಲಿಸಿದ್ದಾರೆ. ಆ ಮೂಲಕ, ರಾಜ್ಯ ರಾಜಕಾರಣದತ್ತ ಅವರ ಚಿತ್ತ ನೆಟ್ಟಿದೆ.

2023ರ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಬಯಸಿ ಕೋಲಾರದ ಕೆ.ಎಚ್. ಮುನಿಯಪ್ಪ, ಚಿತ್ರದುರ್ಗದ ಬಿ.ಎನ್. ಚಂದ್ರಪ್ಪ ಮತ್ತು ಚಾಮರಾಜನಗರ ಕ್ಷೇತ್ರದ ಆರ್. ಧ್ರುವನಾರಾಯಣ್ ಅರ್ಜಿ ಸಲ್ಲಿಸಿದ್ದಾರೆ. ರಾಷ್ಟ್ರ ರಾಜಕಾರಣದಲ್ಲಿದ್ದ ಈ 'ಕೈ' ನಾಯಕರಿಗೆ ಇದೀಗ ರಾಜ್ಯ ರಾಜಕಾರಣದತ್ತ ಒಲವು ಮೂಡಿದೆ.

ನಂಜನಗೂಡು ಕ್ಷೇತ್ರದಿಂದ ಟಿಕೆಟ್ ಬಯಸಿ ಧ್ರುವನಾರಾಯಣ್ ಅವರು ಕೆಲವು ದಿನಗಳ ಹಿಂದೆಯೇ ಅರ್ಜಿ ಸಲ್ಲಿಸಿದ್ದಾರೆ. ಎಚ್.ಸಿ. ಮಹದೇವಪ್ಪ ಅರ್ಜಿ ಸಲ್ಲಿಸಿದ ಕ್ಷೇತ್ರಕ್ಕೇ ಅರ್ಜಿ ಸಲ್ಲಿಸಿರುವ ಅವರು, ಅಲ್ಲಿ ತಾವು ಕೂಡಾ ಪ್ರಬಲ ಆಕಾಂಕ್ಷಿ ಎಂಬ ಸಂದೇಶ ರವಾನಿಸಿದ್ದಾರೆ.

ಅರ್ಜಿ ಸಲ್ಲಿಕೆಯ ಕೊನೆಯ ದಿನವಾದ ಸೋಮವಾರ (ನ. 21) ರಾತ್ರಿ ಚಂದ್ರಪ್ಪ ಮತ್ತು ಮುನಿಯಪ್ಪ ಅವರು ತರಾತುರಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅವರಿಬ್ಬರೂ ಯಾವುದೇ ಕ್ಷೇತ್ರವನ್ನು ಅರ್ಜಿಯಲ್ಲಿ ಪ್ರಸ್ತಾಪಿಸದೆ, ಆಯ್ಕೆಯ ತೀರ್ಮಾನವನ್ನು ಹೈಕಮಾಂಡ್‌ಗೆ ಬಿಟ್ಟಿದ್ದೇವೆ ಎಂದು ಉಲ್ಲೇಖಿಸಿದ್ದಾರೆ.

'ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್ ಕೂಡಾ ರಾಜ್ಯ ರಾಜಕಾರಣಕ್ಕೆ ಕಾಲಿಡುವ ಮನಸ್ಸು ಹೊಂದಿದ್ದರು. ರಾಮನಗರ ಕ್ಷೇತ್ರದಿಂದ ಸ್ಪರ್ಧಿಸುವ ಬಯಕೆಯನ್ನು ತಮ್ಮ ಆಪ್ತರ ಜೊತೆ ಹಂಚಿಕೊಂಡಿದ್ದರು. ಆದರೆ, ಸುರೇಶ್ ದೆಹಲಿ ಮಟ್ಟದಲ್ಲಿಯೇ ಉಳಿದುಕೊಳ್ಳಲಿ ಎಂಬ ತೀರ್ಮಾನಕ್ಕೆ ಅವರ ಅಣ್ಣನೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಂದಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಪುರಸಭೆ ಕಾರ್ಯಾಲಯ, ಕುಣಿಗಲ್ ತುಮಕೂರು ಜಿಲ್ಲೆ.

ದೂ:08132-221835 Website: http//:kunigaltown.gov.in@yahoo.in E mail:itstaff_ulb_kunigal@yahoo.co.in

ಸಂ: ಪು.ಕು/ತಾಂಶಾ/ಜೆ.ಇ/ಎಸ್.ಎಫ್.ಸಿ(ವಿ)/ಸಿಆರ್/01/2022–23 ದಿನಾಂಕ: 17–11–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯಲ್ಲಿ ಅಧ್ಯಾದೇಶ 2000 ನಿಯಮದಂತೆ ಪುರಸಭೆ ಕುಣಿಗಲ್ ಇಲ್ಲಿಗೆ **2018–19ನೇ ಸಾಲಿನ ಎಸ್.ಎಫ್.ಸಿ.ವಿಶೇಷ ಅನುದಾನ** ಯೋಜನೆಯಡಿ ಕಾಮಗಾರಿಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಪ್ರಕಾರ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಆಹ್ವಾನಿಸಿರುವ ಕಾಮಗಾರಿಗಳ ಇಂಡೆಂಟ್ ವಿವರಗಳು ಈ ಕೆಳಕಂಡಂತಿದೆ.

INDENT NO	Estimate Cost in (LAKHS)	EMD	Reservation
DMA/2022-23/OW/WORK_INDENT 140476	85.00	As per E-Procurement Portal	Others
DMA/2022-23/OW/WORK_INDENT 140477	46.70		Reservation
DMA/2022-23/OW/WORK_INDENT 140478	41.50		Reservation
DMA/2022-23/OW/WORK_INDENT 140479	46.00		Reservation
DMA/2022-23/OW/WORK_INDENT 140520	90.00		Others
DMA/2022-23/OW/WORK_INDENT 140521	44.80		Others
DMA/2022-23/OW/WORK_INDENT 141084	91.80		Others
DMA/2022-23/OW/WORK_INDENT 141085	97.20		Others

ಮೇಲಿನ ಇಂಡೆಂಟ್ ಸಂಖ್ಯೆಗೆ ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **05.12.2022** ರಂದು ಸಂಜೆ 17:00 ಗಂಟೆ ವರೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/–ಅಧ್ಯಕ್ಷರು, ಪುರಸಭೆ, ಕುಣಿಗಲ್. | ಸಹಿ/–ಉಪಾಧ್ಯಕ್ಷರು, ಪುರಸಭೆ, ಕುಣಿಗಲ್. | ಸಹಿ/–ಅಧ್ಯಕ್ಷರು, ಸ್ಥಾಯಿ ಸಮಿತಿ, ಪುರಸಭೆ, ಕುಣಿಗಲ್. | ಸಹಿ/–ಮುಖ್ಯಾಧಿಕಾರಿ, ಪುರಸಭೆ, ಕುಣಿಗಲ್.

DIPR/TUM/705/MCA/2022-23

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ, ವಿಜಯಪುರ
ಬಿ4/3 ವಿವೇಕ ನಗರ ಪಶ್ಚಿಮ, ವಿಜಯಪುರ–586109

ದೂರವಾಣಿ ಸಂಖ್ಯೆ: 08352–276354 ಇ–ಮೇಲ್:dcpobijapur@gmail.com

ಸಂಖ್ಯೆ: ಜಿಮರಘ/ವಿಜೆಪಿ/ಪಪ್ರಕು/2022–23/768 ದಿನಾಂಕ: 19.11.2022

ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯದಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2021 ಹಾಗೂ ಮಾದರಿ ನಿಯಮಗಳು 2022ರನ್ವಯ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು/ಸದಸ್ಯರುಗಳು ಹಾಗೂ ಬಾಲನ್ಯಾಯ ಮಂಡಳಿಗಳಿಗೆ ಸಮಾಜ ಕಾರ್ಯಕರ್ತ ಸದಸ್ಯರುಗಳ ಆಯ್ಕೆ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು/ಸದಸ್ಯರುಗೂ ಹಾಗೂ ಬಾಲನ್ಯಾಯ ಮಂಡಳಿಗಳಿಗೆ ಸಮಾಜ ಕಾರ್ಯಕರ್ತ ಸದಸ್ಯರುಗಳ ಆಯ್ಕೆ ಸಂಬಂಧ ಈಗಾಗಲೇ ದಿನಾಂಕ: 13.10.2020, 30.01.2021 ಹಾಗೂ 14.07.2022ರಲ್ಲಿ ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ಕೇಂದ್ರ ಸರ್ಕಾರವು ಪ್ರಸ್ತುತ ಜಾರಿಯಲ್ಲಿದ್ದ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಹಾಗೂ ಮಾದರಿ ನಿಯಮಗಳು. 2016ಕ್ಕೆ ತಿದ್ದುಪಡಿಗಳನ್ನು ಅಳವಡಿಸಿದ್ದು, ದಿನಾಂಕ:01.09.2022 ರಿಂದ ಅನ್ವಯವಾಗುವಂತೆ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಪರಿಷ್ಕೃತ ಕಾಯ್ದೆ ಮತ್ತು ನಿಯಮಗಳನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ. ಈ ಸಂಬಂಧ ಈಗಾಗಲೇ ಹೊರಡಿಸಲಾದ ಅಧಿಸೂಚನೆಯನ್ವಯ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಹುದ್ದೆಯ ಹೆಸರು	ಅಧಿಕಾರಾವಧಿ	ಅರ್ಹತಾ ಮಾನದಂಡ
ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು / ಸದಸ್ಯರು	3 ವರ್ಷ	**ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2021ರ ಸೆಕ್ಷನ್ 27 ಹಾಗೂ ಮಾದರಿ ನಿಯಮಗಳು, 2022ರ ನಿಯಮ 15/3)ರನ್ವಯ** ಅರ್ಜಿದಾರರು ಅಧಿಸೂಚನೆ ಹೊರಡಿಸಿದ ಕೊನೆಯ ದಿನಾಂಕಕ್ಕೆ 35 ವರ್ಷ ಮೇಲ್ಪಟ್ಟು ಮತ್ತು 65 ವರ್ಷದೊಳಗಿರತಕ್ಕದ್ದು. ಹಾಗೂ ಮಕ್ಕಳ ಮನಃಶಾಸ್ತ್ರ (ಚೈಲ್ಡ್ ಸೈಕಾಲಜಿ) ಅಥವಾ ಮನೋರೋಗ ಚಿಕಿತ್ಸೆ (ಸೈಕಿಯಾಟ) ಅಥವಾ ಕಾನೂನು ಅಥವಾ ಸಮಾಜ ಕಾರ್ಯ (ಸೋಶಿಯಲ್ ವರ್ಕ್) ಅಥವಾ ಸಮಾಜಶಾಸ್ತ್ರ (ಸೋಶಿಯಾಲಜಿ) ಅಥವಾ ಮಾನವ ಆರೋಗ್ಯ ಅಥವಾ ಶಿಕ್ಷಣ ಅಥವಾ ಮಾನವ ಅಭಿವೃದ್ಧಿ (ಹೂಮನ್ ಡೆವಲಪ್ ಮೆಂಟ್) ಅಥವಾ ವಿಶೇಷ ಚೇತನ ಮಕ್ಕಳಿಗೆ ಸಂಬಂಧಿಸಿದ ವಿಶೇಷ ಶಿಕ್ಷಣದಲ್ಲಿ (Special education for differently abled children) ಪದವಿಯನ್ನು ಪಡೆದು ಸಕ್ರಿಯವಾಗಿ ಶಿಕ್ಷಣ, ಆರೋಗ್ಯ ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ ಕನಿಷ್ಠ 7 ವರ್ಷಗಳ ಕಾರ್ಯಾನುಭವವನ್ನು ಹೊಂದಿರತಕ್ಕದ್ದು. **ಅಥವಾ** ಅರ್ಜಿದಾರರು ಮೇಲ್ಕಂಡ ವಿಷಯಗಳಲ್ಲಿ ಪದವಿಯನ್ನು ಹೊಂದಿ ವೃತ್ತಿ ಪರರಾಗಿರತಕ್ಕದ್ದು.
ಬಾಲನ್ಯಾಯ ಮಂಡಳಿಯ ಸಮಾಜ ಕಾರ್ಯಕರ್ತ ಸದಸ್ಯರುಗಳು	3 ವರ್ಷ	ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2021ರ ಸೆಕ್ಷನ್ 4 ಹಾಗೂ ಮಾದರಿ ನಿಯಮಗಳು, 2022ರ ನಿಯಮ 4(3)ರನ್ವಯ ಅರ್ಜಿದಾರರು ಅಧಿಸೂಚನೆ ಹೊರಡಿಸಿದ ಕೊನೆಯ ದಿನಾಂಕಕ್ಕೆ 35 ವರ್ಷ ಮೇಲ್ಪಟ್ಟು ಮತ್ತು 65 ವರ್ಷದೊಳಗಿರತಕ್ಕದ್ದು, ಹಾಗೂ ಮಕ್ಕಳೊಂದಿಗೆ ಶಿಕ್ಷಣ, ಆರೋಗ್ಯ ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ ಕನಿಷ್ಠ 7 ವರ್ಷಗಳ ಕಾರ್ಯಾನುಭವವನ್ನು ಹೊಂದಿರತಕ್ಕದ್ದು. **ಅಥವಾ** ಹಾಗೂ ಮಕ್ಕಳ ಮನಃಶಾಸ್ತ್ರ (ಚೈಲ್ಡ್ ಸೈಕಾಲಜಿ), ಅಥವಾ ಮನೋರೋಗ ಚಿಕಿತ್ಸೆ (ಸೈಕಿಯಾಟ್ರಿ), ಅಥವಾ ಸಮಾಜಶಾಸ್ತ್ರ (ಸೋಷಿಯಾಲಜಿ), ಅಥವಾ ಕಾನೂನು ಕ್ಷೇತ್ರದಲ್ಲಿ ಪದವಿಯನ್ನು ಹೊಂದಿ ವೃತ್ತಿ ಪರರಾಗಿರತಕ್ಕದ್ದು.

ಅರ್ಜಿಗಳನ್ನು ದಿನಾಂಕ: 18.11.2022 ರಿಂದ 03.12.2022ರ ಅಪರಾಹ್ನ 5.30ರೊಳಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ (ರಿಜಿಸ್ಟರ್ಡ್ ಪೋಸ್ಟ್) ಮೂಲಕ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಆಯ್ಕೆ ಸಮಿತಿ 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರಿಗೆ ಸಲ್ಲಿಸತಕ್ಕದ್ದು.

1. ಮಕ್ಕಳ ಕಲ್ಯಾಣ ಸಮಿತಿಗಳ ಅಧ್ಯಕ್ಷರು ಸದಸ್ಯರುಗಳ ಮತ್ತು ಬಾಲನ್ಯಾಯ ಮಂಡಳಿಗಳ ಸಮಾಜ ಕಾರ್ಯಕರ್ತ ಸದಸ್ಯರುಗಳ ಆಯ್ಕೆಯನ್ನು ಪರಿಷ್ಕೃತ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2021 ಹಾಗೂ ಮಾದರಿ ನಿಯಮಗಳು 2022ರನ್ವಯ ಆಯ್ಕೆ ಮಾಡಲಾಗುವುದು. 2. ಮಕ್ಕಳ ಕಲ್ಯಾಣ ಸಮಿತಿಯಲ್ಲಿ ಈಗಾಗಲೇ ಮೊದಲನೇ ಅವಧಿಗೆ ಸದಸ್ಯರಾಗಿ ಕಾರ್ಯ ನಿರ್ವಹಿಸಿದಂತಹ ಅಭ್ಯರ್ಥಿಗಳೂ ಸಹ ಅಧ್ಯಕ್ಷರಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. 3. ಮಕ್ಕಳ ಕಲ್ಯಾಣ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳಿಗೆ ಮತ್ತು ಬಾಲನ್ಯಾಯ ಮಂಡಳಿಗಳ ಸಮಾಜ ಕಾರ್ಯಕರ್ತ ಸದಸ್ಯರುಗಳಿಗೆ ನಿಗದಿಪಡಿಸಿರುವ ಅರ್ಜಿ ನಮೂನೆಯು ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಲಭ್ಯವಿರುತ್ತದೆ ಮತ್ತು ಮಕ್ಕಳ ರಕ್ಷಣಾ ನಿರ್ದೇಶನಾಲಯದ ವೆಬ್ ಸೈಟ್‌ನಲ್ಲಿ ಸಹ ಲಭ್ಯವಿರುತ್ತದೆ. 4. ಅಪೂರ್ಣ ಅರ್ಜಿಗಳು ಅಥವಾ ನಿಗದಿತ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 5. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಆಯ್ಕೆ ಸಮಿತಿ ಇವರು ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. 6. ಸಂದರ್ಶನಕ್ಕೆ ಆಯ್ಕೆ ಮಾಡಲಾದ ಅರ್ಜಿದಾರ ಪಟ್ಟಿಯನ್ನು (ಶಾರ್ಟ್ ಲಿಸ್ಟೆಡ್) ನಿರ್ದೇಶನಾಲಯದ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುವುದು ಹಾಗೂ ಸಂದರ್ಶನದ ದಿನಾಂಕವನ್ನು ಮುಂಚಿತವಾಗಿ ತಿಳಿಸಲಾಗುವುದು. 7. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯದ ದೂರವಾಣಿ ಸಂಖ್ಯೆ 080–228673833, (ಇ–ಮೇಲ್ ವಿಳಾಸ: icps.kar@gmail.com) ಅಥವಾ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರನ್ನು ಸಂಪರ್ಕಿಸತಕ್ಕದ್ದು, ಮಾಹಿತಿಯು ನಿರ್ದೇಶನಾಲಯದ ವೆಬ್ ಸೈಟ್ www.icps.karnataka.gov.in ರಲ್ಲಿ ಲಭ್ಯವಿರುತ್ತದೆ.

ಖಾಸಗಿ ವೆಬ್ ಪೋರ್ಟಲ್ ಕೆರಿಯರ್ ಪೋರ್ಟಲ್ ಅಥವಾ ಇನ್ನಿತರೆ ಯಾವುದೇ ಮಾಧ್ಯಮದಿಂದ ಪ್ರಕಟವಾಗುವ ಮಾಹಿತಿಗಳಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಜವಾಬ್ದಾರಿಯಾಗುವುದಿಲ್ಲ.

ಸಹಿ/– ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಸದಸ್ಯ ಕಾರ್ಯದರ್ಶಿಗಳು,
ವಾಸಾಸಂಇ/ವಿಜಯಪುರ/587/ಎಂಸಿಎ/2022–23 ರಾಜ್ಯ ಮಟ್ಟದ ಆಯ್ಕೆ ಸಮಿತಿ, ಬೆಂಗಳೂರು

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2022-23 **NOTICE FOR PRIVATE SALE OF GOLD** 21/11/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2022 as shown below:

Br. Ainapur: Karchi Building, Opposite Pattan Panchayath, Ainapur, Taluk Athani, Belgaum- 591 303, Ph No. 08339-254084 :- 14976100018550,14976400009655,14976400009598,14976400009606,14976100018493,14976400009762,14976400011685,14976400009895,14976400011750,14976400011768,14976400009986,14976400011834.

Br. Athani: Near Head Post Office, Near Ganesh Mandir, A / P Athani, Taluka:Athani, Belgaum- 591 304, Ph no. 08289-252725 :- 15076400035500,15076400035898,15076400036037,15076400036003,15076400045640.

Br. Bagalkot: Prema Arcade, Engineering college circle, Vidyagiri PO, Bagalkot- 587102, Ph no. 08354 233399 :- 21966400031222,21966400012099,21966400025810,21966400026461,21966400025687,21966400024193,21966400013295,21966400024805,21966400026198,21966400029424,21966400025513.

Br. Belgaum/Tilakwadi: Near 3rd Railway Gate, Khanapur Road, Tilakwadi, Belgaum- 590 006, Ph no.0 831-2495439 :- 15306400012708,15306400013425,15306400012773,15306400013938,15306400010801,15306400013045,15306400013268,15306400014217,15306400010579,15306400010173,15306400009258,15306400014241,15306400014225.

Br. Belgaum /City: Ground Floor, Vijaylaxmi Arcade, Opp: Khade Bazar Police station, Narvekar Galli, Belgaum- 590 002, Ph no. 0831-2423460:- 15096400026929,15096400025285,15096400025608,15096400024973,15096400025509,15096400026408,15096400020716,15096400025228.

Br. Bellary: Modi Chambers, 2nd Cross, Gandhi Nagar, Bellary- 583 103, Ph no. 08392-258667 :- 15896400143859,15896400101451,15896400101428,15896400132878,15896400101154,15896400141572,15896400131581,15896400129098,15896400142356,15896400142653,15896400128587,15896400129106,15896400143081,15896400109199,15896400133611,15896400133231,15896400133314,15896400100487,15896400141812,15896400128538,15896400128546,15896400128553,15896400128561,15896400128603,15896400143487,15896400131268,15896400143396,15896400106393,15896400099622,15896400079541,15896400105510,15896400141200,15896400131896,15896400099382,15896400129734,15896400099051,15896400134288,15896400101600,15896400129114,15896400142927,15896400133850,15896400134387,15896400101030,15896400133991,15896400129668,15896400134858,15896400133439,15896400133991,15896400098590,15896400128595,15896400097394,15896400132100,15896400132852,15896400131151,15896400132407,15896400132605,15896400107045.

Br. Challakere: Chaitanya Arcade, Bangalore Road, Challakere, Chitradurga- 577 522, Ph no. 08195-222456:- 18976400022019,18976400026580,18976400022829,18976400023207,18976400022100,18976100048629,18976400022985,18976400023124,18976400022779,18976400026457,18976400022993,18976400022613,18976400023058,18976400023181.

Br. Chitradurga: Opp.Vasavi Mahal, Basaveshwara Talkies Road, Chitradurga- 577 501, Ph no.0 8194-220931 :- 15946400040454,15946400024029,15946400051659,15946400052202,15946400052202,15946400050560.

Br. Davanagere: Raghavendra Plaza, No. 200/1A & 200/1B, 3rd Main, 7th Cross, 28th Ward, P J Extension, Davangere- 577002, Ph no. 08192-222511 :- 22976400013459,22976400004557,22976400001959,22976400003328,22976400001728,22976400012055,22976400001256,22976400013558,22976400013590,22976400010232,22976400010315,22976400010901,22976400014507,22976400007477,22976400011552,22976400007485,22976400007865,22976400011842,22976400005232,22976400006602,22976400006560,22976400006552,22976400006594,22976400006578,22976400006586,22976400012071,22976400012105,22976400012121,22976400012246,22976400006719,22976400007048,22976400012295,22976400012303,22976400012386,22976400012642,22976400012816,22976400012824,22976400012865,22976400013004,22976400013608.

Br. Dharwad: Inamdhar Desai Arcade, Opp Spandhana Hospital, Vivekananda Circle, Saptapur, Dharwad- 580 001, Ph no.0 836-2445280 :- 16386400075706,16386400073164,16386400074246,16386400072844,16386400072588,16386400072349,16386400066507,16386400066564,16386400075755,16386400073388.

Br. Gulbarga: Plot No.7, 1st Floor, Main Road, Super Market, Gulbarga- 585 101, Ph no.0 8472-230107 :-16046400018755,16046400021494,16046400022179,16046400026055,16046400026402,16046400026451,16046400029117,16046400029125,16046400030370,16046400030917.

Br. Ganeshpur: Plot No. 19, BUDA Scheme No 51, Near Military Hospital , Ganeshpur Main Road, Belgaum- 590 009, Ph no.0 831-2446719 :- 14956100090924.

Br. Gangawati: Building No 2-12-81,82,83, Malleswara Complex, Koppal road, Gangawati - 583 227, Ph no. 08533-271861:- 16856400068067,16856400081805,16856400072689,16856400072192,16856400041700,16856400085624,16856400085632,16856400083629,16856400073166,16856400075286,16856400070592,16856400075906,16856400050495,16856400073109,16856400073372.

Br. Hubli: Swastik Central, Niligin Road, New Cotton Market, Hubballi, Dharwad- 580 029, Ph no. 0836-2369449 :- 13386400067615,13386400046536,13386400056980,13386100403292,13386400066633,13386100399698,13386100406436,13386100385200,13386400064232,13386400061212,13386100402831,13386100386661,13386100400868.

Br. Hiriyur : Prashantha Nilaya, Main Road, Hiriyur, Chitradurga Dist- 577 598, Ph no. 08193271024 :- 19886400059144,19886400054723,19886400051703,19886400058039.

Br. Haveri: C Plot No. 30A, Vidya Nagar, P B Road, Haveri- 581 110, Ph no.08375232784 :- 20436400032274,20436400033314,20436400034676,20436400041234,20436400051811,20436400032175,20436400054864,20436400049104,20436400046837,

Br. Khanapur: Room No. A4, Mangirish Building, Opp. Municipal Bus Stand, Khanapur, Belgaum Dist- 591 302, Ph no. 0833-6223326 :- 19606400012855,19606400015833,19606400017144,19606400017318,19606400018415,19606100005514.

Br. Koppal: Kodandappa Complex, Near Kiran Paints, Jawahar Road, Koppal- 583 231, Ph no. 08539220606 :- 21176400069558,21176400065911,21176400060904,21176400031806,21176400067529,21176400073071,21176400053339,21176400060649,21176400062108,21176400062850,21176400067636,21176400042654,21176400068980,21176100008021,21176400049477,21176400041680,21176400072479.

Br. Ranebennur: Gungadatti Building, Opp.KEB Office, PB Road, Ranibennur, Haveri- 581 115, Ph no. 08373-262111 :- 21116400022686,21116400022371,21116400016621,21116400017041,21116400023114.

Br. Raichur: Ashwini Complex, Opp. Public Gardens, Ambedkar Circle, Station Road, Raichur- 584 101, Ph no.0 8532-225091 :- 15736400118982,15736400120004,15736400117141,15736400122604.

Br. Ugarkhurd: Ghodagire Building, Opposite Post Office, Ugar Khurd, Athani Taluk, Belgaum- 591 316, Ph no. 8339 272325 :- 14996400020387,14996400025675,14996400021278,14996400025535,14996400025220,14996400020189,14996400025238,14996400025725.

Br. Nipani: Dhole Prime, Ashok Nagar, Nipani, Belagavi- 591 237, Ph No. 08338223137 :-15086400027720.

Br. Vijayapura : CTS No: 1439,Upuli Burz Road, Opp.Milan Medicals, Near M G Road, Vijayapura- 586 101 :- 23266400002069.

Bangalore 21-11-2022 Vice President & Zonal Head

ದಕ್ಷಿಣ ಗುಜರಾತ್: ಬಿಜೆಪಿ ನೆಲೆ ಸಡಿಲ?

ಅಹಮದಾಬಾದ್ (ಪಿಟಿಐ): ಬಿಜೆಪಿಯ ಭದ್ರಕೋಟೆ ಎನಿಸಿರುವ ದಕ್ಷಿಣ ಗುಜರಾತ್‌ನ ಜಿಲ್ಲೆಗಳಲ್ಲಿ ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ನೆಲೆ ಸಡಿಲವಾಗುವ ಸಾಧ್ಯತೆಗಳು ಇವೆ. ರಾಜ್ಯದ ರಾಜಕಾರಣಕ್ಕೆ ಹೊಸದಾಗಿ ಪ್ರವೇಶಿಸಿರುವ ಎಎಪಿ ಮತ್ತು ಸರ್ಕಾರದ ಬಗ್ಗೆ ಈ ಭಾಗದ ಬುಡಕಟ್ಟು ಜನರಿಗೆ ಇರುವ ಅಸಮಾಧಾನಗಳು ಬಿಜೆಪಿಗೆ ಮುಳುವಾಗುವ ಸಾಧ್ಯತೆ ಇವೆ ಎಂದು ವಿಶ್ಲೇಷಿಸಲಾಗಿದೆ.

ದಕ್ಷಿಣ ಗುಜರಾತ್‌ನ ಭರೂಚ್, ನರ್ಮದಾ, ತಾಪಿ, ದಂಗ್, ವಲಸಾಡ್, ಸೂರತ್ ಮತ್ತು ನವಸಾರಿ ಜಿಲ್ಲೆಗಳಲ್ಲಿ ಒಟ್ಟು 35 ವಿಧಾನಸಭಾ ಕ್ಷೇತ್ರಗಳಿವೆ. 2017ರ ವಿದಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಈ 35ರಲ್ಲಿ 25 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಉಳಿದ ಹತ್ತರಲ್ಲಿ ಎಂಟು ಕ್ಷೇತ್ರಗಳನ್ನು ಕಾಂಗ್ರೆಸ್ ಮತ್ತು ಎರಡು ಕ್ಷೇತ್ರಗಳನ್ನು ಭಾರತೀಯ ಟ್ರೈಬಲ್ ಪಾರ್ಟಿ (ಬಿಟಿಪಿ) ಗೆದ್ದುಕೊಂಡಿತ್ತು. ಪ್ರಸಕ್ತ ಚುನಾವಣೆಯಲ್ಲಿ ಈ ಸಂಖ್ಯಾಬಲ ಬದಲಾಗಲಿದೆ ಎಂಬ ಅಂದಾಜು ಇದೆ.

ಈ ಜಿಲ್ಲೆಗಳಲ್ಲಿರುವ ಒಟ್ಟು 35 ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಕ್ಕೆ 14 ಕ್ಷೇತ್ರಗಳನ್ನು ಮೀಸಲಿರಿಸಲಾಗಿದೆ. 2017ರ ಚುನಾವಣೆಯಲ್ಲಿ ಬಿಜೆಪಿಯು ಇವುಗಳಲ್ಲಿ ಏಳು ಕ್ಷೇತ್ರಗಳನ್ನು ಮಾತ್ರ ಗೆದ್ದುಕೊಂಡಿತ್ತು. ಈ ಚುನಾವಣೆಯಲ್ಲಿ ಈ ಸಂಖ್ಯೆ ಇನ್ನಷ್ಟು ಕಡಿಮೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಜಿಲ್ಲೆಗಳ ಬುಡಕಟ್ಟು ಮತ್ತು ಅರಣ್ಯ ಪ್ರದೇಶಗಳಲ್ಲಿ ನಡೆಸಿದ ಹಾಗೂ ನಡೆಸಲು ಉದ್ದೇಶಿಸಿದ್ದ ವಿವಿಧ ಯೋಜನೆಗಳೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ನವಸಾರಿ ಮತ್ತು ವಲಸಾಡ್ ಜಿಲ್ಲೆಗಳ ಬುಡಕಟ್ಟು ಪ್ರದೇಶವನ್ನು ಹಾದುಹೋಗುವಂತೆ ರಾಜ್ಯ ಸರ್ಕಾರವು ಹೆದ್ದಾರಿ ಯೋಜನೆಯನ್ನು ರೂಪಿಸಿತ್ತು. ಈ ಯೋಜನೆಗೆ ಸಾವಿರಾರು ಹೆಕ್ಟೇರ್‌ಗಳಷ್ಟು ಕೃಷಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿತ್ತು. ತಮ್ಮ ಜಮೀನು ಕಳೆದುಕೊಳ್ಳುವುದರ ವಿರುದ್ಧ ಇಲ್ಲಿನ ಬುಡಕಟ್ಟು ಜನರು ದೊಡ್ಡ ಮಟ್ಟದ ಹೋರಾಟ ನಡೆಸಿದ್ದರು. ಈ ಹೋರಾಟವನ್ನು ಮುನ್ನಡೆಸಿದ್ದು ಕಾಂಗ್ರೆಸ್. ಯೋಜನೆ ಸ್ಥಗಿತವಾದದ್ದು ಸದ್ಯದ ಮಟ್ಟಿಗಷ್ಟೇ ಆಗಿದ್ದರೂ, ಬುಡಕಟ್ಟು ಜನರನ್ನು ರಾಜ್ಯದ ಬಿಜೆಪಿ ವಿರುದ್ಧ ಆ ಹೋರಾಟ ಸಂಘಟಿಸಿದೆ. ಕಳೆದ ಬಾರಿ ಬಿಜೆಪಿಯನ್ನು ಬೆಂಬಲಿಸಿದ್ದ ಬುಡಕಟ್ಟು ಸಮುದಾಯದ ಕೆಲವು ಮಂದಿ, ಈ ಬಾರಿ ಕಾಂಗ್ರೆಸ್‌ನತ್ತ ಬರುವ ಅಥವಾ ಬಿಟಿಪಿಗೆ ಮತ ಹಾಕುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.

ಪಾರ್–ತಾಪಿ–ನರ್ಮದಾ ನದಿ ಜೋಡಣೆ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಿತ್ತು. ಈ ಯೋಜನೆಯಿಂದ ಬುಡಕಟ್ಟು ಸಮುದಾಯದ ಜನರು ಲಕ್ಷಾಂತರ ಹೆಕ್ಟೇರ್ ಜಮೀನು ಕಳೆದುಕೊಳ್ಳುವ ಸ್ಥಿತಿ ಎದುರಾಗಿತ್ತು. ಇದರ ವಿರುದ್ಧ ಕಾಂಗ್ರೆಸ್‌ನ ಬುಡಕಟ್ಟು ಮೋರ್ಚಾ ನಾಯಕ ಮತ್ತು ಶಾಸಕ ಅನಂತ್ ಪಟೇಲ್ ಹೋರಾಟ ಸಂಘಟಿಸಿದ್ದರು. ಸರ್ಕಾರವು ಯೋಜನೆಯನ್ನು ರದ್ದುಪಡಿಸಿತು. ಆದರೆ, ಅದರಿಂದ ಬಿಜೆಪಿಗೆ ಹೆಚ್ಚಿನ ಅನುಕೂಲ ಏನೂ ಆಗುವುದಿಲ್ಲ ಎನ್ನುತ್ತಾರೆ ರಾಜ್ಯ ಕಾಂಗ್ರೆಸ್ ನಾಯಕ ತುಷಾರ್ ಚೌಧರಿ.

ಸೂರತ್ ಬಿಜೆಪಿಯ ಭದ್ರಕೋಟೆ. ಜಿಲ್ಲೆಯಲ್ಲಿ 16 ಕ್ಷೇತ್ರಗಳಿದ್ದು, ಕಳೆದ ಚುನಾವಣೆಯಲ್ಲಿ ಬಿಜೆಪಿ 15 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಆದರೆ 2017ರಿಂದ 2022ರ ಮಧ್ಯೆ ಪರಿಸ್ಥಿತಿ ಬದಲಾಗಿದೆ. 2017ರಲ್ಲಿ ಜಿಎಸ್‌ಟಿ ಜಾರಿಯಿಂದ ಜವಳಿ ಉದ್ಯಮಿಗಳಿಗೆ ಭಾರಿ ಹೊಡೆತ ಬಿದ್ದಿದ್ದರೂ, ಆ ಜನರು ಬಿಜೆಪಿಯ ಕೈಹಿಡಿದಿದ್ದರು. ಪಾಟೀದಾರ್ ಮೀಸಲಾತಿ ಹೋರಾಟ ಜೋರಾಗಿದ್ದರೂ, ಪಾಟೀದಾರರು ಬಿಜೆಪಿಯಿಂದ ದೂರ ಸರಿದಿರಲಿಲ್ಲ.

ಆದರೆ, 2021ರಲ್ಲಿ ಸೂರತ್ ನಗರಸಭೆಗೆ ನಡೆದ ಚುನಾವಣೆಯಲ್ಲಿ ಎಎಪಿ 27 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇ 28ರಷ್ಟು ಮತಗಳನ್ನು ಎಎಪಿ ಪಡೆದುಕೊಂಡಿತ್ತು. ಪಾಟೀದಾರ್ ಮೀಸಲಾತಿ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಹಲವು ನಾಯಕರು ಈಗ ಎಎಪಿಯಲ್ಲಿದ್ದಾರೆ. ಎಎಪಿ ಅವರನ್ನು ಕಣಕ್ಕೆ ಇಳಿಸಿದೆ. ಹೀಗಾಗಿ ಪಾಟೀದಾರ್ ಮತಗಳು ಎಎಪಿಯತ್ತ ವಾಲಲಿವೆ ಎಂದು ನಿರೀಕ್ಷಿಸಲಾಗಿದೆ.

ಪ್ರಧಾನಿ ಮೋದಿ ಅವರನ್ನೇ ಪ್ರಚಾರಕ್ಕೆ ಬಿಜೆಪಿ ನೆಚ್ಚಿಕೊಂಡಿದೆ. ವಲಸಾಡ್ ಮತ್ತು ನವಸಾರಿ ಜಿಲ್ಲೆಗಳಲ್ಲಿ ಅವರು ಸಾಲು–ಸಾಲು ರ‍್ಯಾಲಿಗಳನ್ನು ನಡೆಸಿದ್ದಾರೆ

ಪಾಟೀದಾರರು ಮತ್ತು ಬುಡಕಟ್ಟು ಜನರು ಬಿಜೆಪಿಗೇ ಮತ ನೀಡಲಿದ್ದಾರೆ. ಏಕೆಂದರೆ ಅವರ ಏಳಿಗೆಗಾಗಿ ಬಿಜೆಪಿ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ

ಮುಕೇಶ್ ಪಟೇಲ್
ರಾಜ್ಯ ಸಚಿವ

ಕಳೆದ ಬಾರಿ ಕೇಜ್ರಿವಾಲ್ ಪ್ರಚಾರಕ್ಕೆ ಬಂದಿರಲಿಲ್ಲ. ಈ ಬಾರಿ ಅವರು ಪ್ರಚಾರದ ಕಣಕ್ಕೆ ಇಳಿದಿದ್ದಾರೆ. ಅದು ಚುನಾವಣೆಯಲ್ಲಿ ಎಎಪಿ ಪರವಾಗಿ ಕೆಲಸ ಮಾಡಲಿದೆ

ಭೀಮಾಬಾಯಿ ಚೌಧರಿ
ಗುಜರಾತ್ ಎಎಪಿ ಉಪಾಧ್ಯಕ್ಷ

ಗುಜರಾತ್ ಮುಖ್ಯಮಂತ್ರಿ ಕೈಗೊಂಬೆ: ಕೇಜ್ರಿವಾಲ್

ದೇವಭೂಮಿ ದ್ವಾರಕಾ (ಗುಜರಾತ್): ಭೂಪೇಂದ್ರ ಪಟೇಲ್ ಅವರು ಗುಜರಾತ್‌ನ 'ಕೈಗೊಂಬೆ ಮುಖ್ಯಮಂತ್ರಿ'. ತಮ್ಮ ಪಿಯೋನ್ ನೇಮಕ ಮಾಡಿಕೊಳ್ಳಲೂ ಅವರಿಗೆ ಆಗುವುದಿಲ್ಲ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ದೇವಭೂಮಿ ದ್ವಾರಕಾದ ಖಂಭಲಿಯಾದಲ್ಲಿ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಅವರು ಮಂಗಳವಾರ ಮಾತನಾಡಿದರು. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ರಹಸ್ಯ ಒಪ್ಪಂದ ಆಗಿದೆ ಎಂದೂ ಅವರು ಆರೋಪಿಸಿದ್ದಾರೆ.

'ಗುಜರಾತ್‌ನ ಜನರ ಮುಂದೆ ಎರಡು ಮುಖಗಳಿವೆ. ಒಂದು ಈಸುದಾನ್ ಗಢವಿ ಮತ್ತು ಇನ್ನೊಂದು ಭೂಪೇಂದ್ರ ಪಟೇಲ್. ಯಾರಿಗೆ ಮತ ಹಾಕುವಿರಿ ಮತ್ತು ಯಾರನ್ನು ಮುಖ್ಯಮಂತ್ರಿ ಮಾಡುವಿರಿ' ಎಂದು ಕೇಜ್ರಿವಾಲ್ ಪ್ರಶ್ನಿಸಿದರು.

'ಗಢವಿ ಯುವಕ, ಸುಶಿಕ್ಷಿತ ವ್ಯಕ್ತಿ. ಅವರ ಮನವು ಬಡವರಿಗಾಗಿ ಮಿಡಿಯುತ್ತದೆ. ಅವರು ರೈತನ ಮಗನೂ ಹೌದು. ಅವರು ಟಿ.ವಿ. ಸುದ್ದಿವಾಹಿನಿ ನಿರೂಪಕರಾಗಿದ್ದಾಗ ರೈತರ ಸಮಸ್ಯೆಗಳಿಗೆ ಬೆಳಕು ಚೆಲ್ಲಿದ್ದರು. ರೈತರು ಮತ್ತು ನಿರುದ್ಯೋಗಿ ಯುವಜನರಿಗಾಗಿ ಅವರು ಕೆಲಸ ಮಾಡಿದ್ದರು. ಆದರೆ, ಇನ್ನೊಂದೆಡೆ ಭೂಪೇಂದ್ರ ಪಟೇಲ್ ಇದ್ದಾರೆ. ಅವರಿಗೆ ಅಧಿಕಾರವೇ ಇಲ್ಲ. ಅವರು ಕೈಗೊಂಬೆ ಮಾತ್ರ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

'ಅವರು (ಭೂಪೇಂದ್ರ) ಒಳ್ಳೆಯ ಮನುಷ್ಯ, ಅವರು ತುಂಬಾ ಧಾರ್ಮಿಕತೆ ಇರುವ ಮನುಷ್ಯ ಎಂದು ಕೇಳಿದ್ದೇನೆ. ಆದರೆ, ಅವರ ಮಾತನ್ನು ಯಾರೂ ಕೇಳುವುದಿಲ್ಲ' ಎಂದು ಕೇಜ್ರಿವಾಲ್ ಹೇಳಿದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಖಂಭಲಿಯಾದಲ್ಲಿ ಸೋಮವಾರ ಸಮಾವೇಶ ನಡೆಸಿದ್ದರು. ಸಮಾವೇಶದಲ್ಲಿ ಹಾಕಿದ್ದ ಕುರ್ಚಿಗಳು ಖಾಲಿ ಇದ್ದವು. ಖಂಭಲಿಯಾದ ಜನರು ಸಮಾವೇಶಕ್ಕೆ ಹೋಗಿಲ್ಲ. ಆದರೆ, ಇಂದು ಸಾವಿರಾರು ಜನರು ಬಂದಿದ್ದಾರೆ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

'ಬಿಜೆಪಿ ಮತ್ತು ಕಾಂಗ್ರೆಸ್ ನಡುವಣ ಸಂಬಂಧ ಹೇಗಿದೆ ಎಂದರೆ, ಮದುವೆಗೆ ಮುನ್ನ ರಹಸ್ಯವಾಗಿ ಭೇಟಿಯಾಗುವ ಹುಡುಗ–ಹುಡುಗಿ ರೀತಿ. ಕೇಳಿದರೆ, ತಮ್ಮ ನಡುವೆ ಸ್ನೇಹದ ಹೊರತು ಬೇರೇನೂ ಇಲ್ಲ ಎನ್ನುತ್ತಾರೆ. ಹಾಗೆಯೇ ಇವರನ್ನು (ಬಿಜೆಪಿ–ಕಾಂಗ್ರೆಸ್) ಕೇಳಿದರೂ ತಮ್ಮ ನಡುವೆ ಸ್ನೇಹ ಬಿಟ್ಟು ಬೇರೇನೂ ಇಲ್ಲ ಎನ್ನುತ್ತಾರೆ. ಇದೆಲ್ಲ ಸಾಕು. ನಿಮ್ಮ ರಹಸ್ಯ ಬಯಲಾಗಿದೆ. ನೀವು ಮದುವೆ ಆಗಿ ಎಂದು ನಾನು ಹೇಳುತ್ತಿದ್ದೇನೆ' ಎಂದು ಕೇಜ್ರಿವಾಲ್ ವಿವರಿಸಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

'ಬ್ಯಾನರ್ ಪಕ್ಷ ಎಎಪಿ ಗೆಲ್ಲದು'

ಅಹಮದಾಬಾದ್ (ಪಿಟಿಐ): ಎಎಪಿ ಬ್ಯಾನರ್ ಅನ್ನು ಅವಲಂಬಿಸಿರುವ ಪಕ್ಷ. ಹಾಗಾಗಿ, ಆ ಪಕ್ಷವು ಗೆಲ್ಲುವ ಸಾಧ್ಯತೆಯೇ ಇಲ್ಲ. ಆದರೆ, ಬಿಜೆಪಿ ಕಾರ್ಯಕರ್ತರನ್ನು ಅವಲಂಬಿಸಿರುವ ಪಕ್ಷ. ಚುನಾವಣೆ ಮುಗಿದ ಕೂಡಲೇ ಎಎಪಿ ಮುಖಂಡರು ರಾಜ್ಯ ಬಿಟ್ಟು ಹೋಗಲಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಂಚಮಹಲ್ ಜಿಲ್ಲೆಯ ಶೆಹ್ರಾ ಎಂಬಲ್ಲಿ ಚುನಾವಣಾ ಪ್ರಚಾರ ಭಾಷಣದಲ್ಲಿ ಹೇಳಿದ್ದಾರೆ.

ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಗೋವಾದಲ್ಲಿ ಎಎಪಿ ತೀರಾ ಇತ್ತೀಚೆಗೆ ಸೋತಿದೆ. ಹಿಮಾಚಲ ಪ್ರದೇಶದ ಎಲ್ಲ 67 ಕ್ಷೇತ್ರಗಳಲ್ಲಿ ಎಎಪಿ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳಲಿದ್ದಾರೆ. ಗುಜರಾತ್‌ನಲ್ಲಿಯೂ ಹಾಗೆಯೇ ಆಗಲಿದೆ ಎಂದು ನಡ್ಡಾ ಅಭಿಪ್ರಾಯಪಟ್ಟಿದ್ದಾರೆ.

'ಚುನಾವಣೆ ಸಂದರ್ಭದಲ್ಲಿ ಬ್ಯಾನರ್ ಕಟ್ಟುವ ಕೆಲಸವನ್ನಷ್ಟೇ ಮಾಡುವುದರಿಂದ ಗೆಲ್ಲಲು ಸಾಧ್ಯವೇ? ಬಿಜೆಪಿ ಕಾರ್ಯಕರ್ತರನ್ನು ಆಧಾರಿಸಿರುವ ಪಕ್ಷವಾಗಿದ್ದು, ಜನರಿಗೆ ಸೇವೆ ಒದಗಿಸುತ್ತದೆ' ಎಂದು ನಡ್ಡಾ ಹೇಳಿದರು.

ಕಾಂಗ್ರೆಸ್ ಪಕ್ಷವು ಬಡವರಿಗಾಗಿ ಮೊಸಳೆ ಕಣ್ಣೀರು ಹರಿಸುತ್ತಿದೆ. ಆದರೆ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಬಡವರು ಮತ್ತು ಹಿಂದುಳಿದ ವರ್ಗಗಳ ಜನರ ಸ್ಥಿತಿಯನ್ನು ಬದಲಾಯಿಸಿತು ಎಂದು ನಡ್ಡಾ ಹೇಳಿಕೊಂಡಿದ್ದಾರೆ.

ಆದಿವಾಸಿ ಮಹಿಳೆ ರಾಷ್ಟ್ರಪತಿ ಆಗುವಂತೆ ನೋಡಿಕೊಂಡವರು ಮೋದಿ ಅವರು. ಹಿಂದುಳಿದ ವರ್ಗಗಳ ಜತೆಗೆ ಕಾಂಗ್ರೆಸ್ ರಾಜಕೀಯ ಮಾತ್ರ ಮಾಡಿದೆ. ಹಲವು ಆಯೋಗಗಳನ್ನು ರಚಿಸಿದ್ದರೂ ಏನೂ ಆಗಿಲ್ಲ. ಆದರೆ, ಮೋದಿ ಅವರು ರಾಷ್ಟ್ರೀಯ ಒಬಿಸಿ ಆಯೋಗ ರಚಿಸಿದ್ದಾರೆ ಎಂದು ನಡ್ಡಾ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

- ಸರ್ದಾರ್ ಪಟೇಲ್ ಅವರನ್ನು ಸದಾ ಅಪಮಾನಿಸುವ ಕಾಂಗ್ರೆಸ್, ಗುಜರಾತ್ ಚುನಾವಣೆ ಬಂದಾಗ ಅವರನ್ನು ಹೊಗಳುತ್ತಿದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಗುಜರಾತ್‌ನ ಖಂಬಾತ್‌ನಲ್ಲಿ ಬಿಜೆಪಿ ಚುನಾವಣಾ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ನನ್ನ ಬಾಲ್ಯದ ದಿನಗಳಿಂದಲೂ, ಯಾವೊಬ್ಬ ಕಾಂಗ್ರೆಸ್ ಮುಖಂಡರೂ ಪಟೇಲ್ ಅವರ ಬಗ್ಗೆ ಮಾತನಾಡಿದ್ದನ್ನು ನೋಡಿಲ್ಲ' ಎಂದಿದ್ದಾರೆ
- ಕಾಂಗ್ರೆಸ್‌ನಲ್ಲಿ ಟಿಕೆಟ್ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದ ಮಾಜಿ ಶಾಸಕ ಕಮಿನಿಬಾ ರಾಥೋಡ್ ಅವರು ಮಂಗಳವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದು, ಬಿಜೆಪಿ ಸೇರ್ಪಡೆಯಾಗಿದ್ದಾರೆ

ವಿರಮ್‌ಗಾಮ್: ಹಾರ್ದಿಕ್ ಪಟೇಲ್‌ಗೆ ಸುಲಭದ ತುತ್ತಲ್ಲ

ವಿರಮ್‌ಗಾಮ್ (ಗುಜರಾತ್) (ಪಿಟಿಐ): ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ವಿರಮ್‌ಗಾಮ್ ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್‌ನಿಂದ ಕಿತ್ತುಕೊಳ್ಳುವ ಲೆಕ್ಕಾಚಾರ ಹಾಕಿಕೊಂಡಿರುವ ಬಿಜೆಪಿ, ಪಕ್ಷಕ್ಕೆ ಇತ್ತೀಚೆಗೆ ಸೇರ್ಪಡೆಯಾಗಿರುವ ಪಾಟೀದಾರ್ ಸಮುದಾಯದ ಯುವ ನಾಯಕ ಹಾರ್ದಿಕ್ ಪಟೇಲ್ ಅವರನ್ನು ಈ ಬಾರಿ ಕಣಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಅಚ್ಚರಿಯ ಫಲಿತಾಂಶಕ್ಕೆ ಕಾರಣವಾಗಿದ್ದ ಈ ಕ್ಷೇತ್ರವನ್ನು ವಿವಿಧ ಜಾತಿ, ಸಮುದಾಯಗಳ ನಾಯಕರು ಈವರೆಗೆ ಪ್ರತಿನಿಧಿಸಿದ್ದಾರೆ. ಇದು ಜಾತಿ ರಾಜಕಾರಣಕ್ಕೆ ಹೊರತಾದ ಕ್ಷೇತ್ರ ಎಂದು ಪರಿಗಣಿತವಾಗಿದೆ.

ಅಹಮದಾಬಾದ್‌ನ ವಿರಮ್‌ಗಾಮ್ ಪಟ್ಟಣದಲ್ಲಿ ಹುಟ್ಟಿ ಬೆಳೆದ ಹಾರ್ದಿಕ್ ಅವರಿಗೆ ಇದು ಚೊಚ್ಚಲ ಚುನಾವಣೆಯಾಗಿದ್ದು, ಕಾಂಗ್ರೆಸ್‌ನ ಶಾಸಕ ಲಖಾಭಾಯ್ ಭಾರವಾಡ್ ಅವರ ವಿರುದ್ಧ ಸೆಣಸುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ತೇಜಶ್ರೀ ಪಟೇಲ್ ಅವರು 6,500 ಮತಗಳ ಅಂತರದಿಂದ ಲಖಾಭಾಯಿ ವಿರುದ್ಧ ಪರಾಭವಗೊಂಡಿದ್ದರು. ಈ ಕ್ಷೇತ್ರವು ಕಳೆದ 10 ವರ್ಷಗಳಿಂದ ಕಾಂಗ್ರೆಸ್ ಹಿಡಿತದಲ್ಲಿದೆ.

ಅಚ್ಚರಿಯೆಂದರೆ, 2012ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ತೇಜಶ್ರೀ ಪಟೇಲ್ ಅವರು, ಬಿಜೆಪಿ ಅಭ್ಯರ್ಥಿ ಪ್ರಗಜಿ ಪಟೇಲ್ ವಿರುದ್ಧ 16 ಸಾವಿರ ಮತಗಳ ಅಂತರದಿಂದ ಗೆದ್ದಿದ್ದರು. ಶಾಸಕಿಯಾಗಿದ್ದ 10 ವರ್ಷಗಳ ಕಾಲವೂ ಬಿಜೆಪಿಯನ್ನು ಟೀಕಿಸುತ್ತಿದ್ದ ತೇಜಶ್ರೀ ಅವರು 2017ರಲ್ಲಿ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಿದ್ದರು.

ಜಾತಿ ಲೆಕ್ಕಾಚಾರ	
65,000	ಠಾಕೂರ್ ಸಮುದಾಯ
50,000	ಪಾಟೀದಾರ್ ಸಮುದಾಯ
35,000	ದಲಿತ ಮತದಾರರು
20,000	ಭಾರವಾಡ್ ಮತ್ತು ರಾಬಡಿ ಸಮುದಾಯ
20,000	ಮುಸ್ಲಿಂ ಸಮುದಾಯ
18,000	ಕೋಲಿ
10,000	ಕರಾಡಿಯಾ ರಜಪೂತ್ (ಒಬಿಸಿ)
3 ಲಕ್ಷ	ಒಟ್ಟು ಮತದಾರರು

ಆದರೆ, ಅವರನ್ನು ಒಪ್ಪದ ಜನರು, ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಒಬಿಸಿ ಸಮುದಾಯದ ಲಖಾಭಾಯ್ ಅವರಿಗೆ ಮಣೆ ಹಾಕಿದ್ದರು.

ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆಯಿದೆ ಎಂದು ಕೆಲವು ಮತದಾರರು ಹೇಳಿದ್ದರೆ, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸಿರುವ ಲಖಾಭಾಯಿ ಅವರನ್ನು ಸೋಲಿಸುವುದು ಹಾರ್ದಿಕ್‌ಗೆ ಸುಲಭವಲ್ಲ ಎಂದು ಇನ್ನೂ ಕೆಲವರು ಅಭಿಪ್ರಾಯಪಡುತ್ತಾರೆ.

ಈವರೆಗೆ ಪಾಟೀದಾರ್, ಮುಸ್ಲಿಂ, ಕರಾಡಿಯಾ ರಜಪೂತ್ ಹಾಗೂ ಒಬಿಸಿ ಸಮುದಾಯದ ಅಭ್ಯರ್ಥಿಗಳು ಇಲ್ಲಿ ಗೆದ್ದಿದ್ದಾರೆ. 'ವಿರಮ್‌ಗಾಮ್ ಕ್ಷೇತ್ರದ ಜನರು ಜಾತಿ ನೋಡಿಕೊಂಡು ಎಂದು ಮತ ಹಾಕಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ' ಎಂದು ಶಾಸಕ ಲಖಾಭಾಯ್ ಹೇಳಿದ್ದಾರೆ.

ದೀರ್ಘಕಾಲದ ಬೇಡಿಕೆಯಾದ ವಿರಮ್‌ಗಾಮ್‌ಗೆ ಜಿಲ್ಲೆಯ ಸ್ಥಾನಮಾನ ಕೊಡಿಸುವುದು ತಮ್ಮ ಆದ್ಯತೆ ಎಂದು ಹಾರ್ದಿಕ್ ಪ್ರಕಟಿಸಿರುವುದಕ್ಕೆ, ಗ್ರಾಮೀಣ ಭಾಗದ ಜನರು ಧನ್ಯವಾದ ಹೇಳಿದ್ದಾರೆ. 4 ಪುಟಗಳ ಭರವಸೆಯ ಪತ್ರದಲ್ಲಿ ಎಲ್ಲಿಯೂ 'ಪಾಟೀದಾರ್' ಪದದ ಉಲ್ಲೇಖವಿಲ್ಲ.

49 ತಾಲ್ಲೂಕು: ಅಂತರ್ಜಲ ಪಾತಾಳಕ್ಕೆ

ಅಂತರ್ಜಲ ಕೊಳ್ಳೆ ಹೆಚ್ಚಳ: ಕೇಂದ್ರ ಜಲಶಕ್ತಿ ಸಚಿವಾಲಯದ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಜನರು ಕಳೆದ ಐದು ವರ್ಷಗಳಲ್ಲಿ ಅತಿವೃಷ್ಟಿಯಿಂದ ಬಸವಳಿದ ಬಳಿಕವೂ ರಾಜ್ಯದ 49 ತಾಲ್ಲೂಕುಗಳಲ್ಲಿ ಅಂತರ್ಜಲ ಪಾತಾಳಕ್ಕೆ ಇಳಿದಿದೆ.

ಕೇಂದ್ರ ಜಲಶಕ್ತಿ ಸಚಿವಾಲಯವು ಕೇಂದ್ರ ಅಂತರ್ಜಲ ಮಂಡಳಿಯ ಸಹಕಾರದಿಂದ ಸಿದ್ಧಪಡಿಸಿರುವ 'ದೇಶದ ಅಂತರ್ಜಲ ಸ್ಥಿತಿಗತಿ–2020' ಕುರಿತ ವರದಿಯನ್ನು ಕಳೆದ ವಾರ ಬಿಡುಗಡೆ ಮಾಡಿದೆ.

ಕರ್ನಾಟಕ ರಾಜ್ಯದಲ್ಲಿ 2020ಕ್ಕೆ ಹೋಲಿಸಿದರೆ 2022ರಲ್ಲಿ ಅಂತರ್ಜಲ ಹೊರ ತೆಗೆಯುವಿಕೆ ಹೆಚ್ಚಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

2020ರ ವರದಿಯ ಪ್ರಕಾರ, ರಾಜ್ಯದಲ್ಲಿ ವಾರ್ಷಿಕ ಅಂತರ್ಜಲ ಹೊರ ತೆಗೆಯುವಿಕೆ ಪ್ರಮಾಣ 10.63 ಶತಕೋಟಿ ಘನಮೀಟರ್ (ಶೇ 64.85) ಇತ್ತು. 2022ರಲ್ಲಿ 11.22 ಶತಕೋಟಿ ಘನಮೀಟರ್‌ಗೆ (ಶೇ 69.93) ಏರಿಕೆಯಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆ ಗಳಲ್ಲಿ ವ್ಯಾಪಕ ಪ್ರಮಾಣದಲ್ಲಿ ಅಂತರ್ಜಲಕ್ಕೆ ಕನ್ನ ಹಾಕಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

2020ರ ವರದಿಯಲ್ಲಿ 52 ತಾಲ್ಲೂಕುಗಳನ್ನು ಅಂತರ್ಜಲ ಅತಿ ಬಳಕೆಯ ತಾಲ್ಲೂಕುಗಳೆಂದು ಗುರುತಿಸಲಾಗಿತ್ತು. ಈ ವರ್ಷ ಆ ತಾಲ್ಲೂಕುಗಳ ಸಂಖ್ಯೆ 49ಕ್ಕೆ ಇಳಿದಿದೆ. ಇದು ಉತ್ತಮ ಬೆಳವಣಿಗೆ ಎಂದೂ ವರದಿಯಲ್ಲಿ ಹೇಳಲಾಗಿದೆ. ರಾಜ್ಯದ 234 ತಾಲ್ಲೂಕುಗಳ ಸ್ಥಿತಿಗತಿಯನ್ನು ಅಧ್ಯಯನ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ.

ಶೇ 20.94 (49 ತಾಲ್ಲೂಕುಗಳು) ಪ್ರದೇಶದಲ್ಲಿ ಅಂತರ್ಜಲದ ಅತಿ ಬಳಕೆ ಆಗಿದೆ. 11 ತಾಲ್ಲೂಕುಗಳ (ಶೇ 4.70) ಸ್ಥಿತಿ ಗಂಭೀರವಾಗಿದೆ. 35 ತಾಲ್ಲೂಕುಗಳ (ಶೇ 14.96) ಸ್ಥಿತಿ ಅಲ್ಪಪ್ರಮಾಣದಲ್ಲಿ ಗಂಭೀರ ವಾಗಿದೆ. 139 ತಾಲ್ಲೂಕುಗಳಲ್ಲಿ (ಶೇ 59.40) ಅಂತರ್ಜಲದ ಅತಿ ಬಳಕೆ ಆಗಿಲ್ಲ.

ರಾಜ್ಯದಲ್ಲಿ ಅಂತರ್ಜಲ ಮರುಪೂರಣಕ್ಕೆ ಯೋಗ್ಯವಾದ ಪ್ರದೇಶ 1,70,647 ಚದರ ಕಿ.ಮೀ. ಇದೆ. ಅದರಲ್ಲಿ 39,352 ಚದರ ಕಿ.ಮೀಯಲ್ಲಿ ಅಂತರ್ಜಲದ ಅತಿ ಬಳಕೆ ಮಾಡಲಾಗಿದೆ.

ದೇಶದಲ್ಲಿ ಅಂತರ್ಜಲ ಹೊರ ತೆಗೆಯುವಿಕೆ ಪ್ರಮಾಣವು ಶೇ 60.08ರಷ್ಟು ಇದೆ. ಹರಿಯಾಣ, ಪಂಜಾಬ್, ರಾಜಸ್ಥಾನದಲ್ಲಿ ಈ ಪ್ರಮಾಣ ಶೇ 100ಕ್ಕಿಂತ ಹೆಚ್ಚು ಇದೆ. ಅಂದರೆ, ವಾರ್ಷಿಕ ಅಂತರ್ಜಲ ಮರುಪೂರಣಕ್ಕಿಂತ ಹೊರ ತೆಗೆಯುವ ಪ್ರಮಾಣ ಹೆಚ್ಚು. ಕರ್ನಾಟಕ, ದೆಹಲಿ, ಉತ್ತರ ಪ್ರದೇಶ, ತಮಿಳು ನಾಡು ರಾಜ್ಯಗಳಲ್ಲಿ ಈ ಪ್ರಮಾಣ ಶೇ 60ರಿಂದ 100ರ ನಡುವೆ ಇದೆ. ಉಳಿದ ರಾಜ್ಯಗಳಲ್ಲಿ ಈ ಪ್ರಮಾಣ ಶೇ 60ಕ್ಕಿಂತ ಕಡಿಮೆ ಇದೆ ಎಂದೂ ವರದಿ ತಿಳಿಸಿದೆ.

ಅಂತರ್ಜಲ ಮರುಪೂರಣ ಪ್ರಮಾಣ (ಶತಕೋಟಿ ಘನಮೀಟರ್‌ಗಳಲ್ಲಿ)



17.74 ರಾಜ್ಯದಲ್ಲಿ ವಾರ್ಷಿಕ ಮರು ಪೂರಣ
8.83 ಮುಂಗಾರುವಿನಲ್ಲಿ ಮಳೆಯಿಂದ
4.29 ಮುಂಗಾರುವಿನಲ್ಲಿ ಇತರ ಮೂಲದಿಂದ
1.19 ಇತರ ಋತುಗಳಲ್ಲಿ ಮಳೆಯಿಂದ
3.43 ಇತರ ಋತುಗಳಲ್ಲಿ ಬೇರೆ ಮೂಲದಿಂದ

11.22 ವಾರ್ಷಿಕವಾಗಿ ಅಂತರ್ಜಲ ಹೊರ ತೆಗೆಯುತ್ತಿರುವುದು
10.01 ನೀರಾವರಿ ಉದ್ದೇಶಕ್ಕೆ ಬಳಕೆ
0.13 ಕೈಗಾರಿಕಾ ಉದ್ದೇಶಕ್ಕೆ ಬಳಕೆ
1.09 ಗೃಹ ಬಳಕೆಗೆ

ಅಂತರ್ಜಲ ಅತಿ ಬಳಕೆಯ ತಾಲ್ಲೂಕುಗಳು

ಜಿಲ್ಲೆ	ತಾಲ್ಲೂಕು
ಬಾಗಲಕೋಟೆ	2
ಬೆಳಗಾವಿ	1
ಬೆಂಗಳೂರು ಗ್ರಾಮಾಂತರ	4
ಬೆಂಗಳೂರು ನಗರ	6
ಚಾಮರಾಜನಗರ	2
ಚಿಕ್ಕಬಳ್ಳಾಪುರ	6
ಚಿಕ್ಕಮಗಳೂರು	2
ಚಿತ್ರದುರ್ಗ	5
ದಾವಣಗೆರೆ	2
ಗದಗ	2
ಹಾಸನ	1
ಕೋಲಾರ	6
ರಾಮನಗರ	2
ತುಮಕೂರು	5
ವಿಜಯನಗರ	3
ಒಟ್ಟು	49



ಅಂತರ್ಜಲ ಅತಿ ಬಳಕೆ

ಜಿಲ್ಲೆ	ಶೇ
ಕೋಲಾರ	181
ಬೆಂಗಳೂರು ನಗರ	150
ಬೆಂಗಳೂರು ಗ್ರಾಮಾಂತರ	147
ಚಿಕ್ಕಬಳ್ಳಾಪುರ	146
ಚಿತ್ರದುರ್ಗ	140
ಚಾಮರಾಜನಗರ	105
ಅತಿ ಕಡಿಮೆ ಬಳಕೆ	
ಉತ್ತರ ಕನ್ನಡ	32.69
ಬಳ್ಳಾರಿ	32.94
ಉಡುಪಿ	35.05
ಕೊಡಗು	36.12
ಕಲಬುರ್ಗಿ	41.59
ಶಿವಮೊಗ್ಗ	42.88
ಯಾದಗಿರಿ	42.98

ಪರಿಷ್ಕರಣೆ ನೆಪದಲ್ಲಿ 1.40 ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ: ನೀರಲಕೇರಿ

ಹುಬ್ಬಳ್ಳಿ: 'ಬೆಂಗಳೂರು ಮಾದರಿಯಲ್ಲಿ ಧಾರವಾಡ ಜಿಲ್ಲೆಯಲ್ಲೂ ಖಾಸಗಿಯವರಿಂದ ಮತದಾರರ ವೈಯಕ್ತಿಕ ಮಾಹಿತಿ ಸಂಗ್ರಹಿಸಿ, ಸುಮಾರು 1.40 ಲಕ್ಷ ಮಂದಿಯ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಸದ್ಯ ಪ್ರಕಟವಾಗಿರುವ ಪಟ್ಟಿಯನ್ನು ಮರು ಪರಿಶೀಲನೆಗೆ ಒಳಪಡಿಸಬೇಕು. ಚುನಾವಣಾ ಆಯೋಗದ ಮೇಲ್ವಿಚಾರಣೆಯಲ್ಲಿ ಈ ಪ್ರಕ್ರಿಯೆ ನಡೆಯಬೇಕು' ಎಂದು ಕೆಪಿಸಿಸಿ ಮಾಧ್ಯಮ ವಕ್ತಾರ ಪಿ.ಎಚ್. ನೀರಲಕೇರಿ ಆಗ್ರಹಿಸಿದರು.

'ಜಿಲ್ಲೆಯ ಪಶ್ಚಿಮ ವಿಧಾನಸಭಾ ಕ್ಷೇತ್ರದಲ್ಲಿ 18 ಸಾವಿರ ಹಾಗೂ ಧಾರವಾಡ ಗ್ರಾಮೀಣ ಕ್ಷೇತ್ರದಲ್ಲಿ 65 ಮಂದಿಯ ಹೆಸರನ್ನು ಸಕಾರಣವಿಲ್ಲದೆ ಕೈಬಿಡಲಾಗಿದೆ. ಮಹಾನಗರ ಪಾಲಿಕೆಯ ಬಿಜೆಪಿ ಸದಸ್ಯರ ನೇತೃತ್ವದಲ್ಲಿ ಆ ಪಕ್ಷದ ಕಾರ್ಯಕರ್ತರು ಮನೆಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಇದಕ್ಕಾಗಿ, ವೋಟರ್ ಇಂಟರ‍್ಯಾಕ್ಷನ್ ಆ್ಯಂಡ್ ಪ್ರೊಫೈಲಿಂಗ್ ಎಂಬ ಆ್ಯಪ್ ಬಳಸಲಾಗುತ್ತಿದೆ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಕ್ಷೇತ್ರದಲ್ಲಿ ಹೊರರಾಜ್ಯಗಳ 23 ಸಾವಿರ ಮತದಾರರಿದ್ದರು. ಈ ಸಲದ ಪಟ್ಟಿಯಲ್ಲೂ ಅವರ ಹೆಸರಿದೆ. ಇದೇ ರೀತಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ತಮಗೆ ಬೇಕಾದವರನ್ನು ಪಟ್ಟಿಗೆ ಸೇರಿಸುವ, ಬೇಡದವರನ್ನು ಕೈಬಿಡುವ ಕೆಲಸವನ್ನು ಖಾಸಗಿ ಏಜೆಂಟ್‌ಗಳ ಮೂಲಕ ಮಾಡಲಾಗುತ್ತಿದೆ. ಇದೆಲ್ಲದರ ಹಿಂದೆ ಬಿಜೆಪಿಯ ಐ.ಟಿ ಸೆಲ್ ಕೆಲಸ ಮಾಡುತ್ತಿದೆ. ಚುನಾವಣೆಯಲ್ಲಿ ಸೋಲಿನ ಭಯದಿಂದಾಗಿ ಬಿಜೆಪಿ ಈ ಕೃತ್ಯಕ್ಕೆ ಇಳಿದಿದೆ' ಎಂದು ದೂರಿದರು.

ಭದ್ರಾವತಿ: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ– ಶಿಕ್ಷಕನ ಬಂಧನ

ಪ್ರಜಾವಾಣಿ ವಾರ್ತೆ

ಭದ್ರಾವತಿ: ಶಾಲೆಯ 9 ವರ್ಷದ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಶಿಕ್ಷಕನನ್ನು ಬಂಧಿಸ ಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇಲ್ಲಿನ ಖಲಂದರ್ ನಗರದ ಅಕ್ಬರ್ ಬಂಧಿತ ಶಿಕ್ಷಕ. ಆತನನ್ನು ಶಿವಮೊಗ್ಗದ ಪೋಕ್ಸೊ ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಲಾಯಿತು.

ಸಮೀಪದ ಗ್ರಾಮ ವೊಂದರ ಸರ್ಕಾರಿ ಪ್ರಾಥಮಿಕ ಉರ್ದು ಶಾಲೆಯ ಶಿಕ್ಷಕ ಅದೇ ಶಾಲೆಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಭದ್ರಾವತಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸಿಟ್ಟಿನ ಭರದಲ್ಲಿ ಕೊಂದೆ: ಆಫ್ತಾಬ್

ನವದೆಹಲಿ (ಪಿಟಿಐ): ಶ್ರದ್ಧಾ ವಾಲಕರ್ ಹತ್ಯೆ ಆರೋಪ ಎದುರಿಸುತ್ತಿರುವ ಆಫ್ತಾಬ್ ಅಮೀನ್ ಪೂನಾವಾಲಾ ಮಂಗಳವಾರ ದೆಹಲಿ ನ್ಯಾಯಾಲಯಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹೇಳಿಕೆ ನೀಡಿದ್ದು, 'ಸಿಟ್ಟಿನ ಭರದಲ್ಲಿ ಅಪರಾಧ ಎಸಗಿದೆ' ಎಂದು ಹೇಳಿದ್ದಾನೆ.

ಆದರೆ, ವಿಡಿಯೊ ಮೂಲಕ ಹೇಳಿರುವ ಈ ತಪ್ಪೊಪ್ಪಿಗೆ ನ್ಯಾಯಾಲಯದಲ್ಲಿ ಮಾನ್ಯವಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿದ್ದಾರೆ. ಆಫ್ತಾಬ್‌ನ ಕಸ್ಟಡಿ ಅವಧಿಯನ್ನು 4 ದಿನ ವಿಸ್ತರಿಸಿದ ನ್ಯಾಯಾಧೀಶರು, ಸುಳ್ಳುಪತ್ತೆ ಪರೀಕ್ಷೆಗೆ ಅನುಮತಿ ನೀಡಿದರು.

ಅಸ್ಸಾಂ–ಮೇಘಾಲಯ ಗಡಿಯಲ್ಲಿ ಘರ್ಷಣೆ: 6 ಸಾವು

ಗುವಾಹಟಿ/ಶಿಲ್ಲಾಂಗ್ (ಪಿಟಿಐ): ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ವಿವಾದಿತ ಗಡಿ ಪ್ರದೇಶದಲ್ಲಿ ಮಂಗಳವಾರ ಮುಂಜಾನೆ ಪೊಲೀಸರು, ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ನಾಗರಿಕರ ನಡುವೆ ನಡೆದ ಘರ್ಷಣೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಸೇರಿ ಒಟ್ಟು 6 ಮಂದಿ ಮೃತಪಟ್ಟಿದ್ದಾರೆ.

'ಮೇಘಾಲಯದ ಪಶ್ಚಿಮ ಜೈಂತಿಯಾ ಹಿಲ್ಸ್ ಜಿಲ್ಲೆಗೆ ಮರದ ದಿಮ್ಮಿಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಟ್ರಕ್ ಅನ್ನು ಅರಣ್ಯ ಇಲಾಖೆ ಸಿಬ್ಬಂದಿ ಮುಖ್ರು ಪ್ರದೇಶದಲ್ಲಿ ತಡೆದು ತಪಾಸಣೆ ನಡೆಸಲು ಮುಂದಾಗಿದ್ದರು. ಈ ವೇಳೆ ಚಾಲಕ ಟ್ರಕ್ ಅನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಲು ಪ್ರಯತ್ನಿಸಿದ್ದ. ಆಗ ಸಿಬ್ಬಂದಿ, ಟ್ರಕ್‌ನ ಟಯರಿಗೆ ಗುಂಡು ಹಾರಿಸಿದ್ದರು. ಟ್ರಕ್‌ನಲ್ಲಿದ್ದವರ ಪೈಕಿ ಮೂವರನ್ನು ವಶಕ್ಕೆ ಪಡೆದಿದ್ದರು' ಎಂದು ಅಸ್ಸಾಂನ ಪಶ್ಚಿಮ ಕಾರ್ಬಿ ಆ್ಯಂಗ್‌ಲಾಂಗ್ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಇಮದಾದ್ ಅಲಿ ಹೇಳಿದ್ದಾರೆ.

'ಅರಣ್ಯ ಇಲಾಖೆ ಸಿಬ್ಬಂದಿ ಖಿರಿಕೆಂಡಿಂಗ್ ಪೊಲೀಸ್ ಠಾಣೆಗೆ ಕರೆ ಮಾಡಿ ಘಟನೆ ಕುರಿತು ಮಾಹಿತಿ ನೀಡಿದ್ದರಿಂದ ಪೊಲೀಸರು ಸ್ಥಳಕ್ಕೆ ಹೋಗಿದ್ದರು. ಬೆಳಿಗ್ಗೆ 5 ಗಂಟೆ ಸುಮಾರಿಗೆ ಮೇಘಾಲಯದ ನಾಗರಿಕರು ಗುಂಪು ಕಟ್ಟಿಕೊಂಡು ಸ್ಥಳಕ್ಕೆ ಬಂದಿದ್ದರು. ಕತ್ತಿ ಸೇರಿದಂತೆ ಕೆಲ ಮಾರಕಾಸ್ತ್ರಗಳು ಅವರ ಬಳಿ ಇದ್ದವು. ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಸುತ್ತುವರಿದ ಗುಂಪು, ವಶಕ್ಕೆ ಪಡೆದಿರುವವರ ಬಿಡುಗಡೆಗೆ ಒತ್ತಾಯಿಸಿತ್ತು. ಸಿಬ್ಬಂದಿ ಮೇಲೆ ಹಲ್ಲೆ ನಡೆಸಲೂ ಮುಂದಾಗಿತ್ತು. ಹೀಗಾಗಿ ಗುಂಡಿನ ದಾಳಿ ನಡೆಸಬೇಕಾಯಿತು' ಎಂದಿದ್ದಾರೆ.

ಘಟನೆ ಖಂಡಿಸಿ ಸರಣಿ ಟ್ವೀಟ್ ಮಾಡಿರುವ ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ, 'ಅಸ್ಸಾಂ ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ನಮ್ಮ ರಾಜ್ಯದೊಳಗೆ ಪ್ರವೇಶಿಸಿ ನಾಗರಿಕರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ' ಎಂದು ದೂರಿದ್ದಾರೆ. ಇದನ್ನು ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಅಸ್ಸಾಂ ಮುಖ್ಯಮಂತ್ರಿ ಹಿಮಾಂತ ಶರ್ಮಾ ಅವರಿಗೆ ಟ್ಯಾಗ್ ಮಾಡಿದ್ದಾರೆ.

'ನಮ್ಮ ಸರ್ಕಾರ ಘಟನೆಯನ್ನು ಖಂಡಿಸುತ್ತದೆ. ಈ ಅಮಾನವೀಯ ಕೃತ್ಯಕ್ಕೆ ಕಾರಣರಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ' ಎಂದು ಹೇಳಿದ್ದಾರೆ.

ಉಭಯ ರಾಜ್ಯಗಳ ನಡುವಣ 12 ಸ್ಥಳಗಳ ಪೈಕಿ 6 ಸ್ಥಳಗಳಲ್ಲಿನ ಗಡಿ ವಿವಾದ ಬಗೆಹರಿಸಿಕೊಳ್ಳುವ ಒಪ್ಪಂದಕ್ಕೆ ಸಚಿವ ಅಮಿತ್ ಶಾ ಸಮ್ಮುಖದಲ್ಲಿ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಈ ವರ್ಷದ ಮಾರ್ಚ್‌ನಲ್ಲಿ ಸಹಿ ಹಾಕಿದ್ದರು.

ಉದ್ಯೋಗ ಮೇಳ: ದೇಶದ 45 ಸ್ಥಳಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಭೌತಿಕವಾಗಿ ಹಸ್ತಾಂತರ

ಪ್ರಧಾನಿಯಿಂದ 71 ಸಾವಿರ ನೇಮಕಾತಿ ಪತ್ರ ವಿತರಣೆ

ನವದೆಹಲಿ (ಪಿಟಿಐ): ಸರ್ಕಾರದ 'ಉದ್ಯೋಗ ಮೇಳ' ಕಾರ್ಯಕ್ರಮದಡಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ 71,056 ಉದ್ಯೋಗಾಕಾಂಕ್ಷಿಗಳಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ನೇಮಕಾತಿ ಪತ್ರಗಳನ್ನು ವಿತರಿಸಿದರು.

ಮಾದರಿ ನೀತಿ ಸಂಹಿತೆ ಜಾರಿಯಿರುವ ಗುಜರಾತ್, ಹಿಮಾಚಲ ಪ್ರದೇಶ ಹೊರತುಪಡಿಸಿ ದೇಶದ ದೇಶದ 45 ಸ್ಥಳಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಭೌತಿಕವಾಗಿ ನೇಮಕಾತಿ ಆದೇಶ ಪತ್ರಗಳನ್ನು ನೀಡಲಾಯಿತು.

ಅಕ್ಟೋಬರ್‌ನಲ್ಲಿ 75 ಸಾವಿರ ಜನರಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಗಿತ್ತು. ಮುಂದಿನ ಒಂದೂವರೆ ವರ್ಷಗಳಲ್ಲಿ 10 ಲಕ್ಷ ಜನರಿಗೆ ಉದ್ಯೋಗಾವಕಾಶ ಒದಗಿಸಬೇಕು ಎಂದು ಪ್ರಧಾನಿ ಮೋದಿ ಅವರು ಕಳೆದ ಜೂನ್‌ನಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸೂಚಿಸಿದ್ದರು.

ದುಪ್ಪಟ್ಟು ಪ್ರಯೋಜನ: ಕೇಂದ್ರ ಸರ್ಕಾರ ನಡೆಸುತ್ತಿರುವ ಉದ್ಯೋಗ ಮೇಳಗಳ ಜತೆಗೆ ಎನ್‌ಡಿಎ ಆಡಳಿತವಿರುವ ರಾಜ್ಯಗಳಲ್ಲೂ ಉದ್ಯೋಗ ಮೇಳಗಳು ಜರುಗುತ್ತಿವೆ. ಇದು 'ಡಬಲ್ ಎಂಜಿನ್' ಸರ್ಕಾರಗಳಿಂದ ಅಲ್ಲಿನ ಜನರಿಗೆ ದೊರೆಯುತ್ತಿರುವ ದುಪ್ಪಟ್ಟು ಪ್ರಯೋಜನವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ತಿಂಗಳ ಹಿಂದೆಯಷ್ಟೇ ಮಹಾರಾಷ್ಟ್ರ, ಗುಜರಾತ್ ಸರ್ಕಾರಗಳು ಅಲ್ಲಿನ ಸಹಸ್ರಾರು ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿ ಪತ್ರ ನೀಡಿವೆ. ಕೆಲ ದಿನಗಳ ಹಿಂದೆಯಷ್ಟೇ ಉತ್ತರ ಪ್ರದೇಶ ಸರ್ಕಾರ ಈ ರೀತಿ ನೇಮಕಾತಿ ಪತ್ರಗಳನ್ನು ಯುವ ಸಮುದಾಯದವರಿಗೆ ವಿತರಿಸಿದೆ. ಜಮ್ಮು ಮತ್ತು ಕಾಶ್ಮೀರ, ಲಡಾಖ್, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ದಾದ್ರಾ ಮತ್ತು ನಗರ್ ಹವೇಲಿ, ದಾಮನ್ ಮತ್ತು ದಿಯು, ಚಂಡೀಗಡಗಳಲ್ಲೂ ಉದ್ಯೋಗ ಮೇಳಗಳು ಜರುಗಿವೆ ಎಂದು ಪ್ರಧಾನಿ ಮೋದಿ ಅವರು ಹೇಳಿದರು.

ಇದೇ 24ರಂದು ಗೋವಾ ಹಾಗೂ ಇದೇ 28ರಂದು ತ್ರಿಪುರಾದಲ್ಲಿ ಉದ್ಯೋಗ ಮೇಳಗಳು ನಡೆಯಲಿವೆ ಎಂದು ಅವರು ತಿಳಿಸಿದರು.

'ಕರ್ಮಯೋಗಿ ಪ್ರಾರಂಭ' ಮಾದರಿ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೊಸದಾಗಿ ನೇಮಕಗೊಂಡವರಿಗೆ ಆನ್‌ಲೈನ್ ಮೂಲಕ 'ಓರಿಯಂಟೇಷನ್ ಕೋರ್ಸ್'ಗಳನ್ನು ನಡೆಸುವ 'ಕರ್ಮಯೋಗಿ ಪ್ರಾರಂಭ' ಮಾದರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಚಾಲನೆ ನೀಡಿದರು.

ಸರ್ಕಾರಿ ಸಿಬ್ಬಂದಿಗಿರುವ ನೀತಿ ಸಂಹಿತೆ, ಕೆಲಸದ ಸ್ಥಳದಲ್ಲಿ ನೈತಿಕತೆ ಮತ್ತು ಸಮಗ್ರತೆ, ಮಾನವ ಸಂಪನ್ಮೂಲದ ನೀತಿ ಮತ್ತು ಇತರೆ ಪ್ರಯೋಜನಗಳು, ಭತ್ಯೆಗಳಿಗೆ ಸಂಬಂಧಿಸಿದ ಮಾಹಿತಿ ಈ ಕೋರ್ಸ್‌ನಲ್ಲಿ ದೊರೆಯಲಿದೆ. ಈ ಮೂಲಕ ಹೊಸ ಸಿಬ್ಬಂದಿಗೆ ಸೇವಾ ನಿಯಮಗಳನ್ನು ತಿಳಿದುಕೊಳ್ಳಲು ಮತ್ತು ಅದರಂತೆ ಕಾರ್ಯ ನಿರ್ವಹಿಸಲು ಉಪಯುಕ್ತವಾಗಲಿದೆ ಎಂದು ಪ್ರಧಾನಿ ಹೇಳಿದರು.

'ಮೇಕೆದಾಟು: ಕಾವೇರಿ ಪ್ರಾಧಿಕಾರಕ್ಕಿಲ್ಲ ಅಧಿಕಾರ'

ಒಂದನೇ ಪುಟದಿಂದ

ಪ್ರಮಾಣಪತ್ರದಲ್ಲಿ ಏನಿದೆ: 'ಕಾವೇರಿ ಕಣಿವೆಯಲ್ಲಿ ಸೀಮಿತ ಪ್ರಮಾಣದ ನೀರು ಲಭ್ಯ ಇರುವ ಕಾರಣಕ್ಕೆ ತಮಿಳುನಾಡು, ಕರ್ನಾಟಕ ರಾಜ್ಯಗಳ ಕೆಲವು ಯೋಜನೆಗಳಿಗೆ ನ್ಯಾಯಾಧಿಕರಣವು ಒಪ್ಪಿಗೆ ನೀಡಿರಲಿಲ್ಲ. ಈಗಿರುವ ಯೋಜನೆಗಳು, ಅನುಷ್ಠಾನ ಹಂತದಲ್ಲಿರುವ ಯೋಜನೆಗಳು ಹಾಗೂ ಪ್ರಸ್ತಾವಿತ ಯೋಜನೆಗಳನ್ನಷ್ಟೇ ಕೈಗೆತ್ತಿಕೊಳ್ಳಬಹುದು ಎಂದು ನಿರ್ದೇಶನ ನೀಡಿತ್ತು. ಇದರಲ್ಲಿ ಮೇಕೆದಾಟು ಯೋಜನೆಯ ಉಲ್ಲೇಖವೇ ಇರಲಿಲ್ಲ. ಆದರೆ, ಮೇಕೆದಾಟು ಸಮತೋಲನ ಜಲಾಶಯದಲ್ಲಿ 67.16 ಟಿಎಂಸಿ ಅಡಿಗಳಷ್ಟು ನೀರನ್ನು ಸಂಗ್ರಹಿಸಲಾಗುತ್ತದೆ ಎಂದು ಕರ್ನಾಟಕ ಸರ್ಕಾರದ ಸಮಗ್ರ ಯೋಜನಾ ವರದಿಯಲ್ಲಿದೆ. ಇದು ನ್ಯಾಯಾಧಿಕರಣದ ಅಂತಿಮ ಆದೇಶದ ಉಲ್ಲಂಘನೆ ಆಗುತ್ತದೆ' ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

'ಕೇಂದ್ರ ಸರ್ಕಾರವು ಪ್ರಾಧಿಕಾರವನ್ನು 2018ರ ಜೂನ್ 1ರಂದು ರಚಿಸಿತು. ಪ್ರಾಧಿಕಾರವು ಇಲ್ಲಿಯವರೆಗೆ 17 ಸಭೆಗಳನ್ನು ನಡೆಸಿದೆ. ಕಾವೇರಿ ನೀರು ನಿಯಂತ್ರಣ ಸಮಿತಿಯ (ಸಿಡಬ್ಲ್ಯುಆರ್‌ಸಿ) 70 ಸಭೆಗಳು ನಡೆದಿವೆ. ಕರ್ನಾಟಕ ಸರ್ಕಾರ ಕೈಗೆತ್ತಿಕೊಳ್ಳುತ್ತಿರುವ ಏತ ನೀರಾವರಿ ಹಾಗೂ ಸಣ್ಣ ನೀರಾವರಿ ಯೋಜನೆಗಳು, ಅಣೆಕಟ್ಟೆ ನಿರ್ಮಾಣಗಳ ಬಗ್ಗೆ ನಿಗಾ ವಹಿಸುವಂತೆ ತಮಿಳುನಾಡು ಸರ್ಕಾರವು ಪ್ರಾಧಿಕಾರದ ಮೊದಲ ಸಭೆಯಲ್ಲೇ (2018ರ ಜುಲೈ 2) ಮನವಿ ಮಾಡಿತ್ತು.

ಪ್ರಾಧಿಕಾರದ ಸಭೆಯಲ್ಲಿ ಆಗಿದ್ದೇನು?

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ 17ನೇ ಸಭೆ (ಸಿಡಬ್ಲ್ಯುಎಂಎ) ಅಕ್ಟೋಬರ್ 14ರಂದು ನಡೆದಿದೆ. ಈ ವೇಳೆ, ಕರ್ನಾಟಕ ರಾಜ್ಯದ ಪ್ರತಿನಿಧಿ, 'ಕರ್ನಾಟಕ ಸರ್ಕಾರ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲು ಯೋಜನೆ ರೂಪಿಸಿದೆ. ಪ್ರಾಧಿಕಾರಕ್ಕೆ ಕರ್ನಾಟಕ ಸರ್ಕಾರವು ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಸಲ್ಲಿಸಿದೆ.
ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ವಿಚಾರ ಹಲವು ಸಲ ಸೇರ್ಪಡೆಯಾಗಿದೆ. ಬಳಿಕ ಅದನ್ನು ಕೈಬಿಡಲಾಗಿದೆ. ಆದರೆ, ಈ ವರೆಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಆಗಿಲ್ಲ. 18ನೇ ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ವಿಷಯವನ್ನು ಸೇರ್ಪಡೆ ಮಾಡಬೇಕು' ಎಂದು ಮನವಿ ಮಾಡಿದ್ದರು. ಜಲಶಕ್ತಿ ಸಚಿವಾಲಯದ ಜಂಟಿ ಕಾರ್ಯದರ್ಶಿ, 'ಮೇಕೆದಾಟು ಯೋಜನೆ ಕುರಿತು ಪ್ರಾಧಿಕಾರ ಅಂತಿಮ ಅಭಿಪ್ರಾಯ ನೀಡುವ ವೇಳಾಪಟ್ಟಿಯನ್ನು ಕೂಡ ಸಿಡಬ್ಲ್ಯುಎಂಎ ನಿರ್ಧರಿಸಬೇಕು' ಎಂದು ಅಭಿಪ್ರಾಯಪಟ್ಟಿದ್ದರು. ಬಳಿಕ, ಪ್ರಾಧಿಕಾರದ 18ನೇ ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ವಿಷಯವನ್ನು ಸೇರ್ಪಡೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಇದು ಸಹ ತಮಿಳುನಾಡು ಆಕ್ಷೇಪಕ್ಕೆ ಕಾರಣ.

ಆದರೆ, ಕಾವೇರಿ ಕಣಿವೆಯಲ್ಲಿ 14 ಏತ ನೀರಾವರಿ ಯೋಜನೆಗಳು ಇವೆ ಎಂದು ಕರ್ನಾಟಕ ಸರ್ಕಾರವೇ ಹೇಳಿಕೊಂಡಿದೆ. ಏತ ನೀರಾವರಿ ಯೋಜನೆಗಳ ಮೂಲಕ 17.64 ಟಿಎಂಸಿ ಅಡಿ ನೀರನ್ನು ಬಳಸಿಕೊಂಡು 1.78 ಲಕ್ಷ ಎಕರೆಗೆ ನೀರುಣಿಸಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ. ಇದಕ್ಕೂ ಸಹ ನ್ಯಾಯಾಧಿಕರಣ ಒಪ್ಪಿಗೆ ನೀಡಿರಲಿಲ್ಲ. ಆದರೆ, ಇಂತಹ ಯೋಜನೆಗಳ ವಿರುದ್ಧ ನಾಲ್ಕೂವರೆ ವರ್ಷಗಳಲ್ಲಿ ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿಕಾರ ಯಾವುದೇ ಕ್ರಮ ಕ್ರಮ ಕೈಗೊಂಡಿಲ್ಲ' ಎಂದು ತಮಿಳುನಾಡು ಸರ್ಕಾರ ದೂರಿದೆ.

ತಮಿಳುನಾಡಿನಿಂದ 3 ಪತ್ರ: 'ಕಾವೇರಿ ಪ್ರಾಧಿಕಾರದ ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ವಿಷಯವನ್ನು ಸೇರ್ಪಡೆ ಮಾಡಬಾರದು ಎಂದು ಒತ್ತಾಯಿಸಿ ತಮಿಳುನಾಡಿನ ಜಲಸಂಪನ್ಮೂಲ ಸಚಿವರು ಕೇಂದ್ರ ಜಲಶಕ್ತಿ ಸಚಿವರಿಗೆ ಅಕ್ಟೋಬರ್ 29ರಂದು ಪತ್ರ ಬರೆದಿದ್ದಾರೆ. ತಮಿಳುನಾಡು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನವೆಂಬರ್ 2ರಂದು ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿಗೆ, ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಪ್ರಾಧಿಕಾರದ ಅಧ್ಯಕ್ಷರಿಗೆ ನವೆಂಬರ್ 2ರಂದು ಪತ್ರ ಬರೆದು ಗಮನ ಸೆಳೆದಿದ್ದಾರೆ. ಸುಪ್ರೀಂ ಕೋರ್ಟ್‌ನ ತೀರ್ಪು ಬರುವ ವರೆಗೆ ಪ್ರಾಧಿಕಾರವು ಯಾವುದೇ ಆತುರದ ತೀರ್ಮಾನ ಕೈಗೊಳ್ಳಬಾರದು' ಎಂದೂ ಹೇಳಿದೆ.





ವಿಕ್ರಂ-ಎಸ್ ಭಾರತೀಯ ಅಂತರಿಕ್ಷ ಕ್ಷೇತ್ರದಲ್ಲಿ ನೂತನ ಯುಗ

ಉಡಾವಣಾ ವೇದಿಕೆಯ ಮೇಲೆ ನಿಂತ ವಿಕ್ರಂ-ಎಸ್

ಚಿತ್ರಕೃಪೆ: 'ಸ್ಕೈರೂಟ್ ಏರೋಸ್ಪೇಸ್'

ಬಿ. ಆರ್. ಗುರುಪ್ರಸಾದ್

ಶ್ರೀಹರಿಕೋಟಾ. ಭಾರತದ ಆಗ್ನೇಯ ಕರಾವಳಿಯಲ್ಲಿರುವ ಈ ದ್ವೀಪದಿಂದ ನೂರಾರು ಉಪಗ್ರಹಗಳು ಹಾಗೂ ಚಂದ್ರ ಮತ್ತು ಮಂಗಳಗ್ರಹವನ್ನು ಗುರಿಯಾಗಿಟ್ಟುಕೊಂಡ ರೋಬಾಟ್ ನೌಕೆಗಳು ಭಾರತದ ದೈತ್ಯ ರಾಕೆಟ್ ವಾಹನಗಳಲ್ಲಿ ಈ ಮೊದಲು ಅಂತರಿಕ್ಷಕ್ಕೆ ತೆರಳಿವೆ.

ಆದರೆ ಈ ನವೆಂಬರ್ 18ರಂದು ಈ ದ್ವೀಪದಲ್ಲಿನ ಸತೀಶ್ ಧವನ್ ಅಂತರಿಕ್ಷ ಕೇಂದ್ರದಿಂದ ಜರುಗಲಿದ್ದ 'ವಿಕ್ರಂ-ಎಸ್' ಎಂಬ ಒಂದು ಪುಟ್ಟ ರಾಕೆಟ್‌ನ ಉಡಾವಣೆ ದೇಶದ ಹಾಗೂ ವಿದೇಶಿ ಮಾಧ್ಯಮಗಳ ಗಮನವನ್ನು ಸೆಳೆದಿತ್ತು. ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ 'ಇಸ್ರೊ' ನಿರ್ಮಿಸಿದ 'ಪಿ. ಎಸ್. ಎಲ್. ವಿ.' ಹಾಗೂ 'ಜಿ. ಎಸ್. ಎಲ್. ವಿ.' ರಾಕೆಟ್ಟುಗಳಂತೆ ಈ ಪುಟ್ಟ ರಾಕೆಟ್ ಹದಿನೈದು ಇಲ್ಲವೇ ಹದಿನೇಳು ಮಹಡಿಗಳಷ್ಟು ಎತ್ತರವಾಗಿರಲಿಲ್ಲ. 545 ಕಿಲೋಗ್ರಾಂ ತೂಕದ ವಿಕ್ರಂ-ಎಸ್ ರಾಕೆಟ್ ಸುಮಾರು ಇಪ್ಪತ್ತು ಅಡಿಗಳಷ್ಟು ಎತ್ತರವಿತ್ತಷ್ಟೆ. ಅಷ್ಟೇ ಸಾಲದೆಂಬಂತೆ ಇಸ್ರೊದ ಪಿ. ಎಸ್. ಎಲ್. ವಿ., ಜಿ. ಎಸ್. ಎಲ್. ವಿ.ಗಳಂತೆ ಅದು ಉಪಗ್ರಹಗಳನ್ನು ನೂರಾರು ಕಿಲೋಮೀಟರ್ ಎತ್ತರದ ಕಕ್ಷೆಗೆ ಹಾರಿಬಿಡುವ ಸಾಮರ್ಥ್ಯವನ್ನೂ ಹೊಂದಿರಲಿಲ್ಲ. ಬದಲಾಗಿ ತಾನು ಹೊತ್ತ 83 ಕಿಲೋಗ್ರಾಂ ತೂಕದ ಸಾಧನಗಳನ್ನು ಕೇವಲ 100 ಕಿಲೋಮೀಟರ್ ಎತ್ತರಕ್ಕೆ ಕೊಂಡೊಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿತ್ತಷ್ಟೆ. ಹಾಗಿದ್ದಲ್ಲಿ ಈ ಪುಟ್ಟ ರಾಕೆಟ್‌ನ ಉಡಾವಣೆಗೇಕೆ ಇಷ್ಟು ಪ್ರಾಮುಖ್ಯ?

ಅದಕ್ಕೆ ಬಲವಾದ ಕಾರಣವಿದೆ. ವಿಕ್ರಂ-ಎಸ್ ಭಾರತದ ಖಾಸಗಿ ವಲಯದಲ್ಲಿ ನಿರ್ಮಿಸಲ್ಪಟ್ಟು, 'ಇಸ್ರೊ'ದ ನೆಲೆಯಿಂದ ಉಡಾವಣೆಯಾಗಲಿದ್ದ ಮೊದಲ ರಾಕೆಟ್ಟು. ಇದನ್ನು ನಿರ್ಮಿಸಿದ ಖಾಸಗಿ ಸಂಸ್ಥೆ ಹೈದರಾಬಾದಿನ 'ಸ್ಕೈರೂಟ್ ಏರೋಸ್ಪೇಸ್'. ಇದು ಒಂದು 'ಸ್ಟಾರ್ಟ್ ಅಪ್' ಸಂಸ್ಥೆ, ಅಂದರೆ ತನ್ನ ಕಾರ್ಯನಿರ್ವಹಣೆಯ ಮೊದಲ ಹಂತದಲ್ಲಿರುವ ಒಂದು ಪುಟ್ಟ ಖಾಸಗಿ ಸಂಸ್ಥೆ. ಇಂತಹ ಸಂಸ್ಥೆಗಳನ್ನು ಒಬ್ಬರೋ, ಇಬ್ಬರೋ ಇಲ್ಲವೇ ಬೆರಳೆಣಿಕೆಯಷ್ಟು ಸಂಖ್ಯೆಯ ಉತ್ಸಾಹಿ ಉದ್ಯಮಿಗಳೋ ಸ್ಥಾಪಿಸುತ್ತಾರೆ. ಯಾವುದೋ ಒಂದು ಹೊಸ ಸಾಧನವನ್ನು ನಿರ್ಮಿಸುವುದನ್ನು ಅಥವಾ ಹೊಸ ಸೇವೆಯನ್ನು ಒದಗಿಸುವುದನ್ನು ಉದ್ದೇಶವಾಗಿಟ್ಟುಕೊಂಡು ಇಂತಹ ಸಂಸ್ಥೆಯನ್ನು ಸ್ಥಾಪಿಸಲಾಗುತ್ತದೆ. ಅಂತಹ ಸಾಧನ ಹಾಗೂ ಸೇವೆಗೆ ಭವಿಷ್ಯದಲ್ಲಿ ಸಾಕಷ್ಟು ಬೇಡಿಕೆಯಿರುತ್ತದೆ ಎಂಬ ನಂಬಿಕೆಯ ತಳಹದಿಯ ಮೇಲೆ ಆ ಸಂಸ್ಥೆಯನ್ನು ಸಾಮಾನ್ಯವಾಗಿ ಯುವ ಸಾಹಸಿ ವಾಣಿಜ್ಯೋದ್ಯಮಿಗಳು ಸ್ಥಾಪಿಸುತ್ತಾರೆ.

'ಸ್ಕೈರೂಟ್' ಸಂಸ್ಥೆಯನ್ನು ಪವನ್ ಚಂದನಾ ಹಾಗೂ ಭರತ್ ಡಾಕಾ ಎಂಬ ಇಬ್ಬರು ಉತ್ಸಾಹಿ ತರುಣರು 2018ರಲ್ಲಿ ಸ್ಥಾಪಿಸಿದರು. ಮೊದಲಿಗೆ ಪುಟ್ಟ ಸಾಧನಗಳನ್ನು ಭೂವಾತಾವರಣದಾಚೆ ಇರುವ ಅನನ್ಯವಾದ ಅಂತರಿಕ್ಷ ಪರಿಸರಕ್ಕೆ ಕೊಂಡೊಯ್ಯುವುದು, ಆ ಬಳಿಕ ಪುಟ್ಟ ಉಪಗ್ರಹಗಳನ್ನು ಭೂಕಕ್ಷೆಗೆ ಉಡಾಯಿಸುವ ಸೇವಾ ಸಾಮರ್ಥ್ಯವನ್ನು ಗಳಿಸುವುದು 'ಸ್ಕೈರೂಟ್'ನ ಉದ್ದೇಶವಾಗಿದೆ.

ಹೀಗೆ ಭಾರತಾದ್ಯಂತ ಕುತೂಹಲವನ್ನು ಕೆರಳಿಸಿದ್ದ ವಿಕ್ರಂ-ಎಸ್ ಅನ್ನು 'ಮಿಷನ್ ಪ್ರಾರಂಭ್' (ಪ್ರಾರಂಭ ಅಭಿಯಾನ) ಅಂಗವಾಗಿ ಈ ನವೆಂಬರ್ 18ರ ಬೆಳಗ್ಗೆ 11.30ಕ್ಕೆ ಉಡಾಯಿಸಲಾಯಿತು. ಅಂತರಿಕ್ಷಕ್ಕೆ ತೆರಳಬೇಕಿದ್ದ ಮೂರು ಸಾಧನಗಳನ್ನು ಹೊತ್ತು ಆಗಸಕ್ಕೇರಿದ ನಂತರ 89 ಕಿಲೋಮೀಟರ್ ಎತ್ತರವನ್ನು ಕೇವಲ ಎರಡೂವರೆ ನಿಮಿಷಗಳಲ್ಲಿ ನಿರಾಯಾಸವಾಗಿ ತಲುಪಿದ ವಿಕ್ರಂ, ನಂತರ ಆ ಮೊದಲು ಉದ್ದೇಶಿಸಿದಂತೇ ಬಂಗಾಳ ಕೊಲ್ಲಿಗೆ ಬಂದು ಬಿದ್ದಿತು. ಅಲ್ಲಿಗೆ ಭಾರತದ ಮೊದಲ ಖಾಸಗಿ ರಾಕೆಟ್‌ನ ಪರೀಕ್ಷಾ ಉಡಾವಣೆ ಸಂಪೂರ್ಣವಾಗಿ ಯಶಸ್ವಿಯಾಯಿತು.

ಇದು ಒಂದು ಸಣ್ಣ ಹೆಜ್ಜೆಯಾಗಿದ್ದರೂ ಅಂತರಿಕ್ಷಯಾನಕ್ಕೆ ಸಂಬಂಧಿಸಿದಂತೆ ಭಾರತಕ್ಕೆ ಇರುವ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವುದಕ್ಕೆ ಈ ಯಶಸ್ವಿ ಉಡಾವಣೆ ಮುನ್ನುಡಿ ಬರೆದಿದೆ ಎಂದು ವಿಶ್ಲೇಷಕರು ಅರ್ಥೈಸಿದ್ದಾರೆ.

ಗಗನಕ್ಕೇರುತ್ತಿರುವ ವಿಕ್ರಂ-ಎಸ್; ಚಿತ್ರಕೃಪೆ: 'ಇಸ್ರೊ'

ಇಂದು ಉಪಗ್ರಹಗಳನ್ನು ನಿರ್ಮಿಸಿ ಉಡಾಯಿಸುವ, ನಿಯಂತ್ರಿಸುವ ಹಾಗೂ ಆ ಸಾಧನಗಳನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ ಬಳಸಿಕೊಳ್ಳುವುದಕ್ಕೆ ಸಂಬಂಧಿಸಿದ ಜಾಗತಿಕ ಅಂತರಿಕ್ಷ ಉದ್ಯಮ ಸುಮಾರು 33 ಸಾವಿರ ಕೋಟಿ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ಆದರೆ ಅಂತರಿಕ್ಷದಲ್ಲಿನ ಕೆಲವೇ ಶಕ್ತ ರಾಷ್ಟ್ರಗಳ ಪೈಕಿ ಒಂದಾಗಿರುವ ಭಾರತದ ಪಾಲು ಇದರಲ್ಲಿ ಕೇವಲ ಶೇಕಡಾ ಎರಡರಷ್ಟಿದೆ, ಅಷ್ಟೆ. ಹೀಗಾಗಿ ಅಂತರಿಕ್ಷ ಉದ್ಯಮಕ್ಕೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳುವ ಸಾಮರ್ಥ್ಯವನ್ನು ಭಾರತ ಗಳಿಸಬೇಕಾದಲ್ಲಿ ವಿವಿಧ ಅಂತರಿಕ್ಷ ಸೇವೆಗಳನ್ನು ನೀಡುವ ಸಂಬಂಧದಲ್ಲಿ ಅದರ ಅರ್ಹತೆಯೂ ಹೆಚ್ಚಬೇಕು. ಅಂದರೆ ರಾಕೆಟ್ಟುಗಳನ್ನು ಹಾಗೂ ಉಪಗ್ರಹಗಳನ್ನು ದೊಡ್ಡ ಸಂಖ್ಯೆಯಲ್ಲಿ ನಿರ್ಮಿಸುವುದು, ಉಡಾಯಿಸುವುದು ಹಾಗೂ ಸೇವೆಗೆ ಅಣಿಮಾಡುವುದು ಅದಕ್ಕೆ ಸಾಧ್ಯವಾಗಬೇಕು.

ಭಾರತದ ಅಂತರಿಕ್ಷ ಕಾರ್ಯಕ್ರಮ ಆದಿಯಿಂದಲೂ ಸರ್ಕಾರಿ ಸ್ವಾಮ್ಯದಲ್ಲಿದೆ. ಭಾರತ ಸರ್ಕಾರದ ಸಂಸ್ಥೆಯಾದ 'ಇಸ್ರೊ' ಭಾರತೀಯ ಅಂತರಿಕ್ಷ ಕಾರ್ಯಕ್ರಮವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತು ತನ್ನ ಸಾಧನೆಗಳಿಂದಾಗಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಗಳಿಸಿದೆ. ವಾಣಿಜ್ಯಾತ್ಮಕವಾಗಿ ಇತರ ದೇಶಗಳ ಉಪಗ್ರಹಗಳನ್ನು ಕೆಲವು ಬಾರಿ ನಿರ್ಮಿಸಿದೆ; ಹಲವು ಬಾರಿ ಯಶಸ್ವಿಯಾಗಿ ಉಡಾಯಿಸಿದೆ. ಇತ್ತೀಚೆಗೆ ಲಂಡನ್ನಿನ 'ಒನ್ ವೆಬ್' ಸಂಸ್ಥೆಯ 34 ಉಪಗ್ರಹಗಳನ್ನು ಇಸ್ರೊದ 'ಎಲ್. ವಿ. ಎಮ್-3' ರಾಕೆಟ್ ನ ಒಂದೇ ಯಾನದಲ್ಲಿ ಯಶಸ್ವಿಯಾಗಿ ಉಡಾಯಿಸಿದ ವಿಷಯ ಇದಕ್ಕೆ ಒಂದು ಉತ್ತಮವಾದ ಉದಾಹರಣೆಯಾಗಿದೆ.

ಆದರೆ ಸರ್ಕಾರಿ ಸ್ವಾಮ್ಯದ ಇಸ್ರೊ ಕೇವಲ ದೇಶದ ಸಮಗ್ರ ಅಭಿವೃದ್ಧಿಗೆ, ಮುನ್ನಡೆಗೆ ಹಾಗೂ ರಕ್ಷಣೆಗೆ ಅಗತ್ಯವಾದ ಉಪಗ್ರಹಗಳನ್ನು ನಿರ್ಮಿಸಿ ಉಡಾಯಿಸುವ ಹಾಗೂ ಕೆಲವು ಬಾರಿ ವಿದೇಶಿ ಗ್ರಾಹಕರಿಗಾಗಿ ಉಪಗ್ರಹಗಳನ್ನು ನಿರ್ಮಿಸುವ/ ಉಡಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ಇದರ ಹೊರತಾಗಿ ಇಂದು ದೊಡ್ಡ ಮಟ್ಟದಲ್ಲಿ ವಿವಿಧ ಅಂತರಿಕ್ಷ ಸೇವೆಗಳನ್ನು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಒದಗಿಸುವ ಸ್ಥಿತಿಯಲ್ಲಿಲ್ಲ. ಈ ನಿಟ್ಟಿನಲ್ಲಿ ಒಂದೇ ಬಗೆಯ ಮಾಮೂಲಿ ರಾಕೆಟ್‌ಗಳನ್ನು ನಿರ್ಮಿಸುವ ಕಾರ್ಯದಿಂದ ಇಸ್ರೊವನ್ನು ಕ್ರಮೇಣ ಮುಕ್ತಗೊಳಿಸುವ ಆ ಕೆಲಸವನ್ನು ಖಾಸಗಿ ಉದ್ದಿಮೆಗಳಿಗೆ ವರ್ಗಾಯಿಸುವ ಉದ್ದೇಶದಿಂದ 2019ರಲ್ಲಿ 'ಎನ್. ಎಸ್. ಐ. ಎಲ್.' ಎಂಬ ವಾಣಿಜ್ಯಾತ್ಮಕ ಸಂಸ್ಥೆಯನ್ನು ಭಾರತ ಸರ್ಕಾರ ಸ್ಥಾಪಿಸಿತು. ಜಾಗತಿಕ ಮಟ್ಟದಲ್ಲಿ ಅಂತರಿಕ್ಷ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಖಾಸಗೀಕರಣವನ್ನು ಎಚ್ಚರಿಕೆಯಿಂದ ಗಮನಿಸಿದ ಸರ್ಕಾರ ಭಾರತದ ಸುಪ್ತವಾದ ಸಾಮರ್ಥ್ಯವನ್ನು ಹೆಚ್ಚಿಸಿ ಜಾಗತಿಕ ಅಂತರಿಕ್ಷ ಆರ್ಥಿಕ ಕ್ಷೇತ್ರದಲ್ಲಿ ಭಾರತದ ಪಾಲನ್ನು ಗಮನಾರ್ಹವಾಗಿ ಹೆಚ್ಚಿಸಿ ದೇಶವನ್ನು ಮತ್ತಷ್ಟು ಬಲಿಷ್ಠವಾಗಿ ಮಾಡುವ ದೃಷ್ಟಿಯಿಂದ ನಮ್ಮ ಅಂತರಿಕ್ಷ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ತೆರೆಯಿತು. ಇದರಿಂದಾಗಿ ಮುಂಬರುವ ಖಾಸಗಿ ಉದ್ದಿಮೆಗಳೊಂದಿಗೆ ಕೈಜೋಡಿಸಲು, ಅವುಗಳಿಗೆ ಸಮನಾದ ಅವಕಾಶ ದೊರಕಿಸಲು ಹಾಗೂ ಅವುಗಳ ಚಟುವಟಿಕೆಗಳನ್ನು ನಿಯಂತ್ರಿಸಲು 'ಇನ್ ಸ್ಪೇಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಇಸ್ರೊದ ಉಡಾವಣಾ ನೆಲೆಗಳನ್ನು, ದುಬಾರಿ ಭೂಸೌಲಭ್ಯಗಳನ್ನು ಖಾಸಗಿಯವರ ಬಳಕೆಗೆ ತೆರಪು ಮಾಡಿತು.

ಈ ರೀತಿ ಅಂತರಿಕ್ಷ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾದ ಪರಿಸರಕ್ಕೆ ಎಡೆಮಾಡಿಕೊಡುವ ಮೂಲಕ ಹೊಸ ತಂತ್ರಜ್ಞಾನಗಳನ್ನು, ವಿಧಾನಗಳನ್ನು ತ್ವರಿತವಾಗಿ ಹಾಗೂ ಆರ್ಥಿಕ ದೃಷ್ಟಿಯಿಂದ ದಕ್ಷವಾಗಿ ಅಭಿವೃದ್ಧಿಪಡಿಸುವುದಕ್ಕೆ ಅನುವಾಗುವ ಭಾರತ ಸರ್ಕಾರದ ನಿರ್ಧಾರವನ್ನು ಭಾರತೀಯ ಖಾಸಗಿ ಉದ್ದಿಮೆಗಳು ಸ್ವಾಗತಿಸಿದವು. ತಮ್ಮ ಕ್ರಾಂತಿಕಾರಕ ಸೇವೆಗಳಿಂದಾಗಿ ಅಂತರಿಕ್ಷ ಕ್ಷೇತ್ರದ ಸ್ವರೂಪವನ್ನೇ ಜಾಗತಿಕ ಮಟ್ಟದಲ್ಲಿ ಬದಲಿಸಿ ಖ್ಯಾತಿಯನ್ನು ಗಳಿಸಿರುವ 'ಸ್ಪೇಸ್ ಎಕ್ಸ್' ಸಂಸ್ಥೆಯ ಇಲಾನ್ ಮಸ್ಕ್, 'ಬ್ಲೂ ಆರಿಜಿನ್' ಸಂಸ್ಥೆಯ (ಅಮೇಜಾನ್ ಖ್ಯಾತಿಯ) ಜೆಫ್ ಬೇಜೋಸ್ ಹಾಗೂ 'ವರ್ಜಿನ್ ಗ್ಯಾಲಕ್ಟಿಕ್' ಸಂಸ್ಥೆಯ ರಿಚರ್ಡ್ ಬ್ರಾನ್ಸನ್, ಭಾರತದ ಅನೇಕ ಉತ್ಸಾಹಿ ಯುವ ವಾಣಿಜ್ಯೋದ್ಯಮಿಗಳಿಗೆ ಸ್ಫೂರ್ತಿಯಾದರು. ಅಂತಹ ಇಬ್ಬರು ತರುಣರು ಸ್ಥಾಪಿಸಿದ ಹೊಸ ಸಂಸ್ಥೆಯೇ ತಮ್ಮ 'ವಿಕ್ರಂ-ಎಸ್' ರಾಕೆಟ್ಟನ್ನು 'ಇಸ್ರೊ'ದ ನೆರವಿನಿಂದ ಇತ್ತೀಚೆಗೆ ಯಶಸ್ವಿಯಾಗಿ ಉಡಾಯಿಸಿದ 'ಸ್ಕೈರೂಟ್' ಸಂಸ್ಥೆಯಾಗಿದೆ. ಆ ರಾಕೆಟ್‌ನ ನಿರ್ಮಾಣದಲ್ಲಿ ಅದು ಮಿಶ್ರಲೋಹಗಳಿಗೆ ಬದಲಾಗಿ ವಿಶೇಷ ಪ್ಲಾಸ್ಟಿಕ್ ನಂತಹ 'ಕಂಪಾಸಿಟ್ಸ್'ಗಳನ್ನು ಹಾಗೂ 'ತ್ರೀ–ಡಿ ಪ್ರಿಂಟಿಂಗ್'ನಂತಹ ಕ್ರಾಂತಿಕಾರಕ ತಂತ್ರಜ್ಞಾನವನ್ನು ಬಳಸಿಕೊಂಡಿದೆ.

ಕಣ್ಣಿಗೆ ಚೆಂದ ಕನ್ನಡಕದ ಅಂದ

ಈಗಂತೂ ಆರೋಗ್ಯವಿಜ್ಞಾನವು ಕಣ್ಣಿನ ಸಮಸ್ಯೆಯನ್ನು ಸಮಸ್ಯೆಯೇ ಅಲ್ಲವೆಂಬ ಮಟ್ಟಕ್ಕೆ ಸರಿಪಡಿಸುವಷ್ಟು ಬೆಳೆದಿದೆ...

ಕ್ಷಮಾ ವಿ. ಭಾನುಪ್ರಕಾಶ್

ಬಹಳ ಹಿಂದೇನಲ್ಲ; ಎರಡು-ಮೂರು ತಲೆಮಾರುಗಳ ಹಿಂದಿನವರೆಗೂ ಕನ್ನಡಕ ಧರಿಸುತ್ತಿದ್ದವರು ಕಡಿಮೆಯೇ. ಅವರು ಈಗಿನವರಂತೆ ಮೂರು ಹೊತ್ತೂ ಕಂಪ್ಯೂಟರ್ ಪರದೆಯೆದುರು ಕೂರುವಂತಿರಲಿಲ್ಲ; ಅಂಗೈಗೆ ಸ್ಮಾರ್ಟ್‌ಫೋನು ಅಂಟಿಕೊಂಡಿರುತ್ತಿರಲಿಲ್ಲ, ಪರೀಕ್ಷೆಯಲ್ಲಿ ಮಾರ್ಕ್ಸ್ ಬರದಿದ್ದರೆ ಜಗತ್ತೇ ಮುಳುಗಿತು ಎಂಬಂತಾಡುವ ಪೋಷಕರಿರಲಿಲ್ಲ; ಆಗ ಕನ್ನಡಕ ಧರಿಸುವವರು ಹೇಗೆ ಅಲ್ಪಸಂಖ್ಯಾತರೋ, ಈಗ ಕನ್ನಡಕ ಧರಿಸದವರೇ ಅಲ್ಪಸಂಖ್ಯಾತರು! ಈಗ ಕಣ್ಣಿನ ಸಮಸ್ಯೆಯಿರುವವರ ಸಂಖ್ಯೆ ಹೆಚ್ಚಿದ್ದರೂ, 'ಕನ್ನಡಕವನ್ನು ಧರಿಸಲು ಕಣ್ಣಿನ ಸಮಸ್ಯೆಯೇನೂ ಇರಬೇಕಿಲ್ಲ' ಎಂಬಂತಹ ಕಾಲವಿದು; ನಿಗದಿತವಾಗಿ ಯಾವುದೇ 'ಪವರ್' ಇಲ್ಲದ, 'ಪ್ಲೇನ್‌ಗ್ಲಾಸ್' ಎಂದು ಆಡುನುಡಿಯಲ್ಲಿ ಹೇಳುವ ಕನ್ನಡಕವಾದರೂ ಸೈ, ಬಣ್ಣಬಣ್ಣದ ತಂಪುಕನ್ನಡಕವಾದರೂ ಜೈ!

ಮುಂಚಿನ ಕಾಲದ ಅಜ್ಜ-ಅಜ್ಜಿಯರಂತಲ್ಲ ಈಗಿನವರು. ಟಿಕ್‌ಟಾಕ್ ವಿಡಿಯೊ ಮಾಡಿಕೊಂಡು, ಪ್ರವಾಸ ಮಾಡಿಕೊಂಡು, ಬೇಕಾದ ಪುಸ್ತಕವನ್ನು, ಸಿನೆಮಾವನ್ನು ಆನಂದದಿಂದ ಎಂಜಾಯ್ ಮಾಡುತ್ತಿರುವುದಕ್ಕೆ, ಮೊಬೈಲ್ ಹಿಡಿದು ಮೊಮ್ಮಕ್ಕಳೊಂದಿಗೆ ಚಾಟ್ ಮಾಡುತ್ತಿರುವುದಕ್ಕೆ ಕಾರಣವೇ ಈ ಕನ್ನಡಕ; ಆರ್ಥಿಕ ಪರಿಸ್ಥಿತಿ, ಕೌಟುಂಬಿಕ ಪರಿಸ್ಥಿತಿ ಸರಿಯಿಲ್ಲದಿದ್ದರೆ, ಕಡೇ ಪಕ್ಷ ತಮ್ಮ ಅನ್ನವನ್ನು ತಾವು ದುಡಿದು ಮರ್ಯಾದೆಯಾಗಿ ಬದುಕಬೇಕಾದರೂ ಕಣ್ಣು ಸರಿಯಾಗಿ ಕಾಣಬೇಕಲ್ಲವೇ? ಅದನ್ನು ಸಾಧ್ಯವಾಗಿಸಿ ವಯಸ್ಸಾದವರ ಬಾಳು ಮತ್ತಷ್ಟು ದುರ್ಭರವಾಗದಂತೆ ಮಾಡಿರುವುದೇ, ಈ ಆವಿಷ್ಕಾರ.

ಈಗಂತೂ ಮುಂದುವರಿದ ಆರೋಗ್ಯವಿಜ್ಞಾನವು ಕಣ್ಣಿನ ಸಮಸ್ಯೆಯನ್ನು ಸಮಸ್ಯೆಯೇ ಅಲ್ಲವೆಂಬ ಮಟ್ಟಕ್ಕೆ ಸರಿಪಡಿಸುವಷ್ಟು ಬೆಳೆದಿದೆ; ನಮ್ಮ ಕಣ್ಣಿನ ಮಸೂರ ಮತ್ತು ರೆಟಿನಾದ ಭಾಗಗಳು, ಬೆಳಕನ್ನು ಪರಿಭಾವಿಸುವಲ್ಲಿ ಜೈವಿಕವಾಗಿ, ಭೌತಿಕವಾಗಿ ಆಗುತ್ತಿರುವ ವ್ಯತ್ಯಾಸವನ್ನು, ನಿರ್ದಿಷ್ಟ ಬಗೆಯಲ್ಲಿ ವಿನ್ಯಾಸಗೊಂಡ ಕನ್ನಡಕದ ಗಾಜುಗಳು ಸರಿಪಡಿಸಿ, ದೃಗ್ಗೋಚರತೆಯನ್ನು ಸಲೀಸಾಗಿಸುತ್ತದೆ. ಈಗ ಕನ್ನಡಕಗಳು, ಕಾಂಟಾಕ್ಟ್ ಲೆನ್ಸ್‌ಗಳು, ಲೇಸರ್ ಶಸ್ತ್ರಚಿಕಿತ್ಸೆಗಳು ಸರ್ವೇಸಾಮಾನ್ಯವಾಗಿಬಿಟ್ಟಿವೆ. ನೇತ್ರದಾನದ ಬಗ್ಗೆ ಅರಿವು ಹೆಚ್ಚುತ್ತಾ, ಕುರುಡುತನವೂ ಸರಿಪಡಿಸಬಹುದಾಗಿದೆ ಎಂಬುದು ದಿನೇದಿನೇ ಸಾಬೀತಾಗುತ್ತಿದೆ. ಆದರೆ, ಇವೆಲ್ಲವೂ ಪ್ರಾರಂಭವಾದದ್ದು ಕನ್ನಡಕಗಳ ಆವಿಷ್ಕಾರ ಮತ್ತು ಬಳಕೆಯಿಂದ ಹಾಗೂ ಅದು ನಡೆದದ್ದು ಇಂದು, ನಿನ್ನೆಯಲ್ಲ; ಇತಿಹಾಸವು ದಾಖಲಾಗುವ ಮುನ್ನವೂ ಇಂತಹದ್ದೊಂದು ಆವಿಷ್ಕಾರವಾಗಿತ್ತೇ ಎಂಬುವಂತೆ ಹುಬ್ಬೇರಿಸುವಂತೆ ಮಾಡುತ್ತವೆ ಭಾರತ ಮತ್ತು ಪರ್ಷಿಯಾದ ಕೆಲವು ಜಾನಪದ ಕಥೆಗಳು.

ಸಂಶೋಧಕ ರಿಷಿ ಕುಮಾರ್ ಅಗರ್‌ವಾಲ್‌ರವರ ಸಂಶೋಧನೆಯ ಪ್ರಕಾರ, ನಮ್ಮ ವಿಜಯನಗರ ಸಾಮ್ರಾಜ್ಯದಲ್ಲಿ ಕನ್ನಡಕವು ಹದಿನಾಲ್ಕನೆಯ ಶತಮಾನದಲ್ಲಿಯೇ ಬಳಕೆಯಲ್ಲಿತ್ತು; ಮಾರ್ಕೊ ಪೋಲೊ ತನ್ನ ಪ್ರಯಾಣದ ನಡುವೆ ಚೀನಾದಲ್ಲಿ ಮೊದಲ ಬಾರಿಗೆ ಕನ್ನಡಕದ ಬಳಕೆ ಕಂಡುಕೊಂಡ ಎಂದೂ ದಾಖಲೆಗಳು ಹೇಳುತ್ತವೆ; ಇದಕ್ಕೂ ಮುನ್ನವೇ, ಅಂದರೆ ಹದಿಮೂರನೆಯ ಶತಮಾನದಲ್ಲಿ ರೋಜರ್ ಬೇಕನ್ ಎಂಬ ತತ್ವಜ್ಞಾನಿ ಕನ್ನಡಕವನ್ನು ಬಳಸಿದ್ದ ಎನ್ನುತ್ತಾರೆ ಇತಿಹಾಸತಜ್ಞರು. ಗಾಜಿನ ಆವಿಷ್ಕಾರಕ್ಕೂ ಮುನ್ನವೇ ಪಾರದರ್ಶಕ ಸ್ಫಟಿಕ ಕಲ್ಲುಗಳ ಮೂಲಕ ಸೂರ್ಯನನ್ನು ನೋಡುವ, ಬಣ್ಣಬಣ್ಣದ ಬೆಳಕನ್ನು ಕಾಣುವ ಅಭ್ಯಾಸವಿದ್ದೇ ಇತ್ತು. ದೂರದ್ದು ಹತ್ತಿರವಾಗಿ, ಹತ್ತಿರದ್ದು ದೂರವಾಗಿ ಕಾಣುವುದಷ್ಟೇ ಅಲ್ಲದೇ ಉದ್ದದ್ದು ಗಿಡ್ಡವಾಗಿ ಅಥವಾ ಪುಟ್ಟದ್ದು ಉದ್ದವಾಗಿ ಕಾಣುವುದೂ ಸಾಧ್ಯವೆಂದು ತಿಳಿಯಿತು; ಇವು ಉಂಟುಮಾಡಿದ ಕುತೂಹಲವೇ ಮತ್ತಷ್ಟು ಪ್ರಯೋಗಗಳಿಗೆ ಕಾರಣವಾಯ್ತು; ಇದರ ಮುಂದುವರಿದ ಭಾಗವೇ ಕನ್ನಡಕಗಳ ಜನನ.

ಮೊದಮೊದಲಿನ ಕನ್ನಡಕಗಳು ಒಂದು ಕಣ್ಣಿಗೆ ಮಾತ್ರ ಬಳಸುವಂತೆ, ಕೈಯಲ್ಲಿ ಹಿಡಿದು, ಕಣ್ಣಿಗೆ ಅಡ್ಡವಿಟ್ಟುಕೊಂಡು ಬಳಸುವಂತೆ ಇದ್ದರೂ, ಕಾಲಾನುಕ್ರಮದಲ್ಲಿ ಬಗೆಬಗೆಯ ರೂಪ ಪಡೆದುಕೊಳ್ಳುತ್ತಾ ಸಾಗಿತು. ಲೋಹದ ಕಟ್ಟಿನ ಒಳಗೆ ಅದಕ್ಕೆ ಹೊಂದುವ ಗಾತ್ರದ ಗಾಜನ್ನು ಅಡಕ ಮಾಡಿ, ಎರಡು ಕಣ್ಣುಗಳಿಂದಲೂ ನೋಡಲು ಸಾಧ್ಯವಾಗುವಂತೆ ತಯಾರಿಸಲಾಯಿತು; ಬಗೆಬಗೆಯ ವಿನ್ಯಾಸದ ಲೋಹದ ಕಟ್ಟುಗಳು, ಅದರೊಳಗೆ ಬಗೆಬಗೆಯ ಗಾತ್ರದ, ಆಕಾರದ, ಬಣ್ಣದ ಗಾಜುಗಳು; ದೂರದ್ದು, ಹತ್ತಿರದ್ದು ಎರಡೂ ಕಾಣುವಂತೆ ಬೈಫೋಕಲ್ ಕನ್ನಡಕಗಳು; ಬಿಸಿಲಿಗೆ ಹೋದಾಕ್ಷಣ ತಂಪುಕನ್ನಡಕವಾಗಿ ಮಾರ್ಪಾಡಾಗುವ 'ಊಸರವಳ್ಳಿ' ಗಾಜುಗಳು - ಹೀಗೆ ಸಾಗಿಬಂದ ಕನ್ನಡಕಗಳು ಈಗ ಸ್ಮಾರ್ಟ್‌ಕನ್ನಡಕವಾಗಿ ತನ್ನ ಪರದೆಯ ಮೇಲೆ ಸಂದೇಶಗಳನ್ನು ಮೂಡಿಸಿಕೊಳ್ಳುವಷ್ಟು ರೂಪಾಂತರಗೊಂಡಿವೆ.

ಮಕ್ಕಳ ಹುಡುಗಾಟದ ನಡುವೆ ಕೇಳಿಬರುವ ಚೇಷ್ಟೆಯ ಪ್ರಶ್ನೆಗಳಲ್ಲಿ 'ಕನ್ನಡಕ ಹಾಕಿಕೊಳ್ಳಲು ಏನು ಬೇಕು?' ಎಂಬ ಪ್ರಶ್ನೆಯೂ ಒಂದು. 'ಕಣ್ಣು/ಕನ್ನಡಕ ಬೇಕು' ಎಂದು ನೀವು ಉತ್ತರಿಸಿದಿರಾದರೆ, ನಿಮ್ಮನ್ನು ದಡ್ಡರ ಗುಂಪಿಗೆ ಸೇರಿಸಿಬಿಡುತ್ತಾರೆ. ಅವರ ಪ್ರಕಾರ ಕನ್ನಡಕ ಸಿಗಿಸಿಕೊಳ್ಳೋಕೆ ಕಿವಿಗಳು, ಆಧಾರವಾಗಿ ನಿಲ್ಲಲು ಮೂಗು – ಇವೆರಡೂ ಬೇಕು! ಆದರೆ, ಈಗ ಅವರನ್ನೂ ನೀವು ಮಂಗ ಮಾಡಬಹುದು. ಕನ್ನಡಕದ ಮಾರುಕಟ್ಟೆಗೆ ಹೊಸದಾಗಿ ಬಂದಿರುವ 'ಅಯಸ್ಕಾಂತದ ತುದಿಗಳನ್ನು ಹೊಂದಿರುವ ಕನ್ನಡಕ'ಗಳು, ಮುಖಕ್ಕೆ ಯಾವುದೇ ಕಡ್ಡಿಗಳ ಸಹಾಯವಿಲ್ಲದೇ ಅಂಟಿಕೊಳ್ಳಬಹುದಾಗಿದೆ. ಇನ್ನು, ಕನ್ನಡಕ್ಕೆ ಆಧಾರವಾಗಿ ನಿಂತ ಮೂಗಿಗೆ, ಆಚೀಚೆ ಕನ್ನಡಕದ ತುದಿ ಒತ್ತಿ, ಹಳ್ಳ ಮೂಡಿದೆಯೇ? ಅದಕ್ಕೂ ಚಿಂತೆ ಬೇಡ; ಮೂಗಿನ ಮೇಲೆ ಕಮಾನಿನ ರೂಪದಲ್ಲಿ ನಿಲ್ಲುವ ರಬ್ಬರಿನ ಪದರವನ್ನು ಒಳಗೊಂಡ ಕನ್ನಡಕಗಳೂ ಈಗ ಸಿಗುತ್ತವೆ. ದಿರಿಸಿಗೆ ತಕ್ಕಂತಹ ಬಗೆಬಗೆಯ ಕನ್ನಡಕಗಳನ್ನು ಬದಲಾಯಿಸುವ ಖಯಾಲಿ ನಿಮಗಿದೆಯೇ? ಆದರೆ, ಅನೇಕ ಪ್ಲಾಸ್ಟಿಕ್/ ಲೋಹದ ಫ್ರೇಮ್‌ಗಳ ಬಳಕೆಯಿಂದ ಪರಿಸರಕ್ಕೆ ಹಾನಿ ಎಂಬ ಚಿಂತೆಯೇ? ಅದಕ್ಕೂ ಉತ್ತರವಿದೆ ಹೊಸ ತಂತ್ರಜ್ಞಾನದಲ್ಲಿ! 'ಬಯೋ-ಸೆಲ್ಯುಲೋಸ್ ಅಸಿಟೇಟ್' ಎಂಬ ಜೈವಿಕವಾಗಿ ವಿಘಟನೆಯಾಗಬಲ್ಲ ಸಂಯುಕ್ತ ಪದಾರ್ಥವು, ಈಗ ಆಕರ್ಷಕ ಕನ್ನಡಕಗಳ ಫ್ರೇಮ್‌ನ ತಯಾರಿಯಲ್ಲಿ ಬಳಕೆಯಾಗುತ್ತಿದೆ. ಜೊತೆಗೆ, ಸಂಪೂರ್ಣ ಪರಿಸರಸ್ನೇಹಿ ಫೈಬರ್‌ನಿಂದ ಮಸೂರಗಳನ್ನೂ ತಯಾರಿಸಲಾಗುತ್ತಿದೆ.

ಇನ್ನು ದಿನವಿಡೀ ಮಾಸ್ಕ್ ಧರಿಸುವವರ ಪಾಡು ಕೇಳಬೇಡಿ! ಮಾಸ್ಕ್ ಮತ್ತು ಕನ್ನಡಕವನ್ನು ಒಟ್ಟಿಗೇ ಧರಿಸಬೇಕಾದಾಗ, ಗಾಜು ಮಂಜುಗಟ್ಟುವುದನ್ನು ತಡೆಯುವುದೇ ಕಷ್ಟ! ಇದಕ್ಕಾಗಿ ಮಂಜು ನಿರೋಧಕ ಗಾಜುಗಳಿವೆ; ಅವುಗಳಲ್ಲಿ ಎರಡೂ ಕಡೆ ನೀರಿನಂಶ-ವಿರೋಧಿ ಪದರವನ್ನು ಲೇಪಿಸಲಾಗಿರುತ್ತದೆ ಮತ್ತು ಅದು ಹಬೆಯ ಎದುರಿಗೂ ಮಂಜು ಕವಿಯದಂತೆ ನೋಡಿಕೊಳ್ಳುತ್ತದೆ. ಇನ್ನು ವಿದ್ಯುನ್ಮಾನ ಸ್ಕ್ರೀನ್‌ಗಳ ಎದುರಿಗೆ ಸದಾ ಕಾಲ ಕೂರುವವರ ಕಣ್ಣುಗಳನ್ನು ಕಾಪಾಡಲು, 400–420 ನ್ಯಾನೋಮೀಟರ್ ಶ್ರೇಣಿಯ ಎಲ್ಲಾ ಅಪಾಯಕಾರಿ ಬೆಳಕಿನ ಕಿರಣಗಳನ್ನು ದೂರವಿಡಲು 'ಯುವಿ420' ತಂತ್ರಜ್ಞಾನ ಸಹಾಯಕ; ಇದನ್ನು ಬಳಸಿಯೇ ವಿದ್ಯುನ್ಮಾನ ಪರದೆಗಳಿಂದ ನೀಲಿಬೆಳಕನ್ನು ಸೋಸಲಾಗುತ್ತದೆ.

ಹೀಗೆ ಕನ್ನಡಕವು ನಡೆದುಬಂದ ಹಾದಿಯಲ್ಲಿ ತಂತ್ರಜ್ಞಾನವು ಹೊಸಬೆಳಕನ್ನು ಮೂಡಿಸುತ್ತಾ, ಹೊಸ ಸಾಧ್ಯತೆಗಳನ್ನು ಗೋಚರಿಸುವಂತೆ ಮಾಡಿದೆ.



ಸೋನಿ ಇಯರ್‌ಬಡ್ಸ್

ಸೋನಿ WF-LS900N ಇಯರ್‌ಬಡ್ಸ್ ಸಮೃದ್ಧವಾದ ಆಡಿಯೊ ಗುಣಮಟ್ಟವನ್ನು ನೀಡುತ್ತದೆ ಮತ್ತು ಹಾಡುಗಳನ್ನು ಕಿವಿಗೆ ಇಂಪಾಗಿಸುತ್ತದೆ. ಇದರ ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಶನ್ ವ್ಯವಸ್ಥೆಯಂತೂ ತುಂಬ ಅನುಕೂಲಕರ ಮತ್ತು ಸಮರ್ಥವಾಗಿದೆ.

ಅವಿನಾಶ್ ಬಿ.

ಸ್ಮಾರ್ಟ್‌ಫೋನ್‌ಗಳ ಆಧುನಿಕತೆಯೊಂದಿಗೆ ಅವುಗಳಿಗೆ ಸಂವಾದಿಯಾಗಿ ಇಯರ್‌ಫೋನ್ ಅಥವಾ ಇಯರ್‌ಬಡ್‌ಗಳ ತಂತ್ರಜ್ಞಾನದಲ್ಲೂ ಸಾಕಷ್ಟು ಸುಧಾರಣೆ ಕಂಡಿದೆ. ವೈರ್ ಇರುವ ಇಯರ್‌ಫೋನ್‌ಗಳನ್ನು ದಾಟಿ ವೈರ್‌ಲೆಸ್ ಇಯರ್‌ಬಡ್‌ಗಳು ಈಗಿನ ಯುವ ಜನತೆಯ ಹೊಸ ಆಕರ್ಷಣೆ. ಇದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸೋನಿ ಇಂಡಿಯಾ ನವೆಂಬರ್ 21ರಂದು ತನ್ನ ಹೊಸ WF-LS900N ಇಯರ್‌ಬಡ್ಸ್ ಅನ್ನು ಬಿಡುಗಡೆ ಮಾಡಿದೆ. ಇದು ನವೆಂಬರ್ 25ರಿಂದ ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಬಿಡುಗಡೆಗೆ ಮುನ್ನ ರಿವ್ಯೂಗೆ ದೊರೆತ ಸೋನಿ WF-LS900N ಇಯರ್‌ಬಡ್‌ಗಳನ್ನು ಎರಡು ವಾರ ಬಳಸಿ ನೋಡಿದಾಗ ಹೇಗಿದೆ? ಇಲ್ಲಿದೆ ಮಾಹಿತಿ.



ವಿನ್ಯಾಸ

ಕಪ್ಪು, ಬಿಳಿ ಹಾಗೂ ಬೀಜ್ (ನಸು ಕಂದು) ಬಣ್ಣಗಳಲ್ಲಿ ಇಯರ್‌ಬಡ್‌ಗಳು ಲಭ್ಯ ಇವೆ. ರಿವ್ಯೂಗೆ ದೊರೆತದ್ದು ನಸುಕಂದು ಬಣ್ಣದ ವಿಶಿಷ್ಟವಾದ ಇಯರ್‌ಬಡ್ಸ್. ಚಾರ್ಜಿಂಗ್ ಕೇಸ್, ಟೈಪ್-ಸಿ ಕೇಬಲ್, 3 ವಿಭಿನ್ನ ಗಾತ್ರದ ಇಯರ್ ಟಿಪ್ಸ್ ಇರುವ ಬಾಕ್ಸ್‌ನಲ್ಲಿ ಪರಿಸರಕ್ಕೆ ಹಾನಿಯಾಗುವ ಯಾವುದೇ ಪ್ಲಾಸ್ಟಿಕ್ ಮತ್ತಿತರ ಅಂಶಗಳಿಲ್ಲ.

ಇಯರ್‌ಬಡ್‌ಗಳು ಕಿವಿಯ ಹೊರಕುಹರಗಳಲ್ಲಿ ಚೆನ್ನಾಗಿ ಕೂರುವಂತಹ ವಿನ್ಯಾಸ ಗಮನ ಸೆಳೆದಿದೆ. ಹಿಂದಿನ ಲಿಂಕ್‌ಬಡ್ಸ್‌ಗೆ ಹೋಲಿಸಿದರೆ ಚಿಕ್ಕದಾಗಿಯೂ ಹಗುರವಾಗಿಯೂ ಇರುವುದರಿಂದ ಹೆಚ್ಚು ಕಾಲ ಕಿವಿಯಲ್ಲಿರಿಸಿದರೆ ನೋವಿನ ಅನುಭವವಾಗುವುದಿಲ್ಲ.

ವೈಶಿಷ್ಟ್ಯಗಳು

ಧ್ವನಿ ತಂತ್ರಜ್ಞಾನದಲ್ಲಿ ಸಾಕಷ್ಟು ಮುಂಚೂಣಿಯಲ್ಲಿರುವ ಸೋನಿ ಕಂಪನಿ ಹೊರತಂದಿರುವ Sony WF-LS900N ಇಯರ್‌ಬಡ್ಸ್‌ನಲ್ಲಿ ಪ್ರಮುಖವಾಗಿ ಗಮನ ಸೆಳೆದಿದ್ದೆಂದರೆ ಅದರ ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಶನ್ (ANC - ಎಂದರೆ ಸುತ್ತಲಿನ ಧ್ವನಿ ಕೇಳಿಸದಂತೆ ಮಾಡಿ, ಇಯರ್‌ಬಡ್ಸ್‌ನಿಂದ ಬರುವ ಧ್ವನಿಯನ್ನು ಮಾತ್ರ ಕೇಳಿಸುವ) ವ್ಯವಸ್ಥೆ. ವಾಹನದಲ್ಲಿ ಪ್ರಯಾಣಿಸುತ್ತಿರುವಾಗ ಸಂಗೀತ ಕೇಳುವ ಅಭ್ಯಾಸವಿರುವವರಿಗೆ ಇದು ಅತ್ಯಂತ ಇಷ್ಟವಾಗಬಹುದು. ಸುತ್ತಮುತ್ತಲಿರುವ ಗದ್ದಲ-ಸದ್ದನ್ನು ಕಡಿಮೆ ಮಾಡಿ, ಏಕಾಂತ ಕೊಠಡಿಯಲ್ಲಿ ಕೂತಂತೆ ನಿಶ್ಶಬ್ದ ವಾತಾವರಣದಲ್ಲಿ ಹಾಡುಗಳನ್ನು ಕೇಳಲು ಅನುವು ಮಾಡಿಕೊಡುತ್ತದೆ, ಈ ನಾಯ್ಸ್ ಕ್ಯಾನ್ಸಲೇಶನ್ (ಧ್ವನಿ ರದ್ದುಪಡಿಸುವ) ವ್ಯವಸ್ಥೆ.

ಹೆಡ್‌ಫೋನ್ಸ್ ಆ್ಯಪ್

ಇಯರ್‌ಬಡ್ಸ್ ಮೇಲಿನ ಸ್ಪರ್ಶ ಸಂವೇದನೆಯಿರುವ ಬಿಂದುವಿಗೆ ನಾವು ಹೆಚ್ಚು ಬಳಸುತ್ತಿರುವ ಕಾರ್ಯಗಳನ್ನು ಹೊಂದಿಸಬಹುದು. ಉದಾಹರಣೆಗೆ, ವಾಲ್ಯೂಮ್, ಪ್ಲೇಬ್ಯಾಕ್, ಅಥವಾ ಏಂಬಿಯೆಂಟ್ ಸೌಂಡ್/ನಾಯ್ಸ್ ಕಂಟ್ರೋಲ್ ಇತ್ಯಾದಿ. ಇದಕ್ಕಾಗಿ ಆಂಡ್ರಾಯ್ಡ್ ಅಥವಾ ಆ್ಯಪಲ್ (ಐಒಎಸ್) ಫೋನ್‌ಗಳಿಗಾಗಿ ಲಭ್ಯ ಇರುವ ಸೋನಿ ಕಂಪನಿಯದೇ ಸೋನಿ ಹೆಡ್‌ಫೋನ್ಸ್ ಕನೆಕ್ಟ್ ಎಂಬ ಆ್ಯಪ್ ಅಳವಡಿಸಿಕೊಳ್ಳಬೇಕಾಗುತ್ತದೆ. ಇದರಿಂದಲೇ ಸಾಕಷ್ಟು ನಿಯಂತ್ರಕಗಳಿವೆ. ಕಿವಿಯಲ್ಲಿರಿಸಿಕೊಂಡಾಗ ಹೊರಗಿನ ಧ್ವನಿಯೂ ಕೇಳಬೇಕು ಎಂಬ ಹಾಗಿದ್ದರೆ (ಉದಾಹರಣೆಗೆ ಯಾರಾದರೂ ಕರೆದರೆ ಅಥವಾ ಪ್ರಯಾಣಿಸುತ್ತಿರುವಾಗ/ವಾಹನ ಚಲಾಯಿಸುತ್ತಿರುವಾಗ ಇಲ್ಲವೇ ನಡೆದು ಹೋಗುತ್ತಿರುವಾಗ ಹಾರ್ನ್ ಸದ್ದು ಕೇಳಬೇಕು ಎಂದಾದರೆ) ಏಂಬಿಯೆಂಟ್ ಸೌಂಡ್ ಮೋಡ್‌ಗೆ ಬದಲಿಸಿಕೊಳ್ಳಲು ಕೇವಲ ಒಂದು 'ತಟ್ಟುವಿಕೆ' (ಟ್ಯಾಪ್ ಮಾಡುವುದು) ಸಾಕಾಗುತ್ತದೆ. ನಾಯ್ಸ್ ಕ್ಯಾನ್ಸಲೇಶನ್ ವ್ಯವಸ್ಥೆಗೆ ಹೆಚ್ಚು ಬ್ಯಾಟರಿ ಚಾರ್ಜ್ ಬೇಕಾಗಿರುವುದರಿಂದ ಅದನ್ನು ಅಗತ್ಯವಿದ್ದಾಗ ಮಾತ್ರ ಬಳಸಬೇಕಾಗುತ್ತದೆ.

ಅಲೆಕ್ಸಾ ಧ್ವನಿ ಸಹಾಯಕ (ವಾಯ್ಸ್ ಅಸಿಸ್ಟೆಂಟ್) ವೈಶಿಷ್ಟ್ಯವನ್ನು ಮೂಲತಃ ಈ ಇಯರ್‌ಬಡ್ಸ್ ಬೆಂಬಲಿಸುತ್ತವೆ. ಗೂಗಲ್ ಅಸಿಸ್ಟೆಂಟ್ ಕೂಡ ಬೆಂಬಲಿಸುತ್ತದೆ. ಹೈ ರೆಸೊಲ್ಯುಶನ್ ಇರುವ ಆಡಿಯೊ ಫೈಲ್‌ಗಳನ್ನೂ ಬೆಂಬಲಿಸುವ ಈ ಇಯರ್‌ಬಡ್ಸ್‌ನಲ್ಲಿ ಫೋನ್ ಕರೆಗೆ ಉತ್ತರಿಸುವಾಗ ಧ್ವನಿ ಸ್ಪಷ್ಟವಾಗಿ ಕೇಳಿಸುತ್ತದೆ ಎಂದು ಅತ್ತ ಕಡೆ ಇರುವವರು ಕೂಡ ಖಚಿತಪಡಿಸಿದ್ದಾರೆ. ಇಷ್ಟಲ್ಲದೆ, ಎರಡು ಸಾಧನಗಳಿಗೆ ಇದನ್ನು ಸಂಪರ್ಕಿಸಬಹುದಾಗಿದೆ.

ಗಮನ ಸೆಳೆದ ಮತ್ತೊಂದು ಅಂಶವೆಂದರೆ, ಅಡಾಪ್ಟಿವ್ ಸೌಂಡ್ ಕಂಟ್ರೋಲ್ ಎಂಬ ವ್ಯವಸ್ಥೆ. ಕಿವಿಯಿಂದ ಇಯರ್‌ಬಡ್‌ಗಳನ್ನು ತೆಗೆದಾಗ ಹಾಡು ತಾನಾಗಿ ಆಫ್ ಆಗುತ್ತದೆ ಮತ್ತು ಪುನಃ ಧರಿಸಿದಾಗ ಮುಂದುವರಿಯುತ್ತದೆ ಮತ್ತು ಹಾಡು ಕೇಳುತ್ತಿರುವಾಗ ಫೋನ್ ಕರೆ ಬಂದರೆ, ಹಾಡು ತಾನಾಗಿ ನಿಲ್ಲುತ್ತದೆ.

ಬ್ಯಾಟರಿ

ಸೋನಿ WF-LS900N ಇಯರ್‌ಬಡ್ಸ್ ಒಮ್ಮೆ ಚಾರ್ಜ್ ಮಾಡಿದರೆ, ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಶನ್ ವೈಶಿಷ್ಟ್ಯ ಬಳಸಿದಾಗ, ಐದುವರೆಯಿಂದ ಆರು ಗಂಟೆವರೆಗೂ ಬಾಳಿಕೆ ಬಂದಿದೆ. ಕೇಸ್ ಚಾರ್ಜ್ ಒಳಗೊಂಡು ಹೇಳುವುದಾದರೆ, ನಿರಂತರವಾಗಿ ಬಳಸುವುದಾದಲ್ಲಿ 24 ಗಂಟೆಗಳ ಬ್ಯಾಟರಿಗೆ ಯಾವುದೇ ಸಮಸ್ಯೆಯಿಲ್ಲ. ಒಟ್ಟಾರೆಯಾಗಿ, ಸೋನಿ WF-LS900N ಇಯರ್‌ಬಡ್ಸ್ ಸಮೃದ್ಧವಾದ ಆಡಿಯೊ ಗುಣಮಟ್ಟವನ್ನು ನೀಡುತ್ತದೆ ಮತ್ತು ಹಾಡುಗಳನ್ನು ಕಿವಿಗೆ ಇಂಪಾಗಿಸುತ್ತದೆ. ಇದರ ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಶನ್ ವ್ಯವಸ್ಥೆಯಂತೂ ತುಂಬ ಅನುಕೂಲಕರ ಮತ್ತು ಸಮರ್ಥವಾಗಿದೆ.

ಸೋನಿ LS900N ಬೆಲೆ ₹13,990.

ಸುಭಾಷಿತ

ಎಲ್ಲರಿಗೂ ಅನುಭವ ಆಗುತ್ತದೆ. ಕೆಲವರು ಪಾಠ ಕಲಿಯುತ್ತಾರೆ.

-ಟಿ.ಎಸ್.ಎಲಿಯಟ್

ಮಂಗಳೂರು ಸ್ಫೋಟ ಪ್ರಕರಣ ತನಿಖೆಯ ಆಚೆಗೂ ಕ್ರಮಗಳು ಬೇಕು

ಮಂಗಳೂರಿನಲ್ಲಿ ಚಲಿಸುತ್ತಿದ್ದ ಆಟೊರಿಕ್ಷಾ ಒಂದರಲ್ಲಿ ಈಚೆಗೆ ನಡೆದ ಸ್ಫೋಟ ಪ್ರಕರಣವು ಒಂದು ಭಯೋತ್ಪಾದನಾ ಕೃತ್ಯವೆಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಆಟೊದಲ್ಲಿ ಪ್ರಯಾಣಿಸುತ್ತಿದ್ದ ಮೊಹಮ್ಮದ್ ಶಾರಿಕ್ ಎಂಬ ವ್ಯಕ್ತಿಯು ತನ್ನ ಜೊತೆ ಪ್ರೆಷರ್ ಕುಕ್ಕರ್ ಒಯ್ಯುತ್ತಿದ್ದ. ಅದರಲ್ಲಿ ಸ್ಫೋಟಕ ಸಾಧನ ಇತ್ತು. ಆಟೊರಿಕ್ಷಾ ಚಲಿಸುತ್ತಿದ್ದಾಗಲೇ ಅದು ಸ್ಫೋಟಗೊಂಡಿತು. ಅದರ ಪರಿಣಾಮವಾಗಿ ಆಟೊ ಚಾಲಕ ಮತ್ತು ಶಾರಿಕ್ ಗಾಯಗೊಂಡಿದ್ದಾರೆ. ಶಾರಿಕ್‌ಗೆ ಜಿಹಾದಿ ಸಂಘಟನೆಗಳ ಜೊತೆ ಸಂಪರ್ಕ ಇದೆಯೇ ಎಂಬ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ಆರಂಭಿಸಿವೆ. ಅಕ್ಟೋಬರ್ 23ರಂದು ಕೊಯಮತ್ತೂರಿನಲ್ಲಿ ಕಾರೊಂದರಲ್ಲಿ ನಡೆದ ಬಾಂಬ್ ಸ್ಫೋಟ ಸೇರಿದಂತೆ ಈಚೆಗೆ ಸಂಭವಿಸಿದ ಇತರ ಕೆಲವು ಸ್ಫೋಟ ಪ್ರಕರಣಗಳಿಗೂ ಶಾರಿಕ್‌ಗೂ ಸಂಬಂಧ ಇದೆಯೇ ಎಂಬ ಬಗ್ಗೆಯೂ ತನಿಖೆ ನಡೆದಿದೆ. ಸೆಪ್ಟೆಂಬರ್‌ನ ಕೊನೆಯ ಭಾಗದಲ್ಲಿ ಶಾರಿಕ್, ಶಿವಮೊಗ್ಗದಲ್ಲಿ ಸ್ಫೋಟಕಗಳನ್ನು ಪರೀಕ್ಷಿಸಿದ್ದ ಎಂದು ವರದಿಯಾಗಿದೆ. ತಮಿಳುನಾಡು ಮತ್ತು ಕರ್ನಾಟಕದ ಕೆಲವು ಪಟ್ಟಣಗಳ ನಡುವೆ ಆತ ಹಲವು ಬಾರಿ ಪ್ರಯಾಣ ಮಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ. ಸ್ಫೋಟಕಗಳನ್ನು ಹಾಗೂ ಬಾಂಬ್ ತಯಾರಿಕೆಯಲ್ಲಿ ಬಳಸುವ ಇತರ ವಸ್ತುಗಳನ್ನು ಸಂಗ್ರಹಿಸಿ ಇರಿಸಿದ್ದ ಸ್ಥಳಗಳ ಮೇಲೆ ತನಿಖಾ ಸಂಸ್ಥೆಗಳು ದಾಳಿ ಮಾಡಿವೆ.

ಶಾರಿಕ್ ಏಕಾಂಗಿಯಾಗಿ ಕೆಲಸ ಮಾಡುತ್ತಿದ್ದನೇ ಅಥವಾ ಆತ ಉಗ್ರಗಾಮಿ ವಿಚಾರಗಳಿಂದ ಪ್ರಭಾವಿತರಾಗಿರುವ ಯುವಕರ ಜಾಲದ ಸೂಚನೆ ಪ್ರಕಾರ ಕೆಲಸ ಮಾಡುತ್ತಿದ್ದನೇ, ಜಾಗತಿಕ ಮಟ್ಟದಲ್ಲಿ ಜಾಲ ಹೊಂದಿರುವ ಅಲ್-ಕೈದಾ ಅಥವಾ ಅದರಂತಹ ಸಂಘಟನೆಗಳ ಜೊತೆ ನಂಟು ಹೊಂದಿದ್ದನೇ ಎಂಬ ಬಗ್ಗೆಯೂ ಪರಿಶೀಲನೆ ನಡೆದಿದೆ.

ಕರ್ನಾಟಕದ ಕರಾವಳಿ ಭಾಗವು ಬಹುಕಾಲದಿಂದ ಕೋಮು ಸಂಘರ್ಷದ ಬಾಣಲೆಯಾಗಿದೆ. ಧಾರ್ಮಿಕ ತೀವ್ರಗಾಮಿಗಳು, ಕೆಲವು ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರ ದ್ವೇಷ ಭಾಷಣ ಇಲ್ಲಿ ಮತ್ತೆ ಮತ್ತೆ ವರದಿಯಾಗುತ್ತಿರುತ್ತದೆ. ಇದು ಯುವಕರ ಮನಸ್ಸು ಕೆಡಿಸುವುದಕ್ಕೆ, ಅವರನ್ನು ಧಾರ್ಮಿಕವಾಗಿ ಪ್ರಚೋದಿಸುವುದಕ್ಕೆ ಹೇಳಿ ಮಾಡಿಸಿದ ವಾತಾವರಣ ಸೃಷ್ಟಿಸಿಕೊಟ್ಟಿದೆ. ಧಾರ್ಮಿಕ ತೀವ್ರಗಾಮಿ ಸಾಹಿತ್ಯ, ಅದಕ್ಕೆ ಸಂಬಂಧಿಸಿದ ವಿಡಿಯೊಗಳು ಇಂದು ಅಂತರ್ಜಾಲದಲ್ಲಿ ಹೇರಳವಾಗಿ ಲಭ್ಯವಿವೆ. ಇವು ಯುವಕರನ್ನು ಹಿಂಸೆಯ ಹಾದಿಗೆ ನೂಕುವ ಸಾಮರ್ಥ್ಯ ಹೊಂದಿವೆ. ಅಲ್ಲದೆ, ಮನೆಯಲ್ಲೇ ಬಾಂಬ್ ತಯಾರಿಸುವುದನ್ನು ಕಲಿಸುವ ವಿವರಗಳೂ ಇಂಟರ್ನೆಟ್‌ನಲ್ಲಿ ಲಭ್ಯವಿವೆ ಎಂದು ವರದಿಗಳು ಹೇಳುತ್ತವೆ.

> ಸಮುದಾಯಗಳು ಧಾರ್ಮಿಕ ತೀವ್ರಗಾಮಿ ಧೋರಣೆ ಬೆಳೆಸಿಕೊಳ್ಳುವುದನ್ನು ತಡೆಯುವ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕಾಗಿದೆ

ಇವು ಯಾವುದೇ ಸಂಘಟನೆಯ ನೆರವಿಲ್ಲದೆಯೂ ಭಯೋತ್ಪಾದನಾ ಕೃತ್ಯವನ್ನು ಎಸಗುವ ಯುವಕರನ್ನು ಸೃಷ್ಟಿಸಿವೆ. ಈ ಯುವಕರು ತಮ್ಮ ಪಾಲಿಗೆ 'ಶತ್ರು'ಗಳಾಗಿ ಕಂಡಿರುವವರನ್ನು ಗುರಿ ಮಾಡಿಕೊಂಡಿರುತ್ತಾರೆ. ಹಿಜಾಬ್ ಸುತ್ತಲಿನ ವಿವಾದದ ನಂತರದಲ್ಲಿ ಜನರ ಮನಸ್ಸನ್ನು ಹಾಳುಮಾಡುವ ಕೆಲಸಗಳು ಹೆಚ್ಚಾದವು. ಧಾರ್ಮಿಕ ಹಾಗೂ ಕೋಮು ಸಂಘಟನೆಗಳು ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟುವ ಕೆಲಸ ಮಾಡಿದವು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಹಾಗೂ ಅದರ ಸಹಸಂಘಟನೆಗಳನ್ನು ನಿಷೇಧಿಸಿದ ಕ್ರಮ ಕೂಡ ಸಮಾಜದ ಒಂದು ವರ್ಗದಲ್ಲಿ ಅತೃಪ್ತಿಯನ್ನು ಸೃಷ್ಟಿಸಿರುವ ಸಾಧ್ಯತೆ ಇದೆ.

ಮಂಗಳೂರು ಹಾಗೂ ಕೊಯಮತ್ತೂರು ಪ್ರಕರಣಗಳ ತನಿಖೆ ನಡೆಸುತ್ತಿರುವ ಸಂಸ್ಥೆಗಳು ಕೃತ್ಯಗಳಿಗೆ ಕಾರಣರು ಯಾರು, ಅವರು ಯಾವ ಸಂಘಟನೆಗೆ ಸೇರಿದವರು, ಆ ಸಂಘಟನೆಯ ಜಾಲ ಎಲ್ಲೆಲ್ಲಿ ಹರಡಿಕೊಂಡಿದೆ ಎಂಬುದನ್ನು ಪತ್ತೆ ಮಾಡಬೇಕು. ಅದನ್ನು ನಿರ್ಮೂಲಗೊಳಿಸಬೇಕು. ಅಷ್ಟೇ ಅಲ್ಲದೆ, ಯುವಕರು ಭಯೋತ್ಪಾದನೆಯ ಮಾರ್ಗ ಹಿಡಿಯುತ್ತಿರುವುದಕ್ಕೆ ಕಾರಣ ಏನು ಎಂಬುದನ್ನೂ ಪತ್ತೆ ಮಾಡಬೇಕು. ಕೆಲವು ಸಂಘಟನೆಗಳನ್ನು ನಿಷೇಧಿಸಿದಾಗ ಅವುಗಳ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಸುಲಭವಾಗುತ್ತದೆ. ಆದರೆ ಅವೇ ಸಂಘಟನೆಗಳು ಇನ್ನೊಂದು ಹೆಸರಿನಲ್ಲಿ ತಲೆ ಎತ್ತುತ್ತವೆ. ಸಮುದಾಯಗಳು ಧಾರ್ಮಿಕ ತೀವ್ರಗಾಮಿ ಧೋರಣೆಗಳನ್ನು ಬೆಳೆಸಿಕೊಳ್ಳುವುದನ್ನು ತಡೆಯುವ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳುವ ಅಗತ್ಯ ಇದೆ. ದ್ವೇಷ ಭಾಷಣ ಮಾಡುವವರು ಯಾವುದೇ ಧರ್ಮಕ್ಕೆ ಸೇರಿದ್ದರೂ ಅವರ ವಿರುದ್ಧ ಕ್ರಮ ಜರುಗಿಸುವ ಕೆಲಸ ಆಗಬೇಕು. ಇಲ್ಲವಾದರೆ, ದ್ವೇಷ ಭಾಷಣಗಳು, 'ನಾವು ಬಲಿಪಶುಗಳು' ಎಂಬ ಭಾವನೆಯನ್ನು ಸಮುದಾಯಗಳ ಮಟ್ಟದಲ್ಲಿ ಬೆಳೆಸುತ್ತವೆ. ಆ ರೀತಿಯ ಭಾವನೆಯು ಮುಂದೊಂದು ದಿನ ಹಿಂಸೆಗೆ ಸಮರ್ಥನೆಯಾಗಿ ಬಳಕೆಯಾಗುತ್ತದೆ. ಧಾರ್ಮಿಕ ತೀವ್ರವಾದವನ್ನು ತಡೆಯುವ ಹೊಣೆಯು ನಾಗರಿಕ ಸಮುದಾಯದ ಮೇಲೆಯೂ ಇದೆ. ಅದಕ್ಕಿಂತ ಹೆಚ್ಚಾಗಿ ಸರ್ಕಾರ, ರಾಜಕೀಯ ಹಾಗೂ ಧಾರ್ಮಿಕ ಮುಖಂಡರು ಈ ದಿಸೆಯಲ್ಲಿ ಹೆಚ್ಚು ಕೆಲಸ ಮಾಡಬೇಕು. ಶಾಂತಿ, ಸಾಮರಸ್ಯ ಮೂಡಿಸುವಲ್ಲಿ ಅವರು ಮೇಲ್ಪಂಕ್ತಿ ಹಾಕಿಕೊಡಬೇಕು.

ದಿನದ ಟ್ವೀಟ್

ಶುದ್ಧ ಹಾಸ್ಯ ಬೇಕಿದೆ

ಕಿರುತೆರೆಯ ಮೇಲೆ ಶುದ್ಧ ಹಾಸ್ಯ ಮರಳುವಂತೆ ಮಾಡಲು ಇದು ಸಕಾಲ.

ಲಕ್ಷ್ಮಿ ನಾರಾಯಣ್

ಕಿಡಿನುಡಿ

ಕೇಂದ್ರದ ಎನ್‌ಡಿಎ ಸರ್ಕಾರವೇ ಈ ದೇಶದ ಅತ್ಯಂತ ದೊಡ್ಡ ವಸೂಲಾಗದ ಸಾಲ (ಎನ್‌ಪಿಎ). ಈ ಸರ್ಕಾರವು ಭಾರತದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು ನಾಶ ಮಾಡುತ್ತಿದೆ.

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 23-11-1997

- **ಭಾರತದ ಡಯಾನಾ 'ವಿಶ್ವಸುಂದರಿ'**

ಮಾಹೆ (ಸೀಷೆಲ್ಸ್), ನ. 22– ಸೀಷೆಲ್ಸ್ ದ್ವೀಪದಲ್ಲಿ ಇಂದು ನಡೆದ ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾರತದ 24 ವರ್ಷದ 'ಫೆಮಿನಾ ಮಿಸ್ ಇಂಡಿಯಾ' ಡಯಾನಾ ಹೇಡನ್ ಅವರಿಗೆ 'ವಿಶ್ವಸುಂದರಿ' ಪಟ್ಟ ದೊರೆತಿದೆ.

ಮೊದಲ ರನ್ನರ್‌ಅಪ್ ಆಗಿ 'ಮಿಸ್ ನ್ಯೂಜಿಲೆಂಡ್' ಹಾಗೂ 2ನೇ ರನ್ನರ್‌ಅಪ್ ಆಗಿ 'ಮಿಸ್ ದಕ್ಷಿಣ ಆಫ್ರಿಕಾ' ಆಯ್ಕೆಯಾದರು. ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ವಿವಾದಾತ್ಮಕ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ವಿಜೇತರಾಗಿದ್ದ ಗ್ರೀಸ್ ಸುಂದರಿ ಅವರು ಡಯಾನಾ ಹೇಡನ್ ಅವರಿಗೆ ಕಿರೀಟ ಧಾರಣೆ ಮಾಡಿದರು. ಈ ಮೊದಲು ನಡೆದ 'ಮಿಸ್ ಫೋಟೊಜೆನಿಕ್' ಹಾಗೂ 'ಮಿಸ್ ಪರ್ಸನಾಲಿಟಿ' ಸ್ಪರ್ಧೆಗಳಲ್ಲೂ ಪ್ರಥಮ ಸ್ಥಾನ ಗಳಿಸಿದರು.

1966ರಲ್ಲಿ ರೀಟಾ ಫರಿಯಾ, 1995ರಲ್ಲಿ ಐಶ್ವರ್ಯ ರೈ ಅವರು ಈ ಮೊದಲು ಭಾರತಕ್ಕೆ ಈ ಪ್ರತಿಷ್ಠಿತ 'ವಿಶ್ವಸುಂದರಿ' ಗೌರವ ತಂದಿದ್ದವರು. ಸೀಷೆಲ್ಸ್‌ನಲ್ಲಿ ನಡೆದ ಪ್ರಸಕ್ತ ಸ್ಪರ್ಧೆಯಲ್ಲಿ 86 ದೇಶಗಳ ಸುಂದರಿಯರು ಸ್ಪರ್ಧಿಸಿದ್ದರು.

- **ವೀರಪ್ಪನ್ ಜತೆ ನಕ್ಕೀರನ್ ಗೋಪಾಲನ್ ದಿಢೀರ್ ಭೇಟಿ**

ಚೆನ್ನೈ, ನ. 22 (ಯುಎನ್‌ಐ)– ನಕ್ಕೀರನ್ ಪತ್ರಿಕೆ ಸಂಪಾದಕ ಆರ್.ಆರ್. ಗೋಪಾಲನ್ ಅವರು ಕಾಡುಗಳ್ಳ ವೀರಪ್ಪನ್‌ನನ್ನು ಇಂದು ಕಾಡಿನಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು ಎಂದು ನಕ್ಕೀರನ್ ಪತ್ರಿಕೆ ಮೂಲಗಳು ತಿಳಿಸಿವೆ.

ಶರಣಾಗತಿ ಬಗ್ಗೆ ಚರ್ಚೆ ಮಾಡಲು ಕಾಡಿನಲ್ಲಿ ತನ್ನ ಸ್ಥಾವರಕ್ಕೆ ಬಂದು ಭೇಟಿ ಮಾಡುವಂತೆ ವೀರಪ್ಪನ್ ಕಳೆದ ವಾರ ಗೋಪಾಲನ್ ಅವರಿಗೆ ಕ್ಯಾಸೆಟ್‌ವೊಂದನ್ನು ಕಳಿಸಿಕೊಟ್ಟಿದ್ದ.

50 ವರ್ಷಗಳ ಹಿಂದೆ

ಗುರುವಾರ, 23-11-1972

- **ಮುಲ್ಕಿ ವಿರುದ್ಧ ಚಳವಳಿ ಉಲ್ಬಣ: 3 ರೈಲು ನಿಲ್ದಾಣಗಳ ಮೇಲೆ ದಾಳಿ**

ವಿಜಯವಾಡ, ನ. 22– ಮುಲ್ಕಿ ನಿಯಮಗಳ ವಿರುದ್ಧ ಆಂಧ್ರ ವಿಭಾಗಗಳಲ್ಲಿ ಚಳವಳಿ ಇಂದು ಇನ್ನಷ್ಟು ಉಲ್ಬಣಗೊಂಡು, ಮೂರು ರೈಲು ನಿಲ್ದಾಣಗಳಿಗೆ ಉದ್ರಿಕ್ತ ಗುಂಪು ಬೆಂಕಿ ಇಟ್ಟಿತು. ಚೀರಾಲಾದಲ್ಲಿ ನಿಂತಿದ್ದ ಗೂಡ್ಸ್ ಗಾಡಿಯೊಂದಕ್ಕೆ ಏಳು ಸಾವಿರ ಜನರ ತಂಡ ಬೆಂಕಿ ಹಚ್ಚಿದ್ದರಿಂದ ಡೀಸೆಲ್ ಎಂಜಿನ್ ಹಾಗೂ 30 ವ್ಯಾಗನ್‌ಗಳು ಸುಟ್ಟುಹೋದವು.

ವಿಜಯವಾಡ–ಮದರಾಸ್ ವಿಭಾಗದಲ್ಲಿನ ಚೀರಾಲಾ ರೈಲು ನಿಲ್ದಾಣದಲ್ಲಿ ಇಂದು ಬೆಳಿಗ್ಗೆ ಏಳು ಸಾವಿರ ಮಂದಿಯ ಗುಂಪೊಂದು ನಿಂತಿದ್ದ ಗೂಡ್ಸ್ ರೈಲಿಗೆ ಬೆಂಕಿ ಹಚ್ಚಿದ್ದರಿಂದ, 30 ವ್ಯಾಗನ್‌ಗಳು ಹಾಗೂ ಡೀಸೆಲ್ ಎಂಜಿನ್ ಸಂಪೂರ್ಣವಾಗಿ ಸುಟ್ಟು ಭಸ್ಮವಾದವು ಎಂದು ಇಲ್ಲಿರುವ ದಕ್ಷಿಣ ಮಧ್ಯ ರೈಲ್ವೆ ವಿಭಾಗದ ಕಚೇರಿಗೆ ಅಧಿಕೃತ ಸುದ್ದಿ ಬಂದಿದೆ.

ಈ ಗುಂಪನ್ನು ಚದುರಿಸಲು ರೈಲ್ವೆ ರಕ್ಷಣಾ ಪಡೆಯವರು ಗುಂಡು ಹಾರಿಸಿದರು. ಗುಂಡಿನೇಟಿನಿಂದ ಒಬ್ಬನು ಗಾಯಗೊಂಡ, ಅವನನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

- **ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ರಾಜಾಜಿ ಸಲಹೆ**

ಮದರಾಸ್, ನ. 22– ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತಂದು, ಸಾಧ್ಯವಾದಷ್ಟು ಶೀಘ್ರವಾಗಿ ಹೊಸದಾಗಿ ಚುನಾವಣೆಗಳನ್ನು ನಡೆಸಬೇಕೆಂದು ಸ್ವತಂತ್ರ ಪಕ್ಷದ ನಾಯಕ ಸಿ.ರಾಜಗೋಪಾಲಾಚಾರಿ ಅವರು ಸಲಹೆ ಮಾಡಿದ್ದಾರೆ.

ಎಂ.ಜಿ. ರಾಮಚಂದ್ರನ್ ಮತ್ತು ಅವರ ಗುಂಪಿನವರು ಆರಂಭಿಸಿರುವ ಚಳವಳಿಯ ಫಲವಾಗಿ ತಮಿಳುನಾಡಿನಲ್ಲಿ ಉಂಟಾಗಿರುವ ಬದಲಾವಣೆಯಿಂದ ಉದ್ಭವಿಸಿರುವ ಸಮಸ್ಯೆಗೆ ತಮ್ಮ ಮಟ್ಟಿಗೆ ಇದೊಂದೇ ಪರಿಹಾರವೆಂದು ಅವರು 'ಸ್ವರಾಜ್ಯ' ಪತ್ರಿಕೆಯ ಈಚಿನ ಸಂಚಿಕೆಯಲ್ಲಿ ಬರೆದಿದ್ದಾರೆ.

ದೇಶದ ಎಲ್ಲ ಸಮಸ್ಯೆಗಳಿಗೂ ವಲಸಿಗರೇ ಕಾರಣ ಎನ್ನುವುದರಲ್ಲಿ ಹುರುಳಿದೆಯೇ?

ವಲಸೆಯ ಅರ್ಥಶಾಸ್ತ್ರ ಬೇರೆಯೇ ಹೇಳುತ್ತದೆ

ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಜಗತ್ತಿನಾದ್ಯಂತ ಇಂದು ವಲಸಿಗರ ವಿರುದ್ಧ ಸಿಟ್ಟು ಕಾಣಿಸಿಕೊಳ್ಳುತ್ತಿದೆ. ತಮ್ಮ ಹಲವು ಸಮಸ್ಯೆಗಳಿಗೆ ವಲಸಿಗರೇ ಕಾರಣ ಎಂಬ ಮಾತುಗಳು ಕೇಳಿಬರುತ್ತಿವೆ. ಅವರಿಂದ ತಮಗೆ ಕೆಲಸ ತಪ್ಪುತ್ತಿದೆ, ಮನೆ ಬಾಡಿಗೆ ದರ ಜಾಸ್ತಿಯಾಗುತ್ತಿದೆ, ಕೂಲಿಯ ಮೊತ್ತ ಕಡಿಮೆಯಾಗುತ್ತಿದೆ... ಹೀಗೆ ಆರೋಪಗಳ ಪಟ್ಟಿ ಬೆಳೆಯುತ್ತದೆ.

ವಲಸೆ ಅನ್ನುವುದು ರಾಜಕಾರಣಿಗಳಿಗೆ ಚುನಾವಣೆ ಗೆಲ್ಲುವುದಕ್ಕೆ ಒಂದು ಒಳ್ಳೆಯ ಅಸ್ತ್ರವಾಗಿದೆ. ಇಟಲಿ, ಫ್ರಾನ್ಸ್, ಬ್ರಿಟನ್, ಅಮೆರಿಕ ಎಲ್ಲೆಡೆಯಲ್ಲೂ ವಲಸಿಗರ ಬಗ್ಗೆ ಸಿಟ್ಟು ಇದೆ. ಈ ವಿಷಯವು ಚುನಾವಣೆಯ ಪ್ರಚಾರ ಸಭೆಗಳಲ್ಲೂ ಪ್ರಸ್ತಾಪ ಆಗುತ್ತಿದೆ. ಆದರೆ ನಿಜವಾಗಿ ನಮ್ಮೆಲ್ಲ ಸಮಸ್ಯೆಗಳಿಗೆ ವಲಸೆಯೇ ಕಾರಣವೆ? ಇದಕ್ಕೆ ಸಂಬಂಧಿಸಿದಂತೆ ಅರ್ಥಶಾಸ್ತ್ರದ ಚಿಂತನೆಗಳು ಹಾಗೂ ರಾಜಕೀಯ ಲೆಕ್ಕಾಚಾರಗಳು ತಾಳೆಯಾಗುವುದಿಲ್ಲ. ಅಭಿಜಿತ್ ಬ್ಯಾನರ್ಜಿ ಹಾಗೂ ಎಸ್ತರ್ ಡಫ್ಲೊ ಅವರ ಅಧ್ಯಯನವು ಬೇರೆ ಕಥೆಯನ್ನೇ ಹೇಳುತ್ತದೆ. ಹಲವಾರು ಪ್ರಯೋಗಗಳನ್ನು ಆಧರಿಸಿ 'ಗುಡ್ ಎಕನಾಮಿಕ್ಸ್ ಫಾರ್ ಹಾರ್ಡ್ ಟೈಮ್ಸ್' ಪುಸ್ತಕದಲ್ಲಿ ತಮ್ಮ ಅಧ್ಯಯನವನ್ನು ಅವರು ದಾಖಲಿಸಿದ್ದಾರೆ.

ಅವರು ಹೇಳುವಂತೆ ಮೊದಲನೆಯದಾಗಿ, ವಲಸಿಗರ ಸಂಖ್ಯೆ ಅನೇಕರು ಭಾವಿಸಿರುವಷ್ಟು ಹೆಚ್ಚಿಗೆ ಇಲ್ಲ. 1960ಕ್ಕೆ ಹೋಲಿಸಿದರೆ ಇಂದು ವಲಸೆ ಬಂದವರ ಒಟ್ಟು ಸಂಖ್ಯೆಯಲ್ಲಿ ಹೆಚ್ಚಳವೇನೂ ಆಗಿಲ್ಲ. ಅದು ಒಟ್ಟು ಜನಸಂಖ್ಯೆಯ ಸುಮಾರು ಶೇ 3ರಷ್ಟೇ ಇದೆ. ಯುರೋಪಿಗೆ ಹೊರಗಿನಿಂದ ಬಂದವರ ಸಂಖ್ಯೆ ಅಲ್ಲಿಯ ಒಟ್ಟು ಜನಸಂಖ್ಯೆಯ ಶೇ 0.5ಕ್ಕಿಂತ ಕಡಿಮೆ. ಇವರಲ್ಲಿಯೂ ಹೆಚ್ಚಿನವರು ಕೆಲಸಕ್ಕಾಗಿ, ಕುಟುಂಬದವರನ್ನು ಸೇರಿಕೊಳ್ಳುವುದಕ್ಕಾಗಿ, ಒಟ್ಟಿನಲ್ಲಿ ಕಾನೂನುಬದ್ಧವಾಗಿಯೇ ಬಂದವರು. ಆದರೆ ವಲಸೆ ಬಂದವರ ಸಂಖ್ಯೆಯನ್ನು ಹೆಚ್ಚಿನ ಮಂದಿ ಅತಿಯಾಗಿಯೇ ಕಲ್ಪಿಸಿಕೊಂಡಿದ್ದಾರೆ. ಉದಾಹರಣೆಗೆ, ಇಟಲಿಗೆ ವಲಸೆ ಬಂದವರ ಸಂಖ್ಯೆ ಶೇ 10ರಷ್ಟು. ಆದರೆ ಈ ಸಂಖ್ಯೆ ಶೇ 26ರಷ್ಟು ಇರಬಹುದು ಎಂದು ಜನ ಭಾವಿಸಿದ್ದಾರಂತೆ. ಹಾಗೆಯೇ ಮುಸಲ್ಮಾನ ವಲಸಿಗರ ಸಂಖ್ಯೆಯನ್ನು ಸಾಮಾನ್ಯವಾಗಿ ಸ್ವಲ್ಪ ಹೆಚ್ಚಾಗಿಯೇ ಭಾವಿಸಿಕೊಳ್ಳುವ ಪರಿಪಾಟ ಇದೆ. ಜೊತೆಗೆ ವಲಸಿಗರು ಸುಶಿಕ್ಷಿತರಲ್ಲ, ಬಡವರು, ಸರ್ಕಾರದ ಕೃಪೆಯಲ್ಲಿ ಬದುಕುತ್ತಿರುವವರು... ಹೀಗೆ ಹಲವು ಕಲ್ಪನೆಗಳಿವೆ.

ಇಂತಹ ಕಲ್ಪನೆಗಳಿಗೆ ಆಧಾರ ಬೇಕೆಂದೇನೂ ಇಲ್ಲ. ಆದರೆ ಪುರಾವೆಗಳು ಈ ಬಗೆಯ ಕಲ್ಪನೆಗಳಿಗೆ ವ್ಯತಿರಿಕ್ತವಾಗಿವೆ. ಜನ ಅದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಈ ಭಾವನೆಯ ಹಿಂದೆ ಕೆಲಸ ಮಾಡುತ್ತಿರುವ ತರ್ಕವೊಂದು ನಮ್ಮನ್ನು ದಾರಿತಪ್ಪಿಸುತ್ತಿದೆ. ಅದೇನೆಂದರೆ, ಜಗತ್ತಿನ ಎಲ್ಲೆಡೆ ಬಡವರಿದ್ದಾರೆ. ಅವರ ದೇಶಕ್ಕಿಂತ ನಮ್ಮ ದೇಶದ ಸ್ಥಿತಿ ಉತ್ತಮವಾಗಿದೆ. ಇಲ್ಲಿ ಹೆಚ್ಚು ಸಂಪಾದಿಸಬಹುದು ಅನ್ನುವ ಕಾರಣಕ್ಕೆ ಅವರು ಇಲ್ಲಿಗೆ ಬರುತ್ತಾರೆ. ಅದರಿಂದ ನಮ್ಮಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚುತ್ತದೆ. ಸ್ವಾಭಾವಿಕವಾಗಿಯೇ ಕೂಲಿಯ ಪ್ರಮಾಣ ಕಡಿಮೆಯಾಗುತ್ತದೆ. ಇದರಿಂದ ವಲಸಿಗರಿಗೆ ಲಾಭವಾಗಬಹುದು. ಆದರೆ ಸ್ಥಳೀಯರಿಗೆ ತೊಂದರೆಯಾಗುತ್ತದೆ. ಪೂರೈಕೆ ಹೆಚ್ಚಾದರೆ ಬೆಲೆ ಕಡಿಮೆಯಾಗುತ್ತದೆ ಅನ್ನುವುದು ಅರ್ಥಶಾಸ್ತ್ರದ ಪ್ರಖ್ಯಾತ ಬೇಡಿಕೆ- ಪೂರೈಕೆ ನಿಯಮ. ಇದು ನಮ್ಮನ್ನು ಹಾದಿತಪ್ಪಿಸುತ್ತಿದೆ. ಆದರೆ ಕಾರ್ಮಿಕ ಮಾರುಕಟ್ಟೆಯ ವಿಷಯದಲ್ಲಿ ಬೇಡಿಕೆ-ಪೂರೈಕೆಯ ನಿಯಮ ಕೆಲಸ ಮಾಡುವುದಿಲ್ಲ. ಎಷ್ಟೇ ದೊಡ್ಡ ಪ್ರಮಾಣದಲ್ಲಿ ಜನ ವಲಸೆ ಬಂದರೂ ಸ್ಥಳೀಯರ ಕೂಲಿಗಾಗಲೀ ಉದ್ಯೋಗಕ್ಕಾಗಲೀ ಜನ ಭಾವಿಸಿದ ಮಟ್ಟಿಗೆ ತೊಂದರೆ ಆಗುವುದಿಲ್ಲ. ವಾಸ್ತವದಲ್ಲಿ ವಲಸೆಯಿಂದ ವಲಸಿಗರು ಹಾಗೂ ಸ್ಥಳೀಯರು ಇಬ್ಬರ ಸ್ಥಿತಿಯೂ ಉತ್ತಮಗೊಳ್ಳುತ್ತದೆ. ಇದು ಬ್ಯಾನರ್ಜಿ ದಂಪತಿಯ ಅಧ್ಯಯನ ಸಾಬೀತುಪಡಿಸುವ ಸಂಗತಿ. ಹೆಚ್ಚಿನ ಅಧ್ಯಯನಗಳು ಇದನ್ನೇ ಹೇಳುತ್ತವೆ.

ವಲಸಿಗರು ಹಣವನ್ನು ಖರ್ಚು ಮಾಡುತ್ತಾರೆ. ಹೋಟೆಲ್‌ಗಳಿಗೆ ಹೋಗುತ್ತಾರೆ, ಕ್ಷೌರ ಮಾಡಿಸಿಕೊಳ್ಳುತ್ತಾರೆ, ಸಾಮಾನುಗಳನ್ನು ಕೊಳ್ಳುತ್ತಾರೆ. ಇವೆಲ್ಲವೂ ಉದ್ಯೋಗವನ್ನು ಸೃಷ್ಟಿಸುತ್ತವೆ. ಕೂಲಿಯ ಮೊತ್ತವನ್ನೂ ಹೆಚ್ಚಿಸುತ್ತವೆ. ವಲಸಿಗರು ತಾವು ದುಡಿದ ಹಣವನ್ನು ಅಲ್ಲೇ ಖರ್ಚು ಮಾಡದೆ ತಮ್ಮ ತಾಯಿನಾಡಿಗೆ ಕಳುಹಿಸಿದಾಗಷ್ಟೇ ಆತಿಥೇಯ ದೇಶಗಳಲ್ಲಿ ಬೇಡಿಕೆಯ ಸಮಸ್ಯೆ ಉಂಟಾಗುತ್ತದೆ. ವಲಸಿಗರನ್ನು ಹೊರಗೆ ಕಳುಹಿಸಿಬಿಟ್ಟರೆ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ ಅನ್ನುವ ವಾದಕ್ಕೂ ಆಧಾರವಿಲ್ಲ. 1964ರಲ್ಲಿ ಮೆಕ್ಸಿಕೊದ ವಲಸಿಗರನ್ನು ಕ್ಯಾಲಿಫೋರ್ನಿಯಾದಿಂದ ಹೊರಕ್ಕೆ ಅಟ್ಟಲಾಯಿತು. ಆದರೆ ಅದರಿಂದ ಕೂಲಿಯ ಮೊತ್ತದಲ್ಲಾಗಲೀ ಉದ್ಯೋಗದ ಸಂಖ್ಯೆಯಲ್ಲಾಗಲೀ ಹೆಚ್ಚಳವಾಗಲಿಲ್ಲ. ಯಾಕೆಂದರೆ ಅಲ್ಲಿ ಉತ್ಪಾದನೆಯನ್ನು ಯಾಂತ್ರೀಕರಿಸಲಾಯಿತು. ಕಟಾವು ಮಾಡಲು ಯಂತ್ರಗಳನ್ನು ಬಳಸಲಾಯಿತು.

ವಲಸೆ ಕಾರ್ಮಿಕರು ನಿಜವಾಗಿ ಮಾಡುವ ಕೆಲಸಗಳಾದರೂ ಎಂತಹವು? ಸ್ಥಳೀಯರು ಮಾಡಬಯಸದ ಕೆಲಸಗಳನ್ನು ಮಾಡುತ್ತಾರೆ. ಉದಾಹರಣೆಗೆ, ಹಲ್ಲು ಹಾಸುಗಳನ್ನು ಕತ್ತರಿಸಿ ಒಪ್ಪ ಮಾಡುವುದು, ಮಕ್ಕಳು ಹಾಗೂ ಕಾಯಿಲೆಯವರನ್ನು ನೋಡಿಕೊಳ್ಳುವಂತಹ ಕೆಲಸಗಳನ್ನು ಮಾಡುತ್ತಾರೆ. ಅದರಿಂದ ಸ್ಥಳೀಯ ಕಾರ್ಮಿಕರಿಗೆ ಅನುಕೂಲವೇ ಆಗುತ್ತದೆ. ಏಕೆಂದರೆ ಅವರು ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳಬಹುದು. ಅದರಲ್ಲೂ ಹೆಚ್ಚಿನ ಕೌಶಲ ಇರುವ ಮಹಿಳೆಯರು ಶಿಶುಪಾಲನೆ, ಅಡುಗೆ, ಸ್ವಚ್ಛಗೊಳಿಸುವ ಕೆಲಸ ಇವೆಲ್ಲವನ್ನೂ ವಲಸೆ ಕಾರ್ಮಿಕರಿಗೆ ಒಪ್ಪಿಸಿ ಹೊರಗೆ ಕೆಲಸ ಮಾಡಲು ಅನುಕೂಲವಾಗುತ್ತದೆ.

ವಾಸ್ತವದಲ್ಲಿ ಜನ ವಲಸೆ ಹೋಗಲು ಬಯಸುವುದಿಲ್ಲ. ಉದ್ಯೋಗ ಹಾಗೂ ಹಣ ಸಂಪಾದಿಸಲು ವಲಸೆ ಹೋಗುವವರ ಸಂಖ್ಯೆಯೂ ಕಡಿಮೆ. ಇದಕ್ಕೆ ಬ್ಯಾನರ್ಜಿ–ಎಸ್ತರ್ ಅವರು ಹಲವು ಪ್ರಯೋಗಗಳನ್ನು ಉಲ್ಲೇಖಿಸುತ್ತಾರೆ. ಜನ ತಮ್ಮದು ಬಡ ದೇಶ ಅನ್ನುವ ಕಾರಣಕ್ಕೆ ವಲಸೆ ಹೋಗುವುದಿಲ್ಲ. ಇರಾಕ್, ಸಿರಿಯಾ, ಗ್ವಾಟೆಮಾಲಾ ಇವೆಲ್ಲಾ ಅಂತಹ ಬಡರಾಷ್ಟ್ರಗಳೇನಲ್ಲ. ಇರಾಕಿನಲ್ಲಿನ ತಲಾ ವರಮಾನ ಲೈಬೀರಿಯಾಗಿಂತ 20 ಪಟ್ಟು ಹೆಚ್ಚು. ಬಡತನ ಸಮಸ್ಯೆಯಲ್ಲ. ಉತ್ತರ ಮೆಕ್ಸಿಕೊದಲ್ಲಿ ಡ್ರಗ್ಸ್ ಕಾಳಗದಿಂದಾಗಿ ನಡೆಯುತ್ತಿರುವ ಹಿಂಸೆ, ಗ್ವಾಟೆಮಾಲಾದಲ್ಲಿನ ಮಿಲಿಟರಿ ಒಳಸಂಚು, ಮಧ್ಯಪ್ರಾಚ್ಯದಲ್ಲಿನ ಸಂಘರ್ಷವು ಜನರ ಬದುಕಿನ ನೆಮ್ಮದಿಯನ್ನು ಕೆಡಿಸಿವೆ. ನೇಪಾಳದಲ್ಲಿ ಕೃಷಿ ನೆಲ ಕಚ್ಚಿದಾಗ ಜನ ವಲಸೆ ಹೋಗಲಿಲ್ಲ, ಆದರೆ ಹಿಂಸೆ ತೀವ್ರವಾದಾಗ ವಲಸೆ ಹೊರಟರು. ಬದುಕುವುದಕ್ಕೆ ಸಾಧ್ಯವೇ ಇಲ್ಲ ಅಂತಾದಾಗ ಮಾತ್ರ ಜನ ವಲಸೆ ಹೋಗುತ್ತಾರೆ.

ಜನ ವಲಸೆ ಹೋಗುವುದಕ್ಕೆ ಇಷ್ಟಪಡದಿರಲು ಹಲವು ಕಾರಣಗಳಿವೆ. ಸ್ಥಳೀಯರೊಡನೆ ಸ್ಪರ್ಧಿಸುವುದು ವಲಸಿಗರಿಗೆ ಕಷ್ಟ. ಒಳ್ಳೆಯ ಕೆಲಸ ಸಿಗುವುದೂ ಕಷ್ಟ. ಪರಿಚಿತರಿದ್ದರೆ ಅನುಕೂಲವಾಗಬಹುದು. ಹಾಗಾಗಿಯೇ ಪರಿಚಿತರಿರುವ ಸ್ಥಳಗಳಿಗೇ ಹೆಚ್ಚಿಗೆ ವಲಸೆ ಹೋಗುತ್ತಾರೆ. ಹೆಚ್ಚಿನ ಕಡೆಗಳಲ್ಲಿ ವಸತಿ ತುಂಬಾ ದುಬಾರಿ. ಹಾಗಾಗಿ ಕೊಳೆಗೇರಿಗಳಲ್ಲಿ, ನಗರದ ಹೊರವಲಯಗಳಲ್ಲಿ, ನೀರು, ನೈರ್ಮಲ್ಯ ಯಾವುದೇ ಸೌಲಭ್ಯಗಳಿಲ್ಲದ ಕಡೆ ತಂಗುತ್ತಾರೆ.

ಈಗ ವಲಸೆ ಇನ್ನೂ ಕಷ್ಟ. ಪ್ರಯಾಣದ ವೆಚ್ಚದಂತಹ ಖರ್ಚುಗಳು ಇರುತ್ತವೆ. ವಲಸಿಗರ ವಿರುದ್ಧವಾಗಿಯೇ ರೂಪಿಸಿರುವ ಇಮಿಗ್ರೇಷನ್ ನಿಯಂತ್ರಣ ವ್ಯವಸ್ಥೆಯನ್ನು ಎದುರಿಸುವ ಕೆಚ್ಚು ಬೇಕು. ಹಾಗಾಗಿ ವಲಸಿಗರಲ್ಲಿ ಅಸಾಧಾರಣ ಪ್ರತಿಭೆ, ಕೌಶಲ, ಮಹತ್ವಾಕಾಂಕ್ಷೆ, ತಾಳ್ಮೆ ಧಾರಾಳವಾಗಿ ಇರುತ್ತದೆ. ಅಮೆರಿಕದ ಸುಮಾರು ಅರ್ಧದಷ್ಟು ದೊಡ್ಡ ಉದ್ದಿಮೆಗಳನ್ನು ಹುಟ್ಟುಹಾಕಿದವರು ವಲಸಿಗರು ಮತ್ತವರ ಮಕ್ಕಳು. ಹೆಚ್ಚು ಮೌಲ್ಯದ ಬ್ರ್ಯಾಂಡ್‌ಗಳನ್ನು ಹೊಂದಿರುವ 13 ಅತಿದೊಡ್ಡ ಕಂಪನಿಗಳಲ್ಲಿ ಒಂಬತ್ತು ಕಂಪನಿಗಳ ಸಂಸ್ಥಾಪಕರು ವಲಸಿಗರು. ಹೆನ್ರಿ ಫೋರ್ಡ್ ಐರ್ಲೆಂಡಿನ ವಲಸಿಗರೊಬ್ಬರ ಮಗ. ಸ್ಟೀವ್ ಜಾಬ್ಸ್ ಅವರ ತಂದೆ ಸಿರಿಯಾದವರು. ಸೆರ್ಜಿ ಬ್ರಿನ್ ಹುಟ್ಟಿದ್ದು ರಷ್ಯಾದಲ್ಲಿ. ಮೈಕ್ ಕ್ಯೂಬಾದ ವಲಸಿಗ. ಒಂದರ್ಥದಲ್ಲಿ ಅಮೆರಿಕದಂತಹ ನಗರಗಳು ಬೆಳೆದಿರುವುದೇ ವಲಸಿಗರಿಂದ. ವಲಸೆಯು ಆರ್ಥಿಕ ಬೆಳವಣಿಗೆಯ ಒಂದು ಸಹಜ ಪ್ರಕ್ರಿಯೆ.

ಹೆಚ್ಚಿನ ಅಧ್ಯಯನಗಳು ಗಮನಿಸಿರುವಂತೆ, ಇಂದು ಜಗತ್ತನ್ನು ಕಾಡುತ್ತಿರುವ ನಿರುದ್ಯೋಗ, ಅಸಮಾನತೆ, ಬಡತನ ಇವಕ್ಕೆಲ್ಲಾ ಸರ್ಕಾರಗಳು ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಕಾರಣ. ವಲಸಿಗರನ್ನು ಹೊರಗೆ ಕಳುಹಿಸಿದರೂ ಈ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಈ ಬಗ್ಗೆ ಗಂಭೀರ ಚರ್ಚೆ ಆಗಬೇಕು. ಆದರೆ ಇಂದಿನ ರಾಜಕೀಯ ಸೃಷ್ಟಿಸಿರುವ ವಿಷದ ವಾತಾವರಣದಲ್ಲಿ ವಸ್ತುನಿಷ್ಠ ಚರ್ಚೆ ಅಸಾಧ್ಯವಾಗಿದೆ.

ಚುರುಮುರಿ



ಕನ್ಯಾ ಭಾಗ್ಯ

• ಮಣ್ಣೆರಾಜು

ಚಟ್ನಿಹಳ್ಳಿ ಐನೋರ ಹೋಟೆಲ್‌ನಲ್ಲಿ ಟೀ ಸೇವನೆಗೆ ಸೇರಿದ್ದ ಊರ ಹುಡುಗರ ಹಳಸಲು ಮುಖ ನೋಡಿ ತಿಮ್ಮಜ್ಜನ ಕರುಳು ಚುರ್ ಅಂದಿತು.

'ಮದ್ವೆ ಆಗಲು ಹೆಣ್ಣು ಸಿಗ್ತಿಲ್ಲ ಅಂತ ಕುಂದಗೋಳದ ರೈತ ಯುವಕರು ತಹಶೀಲ್ದಾರರ ಬಳಿ ಗೋಳು ತೋಡಿಕೊಂಡಿದ್ದಾರೆ ಕಣ್ರೋ...' ಎಂದು ಪೇಪರ್ ಓದಿ ಹೇಳಿದ ತಿಮ್ಮಜ್ಜ, 'ಅನ್ನದಾತರ ಮನೆ ತುಂಬಿ ಅವರ ಬಾಳು ಬಂಗಾರ ಮಾಡಿ ಅಂತ ಸರ್ಕಾರ ಹೆಣ್ಣುಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು' ಅಂದ.

'ರೈತ ವರಗಳು ಬೇಡವಂತೆ, ಸಿಟಿಯಲ್ಲಿ ತಿಂಗಳ ಸಂಬಳ ಪಡೆಯೋ ಗಂಡುಗಳೇ ಬೇಕಂತೆ. ಹಳ್ಳಿಗಳಲ್ಲಿ ಅನುಕೂಲವಿಲ್ಲ, ರೈತರಿಗೆ ಆದಾಯವಿಲ್ಲ, ಸಂಸಾರ ಸಾಕುವ ಸಾಮರ್ಥ್ಯವಿಲ್ಲ ಅನ್ನುತ್ತಾರೆ ಕನ್ಯಾಮಣಿಗಳು' ತಿಪ್ಪೇಶಿ ನೊಂದು ಹೇಳಿದ.

'ನಿನಗೇನು ಕಮ್ಮಿಯಾಗಿದೆ? ಕಣಜದ ತುಂಬಾ ಬೆಳೀತೀಯಾ, ಹತ್ತು ಸಂಸಾರ ಸಾಕುವಷ್ಟು ದುಡೀತೀಯಾ' ಅಂದ ತಿಮ್ಮಜ್ಜ.

'ಮದ್ವೆ ಆಗಬೇಕು ಅಂತ ಹಳೆ ಮನೆ ರಿಪೇರಿ ಮಾಡಿಸಿ ಬಾತ್‌ರೂಂ, ಬೆಡ್‌ರೂಂ, ಕಿಚನ್, ಟಾಯ್ಲೆಟ್ ಕಟ್ಟಿಸಿದೆ. ಆದ್ರೂ ಹೆಣ್ಣು ಸಿಗಲಿಲ್ಲ' ಸೀನ ಸಂಕಟಪಟ್ಟ.

'ಹೊಸ ಹೆಂಡ್ತಿ ಹೊಗೆಯಲ್ಲಿ ಉಸಿರುಕಟ್ಟಬಾರದು ಅಂತ ಗ್ಯಾಸ್ ಸ್ಟೌವ್ ತಂದೆ, ಕುಕ್ಕರ್, ವಾಷಿಂಗ್ ಮೆಷಿನ್ ತಂದಿಟ್ಟಿದ್ದೀನಿ, ಹೆಂಡ್ತೀನ ಓಡಾಡಿಸಲು ಬೈಕ್ ಇಟ್ಟುಕೊಂಡಿದ್ದೀನಿ. ಇದಕ್ಕಿಂತ ಇನ್ನೇನು ಮಾಡಲಿ?' ಪುಟ್ಟೇಶಿ ದುಃಖ ಹೇಳಿಕೊಂಡ.

'ಕನ್ಯಾ ಭಾಗ್ಯ ಯೋಜನೆ ಜಾರಿಗೆ ತಂದು ರೈತರ ವಂಶ ಉಳಿಸಿ ಅಂತ ಮಂತ್ರಿಗೆ ಮನವಿ ಮಾಡಬೇಕು' ಅಂದ ತಿಮ್ಮಜ್ಜ.

'ಮಂತ್ರೀನ ಕೇಳಿಕೊಂಡ್ವಿ, ಕೃಷಿ ಸಾಲ, ಗೊಬ್ಬರದ ಸಬ್ಸಿಡಿ ಕೊಡ್ತೀವಿ, ಬೇಕಾದ್ರೆ ಅನ್ನ ಭಾಗ್ಯದಲ್ಲಿ ಇನ್ನೆರಡು ಕೆಜಿ ಅಕ್ಕಿ ಜಾಸ್ತಿ ಕೊಡ್ತೀವಿ, ಕನ್ಯಾ ಭಾಗ್ಯ ಮಾತ್ರ ಸಾಧ್ಯವಿಲ್ಲ ಅಂದುಬಿಟ್ರು...' ಶಿವಲಿಂಗ ಬೇಸರದಿಂದ ಟವೆಲ್ ಒದರಿ ಎದ್ದ.

ಸಂಗತ

ರಾಜಕೀಯ ಪ್ರಜ್ಞೆ ಮತ್ತು ರಾಜಕಾರಣ

ದೇಶದ ಸಕಲ ಆಗುಹೋಗುಗಳನ್ನೂ ನಿರ್ಧರಿಸುವ ಪ್ರಸ್ತುತ ರಾಜಕೀಯ ವ್ಯವಸ್ಥೆ ಬಗೆಗೆ ದೇಶದಲ್ಲಿರುವ ಯಾರೂ ನಿರ್ಲಿಪ್ತರಾಗಿ ಉಳಿಯಲು ಸಾಧ್ಯವಿಲ್ಲ

• ಡಾ. ಆರ್.ಲಕ್ಷ್ಮೀನಾರಾಯಣ

ಪ್ರಸ್ತುತ ಸಂದರ್ಭದಲ್ಲಿ ಎಲ್ಲರೂ ಕೇಳಿಕೊಳ್ಳಲೇಬೇಕಾದ ವಿಚಾರವೊಂದನ್ನು ಎಚ್.ಕೆ.ಶರತ್ ತಮ್ಮ ಲೇಖನದಲ್ಲಿ (ಸಂಗತ, ನ. 15) ಮುಂದಿಟ್ಟಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿರುವುದರಿಂದ ದೇಶದ ಸಕಲ ಆಗುಹೋಗುಗಳನ್ನೂ ನಿರ್ಧರಿಸುವ ಪ್ರಸ್ತುತ ರಾಜಕೀಯ ವ್ಯವಸ್ಥೆ ಬಗೆಗೆ ದೇಶದಲ್ಲಿರುವ ಯಾರೂ ನಿರ್ಲಿಪ್ತರಾಗಿ ಉಳಿಯಲು ಸಾಧ್ಯವಿಲ್ಲ.

ರಾಜಪ್ರಭುತ್ವವಿದ್ದಾಗ ಹೇಳಬಹುದಾಗಿದ್ದ 'ಯಾರೇ ಅಧಿಕಾರಕ್ಕೆ ಬಂದರೂ ರಾಗಿ ಬೀಸೋದು ತಪ್ಪಲ್ಲ' ಎನ್ನುವ ಮಾತನ್ನು ಈಗ ನಾವು ಆಡಿಕೊಂಡು ಸುಮ್ಮನಿದ್ದುಬಿಡಲು ಆಗುವುದಿಲ್ಲ. ಅದರರ್ಥ ಪ್ರಜೆಗಳೆಲ್ಲರೂ ಜಾಗೃತವಾದ ರಾಜಕೀಯ ಪ್ರಜ್ಞೆಯನ್ನು ಹೊಂದಿದ್ದು, ತಮ್ಮ ಮತದ ಶಕ್ತಿಯನ್ನು ಅರ್ಥ ಮಾಡಿಕೊಂಡು, ಆಮಿಷಗಳಿಗೆ ಬಲಿ ಬೀಳದೆ ಚುನಾವಣೆಯಲ್ಲಿ ದೇಶವನ್ನು ಮುನ್ನಡೆಸಿಕೊಂಡು ಹೋಗಲು ಸಮರ್ಥವೆಂದು ತಮಗೆ ಅನ್ನಿಸಿದ ಪಕ್ಷವೊಂದರ ಪರವಾಗಿ ತಮ್ಮ ಒಲವಿನಂತೆ ಮತ ನೀಡಬೇಕಾಗುತ್ತದೆ.

ಇನ್ನು ಸಾಹಿತಿಗಳು, ವೈದ್ಯರು, ವಕೀಲರು, ಇತಿಹಾಸಕಾರರು, ಪತ್ರಕರ್ತರಂತಹ ಸಮಾಜದ ಬೇರೆ ಬೇರೆ ವರ್ಗಗಳವರು ಎಲ್ಲರಂತೆಯೇ ರಾಜಕೀಯ ನಿಲುವು, ಧೋರಣೆ ಹೊಂದಿರುವುದು ಅರ್ಥವಾಗುವಂಥದ್ದೇ ಮತ್ತು ಅದು ಅವರ ತೀಕ್ಷ್ಣ ರಾಜಕೀಯ ಪ್ರಜ್ಞೆಯ ದ್ಯೋತಕವೂ ಹೌದು. ಆದರೆ ಅವರು ರಾಜಕೀಯ ಪಕ್ಷವೊಂದರ ಸಕ್ರಿಯ ಸದಸ್ಯರಾಗಿ ಇಲ್ಲವೆ ಯಾವುದೋ ಒಂದು ಪಕ್ಷದ ಪರವಾಗಿ ವೇದಿಕೆಗಳನ್ನು ರಚಿಸಿಕೊಂಡು ಪಕ್ಷವೊಂದರ ಸಕ್ರಿಯ ಸದಸ್ಯರಿಗಿಂತ ಹೆಚ್ಚಾಗಿ ಆಳುವ ಸರ್ಕಾರವೊಂದನ್ನು ಇಲ್ಲವೆ ತಮ್ಮ ಒಲವಿನ ರಾಜಕೀಯ ಪಕ್ಷವೊಂದನ್ನು ಸಮರ್ಥಿಸುವುದನ್ನೋ ಇಲ್ಲವೆ ಟೀಕಿಸುವುದನ್ನೋ ಮಾಡತೊಡಗಿದಾಗ ಅವರ ಬರಹ ಇಲ್ಲವೆ ಸಾಹಿತ್ಯ, ಅವರ ವೈದ್ಯಕೀಯ ಜ್ಞಾನ, ಕಾನೂನು ಜ್ಞಾನ ಗೌಣವಾಗಿ ಅವರು ರಾಜಕೀಯಸ್ಥರೆಂದೇ, ಒಂದು ಪಕ್ಷದವರೆಂದೇ ಮುಖ್ಯವಾಗಿ ಗುರುತಿಸಲ್ಪಡುತ್ತಾರೆ; ಮತ್ತು ಗುರುತಿಸಲ್ಪಡಬೇಕಾಗುತ್ತದೆ. ಆಗ ಅದರ ಹಿಂದೆ ಅಧಿಕಾರದ ಆಸೆಯೂ ಇರಬಹುದು. ಆಗ ಅಂಥವರಿಗೆ, ಅಂಥವರ ಮಾತುಗಳಿಗೆ ರಾಜಕಾರಣಿಗಳಿಗೆ ನೀಡುವ ಗೌರವ, ಬೆಲೆಗಿಂತ ಹೆಚ್ಚಿನ ಗೌರವ, ಬೆಲೆ ಇರುವುದಿಲ್ಲ.

ನಿಷ್ಪಕ್ಷಪಾತ ದೃಷ್ಟಿಯಿಂದ ಸಾಹಿತಿಗಳು, ವೈದ್ಯರು, ಸಮಾಜಸೇವಾ ಕಾರ್ಯಕರ್ತರು, ಗೌರವಾನ್ವಿತರು ಯಾವುದೇ ಪಕ್ಷದ ನೇತೃತ್ವದ ಸರ್ಕಾರಕ್ಕೆ ತಮ್ಮದೇ ಒಂದು ವೇದಿಕೆಯ ಮೂಲಕ ರಾಜಕೀಯ ಸಲಹೆಗಳನ್ನು ನೀಡುವುದು, ಇಲ್ಲವೆ ತಪ್ಪಿ ನಡೆದಾಗ ಟೀಕಿಸುವುದು ಮಾಡಿದರೆ ಅದನ್ನು ಯಾರೂ ತಪ್ಪೆನ್ನುವುದಿಲ್ಲ. ಅದು ಸಮಾಜಕ್ಕೆ ಅರ್ಥವಾಗುತ್ತದೆ ಮತ್ತು ಅದನ್ನು ಗುರುತಿಸುತ್ತದೆ. ಹಿಂದೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ ಅವರು ಆಗಿನ ಆಳುವ ಸರ್ಕಾರದ ಸರ್ವಾಧಿಕಾರಿ ಧೋರಣೆಯ ವಿರುದ್ಧ ಪಕ್ಷರಾಜಕಾರಣದಿಂದ ದೂರವಾದಂಥ ಹೋರಾಟವೊಂದನ್ನು ರೂಪಿಸಿದ್ದರು. ಆಗ ಜನಸಾಮಾನ್ಯರೊಂದಿಗೆ ಮೇಲೆ ಹೆಸರಿಸಲಾದ ಸಮಾಜದ ಪ್ರತಿಷ್ಠಿತ ವರ್ಗದ ಎಲ್ಲರೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕೈಜೋಡಿಸಿದ್ದರು. ಪತ್ರಿಕೆಗಳೂ ಆಗ ಅತ್ಯಂತ ಧೀಮಂತವಾಗಿಯೇ ನಡೆದುಕೊಂಡವು.

ಆದರೆ ಸಮಷ್ಟಿ ದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತಾಸಕ್ತಿಯಿಂದ ಯಾವುದೇ ಸರ್ಕಾರ ಕೈಗೊಳ್ಳುವಂಥ ಕ್ರಮಗಳು ಅಥವಾ ಅದರ ನಡೆ ಸರಿಯಿದ್ದಾಗಲೂ ಬೇಕೆಂದೇ ರಂಧ್ರಾನ್ವೇಷಣೆ ಮಾಡುವುದು, ಅದರ ಒಳ್ಳೆಯ ಕಾರ್ಯಗಳಿಗೆ ಕುರುಡಾಗಿರುವುದು, ಯಾವುದೋ ಒಂದು ಪಕ್ಷದ ಹಿತಾಸಕ್ತಿಯನ್ನೇ ಮುಂದೆ ಮಾಡುವುದು, ಅದರ ನಡೆ ಹೇಗೇ ಇರಲಿ ಅದರ ಮುಖವಾಣಿಯಂತೆ ಮಾತಾಡುವುದು, ತಮ್ಮ ಒಲವಿನ ರಾಜಕೀಯ ಪಕ್ಷ ಏನೇ ತಪ್ಪು ಮಾಡಿದರೂ ಅದಕ್ಕೆ ಪೂರ್ತಿ ಕುರುಡಾಗಿ, ಇನ್ನೊಂದು ಪಕ್ಷ ಸರಿಯಾಗಿದ್ದಾಗಲೂ ಮೆಚ್ಚದೆ ಅಥವಾ ಸಮರ್ಥಿಸದೆ ಇರುವುದನ್ನೇ ರಾಜಕೀಯ ಎನ್ನುವುದು ಹಾಗೂ ರಾಜಕೀಯವನ್ನು ಬೆರೆಸುವುದು ಎನ್ನುವುದು.

ಸಕ್ರಿಯ ರಾಜಕಾರಣಿಗಳು, ಅಧಿಕಾರದಲ್ಲಿರುವ ಮಂತ್ರಿಗಳು ಜನರ ಹಿತವನ್ನು ಕಡೆಗಣಿಸಿ, ಸಾರ್ವಜನಿಕರ ಸಮಸ್ಯೆಗಳಿಗೆ ಮುಖ ತಿರುಗಿಸಿ ತಮ್ಮ ಅಧಿಕಾರ ಉಳಿಸಿಕೊಳ್ಳಲು, ಹಣ ಮಾಡಲು, ಪಕ್ಷದ ಹಿತ ಕಾಪಾಡಲು ಮಾಡುವಂಥದ್ದೆಲ್ಲವೂ ರಾಜಕೀಯ ಬೆರೆಸುವುದು, ರಾಜಕಾರಣ ಮಾಡುವುದು ಎನಿಸುತ್ತವೆ. ಇಂಗ್ಲಿಷಿನಲ್ಲಿ 'ಪೊಲಿಟಿಕಿಂಗ್' ಎನ್ನುವುದು ಇದನ್ನೇ. ಇದಕ್ಕೆ ಇರುವುದು ಕೆಟ್ಟ ಅರ್ಥವೇ; ಅಗೌರವದ ಅರ್ಥವೇ. ಇದನ್ನು ಮಂತ್ರಿ, ಸಾಹಿತಿ, ಪತ್ರಕರ್ತ ಯಾರೇ ಮಾಡಿದರೂ ಅದು ರಾಜಕಾರಣವೇ, ರಾಜಕೀಯವೇ.

ಹಲವಾರು ಕೋಮುಗಳು, ಸಾವಿರಾರು ಜಾತಿಗಳಿಂದ ಇಡಿಕಿರಿದಿರುವ ನಮ್ಮ ದೇಶದ ಸಂದರ್ಭದಲ್ಲಿ, ಆಳುವ ಸರ್ಕಾರಗಳು ರಾಜಕೀಯವನ್ನು ಬೆರೆಸದೆ ಅರ್ಥಾತ್ ಪೊಲಿಟಿಕಿಂಗ್ ಮಾಡದೆ ಅಥವಾ ಮಾಡಿದರೂ ಅದು ಅತ್ಯಂತ ಕನಿಷ್ಠ ಪ್ರಮಾಣದಲ್ಲಿ ಇರುವ ಹಾಗೆ ನೋಡಿಕೊಳ್ಳುವುದೆಂದರೆ ಅದೊಂದು ಕತ್ತಿಯಂಚಿನ ನಡಿಗೆಯ ಹಾಗೆ. ಯಾವುದೇ ಪಕ್ಷದ ನೇತೃತ್ವದ ಸರ್ಕಾರವೇ ಆದರೂ ಕತ್ತಿಯಂಚಿನ ನಡಿಗೆಗೆ ತಪ್ಪಿದರೆ ಅದನ್ನು ಮತ್ತೆ ಹಳಿಗೆ ತರುವ ಹೊಣೆಗಾರಿಕೆ ಎಲ್ಲ ಪ್ರಜ್ಞಾವಂತ ರಾಜಕಾರಣಿಗಳು, ಪ್ರಜೆಗಳು, ಬರಹಗಾರರು, ವಕೀಲರು ಮತ್ತು ವೈದ್ಯರದ್ದಾಗಿದೆ.

ವಾಚಕರ ವಾಣಿ

ವಿವಾಹಿತ ಉದ್ಯೋಗ ಆಕಾಂಕ್ಷಿಗೆ ಸಲ್ಲಲಿ ನ್ಯಾಯ

ಶಿಕ್ಷಕರ ಹುದ್ದೆ ನೇಮಕಾತಿಗೆ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ ಕಾರಣಕ್ಕಾಗಿ ತಾತ್ಕಾಲಿಕ ಆಯ್ಕೆಪಟ್ಟಿಯಿಂದ ಕೈಬಿಟ್ಟಿರುವ ವಿವಾಹಿತ ಮಹಿಳಾ ಅಭ್ಯರ್ಥಿಗಳಲ್ಲಿ (ಪ್ರ.ವಾ., ನ. 22) ನನ್ನಂತಹ ನೂರಾರು ಮಂದಿ ಸೇರಿದ್ದಾರೆ. ಸರ್ಕಾರಿ ಉದ್ಯೋಗ ಪಡೆಯುವ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಗಂಭೀರವಾದ ಸಮಸ್ಯೆ ಇದಾಗಿದೆ. ತಂದೆಯಿಂದ ಎಲ್ಲವನ್ನೂ ಪಡೆದುಕೊಂಡು ಶಿಕ್ಷಣ ಮುಗಿಸಿ ಉದ್ಯೋಗ ಪಡೆಯುವ ಸಂದರ್ಭದಲ್ಲಿ ಅನ್ಯಾಯವಾಗುತ್ತಿರುವುದು ಖಂಡನೀಯ.

ಡಾ. ಗೀತಾಂಜಲಿ ಮುದಕವಿ, ಚಿಕ್ಕೋಡಿ

ಕೇಬಲ್ ಮಾಫಿಯಾದ ಕಪಿಮುಷ್ಟಿ

ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಉದ್ಘಾಟನಾ ಸಮಾರಂಭದ ನೇರ ವೀಕ್ಷಣೆಗಾಗಿ ನಾನು ಇದೇ 20ರಂದು ಸಂಜೆ ಭಾರತೀಯ ಕಾಲಮಾನ 7.30ಕ್ಕೆ ಟಿ.ವಿ.ಯ ಸ್ಪೋರ್ಟ್ಸ್ ಚಾನೆಲ್‌ನಲ್ಲಿ ಹುಡುಕಾಡಿದರೂ ಪ್ರಸಾರ ಲಭ್ಯವಿರಲಿಲ್ಲ. ನಮ್ಮ ಕೇಬಲ್ ಆಪರೇಟರ್‌ಗೆ ಕರೆ ಮಾಡಿದಾಗ, ಈ ಪ್ರಸಾರದ ಹಕ್ಕು ಪಡೆದಿರುವ ಸ್ಪೋರ್ಟ್ಸ್– 18 ಒಂದು ಪೇ ಚಾನೆಲ್ ಆಗಿದ್ದು, ಪ್ರತ್ಯೇಕ ಹಣ ಪಾವತಿಸಿ ಅದರ ಸಂಪರ್ಕ ಪಡೆಯಬೇಕು ಎಂದು ತಿಳಿಸಿದರು. ಈಗಾಗಲೇ ಕೇಬಲ್‌ನವರು ಪ್ರತೀ 28 ದಿನಗಳಿಗೊಮ್ಮೆ (ನೆನಪಿರಲಿ, ಒಂದು ತಿಂಗಳು ಎಂದರೆ ಕೇಬಲ್ ಮತ್ತು ಮೊಬೈಲ್ ಕಂಪನಿಗಳ ಲೆಕ್ಕದಲ್ಲಿ 28 ದಿನಗಳು ಮಾತ್ರ!) ₹ 280ರಿಂದ 300 ಅನ್ನು ಪ್ಯಾಕೇಜ್ ಲೆಕ್ಕದಲ್ಲಿ ಪಡೆಯುತ್ತಾರೆ. ಒಂದೆರಡು ವರ್ಷಗಳ ಹಿಂದೆ ಕೇಬಲ್ ಸಂಪರ್ಕದಲ್ಲಿ ಲಭ್ಯವಿದ್ದ ಯಾವುದೇ ಚಾನೆಲ್‌ಗಳನ್ನು ವೀಕ್ಷಿಸಬಹುದಾಗಿತ್ತು. ಆದರೆ ಇದೀಗ ಭಾಷಾವಾರು ಪ್ರಾಂತ್ಯಗಳಿಗೆ ಅನುಗುಣವಾಗಿ ಆಯಾ ರಾಜ್ಯಕ್ಕೆ ಆಯಾ ಭಾಷೆಯ ಪ್ಯಾಕೇಜ್ ಮಾಡಿ, ಉಳಿದಂತೆ ದೂರದರ್ಶನದವರ ಉಚಿತ ಚಾನೆಲ್‌ಗಳನ್ನು ನೀಡುತ್ತಿದ್ದಾರೆ. ಇದರಿಂದ ವೀಕ್ಷಕರು ತಮಗೆ ಬೇಕಾದ ಬೇರೆ ಭಾಷೆಯ ಉತ್ತಮ ಕಾರ್ಯಕ್ರಮಗಳು ಹಾಗೂ ಕ್ರೀಡಾ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಧ್ಯವಾಗುತ್ತಿಲ್ಲ.

ಇಂದು ಗ್ರಾಹಕರು ಕೇಬಲ್ ಮಾಫಿಯಾದ ಕಪಿಮುಷ್ಟಿಯಲ್ಲಿ ಸಿಲುಕಿದ್ದಾರೆ. ಇವರನ್ನು ನಿಯಂತ್ರಿಸಬೇಕಾದ 'ಟ್ರಾಯ್' ಗ್ರಾಹಕರ ಕೈಗೆ ಸಿಗುತ್ತಿಲ್ಲ. ಇನ್ನು ಸುದ್ದಿ ಚಾನೆಲ್‌ಗಳಿಗೆ ಕೇಬಲ್‌ನವರೇ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿರುವುದರಿಂದ ಕೇಬಲ್ ಗ್ರಾಹಕರಿಗೆ ಆಗುತ್ತಿರುವ ಕಿರಿಕಿರಿಯ ಬಗ್ಗೆ ಯಾರೂ ವರದಿ ಮಾಡುವುದಿಲ್ಲ. ಅಷ್ಟೇಕೆ ರಾಜಕಾರಣಿಗಳೂ ಇವರ ತಂಟೆಗೆ ಹೋಗುವುದಿಲ್ಲ. ಹೋದರೆ ಕೇಬಲ್ ಪ್ರಸಾರ ಬಂದ್ ಮಾಡಬಹುದು, ಇದರಿಂದ ತಾವು ಮೂಲೆಗುಂಪಾಗಬಹುದು ಎಂಬ ಭಯ! ಇನ್ನಾದರೂ ಸಂಬಂಧಿಸಿದವರು ಇತ್ತ ಗಮನಹರಿಸಿ, ವೀಕ್ಷಕರಿಗೆ ಕ್ರೀಡಾ ಚಾನೆಲ್ ಸೇರಿದಂತೆ ಎಲ್ಲಾ ಚಾನೆಲ್‌ಗಳು ಲಭ್ಯವಾಗುವಂತೆ ಮಾಡಲಿ. ಗ್ರಾಹಕರು ಪಾವತಿಸಿದ ಹಣಕ್ಕೆ ನ್ಯಾಯ ದೊರೆಯುವಂತಾಗಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಈಗಲೂ ಅದೇ ಭಕ್ತಿಭಾವ!

ಕರ್ನಾಟಕ ಮಾಧ್ಯಮ ಅಕಾಡೆಮಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ನಟ ಅನಂತನಾಗ್ ಅವರ, 'ನಾನು ಪಕ್ಕಾ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಭಕ್ತ' ಎಂಬ ಹೇಳಿಕೆಯು ತಮಗೆ ಆಘಾತವನ್ನು ಉಂಟುಮಾಡಿತು ಎಂದು ಸೋಮು ಎಸ್. ಘಟ್ಟ ಅವರು ತಿಳಿಸಿದ್ದಾರೆ (ವಾ.ವಾ., ನ. 21). ಕನ್ನಡಿಗರೆಲ್ಲರೂ ಹೆಮ್ಮೆಪಡುವ ನಟ ಅನಂತನಾಗ್ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವರಲ್ಲಿ ಸೋಮು ಅವರು ರಾಜಕೀಯ ವಿಮರ್ಶಕರನ್ನೋ ಸಾಮಾಜಿಕ ಚಿಂತಕರನ್ನೋ ಹುಡುಕ ಹೊರಟಿದ್ದರಿಂದ ಹಾಗೆ ಆಗಿರಬಹುದು. ಜೊತೆಗೆ ಕನ್ನಡ ಚಿತ್ರರಂಗದಲ್ಲಿ ಇವರನ್ನು ಬುದ್ಧಿಜೀವಿ ನಟ ಎಂದು ಭಾವಿಸಿರುವುದು ಸಹ ಸೋಮು ಅವರ ಮೇಲೆ ಪ್ರಭಾವ ಬೀರಿರಬಹುದು. ಸಾಮಾನ್ಯವಾಗಿ ಸಿನಿಮಾ ಹೀರೊಗಳು ನಿಜಜೀವನದಲ್ಲೂ ಹೀರೊಗಳಾಗಿರುತ್ತಾರೆ ಎಂದು ಭಾವಿಸಿ ಹಲವಾರು ಅಭಿಮಾನಿ ಬಳಗಗಳು ಹುಟ್ಟಿಕೊಳ್ಳುವುದನ್ನು ನಾವು ನೋಡಿದ್ದೇವೆ.

ತಮ್ಮ ನಾಯಕ ಹೇಳಿದರೆ ತಾವು ಹಾಳು ಬಾವಿಗೆ ಬೇಕಾದರೆ ಬೀಳುವುದಾಗಿ ಅನಂತ್ ಅವರು ಆಗೊಮ್ಮೆ ಹೇಳಿದ ಹಾಗೆ ಈಗಲೂ ಹೇಳಿಕೆ ಕೊಟ್ಟಿದ್ದಾರೆ. ಈ ಭಕ್ತಿಭಾವ ಆಗಲೂ ಇತ್ತು, ಈಗಲೂ ಇದೆ. ಪಕ್ಷ (ನಿಷ್ಠೆ!) ಬದಲಾಗಿದೆ ಅಷ್ಟೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಅವಿವಾಹಿತರ ಹೆಚ್ಚಳ: ಅಪಾಯದ ಮುನ್ಸೂಚನೆ

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿಯವರು ಹಮ್ಮಿಕೊಂಡಿರುವ ಯಾತ್ರೆಯಲ್ಲಿ ಅವರನ್ನು ಭೇಟಿಯಾದ ರೈತ ಯುವಕನೊಬ್ಬ, ತಮಗೆ ಮದುವೆಯಾಗಲು ಯಾರೂ ಹೆಣ್ಣು ಕೊಡದೆ ಇರುವ ಸಮಸ್ಯೆಯ ಬಗ್ಗೆ ಅಲವತ್ತುಕೊಂಡಿರುವ ಸುದ್ದಿಯನ್ನು ಓದಿ (ಪ್ರ.ವಾ., ನ. 22) ಮನಸ್ಸು ವಿಹ್ವಲಗೊಂಡಿತು. ಇದು ನಮ್ಮ ಸಮಾಜಕ್ಕೆ ಕಾದಿರುವ ಪ್ರಳಯಸದೃಶ ಗಂಡಾಂತರದ ಮುನ್ಸೂಚನೆ. ಮೊದಲೆಲ್ಲ ಈ ಸಮಸ್ಯೆ ಬರೀ ಬ್ರಾಹ್ಮಣ ಸಮುದಾಯದಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಸಮಸ್ಯೆಯು ಲಿಂಗಾಯತರು, ಒಕ್ಕಲಿಗರು, ಕುರುಬರು, ಈಡಿಗರು ಹೀಗೆ ಎಲ್ಲ ಸಮುದಾಯಗಳಲ್ಲೂ ಬೃಹದಾಕಾರವಾಗಿ ಬೆಳೆದಿದೆ. ಇತ್ತೀಚೆಗೆ ಊರಿಗೆ ಹೋಗಿದ್ದಾಗ ನನಗೆ ಸಿಕ್ಕಿದ ನನ್ನ ದಲಿತ ಸ್ನೇಹಿತನೊಬ್ಬ ತಮ್ಮಲ್ಲೂ ಈ ಸಮಸ್ಯೆ ಶುರುವಾಗಿಬಿಟ್ಟಿದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದ. ಹೆಣ್ಣುಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ, ಆರ್ಥಿಕ ಸ್ವಾತಂತ್ರ್ಯ, ಪಾಶ್ಚಾತ್ಯ ಪ್ರಭಾವ, ಬದಲಾಗುತ್ತಿರುವ ಅಭಿರುಚಿಗಳು, ವಿಭಕ್ತ ಕುಟುಂಬಗಳ ಪರಿಕಲ್ಪನೆ...ಇವೆಲ್ಲವೂ ಇದರ ಹಿಂದಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಸಮಾಜದ ಆಳದಲ್ಲಿ ಕೃಷಿಯ ಬಗ್ಗೆ ಇರುವ ತಾತ್ಸಾರ ಇಲ್ಲಿ ಜೋರಾಗಿ ಕೆಲಸ ಮಾಡುತ್ತಿದೆ. ಕೋಲಾರದ ಯುವಕನ ಅಳಲು ಇಡೀ ಸಮಾಜದ ಸಮಸ್ಯೆಯ ಸಂಕೇತವಾಗಿದೆ.

ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಈ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ಜೆಡಿಎಸ್ ಅಧಿಕಾರಕ್ಕೆ ಬಂದರೆ ಇದಕ್ಕೊಂದು ನೀತಿಯನ್ನೇ ರೂಪಿಸುವುದಾಗಿ ಕುಮಾರಸ್ವಾಮಿ ಅವರು ಹೇಳಿರುವುದು ಕೂಡ ಅಸಂಭವ. ಮನಸ್ಸು ಮಾಡಿದರೆ, ನಾನಾ ಸಮುದಾಯಗಳ ಸ್ವಾಮೀಜಿಗಳು ಊರೂರಿಗೂ ಹೋಗಿ, ಪೋಷಕ ವರ್ಗದಲ್ಲಿ ಜಾಗೃತಿ ಮೂಡಿಸಲು ಸಾಧ್ಯವಿದೆ. ಪ್ರತಿಮೆಗಳ ಸ್ಥಾಪನೆ, ಮೀಸಲಾತಿಗೆ ಒತ್ತಾಯ, ಅಸಂಬದ್ಧ ಸಮಾವೇಶಗಳಲ್ಲೇ ಮುಳುಗಿರುವ ಹೆಚ್ಚಿನ ಸ್ವಾಮೀಜಿಗಳು ಇಡೀ ಸಮಾಜ ಮತ್ತು ಕೃಷಿ ಸಂಸ್ಕೃತಿಯ ಉಳಿವಿನ ಬಗ್ಗೆ ಯೋಚಿಸಬೇಕು. ಕೃಷಿ ಸಂಸ್ಕೃತಿ ಉಳಿಯಬೇಕೆಂದರೆ, ಆ ಕಸುಬನ್ನು ನೆಚ್ಚಿಕೊಂಡಿರುವವರನ್ನು ಸಮಾಜ ಬಗೆಬಗೆಯಲ್ಲಿ ಆತುಕೊಳ್ಳಬೇಕು.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಚ್ಚಾ ಬಾಂಬ್ ಬಳಕೆ ಹೆಚ್ಚಳ

ಮಂಗಳೂರಿನಲ್ಲಿ ಇತ್ತೀಚೆಗೆ ಕುಕ್ಕರ್ ಬಾಂಬ್ ಒಂದು ಆಟೊರಿಕ್ಷಾದಲ್ಲಿ ಸ್ಫೋಟಗೊಂಡು ಇಬ್ಬರು ಗಾಯಗೊಂಡಿದ್ದಾರೆ. ಕುಕ್ಕರ್‌ನಲ್ಲಿ ಇದ್ದದ್ದು ಕಚ್ಚಾ ಬಾಂಬ್. ಕಚ್ಚಾ ಬಾಂಬ್ ಬಳಸಿ ಸ್ಫೋಟ ನಡೆಸುವುದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಲೇ ಇದೆ. ಸುಲಭವಾಗಿ ತಯಾರಿಸಿ, ಬಳಸಬಹುದಾದ ಇಂತಹ ಬಾಂಬ್‌ಗಳನ್ನು ಭಯೋತ್ಪಾದಕರು ಜಗತ್ತಿನ ಎಲ್ಲೆಡೆ ವ್ಯಾಪಕವಾಗಿ ಬಳಸುತ್ತಿದ್ದಾರೆ



ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಮಂಗಳೂರಿನ ಸ್ಫೋಟ ಪ್ರಕರಣವು ರಾಜ್ಯದಲ್ಲಿ ಪೊಲೀಸ್ ಹಾಗೂ ಗುಪ್ತಚರ ಇಲಾಖೆ ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎನ್ನುವ ಸಂದೇಶ ನೀಡುತ್ತಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಪ್ರಜಾವಾಣಿ ವಾರ್ತೆ

ಇಂಪ್ರೂವೈಸ್ಡ್ ಎಕ್ಸ್‌ಪ್ಲೋಸಿವ್ ಡಿವೈಸ್ (ಐಇಡಿ) ಅಥವಾ ಕಚ್ಚಾ ಬಾಂಬ್‌ಗಳನ್ನು ಭಯೋತ್ಪಾದಕರು, ನಕ್ಸಲರು ಮತ್ತು ದುಷ್ಕರ್ಮಿಗಳು ಬಳಸುವ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಮತ್ತು ಭಾರತದಲ್ಲಿ ಕಚ್ಚಾ ಬಾಂಬ್ ಬಳಕೆ ಹೆಚ್ಚಾಗಿದೆ. ಜಗತ್ತಿನಲ್ಲಿ 2021ರಲ್ಲಿ ಕಚ್ಚಾ ಬಾಂಬ್ ಸ್ಫೋಟದಿಂದಾಗಿ 19,473 ಮಂದಿ ಮೃತಪಟ್ಟಿದ್ದಾರೆ ಅಥವಾ ಗಾಯಗೊಂಡಿದ್ದಾರೆ. ಅವರಲ್ಲಿ 11,102 ಮಂದಿ ಅಥವಾ ಶೇ 59ರಷ್ಟು ನಾಗರಿಕರು. 2020ರಲ್ಲಿ ಒಟ್ಟು 18,747 ಜನರು ಕಚ್ಚಾ ಬಾಂಬ್ ಸ್ಫೋಟದಿಂದ ಮೃತಪಟ್ಟಿದ್ದಾರೆ ಅಥವಾ ಗಾಯಗೊಂಡಿದ್ದಾರೆ. ಆ ವರ್ಷವೂ ಮೃತರು ಮತ್ತು ಗಾಯಗೊಂಡವರಲ್ಲಿ ನಾಗರಿಕರ ಪ್ರಮಾಣವು ಶೇ 59ರಷ್ಟೇ ಇತ್ತು.

ಕಚ್ಚಾ ಬಾಂಬ್ ಬಳಸಿ ಸ್ಫೋಟ ನಡೆಸುವುದು ಅತ್ಯಂತ ಹಳೆಯ ವಿಧಾನಗಳಲ್ಲಿ ಒಂದು. ಇಂತಹ ಬಾಂಬ್‌ಗಳ ಬಳಕೆಯು ವಿಶೇಷವಾಗಿ ಬಂಡುಕೋರ ಸಶಸ್ತ್ರ ಗುಂಪುಗಳು ಮತ್ತು ದುಷ್ಕರ್ಮಿಗಳಲ್ಲಿ ಜಗತ್ತಿನಾದ್ಯಂತ ಹೆಚ್ಚುತ್ತಲೇ ಇದೆ ಎಂದು ವಿಶ್ವ ಸಂಸ್ಥೆಯ ನಿಶ್ಶಸ್ತ್ರೀಕರಣ ವ್ಯವಹಾರಗಳ ವಿಭಾಗವು ಹೇಳಿದೆ. ಸಾವು, ನೋವು ಮತ್ತು ನಾಶವನ್ನು ಹೆಚ್ಚಿಸುವುದಕ್ಕಾಗಿ ಜನ ದಟ್ಟಣೆ ಹೆಚ್ಚು ಇರುವ ಸ್ಥಳಗಳಲ್ಲಿಯೇ ಸ್ಫೋಟ ನಡೆಸಲಾಗುತ್ತಿದೆ.

ಬಂದೂಕು ಮತ್ತು ಫಿರಂಗಿಗಳನ್ನು ಬಿಟ್ಟರೆ, ಕಚ್ಚಾ ಬಾಂಬ್ ಸ್ಫೋಟದಿಂದಾಗಿಯೇ ಅತಿ ಹೆಚ್ಚು ಜನರು ಸಾಯುತ್ತಿದ್ದಾರೆ. ಜಗತ್ತಿನ ಅರ್ಧಕ್ಕೂ ಹೆಚ್ಚು ಭಾಗವು ಆಗಾಗ ನಾಡ ಬಾಂಬ್ ಸ್ಫೋಟಕ್ಕೆ ಒಳಗಾಗುತ್ತಿದೆ ಎಂಬುದು ವಿಶ್ವ ಸಂಸ್ಥೆಯ ನಿಶ್ಶಸ್ತ್ರೀಕರಣ ವ್ಯವಹಾರಗಳ ವಿಭಾಗದ ಮಾಹಿತಿ.

ಬಳಕೆ ವ್ಯಾಪಕ: ನಾಡ ಬಾಂಬ್ ಬಳಸಿ ವಿಧ್ವಂಸಕ ಕೃತ್ಯಗಳು ಹೆಚ್ಚಲು ಕಾರಣ ಇದರ ಸುಲಭ ಬಳಕೆ. ಇಂತಹ ಬಾಂಬ್‌ಗಳನ್ನು ತಯಾರಿಸುವುದು ಮತ್ತು ಬಳಸುವುದು ಬಹಳ ಸರಳ. ಈ ಬಾಂಬ್ ತಯಾರಿಸಲು ಬೇಕಾಗುವ ಕಚ್ಚಾ ವಸ್ತುಗಳು ಸುಲಭವಾಗಿ ಲಭ್ಯವಾಗುತ್ತವೆ. ಜೊತೆಗೆ ಇವು ಅತ್ಯಂತ ಅಗ್ಗವೂ ಹೌದು. ಕಚ್ಚಾ ಬಾಂಬ್ ಅನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು ಸುಲಭ. ಮೊಬೈಲ್ ಅಥವಾ ಇತರ ರೀತಿಯ ರಿಮೋಟ್ ಬಳಸಿ ಸ್ಫೋಟಿಸಬಹುದು. ಈ ಎಲ್ಲ ಕಾರಣಗಳಿಂದ ಉಗ್ರರು ಮತ್ತು ಇತರ ದುಷ್ಕರ್ಮಿಗಳು ಇಂತಹ ಬಾಂಬ್‌ಗಳನ್ನು ವ್ಯಾಪಕವಾಗಿ ಬಳಸುತ್ತಿದ್ದಾರೆ.

ನಷ್ಟ ತಡೆ ಯತ್ನ: ಕಚ್ಚಾ ಬಾಂಬ್‌ನಿಂದ ಆಗುವ ತೊಂದರೆ ಮತ್ತು ನಷ್ಟವನ್ನು ತಡೆಯುವ ಯತ್ನ ಜಗತ್ತಿನ ವಿವಿಧ ಭಾಗಗಳಲ್ಲಿ ನಡೆಯುತ್ತಿದೆ. ಸರ್ಕಾರ, ಎನ್‌ಜಿಒ, ಖಾಸಗಿ ಸಂಸ್ಥೆಗಳನ್ನು ಇದರಲ್ಲಿ ತೊಡಗಿಸಲಾಗಿದೆ. ಭಾರತದಲ್ಲಿ, ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯ ರಾಜ್ಯಗಳು ಕಚ್ಚಾ ಬಾಂಬ್ ಸ್ಫೋಟದಿಂದ ಹೆಚ್ಚು ತೊಂದರೆಗೆ ಒಳಗಾದ ಪ್ರದೇಶಗಳು. ಜಮ್ಮು ಮತ್ತು ಕಾಶ್ಮೀರದಲ್ಲಿ ಕಚ್ಚಾ ಬಾಂಬ್ ಹಾವಳಿ ತಡೆಗೆ ಸೇನೆಯು ವಿವಿಧ ಕಾರ್ಯತಂತ್ರಗಳನ್ನು ಅನುಸರಿಸುತ್ತಿದೆ. ಬಾಂಬ್ ಪತ್ತೆಗೆ ಹೊಸ ಉಪಕರಣಗಳನ್ನು ಖರೀದಿಸಲಾಗಿದೆ. ಸೈನಿಕರು ಮತ್ತು ಬಾಂಬ್ ನಿಷ್ಕ್ರಿಯ ದಳಕ್ಕೆ ವಿಶೇಷ ತರಬೇತಿಯನ್ನೂ ನೀಡಲಾಗಿದೆ.

ಕೇಂದ್ರೀಯ ಮೀಸಲು ಪೊಲೀಸ್ ಪಡೆಯು (ಸಿಆರ್‌ಪಿಎಫ್) ಇನ್‌ಸ್ಟಿಟ್ಯೂಟ್ ಆಫ್ ಐಇಡಿ ಮ್ಯಾನೇಜ್‌ಮೆಂಟ್ ಎಂಬ ಸಂಸ್ಥೆಯನ್ನು ಪುಣೆಯಲ್ಲಿ 2012ರಲ್ಲಿ ಆರಂಭಿಸಿದೆ. ಸಿಆರ್‌ಪಿಎಫ್, ರಾಜ್ಯ ಪೊಲೀಸ್ ಇಲಾಖೆಗಳು, ಕೇಂದ್ರೀಯ ಸಶಸ್ತ್ರ ಪಡೆಗಳಿಗೆ ಕಚ್ಚಾ ಬಾಂಬ್ ನಿಯಂತ್ರಣದ ವಿಚಾರದಲ್ಲಿ ತರಬೇತಿ ನೀಡುವ ಪ್ರಮುಖ ಸಂಸ್ಥೆ ಇದಾಗಿದೆ.

ಸ್ಫೋಟಕಗಳ ವಶ: ಭಾರಿ ಏರಿಕೆ

ದೇಶದಲ್ಲಿ ಈಚಿನ ವರ್ಷಗಳಲ್ಲಿ ಪೊಲೀಸರು ಮತ್ತು ಇತರ ಭದ್ರತಾ ಸಂಸ್ಥೆಗಳು ವಶಕ್ಕೆ ಪಡೆದುಕೊಂಡ ಸ್ಫೋಟಕ ಮತ್ತು ಸ್ಫೋಟಕ ಸಾಮಗ್ರಿಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಭಯೋತ್ಪಾದಕರು ಮತ್ತು ತೀವ್ರವಾದಿಗಳು ಮಾತ್ರವಲ್ಲ, ಅಪರಾಧ ಹಿನ್ನೆಲೆಯ ವ್ಯಕ್ತಿಗಳೂ ಸ್ಫೋಟಕ ಹಾಗೂ ಸ್ಫೋಟಕ ಸಾಮಗ್ರಿಗಳನ್ನು ಬಳಸುತ್ತಾರೆ ಎನ್ನುತ್ತವೆ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ದತ್ತಾಂಶಗಳು.

2021ರಲ್ಲಿ ದೇಶದಾದ್ಯಂತ 8.78 ಲಕ್ಷದಷ್ಟು ಸ್ಫೋಟಕ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಇವುಗಳಲ್ಲಿ ಡಿಟೋನೇಟರ್‌ಗಳು ಮತ್ತು ಜಿಲೆಟಿನ್ ಕಡ್ಡಿಗಳ ಪ್ರಮಾಣವೇ ಹೆಚ್ಚು. ಭಯೋತ್ಪಾದಕರೂ ಈ ಸ್ವರೂಪದ ಸ್ಫೋಟಕಗಳನ್ನು ಹೆಚ್ಚು ಬಳಸುತ್ತಾರೆ, ಇತರ ಅಪರಾಧಿಗಳ ನೆಚ್ಚಿನ ಸ್ಫೋಟಕಗಳು ಇವೇ ಆಗಿವೆ ಎಂಬುದು ಗಮನಾರ್ಹ ಅಂಶ. ಇವು ಸಿದ್ಧರೂಪದಲ್ಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಕಾರಣ, ಇವುಗಳನ್ನು ಭಯೋತ್ಪಾದನೆ ಮತ್ತು ಅಪರಾಧ ಕೃತ್ಯಗಳಲ್ಲಿ ಹೆಚ್ಚು ಬಳಸಲಾಗುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

ಸೇನಾ ಬಳಕೆಗೆ ಸೀಮಿತವಾಗಿರಬೇಕಿದ್ದ ಗ್ರೆನೇಡ್‌ಗಳು ಭಯೋತ್ಪಾದಕರು ಮಾತ್ರವಲ್ಲ, ಇತರ ಅಪರಾಧಿಗಳಿಗೂ ಸುಲಭವಾಗಿ ಸಿಗುತ್ತವೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ಇವುಗಳ ಹೊರತಾಗಿ ನಾಡಬಾಂಬ್‌ಗಳು ಮತ್ತು ಕಚ್ಚಾಬಾಂಬ್‌ಗಳ ಬಳಕೆ ಹೆಚ್ಚು. ಅಪರಾಧಿಗಳು ನಾಡಬಾಂಬ್‌ಗಳನ್ನು ಹೆಚ್ಚು ಬಳಸಿದರೆ, ಭಯೋತ್ಪಾದಕರು ಮತ್ತು ತೀವ್ರವಾದಿಗಳು ಕಚ್ಚಾಬಾಂಬ್‌ಗಳನ್ನು ಹೆಚ್ಚು ಬಳಸುತ್ತಾರೆ ಎನ್ನುತ್ತವೆ ಎನ್‌ಸಿಆರ್‌ಬಿ ದತ್ತಾಂಶಗಳು.

ಎನ್‌ಸಿಆರ್‌ಬಿ ವರದಿಗಳಲ್ಲಿ ಕೆಲವು ಸ್ಫೋಟಕಗಳನ್ನು 'ಇತರೆ ಸ್ಫೋಟಕಗಳು' ಎಂದು ವರ್ಗೀಕರಿಸಲಾಗಿದೆ. ಇಂತಹದ್ದೇ ಸ್ಫೋಟಕ ಎಂದು ವರ್ಗೀಕರಿಸಲು ಸಾಧ್ಯವಾಗದ ಸ್ಫೋಟಕಗಳನ್ನು ಈ ವರ್ಗದಲ್ಲಿ ಸೇರಿಸಲಾಗಿದೆ. ಇವುಗಳ ಸಂಖ್ಯೆಯೂ ಭಾರಿ ಹೆಚ್ಚು.

ವಶಕ್ಕೆ ಪಡೆದ ಸ್ಫೋಟಕಗಳ ಸ್ವರೂಪ
(ಆವರಣದಲ್ಲಿ ಇರುವುದು ಭಯೋತ್ಪಾದಕರು ಮತ್ತು ತೀವ್ರಗಾಮಿಗಳಿಂದ ವಶಕ್ಕೆ ಪಡೆದ ಸ್ಫೋಟಕಗಳ ಸಂಖ್ಯೆ)



ಸುಲಭದ ಮಾದರಿ ಕುಕ್ಕರ್, ಟಿಫನ್ ಬಾಕ್ಸ್

ಕಚ್ಚಾ ಬಾಂಬ್ ಬಳಸಿ ಸ್ಫೋಟ ನಡೆಸುವ ಸುಲಭದ ಮಾದರಿಯನ್ನು ಬಂಡುಕೋರರು, ಉಗ್ರರು ಆಯ್ದುಕೊಂಡಿದ್ದಾರೆ. ಸ್ಫೋಟಕಗಳನ್ನು ಇರಿಸಲು ಹಲವು ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಸೈಕಲ್‌ನ ಪೈಪ್‌ನಲ್ಲಿ ಕಚ್ಚಾ ಬಾಂಬ್ ಇರಿಸಿ ವಿಧ್ವಂಸಕ ಕೃತ್ಯ ನಡೆಸಿದ ಹಲವು ಉದಾಹರಣೆಗಳಿವೆ. ಟಿಫಿನ್ ಬಾಕ್ಸ್‌ನಲ್ಲಿ ಇರಿಸಿಯೂ ಹಲವು ಬಾರಿ ಸ್ಫೋಟ ನಡೆಸಲಾಗಿದೆ. ಹೆಚ್ಚು ಒತ್ತಡ ಉಂಟು ಮಾಡುವ ಉದ್ದೇಶಕ್ಕೆ ಪ್ರೆಷರ್ ಕುಕ್ಕರ್ ಬಳಸಿ ಸ್ಫೋಟ ನಡೆಸುವ ಮಾದರಿಯನ್ನೂ ಆಗಾಗ್ಗೆ ಪ್ರಯೋಗಿಸಲಾಗುತ್ತಿದೆ.

ಇವು ಸುಲಭ ವಿಧಾನಗಳು ಎಂಬ ಕಾರಣಕ್ಕೆ ಹೆಚ್ಚು ಪ್ರಚಲಿತದಲ್ಲಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಜನದಟ್ಟಣೆಯ ಸ್ಥಳಗಳಲ್ಲಿ ಸೈಕಲ್ ಕೊಂಡೊಯ್ದರೆ ಯಾರಿಗೂ ಅನುಮಾನ ಬಾರದು. ಟಿಫನ್ ಬಾಕ್ಸ್ ಹಾಗೂ ಕುಕ್ಕರ್‌ಗಳನ್ನು ಜನರು ಕೈಚೀಲದಲ್ಲಿ ಒಯ್ಯುವುದು ಸರ್ವೇ ಸಾಮಾನ್ಯ. ಹೀಗಾಗಿ, ಅನುಮಾನ ಬಾರದ ಇಂತಹ ವಸ್ತುಗಳನ್ನೇ ಬಳಸಿಕೊಂಡು, ಅವುಗಳಲ್ಲಿ ಕಚ್ಚಾಬಾಂಬ್ ಇರಿಸುವ ಮಾದರಿಯನ್ನು ಭಯೋತ್ಪಾದಕರು ಹೆಚ್ಚು ಬಳಸುತ್ತಿದ್ದಾರೆ.

ಸ್ಫೋಟದ ತೀವ್ರತೆಯನ್ನು ಹೆಚ್ಚಿಸುವ ಸಲವಾಗಿ ಟಿಫಿನ್ ಬಾಕ್ಸ್ ಹಾಗೂ ಕುಕ್ಕರ್‌ಗಳಲ್ಲಿ ಸ್ಫೋಟಕ ಸಾಮಗ್ರಿಗಳ ಜೊತೆ ಚೂಪಾದ ಆಯುಧಗಳು, ಮೊಳೆ, ಸ್ಕ್ರೂ, ಬೋಲ್ಟ್ ಅಥವಾ ಗಾಜಿನ ಚೂರುಗಳನ್ನು ಇರಿಸಲಾಗುತ್ತದೆ. ಸ್ಫೋಟದ ತೀವ್ರತೆಗೆ ಈ ವಸ್ತುಗಳು ಹತ್ತಿರದಲ್ಲಿರುವ ಜನರ ಮೇಲೆ ಚಿಮ್ಮುತ್ತವೆ. ಚೂಪಾದ ಕಬ್ಬಿಣದ ವಸ್ತುಗಳು ಹಾಗೂ ಗಾಜಿನ ವಸ್ತುಗಳು ರಭಸವಾಗಿ ಸಿಡಿಯುವುದರಿಂದ ಜನರು ಪ್ರಾಣ ತೆರಬೇಕಾಗುತ್ತದೆ.

ಪ್ರತೀ ವರ್ಷ 26,000 ಜನ ಬಲಿ

ತೀವ್ರವಾದಿಗಳು ಹಾಗೂ ಭಯೋತ್ಪಾದಕರ ಕೃತ್ಯಗಳಿಂದಾಗಿ ಜಗತ್ತಿನಾದ್ಯಂತ ಪ್ರತೀ ವರ್ಷ ಸರಾಸರಿ 26 ಸಾವಿರ ಜನರು ಮೃತಪಟ್ಟಿದ್ದಾರೆ. ವಿಧ್ವಂಸಕ ಕೃತ್ಯಗಳಿಗೆ ಬಲಿಯಾಗುವ ಜನರ ಪ್ರಮಾಣ ವರ್ಷ ಕಳೆದಂತೆ ಏರಿಕೆಯಾಗಿದೆ. 2011ರಲ್ಲಿ 8,200 ಜನರು ವಿವಿಧ ದೇಶಗಳಲ್ಲಿ ಬಲಿಯಾಗಿದ್ದರು. ಇವರ ಸಂಖ್ಯೆ 2014ರ ವೇಳೆ 44 ಸಾವಿರಕ್ಕೆ ಏರಿಕೆಯಾಯಿತು. ಜಗತ್ತಿನಲ್ಲಿ ಆಗುತ್ತಿರುವ ಒಟ್ಟು ಸಾವಿನಲ್ಲಿ ಭಯೋತ್ಪಾದಕ ಕೃತ್ಯಗಳಿಂದ ಆಗುತ್ತಿರುವ ಸಾವುಗಳ ಪ್ರಮಾಣ ಶೇ 0.5ರಷ್ಟಿದೆ.

ವಿಧ್ವಂಸಕ ಕೃತ್ಯಗಳಿಗೆ ಜನರು ಬಲಿಯಾಗುತ್ತಿರುವ ಪ್ರಮಾಣ ಮಧ್ಯಪ್ರಾಚ್ಯ, ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾದಲ್ಲೇ ಹೆಚ್ಚು. ಈ ಭಾಗದಲ್ಲೇ ಶೇ 95ರಷ್ಟು ಜನರು ಮೃತಪಟ್ಟಿದ್ದಾರೆ. ಒಂದು ಕಾಲದಲ್ಲಿ ಸಾಮಾನ್ಯವಾಗಿದ್ದ ವಿಮಾನಗಳ ಅಪಹರಣದಂತಹ ಭಯೋತ್ಪಾದಕ ಕೃತ್ಯಗಳು ಈಗ ಇಲ್ಲ. ನಕ್ಸಲರು ಅಥವಾ ಬಂಡುಕೋರರು ಭದ್ರತಾ ಪಡೆಗಳ ಜೊತೆ ನೇರ ಸಂಘರ್ಷಕ್ಕೂ ಇಳಿಯುತ್ತಿಲ್ಲ. ಅವರೆಲ್ಲಾ ಕಚ್ಚಾ ಬಾಂಬ್ ಮೊರೆ ಹೋಗುತ್ತಿದ್ದಾರೆ. ಭದ್ರತಾಪಡೆಗಳು ಹಾಗೂ ಜನರನ್ನು ಗುರಿಯಾಗಿಸಿ, ಐಇಡಿಗಳನ್ನು ಸ್ಫೋಟಿಸುವ ಮಾದರಿ ಅನುಸರಿಸುತ್ತಿದ್ದಾರೆ.

ಆರ್‌ಡಿಎಕ್ಸ್ ಬಳಕೆ ಅಧಿಕ

1993ರ ಮುಂಬೈ ಸರಣಿ ಸ್ಫೋಟ ಪ್ರಕರಣದಿಂದ ಹಿಡಿದು ಇತ್ತೀಚಿನ ಪುಲ್ವಾಮಾ ಭಯೋತ್ಪಾದಕ ದಾಳಿ ಪ್ರಕರಣದವರೆಗೆ ಬಂಡುಕೋರರು ವಿವಿಧ ರೀತಿಯ ಸ್ಫೋಟಕಗಳನ್ನು ತಮ್ಮ ಕೃತ್ಯಗಳಿಗೆ ಬಳಸಿದ್ದಾರೆ. ಆರ್‌ಡಿಎಕ್ಸ್ ರಾಸಾಯನಿಕವನ್ನು ಹೆಚ್ಚಾಗಿ ನೆಚ್ಚಿಕೊಂಡಂತೆ ತೋರುತ್ತದೆ.

ಮುಂಬೈ ಸ್ಫೋಟಕ್ಕೆ ಆರ್‌ಡಿಎಕ್ಸ್ ಬಳಸಲಾಗಿತ್ತು. ಈ ಸರಣಿ ಸ್ಫೋಟದಲ್ಲಿ ಒಟ್ಟು 13 ಬಾಂಬ್‌ಗಳು ಸಿಡಿದಿದ್ದವು. ಪರಿಣಾಮವಾಗಿ 257 ಜನರು ಮೃತಪಟ್ಟಿದ್ದರು. 2003, 2006 ಹಾಗೂ 2008ರಲ್ಲಿ ನಡೆದ ಮುಂಬೈ ಸ್ಫೋಟ, 2008ರ ಜೈಪುರ ಸ್ಫೋಟ, 2005ರ ದೆಹಲಿ ಸ್ಫೋಟ ಹಾಗೂ 2019ರ ಪುಲ್ವಾಮಾ ಸ್ಫೋಟದಲ್ಲಿ ಆರ್‌ಡಿಎಕ್ಸ್ ಬಳಕೆಯಾಗಿದೆ ಎಂದು ತನಿಖೆಯಿಂದ ತಿಳಿದುಬಂದಿದೆ.

2006ರ ಮುಂಬೈ ಸ್ಫೋಟದಲ್ಲಿ ಆರ್‌ಡಿಎಕ್ಸ್ ಜತೆ ಅಮೋನಿಯಂ ನೈಟ್ರೇಟ್ ಅನ್ನೂ ಬಳಸಲಾಗಿದೆ. 2008ರಲ್ಲಿ ಅಹಮದಾಬಾದ್‌ನಲ್ಲೂ ಇದೇ ಬಳಕೆಯಾಗಿದೆ. ಜೈಪುರ ಸ್ಫೋಟದಲ್ಲಿ ಆರ್‌ಡಿಎಕ್ಸ್ ಜೊತೆ ದಹನಕಾರಿ ವಸ್ತು ಬಳಕೆಯಾಗಿತ್ತು. 2001ರ ಸಮಝೋತಾ ಸ್ಫೋಟದಲ್ಲೂ ಹೆಚ್ಚು ದಹನಶೀಲ ವಸ್ತು ಬಳಕೆಯಾಗಿರುವುದು ಕಂಡುಬಂದಿತ್ತು. ಕೊಯಮತ್ತೂರು ಸ್ಫೋಟ ಪ್ರಕರಣದಲ್ಲಿ ಜಿಲೆಟಿನ್ ಕಡ್ಡಿಗಳನ್ನು ಕಚ್ಚಾಬಾಂಬ್ ಜೊತೆ ಇಟ್ಟು ಸ್ಫೋಟಿಸಲಾಗಿತ್ತು ಎಂದು ತನಿಖಾ ಸಂಸ್ಥೆಗಳು ವರದಿ ಮಾಡಿದ್ದವು.

ಆಧಾರ: ವಿಶ್ವ ಸಂಸ್ಥೆಯ ನಿಶ್ಶಸ್ತ್ರೀಕರಣ ವ್ಯವಹಾರಗಳ ವಿಭಾಗದ ಜಾಲತಾಣ, ಸಿಆರ್‌ಪಿಎಫ್ ಜಾಲತಾಣ, ಎನ್‌ಸಿಆರ್‌ಬಿಯ 'ಭಾರತದಲ್ಲಿ ಅಪರಾಧಗಳು' –ವರದಿಗಳು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 282

ದೇವತೆಗಳಿಗೆ ಭರ್ಜರಿ ಭೋಜನ

ಹಿಮವಂತನು ಪಾರ್ವತೀವಿವಾಹದ ಅಂಗವಾಗಿ ಸಂತೋಷ ಸಮಾರಂಭ ಏರ್ಪಡಿಸಿದ್ದ. ಅದರಲ್ಲಿ ಅತಿಥಿಗಳ ಭೋಜನ ಕೂಟಕ್ಕಾಗಿ ಒಂದು ದೊಡ್ಡ ಅಂಗಳವನ್ನು ಸಿದ್ಧಪಡಿಸಿದ್ದ. ಭೋಜನದ ಮಹಾಂಗಣವನ್ನು ತನ್ನ ಸೇವಕರಿಂದ ಸಾರಿಸಿ ಗುಡಿಸಿ, ಪನ್ನೀರಿನಿಂದ ಚಿಮುಕಿಸಿ ವಾತಾವರಣ ಘಮಘಮಿಸುವಂತೆ ಮಾಡಿದ್ದ. ತನ್ನ ಪುತ್ರರ ಮೂಲಕ ಪರ್ವತ ರಾಜರುಗಳು, ಪರ್ವತ ನಗರದ ಅನೇಕ ಶ್ರೀಮಂತ ಗಣ್ಯರು ಮತ್ತು ಪಂಡಿತರಿಗೆ ಭೋಜನ ಸಮಾರಂಭಕ್ಕೆ ಆಹ್ವಾನ ನೀಡಿದ್ದ. ಹಿಮವಂತನ ಆಹ್ವಾನವನ್ನು ಮನ್ನಿಸಿ ಶಿವ, ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳು, ವಸಿಷ್ಠ, ಭೃಗು ಮತ್ತಿತರ ಋಷಿಗಳು, ಸಿದ್ಧರು ಅಲ್ಲಿಗೆ ದಯಮಾಡಿಸಿದ್ದರು. ಶಿವನ ಪರಿವಾರ ಮತ್ತು ಹಿಮವಂತನ ಪರಿವಾರದಿಂದ ಭೋಜನಾಂಗಣ ತುಂಬಿ ಹೋಗಿತ್ತು.

ಎಲ್ಲರನ್ನೂ ಕರೆದುಕೊಂಡು ಹೋಗಿ ಅವರಿಗೆ ಉಚಿತವಾದ ಪೀಠಗಳಲ್ಲಿ ಕುಳ್ಳಿರಿಸಿದ. ಎಲ್ಲಾ ವರ್ಗಕ್ಕೂ ಪ್ರತ್ಯೇಕ ಪಂಕ್ತಿ ಸಾಲುಗಳಿದ್ದವು. ದೇವತೆಗಳಿಗೇ ಒಂದು ಸಾಲು ಇದ್ದರೆ, ಋಷಿ-ಮುನಿಗಳಿಗೆ, ಸಿದ್ಧ ಪುರುಷರಿಗೆ, ಶಿವನ ಗಣಗಳಿಗೆ, ಚಂಡಿಯ ಗಣಗಳಿಗೆ, ಪರ್ವತರಾಜರಿಗೆ, ಹಿಮವಂತನ ರಾಜಧಾನಿಯ ಶ್ರೀಮಂತರು, ಪಂಡಿತರು, ಜನಸಾಮಾನ್ಯರಿಗೆ ಪಂಕ್ತಿ ಸಾಲುಗಳಿದ್ದವು.

ಆಗಮಿಸಿದ ಎಲ್ಲಾ ಅತಿಥಿ ಮಹೋದಯರಿಗೂ ರುಚಿಕರವಾದ ಭಕ್ಷ್ಯಭೋಜ್ಯಗಳನ್ನು ಬಡಿಸಿದ ನಂತರ, ಹಿಮವಂತ ಕೈಮುಗಿದುಕೊಂಡು ಎಲ್ಲರೂ ಊಟಮಾಡುವಂತೆ ಪ್ರಾರ್ಥಿಸಿಕೊಂಡ. ಶಿವ ಮೊದಲಿಗೆ ಊಟ ಮಾಡಲು ಪ್ರಾರಂಭಿಸಿದ ನಂತರ ಎಲ್ಲರೂ ಊಟ ಮಾಡಲು ಆರಂಭಿಸಿದರು. ಆಹ್ವಾನಿತ ಗಣ್ಯರೆಲ್ಲರೂ ಪಂಕ್ತಿಯಲ್ಲಿ ಕುಳಿತು ಆನಂದದಿಂದ, ವಿನೋದವಾಗಿ ಮಾತನಾಡುತ್ತಾ ಭೋಜನ ಮಾಡಿದರು. ಶಿವನ ದೇವ ಪರಿವಾರವಲ್ಲದೆ, ಅವನ ಗಣ ಪರಿವಾರವಾದ ನಂದಿ, ಭೃಂಗಿ, ವೀರಭದ್ರ, ಭೈರವ ಮತ್ತಿತರ ಗಣಗಳು ಸಹ ಆಗಮಿಸಿ ಮಹಾಭೋಜನ ಸ್ವೀಕರಿಸಿದರು. ವಿಷ್ಣು, ಬ್ರಹ್ಮ, ಪರಮೇಶ್ವರ, ಇಂದ್ರಾದಿ ದೇವತೆಗಳ, ಲೋಕಪಾಲಕರೂ ಅನೇಕ ವಿಧವಾದ ವೇಷಭೂಷಣಗಳಿಂದ ಅಲಂಕೃತರಾಗಿ ಬಂದು, ಹಾಸ್ಯವಾದ ಮಾತುಗಳನ್ನಾಡುತ್ತಾ ಊಟಮಾಡಿದರು. ವಸಿಷ್ಠ, ಭೃಗು ಮೊದಲಾದ ಮುನಿಗಳೆಲ್ಲರೂ ತಮ್ಮ ಎಂದಿನ ಪಥ್ಯಾಹಾರವನ್ನು ಮರೆತು, ಪುಷ್ಕಳವಾದ ಭಕ್ಷ್ಯಭೋಜ್ಯಗಳನ್ನು ಸಂತೋಷದಿಂದ ಸ್ವೀಕರಿಸಿದರು. ಚಂಡಿಯ ಗಣದವರು ಸಹ ತಮ್ಮ ಉಗ್ರಭಾವ ತೊರೆದು, ಉಲ್ಲಾಸಕರ ಭಾವದಲ್ಲಿ ನಾನಾ ವಿಧವಾದ ಹಾಸ್ಯ ಸಲ್ಲಾಪಗಳ ಮಾತನಾಡುತ್ತಾ ಊಟಮಾಡಿದರು.

ನಂತರ ಎಲ್ಲರೂ ವಿಶ್ರಾಂತಿಯನ್ನು ಪಡೆಯಲು ತಮಗಾಗಿ ನಿರ್ಮಿಸಿದ್ದ ಬಿಡಾರಗಳಿಗೆ ಆನಂದದಿಂದ ತೆರಳಿದರು. ಭೋಜನ ಕೂಟದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಪಂಕ್ತಿ ಇತ್ತು. ಆಗಮಿಸಿದ ಸ್ತ್ರೀಯರೆಲ್ಲರು ತೃಪ್ತಿಯಿಂದ ಊಟ ಮಾಡಿದ ನಂತರ ಮೇನಾದೇವಿಯ ಅನುಜ್ಞೆ ಪಡೆದು, ಅವರಿಗಾಗಿ ನಿರ್ಮಿಸಿದ್ದ ಆವಾಸ ಎಂಬ ಮನೆಗೆ ತೆರಳಿ ವಿಶ್ರಮಿಸಿದರು.

ಶಿವನು ಸಹ ಊಟವಾದ ನಂತರ ಪಾರ್ವತೀ ತಾಯಿ ಮೇನಾದೇವಿ ಆಣತಿಯಂತೆ ಅರಮನೆ ಸಖಿಯರು ಸಿದ್ಧಪಡಿಸಿದ್ದ ವಾಸಮಂದಿರಕ್ಕೆ ಬಂದ. ಅಲ್ಲಿದ್ದ ರತ್ನಸಿಂಹಾಸನದಲ್ಲಿ ಕುಳಿತು ಆ ವಾಸಮಂದಿರವನ್ನು ಅತ್ಯಾನಂದಭರಿತನಾಗಿ ನೋಡಿದ. ವಾಸಮಂದಿರದ ಪ್ರತಿ ಕಂಬಗಳಲ್ಲು ರತ್ನದಿಂದ ಮಾಡಿದ್ದ ದೀಪಗಳು ಉರಿಯುತ್ತಿದ್ದವು. ಅದರ ಬೆಳಕಿನಿಂದ ಮಂದಿರವು ಜಗಮಗಿಸುತ್ತಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಶ್ರದ್ಧಾ ವಾಲಕರ್ ಹತ್ಯೆಯ ಬಳಿಕ 'ಲವ್ ಜಿಹಾದ್'ಗೆ ಸಂಬಂಧಿಸಿದವು ಎನ್ನಲಾದ ಹಲವು ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಮಥುರಾ ಸಮೀಪದ ಯಮುನಾ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ, ಸೂಟ್‌ಕೇಸ್‌ನಲ್ಲಿ ಇರಿಸಿದ್ದ ಸ್ಥಿತಿಯಲ್ಲಿ ಮಹಿಳೆಯೊಬ್ಬರ ಶವ ಇತ್ತೀಚೆಗೆ ಪತ್ತೆಯಾಗಿತ್ತು. ಘಟನೆಯ ಚಿತ್ರಗಳನ್ನು ಸಾಮಾಜಿಕ ಜಾಲತಾಣ ಬಳಕೆದಾರರು ಹಂಚಿಕೊಂಡಿದ್ದಾರೆ. 'ಶವವಾಗಿ ಸಿಕ್ಕಿರುವ ಮತ್ತೊಬ್ಬ ಮಹಿಳೆ ಲವ್ ಜಿಹಾದ್‌ನ ಸಂತ್ರಸ್ತೆ. ಹಿಂದೂಗಳೇ ನಿದ್ದೆಯಿಂದ ಏಳಬೇಡಿ. ಹೆಣ್ಣುಮಕ್ಕಳು ಇದೇ ರೀತಿ ಸಾಯುತ್ತಿರಲಿ' ಎಂದು ಇನ್‌ಸ್ಟಾಗ್ರಾಮ್ ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ.

ಮಥುರಾ ಘಟನೆಗೂ ಲವ್ ಜಿಹಾದ್‌ಗೂ ಯಾವುದೇ ನಂಟಿಲ್ಲ ಎಂದು 'ಇಂಡಿಯಾಟುಡೇ' ವರದಿ ಮಾಡಿದೆ. ಮಗಳು ಬೇರೆ ಜಾತಿಯ ವ್ಯಕ್ತಿಯನ್ನು ಮದುವೆಯಾಗಿದ್ದಾಳೆ ಎಂಬ ಕಾರಣಕ್ಕೆ ನಿತೇಶ್ ಯಾದವ್ ಎಂಬುವರು ತನ್ನ ಮಗಳು ಆಯುಷಿ ಯಾದವ್ ಅವರ ಮೇಲೆ ಗುಂಡು ಹಾರಿಸಿದ್ದರು. ಬಳಿಕ ಮಗಳ ಶವವನ್ನು ಸೂಟ್‌ಕೇಸ್‌ನಲ್ಲಿ ತುಂಬಿಸಿ ಹೆದ್ದಾರಿಯ ಬದಿಯಲ್ಲಿ ಇರಿಸಿ ಮನೆಗೆ ಹೋಗಿದ್ದರು ಎಂದು ಮಥುರಾ ಎಸ್‌ಪಿ ಎಂ.ಪಿ ಸಿಂಗ್ ಅವರು ಹೇಳಿದ್ದಾರೆ. ಆಯುಷಿ ಅವರ ತಂದೆ–ತಾಯಿಯನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ ಕಾರು, ಪಿಸ್ತೂಲ್ ವಶಪಡಿಸಿಕೊಳ್ಳಲಾಗಿದೆ. ಛತ್ರಪಾಲ್ ಸಿಂಗ್ ಗುರ್ಜರ್ ಎಂಬುವರನ್ನು ಆಯುಷಿ ಮದುವೆಯಾಗಿದ್ದರು. ಆಯುಷಿ, ಅವರ ತಂದೆ ಹಾಗೂ ಪತಿ ಒಂದೇ ಧರ್ಮಕ್ಕೆ ಸೇರಿದವರಾಗಿದ್ದು, ಪ್ರಕರಣದಲ್ಲಿ ಲವ್ ಜಿಹಾದ್‌ನ ಪಾತ್ರವಿಲ್ಲ ಎಂದು ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಎತ್ತರದ ಗುರಿ

ಧಾರುಣಿಯ ನಡೆಗೆಯಲಿ ಮೇರುವಿನ ಗುರಿಯಿರಲಿ |
ಮೇರುವನು ಮರೆತಂದೆ ನಾರಕಕೆ ದಾರಿ ||
ದೂರವಾದೊಡದೇನು? ಕಾಲು ಕುಂಟಿರಲೇನು ? |
ಊರನೆನಪೇ ಬಲವೊ-ಮಂಕುತಿಮ್ಮ || 762 ||

ಪದ-ಅರ್ಥ: ಧಾರುಣಿಯ = ಭೂಮಿಯ, ಮೇರುವಿನ = ಪರ್ವತದ, ನಾರಕ = ನರಕ, ದೂರವಾದೊಡದೇನು = ದೂರವು + ಆದೊಡೆ + ಏನು,

ವಾಚ್ಯಾರ್ಥ: ಜಗತ್ತಿನಲ್ಲಿ ಬದುಕುವಾಗ ಉನ್ನತವಾದ ಗುರಿ ಇರಲಿ. ಎಂದು ಈ ಔನ್ನತ್ಯವನ್ನು ಮರೆಯುತ್ತೇವೆಯೋ ಅಂದೇ ನರಕಕ್ಕೆ ದಾರಿ. ನಮ್ಮ ಗುರಿ ಅದೆಷ್ಟು ದೂರವಿದ್ದರೇನು, ಅಡಚಣೆಗಳು ಬಂದರೇನು, ಗುರಿಯ ನೆನಪೇ ಬಲವನ್ನು ನೀಡುತ್ತದೆ.

ವಿವರಣೆ: ಐಸಾಕ್ ಅಸಿಮೋವ್ ಎಂಬ ಒಬ್ಬ ಖ್ಯಾತ ವಿಜ್ಞಾನಿ ಹಾಗೂ ವಿಜ್ಞಾನ ಲೇಖಕ ತನ್ನ ಪ್ರಮುಖ ಗ್ರಂಥದ ಮುನ್ನುಡಿಯಲ್ಲಿ ಒಂದು ಮಾತನ್ನು ಬರೆಯುತ್ತಾನೆ. "ಇಡೀ ಪ್ರಪಂಚದ ಇತಿಹಾಸವನ್ನು ಗಮನಿಸಿದರೆ ಎಷ್ಟೋ ಲಕ್ಷ ಜನರಲ್ಲಿ ಒಬ್ಬ ಮಾತ್ರ ತನ್ನ ಹೆಜ್ಜೆಯ ಗುರುತನ್ನು ಮುಂದಿನ ತಲೆಮಾರಿಗೆ ಬಿಟ್ಟು ಹೋಗಿದ್ದಾನೆ. ಉಳಿದವರು ಹುಳಗಳಂತೆ, ಅನಾಮಧೇಯರಾಗಿ ಕರಗಿ ಹೋಗಿದ್ದಾರೆ". ಯಾರಿಗೆ ಕೇವಲ ಹೊಟ್ಟೆ, ಬಟ್ಟೆ, ಮನೆಗಳ ಚಿಂತೆಗಿಂತ ಹೆಚ್ಚಿನದ್ದೇನಾದರೂ ಕಂಡಿತೋ, ಅವರು ಆ ಗುರಿಯ ಕಡೆಗೆ ಸಾಗಿದರು. ಯಾರು ತುಂಬ ಎತ್ತರದ ಗುರಿಗಳನ್ನು ಇಟ್ಟುಕೊಂಡು, ಅದನ್ನೇ ಜೀವನದ ಪರಮಗುರಿಯೆಂದು ಅಹರ್ನಿಶಿ ದುಡಿದರೋ ಅವರು ಧೀರರಾದರು, ನಾಯಕರಾದರು, ಜಗದ್ವಂದ್ಯರಾದರು, ದೇವರಾದರು. ಪ್ರತಿಯೊಬ್ಬರಿಗೂ ಒಂದು ಗುರಿ ಇದ್ದೇ ಇದೆ ಎಂದು ನಂಬುತ್ತೇವೆ. ಆದರೆ ಬದುಕಿನಲ್ಲಿ ಒಂದೇ ಗುರಿ ಇರುವುದು ಅಸಾಧ್ಯ. ನಮಗಿರುವುದು ಗುರಿಗಳ ಸಾಲು. ಹತ್ತನೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗೆ ಬರುವ ಪರೀಕ್ಷೆಯಲ್ಲಿ ಅತಿ ಹೆಚ್ಚು ಗುಣಗಳನ್ನು ಪಡೆಯುವ ಗುರಿ. ಅದು ಮುಗಿದ ಮೇಲೆ ಪಿ.ಯು. ಕಾಲೇಜಿನಲ್ಲಿ ಹೆಚ್ಚು ಮಾರ್ಕುಗಳನ್ನು ಪಡೆಯುವ ಗುರಿ, ಅಪೇಕ್ಷಿತ ಪದವಿಯನ್ನು ಹೊಂದುವ ಗುರಿ, ಉತ್ತಮ ಕೆಲಸದ ಗುರಿ, ಮದುವೆಯ ಗುರಿ, ಕೆಲಸದಲ್ಲಿ ಉನ್ನತಿಯ ಗುರಿ, ಮನೆ ಕಟ್ಟುವ, ದೊಡ್ಡ ಕಾರು ಕೊಳ್ಳುವ ಗುರಿ, ಹೀಗೆ ಗುರಿಗಳು ಬದಲಾಗುತ್ತಲೇ ಇರುತ್ತವೆ. ಇವೆಲ್ಲ ಸ್ವಕೇಂದ್ರಿತ ಗುರಿಗಳು. ಅವು ನಮ್ಮನ್ನು ಸುಖವಾಗಿ ಇಡಬಲ್ಲವೇ ವಿನ: ದೊಡ್ಡವರರನ್ನಾಗಿ ಮಾಡಲಾರವು. ಅವು ಸ್ವಾರ್ಥಮೂಲವಾದವುಗಳು. ಈ ಪರಿಧಿಯನ್ನು ದಾಟಿ, ನಾನು, ನನ್ನದು ಎಂಬುದನ್ನು ಕೊಂಚ ಬದಿಗೆ ಸರಿಸಿ ಪರಕೇಂದ್ರಿತ ಗುರಿಗಳನ್ನು ಗುರುತಿಸಿ, ಅವುಗಳನ್ನು ಬೆನ್ನಟ್ಟಿದರೆ ಬದುಕಿಗೆ ಸಾರ್ಥಕ್ಯ, ಜೀವ ಕೊಟ್ಟ ದೊರೆಯ ಋಣ ತೀರಿಸಿದ ಆನಂದ. ಅದಕ್ಕೇ ಕಗ್ಗ ತಿಳಿಸುತ್ತದೆ, ಜೀವನದ ನಡೆಗೆಯಲ್ಲಿ ಗುರಿ ಉದಾತ್ತವಾಗಿರಲಿ, ಕೇವಲ ಸ್ವಾರ್ಥಪೂರಿತವಾಗದಿರಲಿ. ಡಾ. ಕಲಾಂ ಹೇಳುತ್ತಿದ್ದರು, "ಸಣ್ಣ ಗುರಿ ಒಂದು ಅಪರಾಧ". ಎಂದು ನಾವು ಉನ್ನತವಾದ ಆದರ್ಶಗಳ ಗುರಿಯನ್ನು ಮರೆಯುತ್ತೇವೆಯೋ ಅಂದೇ ನಮ್ಮ ಬದುಕು ಚಿಕ್ಕದಾಗಿ ಸೊರಗಿ ಹೋಗುತ್ತದೆ. ಅದನ್ನು ಕಗ್ಗ 'ನಾರಕಕೆ ದಾರಿ' ಎನ್ನುತ್ತದೆ. ಗುರಿ ದೊಡ್ಡದಿರಬಹುದು, ಕೆಲವೊಮ್ಮೆ ಅಸಾಧ್ಯವೆಂದೇ ತೋರಬಹುದು. ಆದರೆ ಪ್ರಯತ್ನವನ್ನು ಬಿಡದಿರಬೇಕು. ಆ ಗುರಿಯ ಸದಾ ಕಾಲದ ನೆನಪು, ನಮ್ಮ ಕೊರತೆಗಳನ್ನು, ಅನನುಕೂಲತೆಗಳನ್ನು ಮರೆಯಿಸಿ ಮತ್ತೆ ಉತ್ಸಾಹಿಗಳನ್ನಾಗಿ ಮಾಡುತ್ತದೆ. ಅದನ್ನು ಕಾವ್ಯಮಯವಾಗಿ ಕಗ್ಗ, "ಊರನೆನಪೇ ಬಲವೋ" ಎನ್ನುತ್ತದೆ. ಮಹತ್ತರವಾದ ಗುರಿ, ನಮ್ಮ ಊರು. ಅದರ ನೆನಪು ನಮ್ಮನ್ನು ಬಲವಾಗಿ ಪ್ರೇರೇಪಿಸಿ ಕಾರ್ಯೋನ್ಮುಖರನ್ನಾಗಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಚತುರ್ದಶಿ ಗಂ. 06-54 ನಂತರ ಅಮಾವಾಸ್ಯೆ ಗಂ. 28-27 ನಕ್ಷತ್ರ: ವಿಶಾಖಾ ಗಂ. 21-37 ಯೋಗ: ಶೋಭನ ಗಂ. 15-39, ಕರಣ: ಶಕುನಿ ಗಂ. 06-54, ವೃಶ್ಚಿಕ, ಮಾಸದ 06 ನೇ ದಿನ
ರಾಹುಕಾಲ: ಮಧ್ಯಾಹ್ನ 12-00 – 01-30 **ಸೂರ್ಯೋದಯ:** 06-37 **ಸೂರ್ಯಾಸ್ತ:** 05-57
ಮುಸ್ಲಿಂ ದಿನಾಂಕ: 27 ರಬಿಯುಸ್ಸಾನಿ, ದಿನ ವಿಶೇಷ: ಕಾರ್ತಿಕ ಅಮಾವಾಸ್ಯೆ
ಅದೃಷ್ಟ ಸಂಖ್ಯೆ: 5, 6

ಮೇಷ: ಎಲ್ಲಾ ಪ್ರಾಮಾಣಿಕ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯಲ್ಲಿರುವುದು. ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದ ಶುಭಫಲ ಅನುಭವಿಸುವಿರಿ. ಹಂತ ಹಂತವಾಗಿ ಹಣದ ಪರಿಸ್ಥಿತಿ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಇರುವುದು.

ವೃಷಭ: ನಿಮ್ಮಲ್ಲಿರುವ ಆಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ಅದನ್ನು ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ. ವೃತ್ತಿಯಲ್ಲಿ ಗಮನಹರಿಸಿದಲ್ಲಿ ಬಹುನಿರೀಕ್ಷಿತವಾದ ಬೆಳವಣಿಗೆಗಳು ಇರುತ್ತದೆ.

ಮಿಥುನ: ಆಫೀಸಿನಲ್ಲಿಂದು ನಿಮ್ಮ ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವಿರಿ. ನಿಮ್ಮ ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳಬಹುದು. ದಿನದಿಂದ ದಿನಕ್ಕೆ ಹೊಸ ಹೊಸ ಪ್ರಯತ್ನವಿರಲಿ.

ಕರ್ಕಾಟಕ: ದೇವರ ದಯೆಯಿಂದ ಮತ್ತು ನಿಮಗಿರುವ ಜನಬಲದಿಂದಾಗಿ ಕೆಲಸದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವಿರಿ. ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ, ಮನೋಭಿಲಾಷೆ ಈಡೇರುವುದು.

ಸಿಂಹ: ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಅನಿವಾರ್ಯ. ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿ ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು.

ಕನ್ಯಾ: ರಾಜಕೀಯ ವಲಯದ ಕಾರ್ಯಕರ್ತರಿಗೆ ಮುನ್ನಡೆಯುವ ಅವಕಾಶ ಕೈ ತಪ್ಪುವ ಸಾಧ್ಯತೆ ಹೆಚ್ಚಿದೆ. ದೃಷ್ಟಿ ದೋಷ ಸರಿಪಡಿಸಿಕೊಳ್ಳಲು ವೈದ್ಯರನ್ನು ಭೇಟಿ ಮಾಡಿ. ಕಣ್ಣಿನ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ.

ತುಲಾ: ಕಾರ್ಯ ಕ್ಷೇತ್ರದಲ್ಲಿ ಶಾಂತ ಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಿರಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡಲಿದೆ. ನಿಮ್ಮ ದಿನ ನಿತ್ಯದ ವೃತ್ತಿಗಳಲ್ಲಿ ಬದಲಾವಣೆ ಇರುವುದಿಲ್ಲ.

ವೃಶ್ಚಿಕ: ಸಮಯವನ್ನು ವ್ಯರ್ಥ ಮಾಡದೆ ಕೆಲಸಗಳನ್ನು ಪೂರ್ಣಗೊಳಿಸಿ. ಮೀನುಗಾರರು ಉದ್ಯೋಗದಲ್ಲಿ ಹೆಚ್ಚಿನ ಜಾಗರೂಕತೆ ವಹಿಸ ಬೇಕಾಗುತ್ತದೆ. ದುರ್ಗಾಪರಮೇಶ್ವರಿಯನ್ನು ಆರಾಧಿಸಿ ಸತ್ಫಲ ದೊರಕುತ್ತದೆ.

ಧನು: ಸ್ನೇಹಿತರಿಂದ ಒಳ್ಳೆಯ ಫಲಿತಾಂಶ ಎದುರು ನೋಡಬಹುದು, ಹಾಗೂ ಈ ದಿನ ಸರ್ಕಾರಿ ಸಂಬಂಧವಾದ ವ್ಯವಹಾರಗಳಿಂದ ನೀವು ನಿರೀಕ್ಷೆಗೂ ಮೀರಿದ ಲಾಭವನ್ನು ಅನುಭವಿಸುತ್ತೀರಿ.

ಮಕರ: ಕುಟುಂಬದ ಆಂತರಿಕ ಸಮಸ್ಯೆಯೊಂದು ಸಾಮರಸ್ಯದಿಂದ ಬಗೆಹರಿಯಲಿದೆ. ಆರ್ಥಿಕತೆಗಿಂತ ಸಂಬಂಧ ಮುಖ್ಯವೆಂಬುವುದನ್ನು ಮರೆಯದಿರಿ. ಆಶಾದಾಯಕವಾದ ಭಾವನೆಗಳಿಂದ ನೆಮ್ಮದಿ ಇರಲಿದೆ.

ಕುಂಭ: ಉನ್ನತ ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಕಾರ್ಯಗಳು ಏರು-ಪೇರಾಗುವುದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಳವಳ ಮೂಡಿಸಲಿದೆ. ಆಹಾರ ಪದ್ಧತಿಯನ್ನು ಬದಲಿಸಿಕೊಳ್ಳುವುದು ಸರಿ ಎನಿಸುವುದು.

ಮೀನ: ಸಂಸ್ಥೆಗಳ ಷೇರು ಬಂಡವಾಳದಲ್ಲಿ ಹೆಚ್ಚು ಲಾಭ ಸಿಗುವುದು. ನೃತ್ಯಾಭ್ಯಾಸ ಮುಂದುವರೆಸುವಂತೆ ಮನೆಯವರಿಂದ ಒತ್ತಾಯ ಹೆಚ್ಚಲಿದೆ. ಶ್ರೀ ಶಾರದೆಯನ್ನು ಸ್ತುತಿಸುವುದರಿಂದ ಮೇಧಾಶಕ್ತಿ ಅಭಿವೃದ್ಧಿಯಾಗುತ್ತದೆ.

ಪದಬಂಧ 5147
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಪ್ಪು ತಯಾರಿಸುವವನು (4)
2.ಸೊಗಸಾದುದು ಮರದೊಳಗಿದೆಯಲ್ಲಾ! (4)
4.ನಡುವೆ ಕರ ತಿರುಗಿಸಿದ್ದಕ್ಕೇ ಈ ಅಡ್ಡಿ! (4)
6. ಮೂಗಿನಿಂದ ಸುರಿಯುವ ಶ್ಲೇಷ್ಮ (3)
7.ನೊಸಲು ಉಲ್ಟಾ ಕಾಣುತ್ತಿದೆ (2)
9.ಆಯಾಳಿಗೆ ಆದ ಸುಸ್ತು (3)
11ಹರಿದಾರಿಯಲ್ಲಿ ತಿರುಗಿದಾಗ ಆದಬಾಯಾರಿಕೆ (2)
13.ಸೋಮಾರಿತನಕ್ಕೊಂದು ಪರ್ಯಾಯಪದ (3)
14.ಅಗ್ರಹಾರಕ್ಕೆ ಬಂದಿರುವ ಶ್ರೇಷ್ಠ ವ್ಯಕ್ತಿ (4)
16.ಮರದ ಹತ್ತಿರವಿರುವ ಪಚ್ಚೆ (4)
17.ತಪ್ಪುಮಾಡಿದವನು (4)

ಮೇಲಿಂದ ಕೆಳಕ್ಕೆ
1.ದಾಹವಿದ್ದಾಗ ನೀಡಿದ ದೃಷ್ಟಾಂತ! (5)
2.ಮಸಲತ್ತು ಮಾಡಿದಾಗ ಏರಿದ ಅಮಲು! (2)
3.ಇದು ಲಲಾಟಲಿಖಿತ (5)
5.ತಿರುಗಿದಾಗ ಬಂದಿರುವ ತೊಂದರೆ (3)
8.ಈತ ಮೋಸಗಾರ (5)
10.ದೊರೆಯಿಲ್ಲಿ ತಿರುಗಿ ನಿಂತಿದ್ದಾನಲ್ಲಾ! (3)
12.ದಾರ ಹಿಡಿದು ಸಂಕೋಚವುಳ್ಳವನು ಬಂದಿದ್ದಾನೆ (5)
15.ಹಂತಕನೇರಿದ ಮೆಟ್ಟಿಲು (2)



5146 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಣಕ 6.ನಕ್ಷತ್ರಲೋಕ
7.ವಾಮಪಕ್ಷ 9.ಆಳ
10.ಗುಣಕ 12.ಪಣ
14.ಕಸವರ 16.ವಾದಸರಣಿ
18.ಕುಟೀರ

ಮೇಲಿಂದ ಕೆಳಕ್ಕೆ:
1.ಮಡಿವಾಳ 2.ಕದಪ
3.ವನ 4.ಅಂತರಾಳ
5.ಪ್ರಕರಣ 8.ಕ್ಷಮಾಗುಣ
9.ಆಕಸ್ಮಿಕ 11.ಹರಿವಾಣ
12.ಪರಸತಿ 13.ಪರಸ್ಪರ
15.ಸರಕು 17.ಣಿಗ

ಸುಡೊಕು 5533

4			9		1		3	
								4
8		3	4		5	9		
7								8
	8		1	6	2		9	
		9	7			2		
		8		1			4	
9	6	4	8		7	1		5
	1			9			8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5532 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18159
ಇಂದಿನ ಅಂತ್ಯ	18244
▲	84
ದಿನದ ಕನಿಷ್ಠ	18261

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹550
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹550

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1530)
ಸೋಯಾ (ರಿಫೈನ್ಡ್)	₹1320(1335)
ಸೂರ್ಯಕಾಂತಿ (ರಿಫೈನ್ಡ್)	₹1460 (1480)
ಪಾಮೋಲಿನ್	₹960 (950)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800
ಸಣ್ಣ	₹500-1000

ಕೊಬ್ಬರಿ ಧಾರಣೆ

ಅರಸೀಕೆರೆ	₹11500-12350
ಪುತ್ತೂರು (ಇತರೆ)	₹4500-9000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹130

ಕಾಂಗ್ರೆಸ್ ನಾಯಕನ ಮಗಳ ಅಪಹರಣ

ಜೈಪುರ (ಪಿಟಿಐ): ಜೈಪುರ ಪ್ರತಾಪ ನಗರದದಲ್ಲಿ ಸೋಮವಾರ ಸಂಜೆ ತರಕಾರಿ ಕೊಳ್ಳಲು ಹೋಗಿದ್ದ ಕಾಂಗ್ರೆಸ್ ನಾಯಕ ಗೋಪಾಲ್ ಕೇಶವತ್ ಅವರ 21 ವರ್ಷದ ಪುತ್ರಿ ಅಭಿಲಾಷಾ ಎಂಬುವವರ ಅಪಹರಣವಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಅಭಿಲಾಷಾಳ ಸ್ಕೂಟರ್ ಏರ್‌ಪೋರ್ಟ್ ರಸ್ತೆಯಲ್ಲಿ ಪತ್ತೆಯಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಆಡಳಿತ ಮಂಡಳಿಗಳಲ್ಲಿ ನಿಧಾನವಾಗಿ ಹೆಚ್ಚುತ್ತಿರುವ ಮಹಿಳೆಯರ ಸಂಖ್ಯೆ

ಮುಂಚೂಣಿ ಕಂಪನಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ಶೇ 18

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ 500 ಮುಂಚೂಣಿ (ನಿಫ್ಟಿ-500) ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಒಟ್ಟು ಪಾಲು ಶೇಕಡ 17.6ರಷ್ಟು ಇದೆ.

ದೇಶದ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ನಿಧಾನವಾಗಿಯಾದರೂ ಹೆಚ್ಚಾಗುತ್ತಿದೆ ಎಂಬುದನ್ನು ಇದು ತೋರಿಸುತ್ತಿದೆ ಎಂದು ಇನ್‌ಸ್ಟಿಟ್ಯೂಷನಲ್ ಇನ್ವೆಸ್ಟರ್ ಅಡ್ವೈಸರಿ ಸರ್ವಿಸಸ್ ಸಂಸ್ಥೆ ಸಿದ್ಧಪಡಿಸಿರುವ ಅಧ್ಯಯನ ವರದಿ ಹೇಳಿದೆ.

ಜಾಗತಿಕ ಮಟ್ಟದಲ್ಲಿ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವು ಸರಿಸುಮಾರು ಶೇಕಡ 24ರಷ್ಟು ಇದೆ. 'ಕಂಪನಿಗಳ ಆಡಳಿತ ಮಂಡಳಿಗೆ ಮಹಿಳೆಯರನ್ನು ನೇಮಕ ಮಾಡುವ ವಿಚಾರದಲ್ಲಿ ಭಾರತವು ಮುಂದಡಿ ಇರಿಸಿದೆ. 2014ರಲ್ಲಿ ಮಹಿಳೆಯರ ಪ್ರಾತಿನಿಧ್ಯವು ಶೇ 6ರಷ್ಟು ಇತ್ತು. 2017ರ ಸುಮಾರಿಗೆ ಅದು ಶೇ 14ಕ್ಕೆ ಏರಿಕೆ ಆಯಿತು. ಈಗ ಅದು ಶೇ 17.6ಕ್ಕೆ ತಲುಪಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮುಖ್ಯಾಂಶಗಳು

- ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಏರಿಕೆ
- ಯುರೋಪ್, ಉತ್ತರ ಅಮೆರಿಕಕ್ಕಿಂತ ಭಾರತದಲ್ಲಿ ಪ್ರಾತಿನಿಧ್ಯ ಕಡಿಮೆ

ಮಾರ್ಚ್ ಅಂತ್ಯದವರೆಗಿನ ಮಾಹಿತಿ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ. ಈಗಿನ ವೇಗದಲ್ಲಿ ಸಾಗಿದರೆ ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ 30ರಷ್ಟು ಆಗಲು 2058ರವರೆಗೆ ಕಾಯಬೇಕಾಗುತ್ತದೆ.

ಯುರೋಪಿನ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಮಹಿಳೆಯ ಪ್ರಾತಿನಿಧ್ಯ ಶೇ 34.4ರಷ್ಟು ಇದೆ. ಉತ್ತರ ಅಮೆರಿಕದಲ್ಲಿ ಇದು ಶೇ 28.6ರಷ್ಟು ಆಗಿದೆ. ಫ್ರಾನ್ಸ್‌ನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ 44.5ರಷ್ಟು ಇದೆ.

ನಿಫ್ಟಿ-500 ಕಂಪನಿಗಳ ಪೈಕಿ 22 ಕಂಪನಿಗಳಲ್ಲಿ ಮಹಿಳೆಯರು ಅಧ್ಯಕ್ಷ ಸ್ಥಾನದಲ್ಲಿದ್ದಾರೆ, 25 ಕಂಪನಿಗಳಲ್ಲಿ ಸಿಇಒ ಆಗಿದ್ದಾರೆ, 62 ಕಂಪನಿಗಳಲ್ಲಿ ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನದಲ್ಲಿದ್ದಾರೆ.

ಸಾಂದರ್ಭಿಕ ಚಿತ್ರ

ಸರ್ಕಾರಿ ಸ್ವಾಮ್ಯದ ಕಂಪನಿಗಳು ಮಹಿಳೆಯರ ಪ್ರಾತಿನಿಧ್ಯದ ವಿಚಾರದಲ್ಲಿ ಕಳಪೆ ಸಾಧನೆ ತೋರಿವೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಿಯಮಗಳ ಪ್ರಕಾರ, ಮಾರುಕಟ್ಟೆ ಬಂಡವಾಳದ ಲೆಕ್ಕಾಚಾರದಲ್ಲಿ ದೇಶದ ಮುಂಚೂಣಿ 1,000 ಕಂಪನಿಗಳ ಆಡಳಿತ ಮಂಡಳಿಯ ಸ್ವತಂತ್ರ ನಿರ್ದೇಶಕರ ಸ್ಥಾನಕ್ಕೆ ಕನಿಷ್ಠ ಒಬ್ಬ ಮಹಿಳೆಯನ್ನು ನೇಮಕ ಮಾಡಬೇಕು.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಮೂರು ದಿನಗಳಿಂದ ಇಳಿಕೆಯ ಹಾದಿಯಲ್ಲಿ ಇದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಏರಿಕೆ ದಾಖಲಿಸಿದವು. ಹೂಡಿಕೆದಾರರು ಐ.ಟಿ., ಲೋಹ ವಲಯದ ಷೇರುಗಳನ್ನು ಹೆಚ್ಚಾಗಿ ಖರೀದಿಸಿದರು. ವಿದೇಶಿ ಮಾರುಕಟ್ಟೆಗಳಲ್ಲಿನ ವಹಿವಾಟು ಸಕಾರಾತ್ಮಕವಾಗಿ ಇತ್ತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 274 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 84 ಅಂಶ ಏರಿಕೆ ದಾಖಲಿಸಿತು.

'ಚೀನಾದಲ್ಲಿ ಜಾರಿಯಲ್ಲಿ ಇರುವ ಲಾಕ್‌ಡೌನ್ ಕ್ರಮಗಳು ಜಾಗತಿಕ ಬೆಳವಣಿಗೆಯ ಮುನ್ನೋಟದ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡಿವೆ. ಅಮೆರಿಕದಲ್ಲಿ ಹಣಕಾಸಿನ ನೀತಿ ಇನ್ನಷ್ಟು ಬಿಗಿಯಾಗಬಹುದು ಎಂಬ ನಿರೀಕ್ಷೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಆಸಕ್ತಿ ತಗ್ಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



'ಮಾರುಕಟ್ಟೆಯ ಮೇಲೆ ನೇರವಾಗಿ ಪ್ರಭಾವ ಬೀರುವ ವಿಷಯಗಳು ಕಾಣುತ್ತಿಲ್ಲ. ಹೀಗಾಗಿ, ಜಾಗತಿಕ ಸೂಚ್ಯಂಕಗಳು ಹಾಗೂ ಮುಖ್ಯವಾಗಿ ಅಮೆರಿಕದ ಸೂಚ್ಯಂಗಳು ದೇಶಿ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಲಿವೆ' ಎಂದು ರೆಲಿಗೇರ್ ಬ್ರೋಕಿಂಗ್‌ನ ತಾಂತ್ರಿಕ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇಕಡ 0.67ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 88.04 ಡಾಲರ್‌ನಂತೆ ಮಾರಾಟವಾಗಿದೆ.

ನಿಧನ
ಜಿ. ಚಂದ್ರಕುಮಾರ್ (ಚೌಡಿ)
ದುಃಖತಪ್ತರು: ಗೋವಿಂದಪ್ಪ ಮತ್ತು ಕುಟುಂಬದವರು ಮನೋರಾಯನಪಾಳ್ಯ, ಆರ್.ಟಿ.ನಗರ, ಬೆಂ-32.
ಅಂತಿಮ ಕಾರ್ಯಗಳು ನಾಳೆ 23.11.2022 ರಂದು ಮಧ್ಯಾಹ್ನ 1.30ಕ್ಕೆ ಜರುಗಲಿದೆ.

ಪುಣ್ಯಸ್ಮರಣೆ
ಪದ್ಮಶಾಲಿ ಸುಪ್ಪಲು ಶ್ರೀಮತಿ ಎಂ. ಮೀನಾಕ್ಷಮ್ಮ — ನಿಧನ : 31-10-2022
ಪದ್ಮಶಾಲಿ ಸುಪ್ಪಲು ಶ್ರೀ ಬಿ.ಆರ್. ಚಿನ್ನಪ್ಪನವರು — ನಿಧನ : 23-11-1986
ಇಂತಿ ದು:ಖತಪ್ತರು : ಮಕ್ಕಳು, ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಹೆಚ್ಚುವರಿ ಅನುದಾನ?

ನವದೆಹಲಿ (ರಾಯಿಟರ್ಸ್): ಪ್ರಸಕ್ತ ಹಣಕಾಸು ವರ್ಷಕ್ಕೆ ಕೇಂದ್ರ ಸರ್ಕಾರವು ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಹೆಚ್ಚುವರಿಯಾಗಿ ₹ 24 ಸಾವಿರ ಕೋಟಿಯಷ್ಟು ಅನುದಾನ ಒದಗಿಸುವ ಸಾಧ್ಯತೆ ಇದೆ. ಇದು ಈಗಾಗಲೇ ನಿಗದಿ ಮಾಡಿರುವ ಮೊತ್ತಕ್ಕಿಂತ ಶೇಕಡ 18ರಷ್ಟು ಹೆಚ್ಚು.

ಅನುದಾನ ಹೆಚ್ಚಿಸುವ ಮೂಲಕ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ಬಲ ಕೊಡುವ ಉದ್ದೇಶ ಕೇಂದ್ರದ್ದು ಎಂದು ಮೂಲಗಳು ಹೇಳಿವೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ಕೇಂದ್ರವು ₹ 1.36 ಲಕ್ಷ ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ನಿಗದಿ ಮಾಡಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿನ ಆರ್ಥಿಕ ಸಂಕಷ್ಟ ಈಗ ನರೇಗಾ ಅಡಿ ಹೆಚ್ಚಿನ ಉದ್ಯೋಗಕ್ಕೆ ಬೇಡಿಕೆ ಸೃಷ್ಟಿಸಿದೆ. ಹೆಚ್ಚುವರಿ ಮೊತ್ತವನ್ನು ಬಳಸಿ ನರೇಗಾ ಅಡಿ ಉದ್ಯೋಗ ಜಾಸ್ತಿ ಮಾಡುವ ಹಾಗೂ ಕೈಗೆಟಕುವ ದರದ ವಸತಿ ಯೋಜನೆಗಳಿಗೆ ಬಲ ನೀಡುವ ಉದ್ದೇಶ ಇದೆ.

ಈ ವಿಚರವಾಗಿ ಕೇಂದ್ರ ಹಣಕಾಸು ಸಚಿವಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವಾಲಯ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ. ಹೆಚ್ಚುವರಿ ಅನುದಾನಕ್ಕೆ ಕೇಂದ್ರವು ಸಂಸತ್ತಿನ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಅನುಮೋದನೆ ಕೋರುವ ಸಾಧ್ಯತೆ ಇದೆ.

ಆನ್‌ಲೈನ್ ಆಟಕ್ಕೆ ಶೇ 28 ಜಿಎಸ್‌ಟಿ?

ನವದೆಹಲಿ (ಪಿಟಿಐ): ಆನ್‌ಲೈನ್ ಆಟವು ಯಾವುದೇ ಸ್ವರೂಪದ್ದಾದರೂ ಅದಕ್ಕೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಶೇಕಡ 28ರಷ್ಟು ತೆರಿಗೆ ವಿಧಿಸಬೇಕು ಎಂದು ರಾಜ್ಯಗಳ ಹಣಕಾಸು ಸಚಿವರ ಸಮಿತಿಯು ಜಿಎಸ್‌ಟಿ ಮಂಡಳಿಗೆ ಶಿಫಾರಸು ಮಾಡುವ ಸಾಧ್ಯತೆ ಇದೆ.

ಆದರೆ, ಎಷ್ಟು ಮೊತ್ತಕ್ಕೆ ಜಿಎಸ್‌ಟಿ ವಿಧಿಸಬೇಕು ಎಂಬ ವಿಚಾರದಲ್ಲಿ ಹೊಸ ಸೂತ್ರವೊಂದನ್ನು ಸಮಿತಿಯು ರೂಪಿಸಬಹುದು ಎಂದು ಮೂಲಗಳು ಹೇಳಿವೆ.

ಈಗ ಆನ್‌ಲೈನ್ ಆಟಗಳಿಗೆ ಶೇ 18ರಷ್ಟು ತೆರಿಗೆ ವಿಧಿಸಲಾಗಿದೆ. ಆನ್‌ಲೈನ್ ಆಟ ಒದಗಿಸುವ ಪೋರ್ಟಲ್‌ಗಳು ಸಂಗ್ರಹಿಸುವ ಒಟ್ಟು ಶುಲ್ಕದ ಮೇಲೆ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು	480

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-38000
ಹಳತು	48000-54500
ಚನ್ನಗಿರಿ ರಾಶಿ	44029-46799
ಕಾರ್ಕಳ ಹೊಸತು	25000-37500
ಹಳತು	40000-54500

ಕುಂದಾಪುರ

ಹಳೆಚಾಲಿ	53000-55000
ಹೊಸಚಾಲಿ	40000-47500

ಪುತ್ತೂರು

ಕೋಕ	11000-26000
ಹೊಸತು	32000-38000

ಸಾಗರ

ಬಿಳಿಗೋಟು	26029-29553
ಚಾಲಿ	32780-36399
ಕೋಕ	17799-30299
ಕೆಂಪುಗೋಟು	31899-36299
ರಾಶಿ	40339-46710
ಸಿಪ್ಪೆಗೋಟು	16299-18689

ಶಿವಮೊಗ್ಗ

ಬೆಟ್ಟೆ	47890-51450
ಗೊರಬಲು	7000-35591
ಹೊಸತು	44532-46499
ರಾಶಿ	44609-47909
ಸರಕು	58669-79990

ಸಿದ್ದಾಪುರ

ಬಿಳಿಗೋಟು	27699-33579
ಚಾಲಿ	35489-38699
ಕೋಕ	26699-31882
ಕೆಂಪುಗೋಟು	30099-30619
ರಾಶಿ	44599-46229
ತಟ್ಟಿಬೆಟ್ಟೆ	37809-40069

ಶಿರಸಿ

ಬೆಟ್ಟೆ	20569-44699
ಬಿಳಿಗೋಟು	27009-34509
ಚಾಲಿ	30399-40452
ರಾಶಿ	44208-46099

ಸೊರಬ

ರಾಶಿ	45000-45000

ಯಲ್ಲಾಪುರ

ಆಪಿ	55300-55300
ಬಿಳಿಗೋಟು	24899-35899
ಚಾಲಿ	35089-40099
ಕೋಕ	16899-28811
ಕೆಂಪುಗೋಟು	24899-34299
ರಾಶಿ	45018- 48899
ತಟ್ಟಿಬೆಟ್ಟೆ	36100-44699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	13200	---	160.40 ಸೆಂಟ್ಸ್
ಎಸಿ	6580	6500	---	
ಆರ್‌ಪಿ	8500	8000	---	ಲಂಡನ್
ಆರ್‌ಸಿ	4530	4000	---	1812 ಡಾಲರ್ಸ್

ಸೋನಾಲಿ ಹತ್ಯೆ: ಸಿಬಿಐ ಚಾರ್ಜ್‌ಶೀಟ್ ಸಲ್ಲಿಕೆ

ಪಣಜಿ: ಹರಿಯಾಣದ ಬಿಜೆಪಿ ನಾಯಕಿ ಸೋನಾಲಿ ಫೋಗಾಟ್ ಅವರ ಹತ್ಯೆಯ ಮೂರು ತಿಂಗಳ ಬಳಿಕ ಅವರ ವ್ಯವಸ್ಥಾಪಕ ಸುಧೀರ್ ಸಂಗ್ವಾನ್ ಮತ್ತು ಆಪ್ತ ಸಹಾಯಕ ಸುಖ್ವಿಂದರ್ ಸಿಂಗ್ ವಿರುದ್ಧ ಸಿಬಿಐ ಮಂಗಳವಾರ ಹತ್ಯೆಯ ಆರೋಪಪಟ್ಟಿ ಸಲ್ಲಿಸಿದೆ.

ಮಾಪುಸಾ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಈ ಆರೋಪಪಟ್ಟಿ ಸಲ್ಲಿಸಲಾಗಿದ್ದು, ವಿಚಾರಣೆ ಡಿಸೆಂಬರ್ 5ಕ್ಕೆ ನಡೆಯಲಿದೆ.

ಅಗಸ್ಟಾ ವೆಸ್ಟ್‌ಲ್ಯಾಂಡ್ ಹಗರಣ: 28ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಅಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಹಗರಣದ ಆರೋಪಿ ಕ್ರಿಶ್ಚಿಯನ್ ಮಿಷೆಲ್ ಜೇಮ್ಸ್ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆಯನ್ನು ಇದೇ 28ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಕ್ರಿಶ್ಚಿಯನ್ ವಿರುದ್ಧ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇಡಿ) ಎರಡು ಪ್ರತ್ಯೇಕ ಮೊಕದ್ದಮೆಗಳನ್ನು ದಾಖಲಿಸಿವೆ. ತನಿಖಾ ಸಂಸ್ಥೆಗಳ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ ರಾಜು ಅವರು ಕೋರ್ಟ್‌ಗೆ ಹಾಜರಾಗಲಿದ್ದಾರೆ.

ಈ ಜಾಮೀನು ಅರ್ಜಿಗೆ ಸಂಬಂಧಿಸಿ ಸಿಬಿಐ ಮತ್ತು ಇ.ಡಿಗಳ ಪ್ರತಿಕ್ರಿಯೆಯನ್ನು ಸುಪ್ರೀಂ ಕೋರ್ಟ್ ಮೇ ತಿಂಗಳಲ್ಲಿ ಕೇಳಿತ್ತು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹525-708
ದ್ವಿತಳಿ (ಬಿ.ವಿ) ₹500-856

ಮುಂಬೈ ಧಾರಣೆ

ಶೇಂಗಾ

22-11-2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1525)
ಒಂದು ವಾರದ ಡೆಲಿವರಿ	1525 (1520)
ಸೋಯಾ ಕಚ್ಚಾ	1320 (1270)
ಪಾಮ್ ವಾರದ ಡೆಲಿವರಿ	958 (945)
ಸೂರ್ಯಕಾಂತಿ ಎಣ್ಣೆ ಕಚ್ಚಾ	-----

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,250 (52,250)
ಬೆಳ್ಳಿ ಕೆ.ಜಿ 61,500 (60,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅಭಿಷೇಕ್ ಗೌಡ ಕೆ., ಊರು ಬೇಡ

- **ಪ್ರಶ್ನೆ:** ಸರ್ಕಾರ, ನಿಗಮ ಮಂಡಳಿ ಹಾಗೂ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ನೌಕರರು ಷೇರು ಮಾರುಕಟ್ಟೆ, ಬಾಂಡ್, ವ್ಯಾಪಾರ ಹಾಗೂ ಖಾಸಗಿ ಸಂಸ್ಥೆಗಳ ಆ್ಯಪ್‌ಗಳಲ್ಲಿ ಹೂಡಿಕೆ ಮಾಡಬಹುದೇ? ಮಾಡಬಹುದಾದಲ್ಲಿ ಆದಾಯ ತೆರಿಗೆ ವಿವರ ಸಲ್ಲಿಸುವಾಗ ಯಾವ ಆಯ್ಕೆ ಬಳಸಬೇಕು ಎಂಬ ಮಾಹಿತಿ ಬೇಕು.

ಉತ್ತರ: ಷೇರು ಮಾರುಕಟ್ಟೆಯನ್ನು ಯಾವುದೇ ಸಾಮಾಜಿಕ ಸ್ಥಾನ ಹೊಂದಿರುವ ಜನ ಹೂಡಿಕೆ ಮಾಡಬಹುದಾದ ವ್ಯವಹಾರ ತಾಣವೆಂದು ಪರಿಗಣಿಸಲಾಗಿದೆ. ಆದರೆ ಸರ್ಕಾರಿ ನೌಕರರ ವಿಚಾರಕ್ಕೆ ಬಂದಾಗ ಹಲವಾರು ನಿರ್ಬಂಧಗಳನ್ನು ಜಾರಿಗೆ ತರಲಾಗಿದೆ. ಸರ್ಕಾರಿ ನೌಕರಿಯಲ್ಲಿರುವ ವ್ಯಕ್ತಿಯ ವೃತ್ತಿ ಅಥವಾ ಉದ್ಯೋಗ ಸಮಯಕ್ಕೆ ಧಕ್ಕೆಯಾಗಬಾರದೆಂದು, ಆರ್ಥಿಕವಾಗಿ ಅನಗತ್ಯ ಆಮಿಷಗಳಿಗೆ ಒಳಗಾಗಬಾರದೆಂದು ಇಂತಹ ನಿರ್ಬಂಧಗಳನ್ನು ಹೇರಲಾಗಿದೆ. ಇದು ಸರ್ಕಾರಿ ಉದ್ಯೋಗದಲ್ಲಿನ ವ್ಯಕ್ತಿಗಳ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಕೆ ಮಾಡುವ ಉದ್ದೇಶವನ್ನೂ ಹೊಂದಿದೆ.

ಕೇಂದ್ರ ನಾಗರಿಕ ಸೇವೆಗಳ ನಿಯಮಾವಳಿಯಲ್ಲಿ ಸರ್ಕಾರಿ ಹುದ್ದೆಯಲ್ಲಿರುವ ವ್ಯಕ್ತಿಗಳಿಗೆ ಅನ್ವಯವಾಗುವ ನಿರ್ಬಂಧಗಳನ್ನು ಉಲ್ಲೇಖಿಸಲಾಗಿದೆ. ನಿಯಮ 16ರ ಅನ್ವಯ, ಯಾವುದೇ ಸರ್ಕಾರಿ ಉದ್ಯೋಗಿ ಯಾವುದೇ ಷೇರು ಅಥವಾ ಇತರ ಹೂಡಿಕೆಗಳಲ್ಲಿ ವ್ಯಾಪಾರದ ಉದ್ದೇಶದಿಂದ ವ್ಯವಹರಿಸುವುದನ್ನು ನಿರ್ಬಂಧಿಸಲಾಗಿದೆ. ಈ ನಿಯಮ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶಗಳ ಎಲ್ಲ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ. ಕರೆನ್ಸಿ ಟ್ರೇಡಿಂಗ್, ಸರಕು ವ್ಯಾಪಾರ, ಫ್ಯೂಚರ್ಸ್ ಮತ್ತು ಆಪ್ಶನ್ ವಹಿವಾಟು ಅಥವಾ ಯಾವುದೇ ರೀತಿಯ ಅಲ್ಪಾವಧಿ ವಹಿವಾಟುಗಳನ್ನು ಅಥವಾ ಇಂಟ್ರಾಡೇ ಟ್ರೇಡಿಂಗ್ ಮಾಡಲು ಅವಕಾಶ ಇರುವುದಿಲ್ಲ.

ಆದರೆ ಕೆಲವು ಹೂಡಿಕೆಗಳಿಗೆ ರಿಯಾಯಿತಿ ಕೊಡಲಾಗಿದೆ. ನಿರ್ಬಂಧಗಳನ್ನು ಅರ್ಥಮಾಡಿಕೊಳ್ಳುವ ಮೊದಲು ವ್ಯಾಪಾರ ಮತ್ತು ಹೂಡಿಕೆಯ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ಈ ಎರಡೂ ಪದಗಳನ್ನು ಸಾಮಾನ್ಯವಾಗಿ ಪರಸ್ಪರ ಬದಲಿಯಾಗಿ ಬಳಸಲಾಗಿದ್ದರೂ, ಇವೆರಡೂ ವಿಭಿನ್ನ ಉದ್ದೇಶ ಹಾಗೂ ಗುಣಲಕ್ಷಣಗಳನ್ನು ಹೊಂದಿವೆ. ನೋಂದಾಯಿತ ಸ್ಟಾಕ್ ಬ್ರೋಕರ್‌ಗಳು ಅಥವಾ ಇತರ ನೋಂದಾಯಿತ ಸಂಸ್ಥೆಗಳ ಮೂಲಕ ಮಾಡಲಾದ ದೀರ್ಘಾವಧಿ ಹೂಡಿಕೆಗಳು ಈ ನಿಯಮಾವಳಿಯ ವ್ಯಾಪ್ತಿಯಿಂದ ಹೊರಗಿರುವಂತಿದೆ. ದೀರ್ಘಾವಧಿಗೆ ಷೇರುಗಳಲ್ಲಿ, ಎಸ್‌ಐಪಿ, ಗೋಲ್ಡ್ ಬಾಂಡ್, ಆರ್‌ಬಿಐ ಬಾಂಡ್ ಮತ್ತು ಅಂತಹ ಇತರೆ ಹೂಡಿಕೆಗಳಿಗೆ ಅವಕಾಶ ಕಲ್ಪಿಸಿಕೊಟ್ಟಂತಿದೆ. ಇಲ್ಲಿ ತಿಳಿಸಲಾದ ನಿಯಮಾವಳಿಯ ಒಟ್ಟು ಆಶಯ, ವ್ಯವಹಾರವನ್ನೇ ಉದ್ದೇಶವನ್ನಾಗಿಸಿ ಮಾರುಕಟ್ಟೆಯಲ್ಲಿ ಹಣ ತೊಡಗಿಸಿ ಚೆಲ್ಲಾಡುವುದನ್ನು ನಿಯಂತ್ರಿಸುವುದು.

ಯಾವುದೇ ವ್ಯವಹಾರವು ನಿರ್ಬಂಧಗಳ ವ್ಯಾಪ್ತಿಯಲ್ಲಿ ಬರುವಂಥದ್ದೇ ಅಲ್ಲವೇ ಎಂಬುದನ್ನು ನಿರ್ಣಯಿಸುವ ಅಧಿಕಾರ ಸರ್ಕಾರದ್ದು. ನಿಮ್ಮಲ್ಲಿ ಇನ್ನೂ ಸಂದೇಹ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಲಿಖಿತ ರೂಪದಲ್ಲಿ ನಿಮ್ಮ ಅಹವಾಲುಗಳನ್ನು ಸಲ್ಲಿಸಿ, ಅವರಿಂದ ಮಾಹಿತಿ ಪಡೆದುಕೊಳ್ಳಿ. ನೀವು ಯಾವುದೇ ಆ್ಯಪ್ ಮೂಲಕ ವ್ಯವಹರಿಸಿದರೂ, ಯಾವ ರೀತಿಯ ವ್ಯವಹಾರ ಮಾಡುತ್ತೀರಿ ಎನ್ನುವುದಷ್ಟೇ ಇಲ್ಲಿ ಗಣನೆಗೆ ಬರುತ್ತದೆ. ತೆರಿಗೆ ವಿವರ ಸಲ್ಲಿಸುವಾಗ ನೀವು ಸರ್ಕಾರಿ ನೌಕರ ಎನ್ನುವ ವರ್ಗದಲ್ಲೇ ಆದಾಯ ತೆರಿಗೆ ವಿವರ ಸಲ್ಲಿಸಬೇಕಾಗಿರುತ್ತದೆ.

ಪ್ರಸನ್ನ ಕುಮಾರ್ ವಿ., ಮೈಸೂರು

- **ಪ್ರಶ್ನೆ:** ವಾಲ್ಯೂ ಇನ್ವೆಸ್ಟ್‌ಮೆಂಟ್, ಗ್ರೋತ್ ಇನ್ವೆಸ್ಟ್‌ಮೆಂಟ್ ಎನ್ನುವ ಹೊಸ ವಿಚಾರಗಳನ್ನು ಟಿ.ವಿ. ಮಾಧ್ಯಮಗಳಲ್ಲಿ ಆಗಾಗ ಕೇಳುತ್ತಿರುತ್ತೇವೆ. ಇದು ನಿಜಾರ್ಥದಲ್ಲಿ ಏನು? ಲಾಭ ಗಳಿಸುವುದೇ ಅಥವಾ ಜೀವನದುದ್ದಕ್ಕೂ ಹೂಡಿಕೆ ಮಾಡುತ್ತಾ ಹಣ ಸಂಗ್ರಹಿಸಿಡುವುದೇ? ದೀರ್ಘಾವಧಿಯಲ್ಲಿ ಹೂಡಿಕೆ ಮಾಡಿದಾಗ ಇವು ನಿಜಕ್ಕೂ ಹಣದುಬ್ಬರಕ್ಕಿಂತ ಹೆಚ್ಚಿನ ಮೌಲ್ಯ ಗಳಿಸುವ ಅವಕಾಶ ನೀಡುತ್ತವೆಯೇ?

ಉತ್ತರ: ಅನೇಕ ಪದಗಳು ಯಾವುದೇ ಹೂಡಿಕೆದಾರನಿಗೆ ಮೊದಲು ವಿಶೇಷವಾಗಿ ಕಾಣಿಸಬಹುದು. ಆದರೆ ಹೂಡಿಕೆಯ ಪ್ರಪಂಚ ಬಹಳ ದೊಡ್ಡದು. ಇದರ ಬಗ್ಗೆ ಯಾವುದೇ ಹೂಡಿಕೆದಾರನಿಗೆ ಕೌತುಕ ಇರುವುದು ಸಹಜ.

ವಾಸ್ತವದಲ್ಲಿ ಇವೆರಡು ತುಸು ಬೇರೆಯಾಗಿರುವ ಹೂಡಿಕೆ ಧೋರಣೆಗಳು. ಅಥವಾ ಹೂಡಿಕೆ ಮಾಡಬಹುದಾದ ಕಂಪನಿಗಳನ್ನು ಅನ್ವೇಷಿಸುವ ಭಿನ್ನ ರೀತಿಗಳು. ಇವೆರಡರ ಒಟ್ಟಾರೆ ಉದ್ದೇಶ, ಹೂಡಿಕೆದಾರರಿಗೆ ದೀರ್ಘಾವಧಿಯಲ್ಲಿ ಉತ್ತಮ ಆದಾಯ ಗಳಿಸಿಕೊಡುವುದು. ಹೂಡಿಕೆಯ ಆಯ್ಕೆಗೆ ಕಂಪನಿಯ ಬೆಳವಣಿಗೆಯನ್ನೇ ಮೂಲ ಮಾನದಂಡವನ್ನಾಗಿಸಿ ಹೂಡಿಕೆ ಮಾಡುವ ವರ್ಗದವರು ಗ್ರೋತ್ ಇನ್ವೆಸ್ಟರ್‌ಗಳು. ಇಂತಹ ಕಂಪನಿಗಳು ಎಂತಹ ಆರ್ಥಿಕ ಇಕ್ಕಟ್ಟಿನ ಪರಿಸ್ಥಿತಿಯಲ್ಲೂ ಅದೇ ವರ್ಗದ ಇತರ ಕಂಪನಿಗಳ ಸರಾಸರಿ ಬೆಳವಣಿಗೆಗಿಂತ ಹೆಚ್ಚಿನ ಲಾಭಾಂಶ ದಾಖಲಿಸಿ ತೋರಿಸುವುದರಲ್ಲಿ ಶಕ್ತವಾಗಿರುತ್ತವೆ. ಇದಕ್ಕೆ ತದ್ವಿರುದ್ಧವಾಗಿರುವುದು ವ್ಯಾಲ್ಯೂ ಇನ್ವೆಸ್ಟಿಂಗ್. ಈ ತನಕ ದೊಡ್ಡದೇನನ್ನೂ ಸಾಧಿಸದೆ ಇದ್ದರೂ, ಭವಿಷ್ಯದಲ್ಲಿ ನಿರ್ದಿಷ್ಟ ಕ್ಷೇತ್ರದಲ್ಲಿ ಕಂಪನಿಯ ಉತ್ಪನ್ನಗಳು ಅಥವಾ ಸೇವೆಗಳು ಮಾರುಕಟ್ಟೆಯನ್ನು ಆಕ್ರಮಿಸಿಕೊಂಡು ಭಾರೀ ಪ್ರಮಾಣದ ಮೌಲ್ಯ ಸೃಷ್ಟಿಸಬಹುದು. ಅಂತಹ ಕಂಪನಿಗಳನ್ನು ಹುಡುಕಿ, ಅವುಗಳಲ್ಲಿ ಹೂಡಿಕೆ ಮಾಡುವುದೇ ವ್ಯಾಲ್ಯೂ ಇನ್ವೆಸ್ಟ್‌ಮೆಂಟ್. ಇಂತಹ ಕಂಪನಿಗಳ ಷೇರುಗಳು ತಮ್ಮ ಕ್ಷೇತ್ರದ ಇತರ ಷೇರುಗಳಿಗೆ ಹೋಲಿಸಿದರೆ ಕಡಿಮೆ ಬೆಲೆಗೆ ದೊರಕುತ್ತಿರುತ್ತವೆ. ಆದರೆ ಯಾವುದೋ ಕಾರಣಕ್ಕೆ ಬಹಳಷ್ಟು ಹೂಡಿಕೆದಾರರಿಗೆ ಅಂತಹ ಷೇರುಗಳ ಮೇಲೆ ಭರವಸೆ ಮೂಡಿರುವುದಿಲ್ಲ.

ಹೂಡಿಕೆದಾರರು ಇವೆರಡರ ಸರಿಯಾದ ಸಂಯೋಜನೆಯಲ್ಲಿ ತಮ್ಮ ಹೂಡಿಕೆ ಮುಂದುವರಿಸಿದ್ದೇ ಆದರೆ, ಪ್ರಸ್ತುತ ಇರುವ ಶೇ 6-7ರ ಹಣದುಬ್ಬರಕ್ಕಿಂತ ಹೆಚ್ಚಿನ ಪ್ರಮಾಣದ ಲಾಭವನ್ನು ದೀರ್ಘಾವಧಿ ಹೂಡಿಕೆಗಳಲ್ಲಿ ಪಡೆಯಬಹುದು. ಗ್ರೋತ್ ಇನ್ವೆಸ್ಟ್‌ಮೆಂಟ್ ಪ್ರಸ್ತುತ ಇರುವ ಲಾಭಾಂಶವನ್ನು ಮುಂದೆಯೂ ನಿರೀಕ್ಷಿಸುತ್ತದೆ. ಪ್ರಸ್ತುತ ಅಗ್ಗವಾಗಿರುವ ಷೇರು ಬೆಲೆ ಮುಂದೊಂದು ದಿನ ಕಂಪನಿ ದೊಡ್ಡ ಲಾಭ ಗಳಿಸುವ ಹಂತಕ್ಕೆ ಬಂದಾಗ ಹೂಡಿಕೆದಾರರಿಗೆ ಉತ್ತಮ ಮೌಲ್ಯ ದೊರಕಿಸಿಕೊಡುತ್ತದೆ ಎಂಬ ನಿರೀಕ್ಷೆ ವ್ಯಾಲ್ಯೂ ಇನ್ವೆಸ್ಟ್‌ಮೆಂಟ್‌ನಲ್ಲಿ ಇರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಬೈರತಿ ಬೆಂಗಳೂರಿನಲ್ಲಿ ಭಾರಿ ವಾಹನಗಳ ಡ್ರೈವರ್‌ಗಳು ಬೇಕಾಗಿದ್ದಾರೆ, ಗಾಯಿತ್ರಿ ಅಸೋಸಿಯೇಟ್ಸ್, ಗವಿಗುಡಿ ಎದುರುಗಡೆ. ಸಂಪರ್ಕಿಸಿ: 9448488536

General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

TOYOTA, ಬ್ರಿಟಾನಿಯಾ, ಟಾಟಾಮೋಟಾರ್ಸ್, ಬಿಗ್‌ಬಜಾರ್ಸ್ ಗಳಿಗೆ 5th,10th,PUC, Degree,ITI, Diplomoದವರು ನೇರನೇಮಕಾತಿಯಿದೆ. 18,000-54,000/- ವಸತಿಯೂಟವಿದೆ. 9964634469

Wanted
ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

Part-Time Jobs
ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ
Business Offers
Machinery & Tools
START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಪ್ರವಾಸ
Travel
ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ A/C ರೂಂ/ A/C ಬಸ್ಸಿನಲ್ಲಿ 15.12.2022 ಸೋಮನಾಥ ಕಚ್‌ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಹಾಗೂ ಪೂರಿಜಗನ್ನಾಥ್ ಕಲ್ಕತ್ತ,ಗ್ಯಾಂಗ್‌ಟಕ್,ಡಾರ್ಜಲಿಂಗ್ ಇತ್ಯಾದಿ. ಹೈದ್ರಾಬಾದ್ ಭದ್ರಾಚಲಂ,ಪಂಚರಾಮ ಕ್ಷೇತ್ರ 14 ದಿನಗಳು. 24.12.2022 ಕಾಶಿ,ಬುದ್ಧಗಯಾ ಅಲಹಾಬಾದ್ ಇತ್ಯಾದಿ. ಶಿರಡಿ ಪ್ರವಾಸ 6 ದಿನಗಳು. ರಾಮೇಶ್ವರ,ಮದುರೈ ಕನ್ಯಾಕುಮಾರಿ 9 ದಿನಗಳು. ಮಹಾಶಿವರಾತ್ರಿ ಪ್ರಯುಕ್ತ 11.02.2023 ನೇಪಾಳ.ಪೋಖ್ರಾ ವಾರಣಾಸಿ ಅಯೋಧ್ಯ ಸಂಪರ್ಕಿಸಿ. ವಿಷ್ಣನ್ ಟ್ರಾವಲ್ ಏಜೆನ್ಸಿ 26574131 8317446683 9448508708

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/12 ದಿನಗಳು. 30.11.2022 ತಂಜಾವೂರು ಶ್ರೀರಂಗಂ,ಚಿದಂಬರಂ ಕುಂಭಕೋಣಂ,ವೆಲಾಂಗಣಿ ನವಗ್ರಹ ದರ್ಶನ 18 ಕ್ಷೇತ್ರಗಳು 6500/. 24.01.2023 ಸೋಮನಾಥ್,ದ್ವಾರಕಾ ಉಜ್ಜಯಿನಿ,ಓಂಕಾರೇಶ್ವರ್ 01.04.2023 ಕಾಶಿ,ಅಯೋಧ್ಯ ಇತ್ಯಾದಿ. 22.04.2023 ವೈಷ್ಣೋದೇವಿ ಅಮೃತ್‌ಸರ್ ಇತ್ಯಾದಿ. 9448390735 9449721678

Pilgrimage Tours
ಸುವರ್ಣಯಾತ್ರ, 121222 ಮಧ್ಯಪ್ರದೇಶ ಪ್ರವಾಸ ಓಂಕಾರೇಶ್ವರ, ಮಹಕಾಲೇಶ್ವರ, ಇತರೆ.131222 ಪೂರಿ, ಭುವನೇಶ್ವರ್, ಕೊಣಾರ್ಕ್, ಗಿರಿಜಾ ಶಕ್ತಿಪೀಠ, ಇತರೆ. 9019462508.

ಭವಿಷ್ಯ
Astrology
ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ 600ವರ್ಷ ಹಳೆಯ 108ಜ್ಯೋತಿಷ್ಯ ತಂತ್ರಗಳಿಂದ ವಶೀಕರಣ, ಪ್ರೇಮವಿಚಾರ, ದಾಂಪತ್ಯ, ಹಣಕಾಸು, ಇನ್ಯಾವುದೇ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ. ಪಂಡಿತ್ ಗಣೇಶ್‌ಕುಮಾರ್ 9880444450

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

CONNECT

ಅಭಿನಂದನೆಗಳು
ಬೆಂಗಳೂರು ವಿಶ್ವವಿದ್ಯಾಲಯ, ರಾಜ್ಯಶಾಸ್ತ್ರ ವಿಭಾಗದ ಡಾ. ಡಿ. ಜೀವನ್ ಕುಮಾರ್, ಪ್ರೊಫೆಸರ್(ನಿವೃತ್ತ)ರವರ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿನಿ ಸಾರಾ ನಖ್ವಿ ಶಿರೀನ್ (D/o ಸೈಯದ್ ಜಿಯಾವುದ್ದೀನ್, ರಾಯಚೂರು) ಅವರು ಮಂಡಿಸಿದ "Non-Governmental Organizations and Women Empowerment: The Challenge of Multiple Accountabilities" ಎಂಬ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಪಿ.ಎಚ್.ಡಿ. ಪದವಿಯನ್ನು ನೀಡಿ ಗೌರವಿಸಿದೆ.
ಶುಭಹಾರೈಸುವರು
ಡಾ. ತೌಫೀಕ್ ಅಹಮದ್ ಟೀಪು. ಪಿ (ಪತಿ) ಮತ್ತು ಮಹವೀನ್ ಫಾತಿಮಾ (ಪುತ್ರಿ)

ಕರ್ನಾಟಕ ವಿಧಾನಮಂಡಲ ಕಾರ್ಯಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.)
ಕೊಠಡಿ ಸಂಖ್ಯೆ: 130, 1ನೇ ಮಹಡಿ, ಶಾಸಕರ ಭವನ-1, ಬೆಂಗಳೂರು-560 001.
ಕ್ರ.ಸಂ: ಕ.ವಿ.ಮ.ಕಾ.ನೌ.ಗೃ.ನಿ.ಸ.ಸಂ (ನಿ.) / 121/2022-23 ದಿನಾಂಕ: 05.11.2022
2021-22ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪತ್ರ
ಮಾನ್ಯ ಸದಸ್ಯರುಗಳೇ,
ಕರ್ನಾಟಕ ವಿಧಾನಮಂಡಲ ಕಾರ್ಯಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2021-22ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಶನಿವಾರ ದಿನಾಂಕ: 26.11.2022ರಂದು ಬೆಳಿಗ್ಗೆ 10.30ಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಅನಂತ.ಎ ರವರ ಅಧ್ಯಕ್ಷತೆಯಲ್ಲಿ ಬಿ. ಚನ್ನಬಸಪ್ಪ ಸಭಾಂಗಣ, ಸಚಿವಾಲಯ ಕ್ಲಬ್ ಆವರಣ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ನಡೆಸಲಾಗುವುದು. ಆದುದರಿಂದ ಎಲ್ಲಾ ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಹಾಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.
ಕಾರ್ಯಕಾರಿ ಮಂಡಳಿ ಆದೇಶದ ಮೇರೆಗೆ
ಸಹಿ/-
(ಟಿ.ಪಿ. ನಿತಿನ್‌ಗೌಡ),
ವೇತನ ಕಾರ್ಯದರ್ಶಿ

ASTRO YATRA

ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
31 ವರ್ಷದ ಸುದೀರ್ಘ ಅನುಭವುಳ್ಳ ವಂಶಪಾರಂಪರಿಕ ಜ್ಯೋತಿಷ್ಯರು
ಗುರೂಜಿ ಮಹೇಶ್‌ಭಟ್
ಮಕ್ಕಳು ಪ್ರೀತಿಯಲ್ಲಿ ಬಿದ್ದು ಮಾತು ಕೇಳದಿದ್ದಲ್ಲಿ, ಪ್ರೀತಿಯಲ್ಲಿ ನಂಬಿ ಮೋಸ, ಪ್ರೀತಿಸಿದವರಿಂದ ತೊಂದರೆ, ಇಷ್ಟಪಟ್ಟವರು ನಿಮ್ಮಂತೆ ಬರಲು, ಮದುವೆಯಲ್ಲ ವಿಳಂಬ, ಗಂಡ-ಪರಸ್ತ್ರೀ ವಶದಲ್ಲಿದ್ದರೆ, ಡೈವೋರ್ಸ್ ಪ್ರಾಬ್ಲಂ, ಪುರುಷತ್ವ ಸಮಸ್ಯೆ, ಅತ್ತೆ ಕಾಟ, ಶತ್ರುಕಾಟ, ಹಣಕಾಸು, ಮಾಂತ್ರಿಕ ಸಮಸ್ಯೆಯಿಂದ ಆರೋಗ್ಯ ತೊಂದರೆ, ಇನ್ಯಾವುದೇ ಬಗೆಹರಿಯದಂತಹ ಕಠಿಣ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಗ್ಯಾರಂಟಿ ಪರಿಹಾರ. ಸ್ತ್ರೀಯರಿಗೆ ವಿಶೇಷ ಪರಿಹಾರ.
Google, TV, FB, Insta, Youtube ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ಹಣ ಕಳೆದುಕೊಂಡಿದ್ದರೆ, ಶುದ್ಧ, ಶೀಘ್ರ ಪರಿಹಾರಕ್ಕಾಗಿ ಕರೆಮಾಡಿ
ಖಾಯಂ ವಿಳಾಸ: ನಂ. 15, 1ನೇ ಮೇನ್, 1ನೇ ಕ್ರಾಸ್, ಅಯ್ಯಣ್ಣ ಶೆಟ್ಟಿ ಲೇಔಟ್, ಪೊಲೀಸ್ ಸ್ಟೇಷನ್ ಹಿಂಭಾಗ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು.
ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ. 9686999517

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮತ್ತೊಂದು ಅಚ್ಚರಿಯ ಫಲಿತಾಂಶ: ಅರ್ಜೆಂಟೀನಾಗೆ ಸೋಲು

ಮೆಸ್ಸಿ ಬಳಗಕ್ಕೆ ಸೌದಿ ಗುದ್ದು

ಲುಸೈಲ್, ಕತಾರ್ (ರಾಯಿಟರ್ಸ್/ ಎಎಫ್‌ಪಿ): ಆಧುನಿಕ ಫುಟ್‌ಬಾಲ್‌ನ ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡವನ್ನು ಮಣಿಸಿದ ಸೌದಿ ಅರೇಬಿಯಾ, ಫಿಫಾ ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಬಲುದೊಡ್ಡ ಅಚ್ಚರಿಗೆ ಕಾರಣವಾಯಿತು.

ಲುಸೈಲ್ ಕ್ರೀಡಾಂಗಣದಲ್ಲಿ ನೆರೆದಿದ್ದ 88 ಸಾವಿರಕ್ಕೂ ಅಧಿಕ ಪ್ರೇಕ್ಷಕರ ಮುಂದೆ ಮಂಗಳವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಮರುಭೂಮಿಯ ನಾಡಿನ ತಂಡ ದಕ್ಷಿಣ ಅಮೆರಿಕದ 'ಫುಟ್‌ಬಾಲ್ ದೈತ್ಯ' ತಂಡವನ್ನು 2–1 ಗೋಲುಗಳಿಂದ ಪರಾಭವಗೊಳಿಸಿತು.

ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ದಾಖಲಾದ ಅತಿದೊಡ್ಡ ಅಚ್ಚರಿಗಳಲ್ಲಿ ಈ ಪಂದ್ಯವೂ ಒಂದು ಎಂದು ವಿಶ್ಲೇಷಿಸಲಾಗಿದೆ.

ಸಲೇಹ್ ಅಲ್ ಶೆಹ್ರಿ (48ನೇ ನಿ.) ಮತ್ತು ಸಲೇಮ್ ಅಲ್ ದೌಸರಿ (53ನೇ ನಿ.) ಅವರು ಗೋಲು ಗಳಿಸಿ, ಸೌದಿ ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟರು. ಅರ್ಜೆಂಟೀನಾ ತಂಡದ ಏಕೈಕ ಗೋಲನ್ನು ಮೆಸ್ಸಿ ಅವರು ಪೆನಾಲ್ಟಿ ಕಿಕ್ ಅವಕಾಶದಲ್ಲಿ 10ನೇ ನಿಮಿಷದಲ್ಲಿ ಗಳಿಸಿದರು. ನಾಲ್ಕು ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಅರ್ಜೆಂಟೀನಾದ ಮೊದಲ ಆಟಗಾರ ಎಂಬ ಗೌರವ ಅವರಿಗೆ ಒಲಿಯಿತು.

ಕೊನೆಯ ವಿಶ್ವಕಪ್ ಆಡುತ್ತಿರುವ ಮೆಸ್ಸಿಗೆ ಟ್ರೋಫಿ ಗೆದ್ದುಕೊಡಬೇಕೆಂಬ ಗುರಿಯೊಂದಿಗೆ ಅರ್ಜೆಂಟೀನಾ ತಂಡ ಕತಾರ್‌ಗೆ ಬಂದಿದೆ. ಮೊದಲ ಪಂದ್ಯದಲ್ಲೇ ಸೋಲು ಎದುರಾದದ್ದು ಆ ತಂಡದ ಅಭಿಮಾನಿಗಳಿಗೆ ನಿರಾಸೆ ಉಂಟುಮಾಡಿತು.

ಮೊದಲ ಅವಧಿಯ ಆಟದಲ್ಲಿ ಅರ್ಜೆಂಟೀನಾ ಮೇಲುಗೈ ಸಾಧಿಸಿತ್ತು. ಮೆಸ್ಸಿ ಅವರು ತಮ್ಮ ತಂಡಕ್ಕೆ ಲಭಿಸಿದ ಪೆನಾಲ್ಟಿ ಕಿಕ್‌ನಲ್ಲಿ ಗೋಲು ಗಳಿಸಿದರು. ವಿರಾಮದ ವೇಳೆಗೆ ತಂಡ 1–0 ರಲ್ಲಿ ಮುನ್ನಡೆಯಲ್ಲಿತ್ತು.

ಆದರೆ ಫಿಫಾ ರ‍್ಯಾಂಕಿಂಗ್ ಪಟ್ಟಿಯಲ್ಲಿ 51ನೇ ಸ್ಥಾನದಲ್ಲಿರುವ ಸೌದಿ, ಮೂರನೇ ಸ್ಥಾನದಲ್ಲಿರುವ ಅರ್ಜೆಂಟೀನಾಕ್ಕೆ ದ್ವಿತೀಯಾರ್ಧದಲ್ಲಿ ತಿರುಗೇಟು ನೀಡಿತು. ಅರ್ಜೆಂಟೀನಾ ರಕ್ಷಣಾ ವಿಭಾಗದ ದೌರ್ಬಲ್ಯದ ಲಾಭ ಪಡೆದ ಶೆಹ್ರಿ ಮತ್ತು ದೌಸರಿ ಆರು ನಿಮಿಷಗಳಲ್ಲಿ ಎರಡು ಗೋಲು ಗಳಿಸಿ ಕ್ರೀಡಾಂಗಣದಲ್ಲಿ ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ತಮ್ಮ ದೇಶದ ಬೆಂಬಲಿಗರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದರು.

ಆ ಬಳಿಕ ಅರ್ಜೆಂಟೀನಾ ಆಟಗಾರರು ಚೆಂಡಿನ ಮೇಲೆ ಸಾಕಷ್ಟು ನಿಯಂತ್ರಣ ಸಾಧಿಸಿದರೂ ಗುರಿ ಸೇರಿಸಲು ವಿಫಲವಾದರು. ಪಂದ್ಯವನ್ನು ಕನಿಷ್ಠ ಡ್ರಾ ಮಾಡಿಕೊಂಡು ಅವಮಾನದಿಂದ ಪಾರಾಗಲು ಇನ್ನಿಲ್ಲದ ಪ್ರಯತ್ನ ನಡೆಸಿದರೂ, ಸೌದಿ ತಂಡದ ರಕ್ಷಣಾ ವಿಭಾಗ ಅವಕಾಶ ನೀಡಲಿಲ್ಲ.

ರೆಫರಿ ಅಂತಿಮ ವಿಷಲ್ ಊದುತ್ತಿದ್ದಂತೆಯೇ ಸೌದಿ ಆಟಗಾರರು ಐತಿಹಾಸಿಕ ಗೆಲುವಿನ ಸಂಭ್ರಮ ಆಚರಿಸಿದರೆ, ಮೆಸ್ಸಿ ಹಾಗೂ ಸಹ ಆಟಗಾರರು ಗರಬಡಿದವರಂತೆ ನಿಂತುಬಿಟ್ಟರು.

ಈ ಸೋಲಿನೊಂದಿಗೆ ಅರ್ಜೆಂಟೀನಾ ತಂಡದ ಸತತ 36 ಪಂದ್ಯಗಳ ಅಜೇಯ ಓಟಕ್ಕೆ ತೆರೆಬಿತ್ತು. ಇಟಲಿಯ (37) ಹೆಸರಿನಲ್ಲಿದ್ದ ದಾಖಲೆ ಸರಿಗಟ್ಟುವ ಅವಕಾಶವೂ ತಪ್ಪಿಹೋಯಿತು.

ರಜೆ ಘೋಷಣೆ (ರಿಯಾದ್ ವರದಿ): ವಿಶ್ವಕಪ್ ಪಂದ್ಯದ ಗೆಲುವಿನ ಸಂಭ್ರಮಾಚರಣೆಗೆ ಸೌದಿ ಅರೇಬಿಯಾದಲ್ಲಿ ಬುಧವಾರ ರಜೆ ಘೋಷಿಸಲಾಗಿದೆ. ಸೌದಿ ದೊರೆ ಸಲ್ಮಾನ್ ಟ್ವಿಟರ್‌ನಲ್ಲಿ ಈ ನಿರ್ಧಾರ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಅಲ್ ಶೆಹ್ರಿ, ಅಲ್ ದೌಸರಿ ಗೆಲುವಿನ ರೂವಾರಿ
- ಪೆನಾಲ್ಟಿ ಕಿಕ್‌ನಲ್ಲಿ ಮೆಸ್ಸಿ ಗೋಲು
- ಸೌದಿ ಅರೇಬಿಯಾದಲ್ಲಿ ಒಂದು ದಿನ ರಜೆ ಘೋಷಣೆ

ಲಯೊನೆಲ್ ಮೆಸ್ಸಿ ನಿರಾಸೆ –ಎಎಫ್‌ಪಿ ಚಿತ್ರ

ಗೋಲು ಗಳಿಸಿದ ಸಂಭ್ರಮದಲ್ಲಿ ಸಲೇಹ್ ಅಲ್ ಶೆಹ್ರಿ –ಎಎಫ್‌ಪಿ ಚಿತ್ರ

ಗೋಲುಗಳ ವಿವರ

ಸೌದಿ ಅರೇಬಿಯಾ **2**
ಸಲೇಹ್ ಅಲ್ ಶೆಹ್ರಿ (48ನೇ ನಿ.)
ಸಲೇಮ್ ಅಲ್ ದೌಸರಿ (53ನೇ ನಿ.)

ಅರ್ಜೆಂಟೀನಾ **1**
ಲಯೊನೆಲ್ ಮೆಸ್ಸಿ (10ನೇ ನಿ.)

ಈ ಹಿಂದಿನ ಕೆಲವು ಅಚ್ಚರಿಯ ಫಲಿತಾಂಶ

1950 ಅಮೆರಿಕ–1, ಇಂಗ್ಲೆಂಡ್–0

ಇಂಗ್ಲೆಂಡ್ ತಂಡ 1950ರ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿತ್ತು. ಆದರೆ ಫುಟ್‌ಬಾಲ್‌ನಲ್ಲಿ ಅಂಬೆಗಾಲಿಡುತ್ತಿದ್ದ ಅಮೆರಿಕ ಎದುರು 0–1 ರಲ್ಲಿ ಸೋತಿತ್ತು. ಅಮೆರಿಕಕ್ಕೆ ವಿಶ್ವಕಪ್‌ನಲ್ಲಿ ಇನ್ನೊಂದು ಗೆಲುವು ಪಡೆಯಲು 44 ವರ್ಷ ಕಾಯಬೇಕಾಯಿತು.

1966 ಉತ್ತರ ಕೊರಿಯಾ–1, ಇಟಲಿ–0

ಇಟಲಿ ತಂಡ 1966ರ ಟೂರ್ನಿಯಲ್ಲಿ ಏಷ್ಯಾದ ತಂಡ ಉತ್ತರ ಕೊರಿಯಾ ವಿರುದ್ಧ ಭಾರಿ ಅಂತರದ ಗೆಲುವು ನಿರೀಕ್ಷಿಸಿತ್ತು. ಆದರೆ ಪಾರ್ಕ್ ದೂ ಇಕ್ ಗಳಿಸಿದ ಗೋಲಿನ ನೆರವಿನಿಂದ ಉತ್ತರ ಕೊರಿಯಾ, ಬಲಿಷ್ಠ ಎದುರಾಳಿಗೆ ಆಘಾತ ನೀಡಿತ್ತು.

1982 ಅಲ್ಜೀರಿಯಾ–2, ಪಶ್ಚಿಮ ಜರ್ಮನಿ–1

ಅಲ್ಜೀರಿಯಾ ತಂಡ ತನ್ನ ಚೊಚ್ಚಲ ವಿಶ್ವಕಪ್ ಟೂರ್ನಿಯಲ್ಲಿ ಯೂರೋಪಿನ ಪ್ರಬಲ ತಂಡ ಪಶ್ಚಿಮ ಜರ್ಮನಿಗೆ 2–1 ರಲ್ಲಿ ಸೋಲುಣಿಸಿತ್ತು. ಲಖ್ದರ್ ಬೆಲೌಮಿ ಅವರು ಗೆಲುವಿನ ಗೋಲು ಗಳಿಸಿದ್ದರು.

1990 ಕ್ಯಾಮರೂನ್–1, ಅರ್ಜೆಂಟೀನಾ–0

1986ರ ಚಾಂಪಿಯನ್ ಆಗಿರುವ ಅರ್ಜೆಂಟೀನಾ 1990ರ ಟೂರ್ನಿಯ ಮೊದಲ ಪಂದ್ಯದಲ್ಲಿ ಸುಲಭ ಗೆಲುವು ಪಡೆಯುವ ನಿರೀಕ್ಷೆಯಲ್ಲಿತ್ತು. ಆದರೆ ಕ್ಯಾಮರೂನ್ 1–0 ರಲ್ಲಿ ಆಘಾತ ನೀಡಿತು.

2002 ಸೆನೆಗಲ್–1, ಫ್ರಾನ್ಸ್–0

ಫ್ರಾನ್ಸ್ ತಂಡ ಹಾಲಿ ಚಾಂಪಿಯನ್ ಮಾತ್ರವಲ್ಲದೆ, ಯೂರೋಪಿಯನ್ ಚಾಂಪಿಯನ್ ಆಗಿದ್ದುಕೊಂಡು 2002ರ ವಿಶ್ವಕಪ್ ಆಡಿತ್ತು. ಮೊದಲ ಪಂದ್ಯದಲ್ಲಿ ಸೆನೆಗಲ್‌ಗೆ 0–1 ರಲ್ಲಿ ಮಣಿದಿತ್ತು. ಸೆನೆಗಲ್ ತಂಡಕ್ಕೆ ಅದು ಚೊಚ್ಚಲ ವಿಶ್ವಕಪ್ ಆಗಿತ್ತು.

ಸೋಲು ತಪ್ಪಿಸಿದ ಬೇಲ್

ಅಲ್ ರಯ್ಯಾನ್, ಕತಾರ್ (ಎಪಿ): ಗ್ಯಾರೆತ್ ಬೇಲ್ ಅವರು 82ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗಳಿಸಿದ ಗೋಲಿನ ನೆರವಿನಿಂದ ವೇಲ್ಸ್ ತಂಡ ಸೋಲಿನಿಂದ ಪಾರಾಯಿತು.

ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಫಿಫಾ ವಿಶ್ವಕಪ್ ಪಂದ್ಯದಲ್ಲಿ ವೇಲ್ಸ್ ತಂಡ ಅಮೆರಿಕದ ಜತೆ 1–1 ರಲ್ಲಿ ಡ್ರಾ ಸಾಧಿಸಿ ಪಾಯಿಂಟ್ ಹಂಚಿಕೊಂಡಿತು.

ಯುವ ಆಟಗಾರರನ್ನು ಒಳಗೊಂಡ ಅಮೆರಿಕ ಅಮೋಘ ಆಟವಾಡಿ ಅಚ್ಚರಿಯ ಫಲಿತಾಂಶದ ನಿರೀಕ್ಷೆ ಮೂಡಿಸಿತ್ತು. ಆದರೆ ಡಿಫೆಂಡರ್ ವಾಕರ್ ಜಿಮೆರ್‌ಮನ್ ಮಾಡಿದ ತಪ್ಪು ಎದುರಾಳಿ ತಂಡಕ್ಕೆ ಪೆನಾಲ್ಟಿ ಕಿಕ್ ಅವಕಾಶ ತಂದುಕೊಟ್ಟಿತು.

ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ 36ನೇ ನಿಮಿಷದಲ್ಲಿ ಟಿಮ್ ವಿಯಾ ಅವರು ಅಮೆರಿಕಕ್ಕೆ ಮುನ್ನಡೆ ತಂದಿತ್ತರು. 19 ವರ್ಷದ ಯೂನುಸ್ ಮೂಸಾ ಅವರು ಅಂಗಳದ ಮಧ್ಯ ಭಾಗದಲ್ಲಿ ಚೆಂಡನ್ನು ಜೋಶ್ ಸರ್ಜೆಂಟ್‌ಗೆ ತಲುಪಿಸಿದರು. ಜೋಶ್ ಅವರು ಡ್ರಿಬಲ್ ಮಾಡುತ್ತಾ ಸಾಗಿ ಕ್ರಿಸ್ಟಿಯನ್ ಪುಲಿಸಿಚ್‌ಗೆ ಪಾಸ್ ನೀಡಿದರು. ಪುಲಿಸಿಚ್, ಎದುರಾಳಿ ಗೋಲ್‌ಕೀಪರ್ ವೇಯ್ನ್ ಹೆನೆಸ್ಸಿ ತಮ್ಮತ್ತ ಧಾವಿಸಿ ಬರುವ ಮುನ್ನ ಚಾಣಾಕ್ಷತನದಿಂದ ಗುರಿ ಸೇರಿಸಿದರು.

10ನೇ ನಿಮಿಷದಲ್ಲಿ ಅಮೆರಿಕಕ್ಕೆ ಮುನ್ನಡೆ ಗಳಿಸುವ ಉತ್ತಮ ಅವಕಾಶ ಲಭಿಸಿತ್ತು. ಆದರೆ ಸಾಧ್ಯವಾಗಲಿಲ್ಲ. ಅಮೆರಿಕದ ಗೆಲುವಿನ ಆಸೆ ಗರಿಗೆದರಿದ್ದ ಸಮಯದಲ್ಲಿ ವೇಲ್ಸ್‌ಗೆ ಪೆನಾಲ್ಟಿ ಕಿಕ್ ದೊರೆಯಿತು. ವೇಲ್ಸ್ ತಂಡದ ಬ್ರೆನ್ನನ್ ಜಾನ್ಸನ್ ಅವರು ಥ್ರೋ ಇನ್ ಮಾಡಿದ ಚೆಂಡನ್ನು ಆ್ಯರನ್ ರಾಮ್ಸೆ, ಸಮೀಪದಲ್ಲೇ ಇದ್ದ ಬೇಲ್ ಅವರತ್ತ ಕಳುಹಿಸಿದರು.

ಅಮೆರಿಕದ ಡಿಫೆಂಡರ್ ಜಿಮೆರ್‌ಮನ್, ಪೆನಾಲ್ಟಿ ಆವರಣದಲ್ಲಿದ್ದ ಬೇಲ್ ಅವರನ್ನು ಟ್ಯಾಕಲ್ ಮಾಡಿ ಬೀಳಿಸಿದರು. ಕತಾರ್‌ನ ರೆಫರಿ ಅಬ್ದುಲ್‌ರಹಮಾನ್ ಅಲ್ ಜಾಸಿಮ್ ಪೆನಾಲ್ಟಿ ಕಿಕ್ ಅವಕಾಶ ನೀಡಿದರು. ಪೆನಾಲ್ಟಿ ಅವಕಾಶದಲ್ಲಿ ಬೇಲ್ ಬಲವಾಗಿ ಒದ್ದ ಚೆಂಡು ಅಮೆರಿಕದ ಗೋಲ್‌ಕೀಪರ್ ಮ್ಯಾಟ್ ಟರ್ನರ್ ಎಡಗೈಯನ್ನು ಸವರಿಕೊಂಡು ಗೋಲುಪಟ್ಟಿಗೆ ಸೇರಿತು.

ಡ್ರಾ ಪಂದ್ಯದಲ್ಲಿ ಮೆಕ್ಸಿಕೊ–ಪೋಲೆಂಡ್

ದೋಹಾ (ರಾಯಿಟರ್ಸ್): ಪೋಲೆಂಡ್ ಹಾಗೂ ಮೆಕ್ಸಿಕೊ ನಡುವೆ ಇಲ್ಲಿ ನಡೆದ 'ಸಿ' ಗುಂಪಿನ ಪಂದ್ಯವು ಗೋಲುರಹಿತ ಡ್ರಾನಲ್ಲಿ ಕೊನೆಗೊಂಡಿತು.

56ನೇ ನಿಮಿಷದಲ್ಲಿ ಪೋಲೆಂಡ್‌ಗೆ ಪೆನಾಲ್ಟಿ ಅವಕಾಶವಿತ್ತು. ಆದರೆ ರಾಬರ್ಟ್ ಲೆವಾಂಡೊಸ್ಕಿ ಅವರಿಗೆ ಮೆಕ್ಸಿಕೊ ಗೋಲ್‌ಕೀಪರ್ ಗಿಲೆರ್ಮೊ ಒಚೊವಾ ಭದ್ರಕೋಟೆಯನ್ನು ಭೇದಿಸಲು ಆಗಲಿಲ್ಲ.

ವೇಲ್ಸ್ ತಂಡದ ಗ್ಯಾರೆತ್ ಬೇಲ್ (ಎಡ) ಮತ್ತು ಅಮೆರಿಕದ ಟೇಲರ್ ಆ್ಯಡಮ್ಸ್ ಚೆಂಡಿಗಾಗಿ ಪೈಪೋಟಿ ನಡೆಸಿದರು –ಎಪಿ ಚಿತ್ರ

ಬ್ರೆಜಿಲ್‌ಗೆ ಕಪ್: ಆಕ್ಸ್‌ಫರ್ಡ್ ವಿವಿಯ ಜೋಶುವಾ ಲೆಕ್ಕಾಚಾರ

ಬೆಂಗಳೂರು: ಈ ಬಾರಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯನ್ನು ಬ್ರೆಜಿಲ್ ಗೆಲ್ಲಲಿದೆಯೇ? ಅಂತಹ ಅಧಿಕ ಸಾಧ್ಯತೆಯಿದೆ ಎಂದು ಆಕ್ಸ್‌ಫರ್ಡ್ ಮೆಥಮೆಟಿಕಲ್ ಇನ್‌ಸ್ಟಿಟ್ಯೂಟ್‌ನ ಗಣಿತಶಾಸ್ತ್ರಜ್ಞ ಜೋಶುವಾ ಬುಲ್ ಲೆಕ್ಕಾಚಾರ ಮಾಡಿದ್ದಾರೆ.

'2022ರ ಫಿಫಾ ಟೂರ್ನಿಯ ಗಣಿತ ಮಾದರಿ' ಎಂಬ ತಲೆಬರಹದಲ್ಲಿ ವಿಶ್ವಕಪ್ ಟೂರ್ನಿಯ ಭವಿಷ್ಯ ನುಡಿಯಲಾಗಿದ್ದು, ಆಕ್ಸ್‌ಫರ್ಡ್ ವಿ.ವಿ ಟ್ವಿಟರ್ ಖಾತೆಯಲ್ಲಿ ಪ್ರಕಟವಾಗಿದೆ. ಇದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಗಣಿತಶಾಸ್ತ್ರಜ್ಞ ಪ್ರಕಾರ ಬ್ರೆಜಿಲ್–ಬೆಲ್ಜಿಯಂ ಫೈನಲ್ ನಡೆಯಲಿದ್ದು, ನೇಮರ್ ಅವರನ್ನೊಳಗೊಂಡ ಬ್ರೆಜಿಲ್ ಕಿರೀಟ ಮುಡಿಗೇರಿಸಲಿದೆ. ಫೈನಲ್‌ನಲ್ಲಿ ಬ್ರೆಜಿಲ್ ಗೆಲುವಿನ ಸಾಧ್ಯತೆ ಶೇ 61.3, ಬೆಲ್ಜಿಯಂ ಗೆಲುವಿನ ಸಾಧ್ಯತೆ ಶೇ 38.7 ಎಂದಿದ್ದಾರೆ. ಬ್ರೆಜಿಲ್ ಮತ್ತು ಬೆಲ್ಜಿಯಂ ತಂಡಗಳು ಸೆಮಿಫೈನಲ್‌ನಲ್ಲಿ ಕ್ರಮವಾಗಿ ಅರ್ಜೆಂಟೀನಾ ಹಾಗೂ ಫ್ರಾನ್ಸ್ ತಂಡಗಳನ್ನು ಸೋಲಿಸಲಿದೆ ಎಂದು ಲೆಕ್ಕಾಚಾರ ಹಾಕಿದ್ದಾರೆ. ನೆದರ್ಲೆಂಡ್ಸ್, ಸ್ಪೇನ್, ಇಂಗ್ಲೆಂಡ್ ಮತ್ತು ಪೋರ್ಚುಗಲ್ ಕ್ವಾರ್ಟರ್ ಫೈನಲ್ ಪ್ರವೇಶಿಸಲಿರುವ ಇತರ ನಾಲ್ಕು ತಂಡಗಳು ಎಂದು ಭವಿಷ್ಯ ಹೇಳಿದ್ದಾರೆ

ಡೆನ್ಮಾರ್ಕ್ ಕಟ್ಟಿಹಾಕಿದ ಟ್ಯುನಿಷಿಯಾ

ಅಲ್ ರಯ್ಯಾನ್, ಕತಾರ್ (ರಾಯಿಟರ್ಸ್): ಅಮೋಘ ಆಟವಾಡಿದ ಟ್ಯುನಿಷಿಯಾ ತಂಡ ವಿಶ್ವಕಪ್ ಟೂರ್ನಿಯ 'ಡಿ' ಗುಂಪಿನ ಪಂದ್ಯದಲ್ಲಿ ಪ್ರಬಲ ಡೆನ್ಮಾರ್ಕ್ ತಂಡವನ್ನು ಗೋಲುರಹಿತ ಡ್ರಾದಲ್ಲಿ ಕಟ್ಟಿಹಾಕಿತು.

ಫಿಫಾ ರ‍್ಯಾಂಕಿಂಗ್‌ನಲ್ಲಿ 30ನೇ ಸ್ಥಾನದಲ್ಲಿರುವ ಟ್ಯುನಿಷಿಯಾ ತನಗಿಂತ 20 ಸ್ಥಾನಗಳಷ್ಟು ಮೇಲೆ ಇರುವ ತಂಡಕ್ಕೆ ತಕ್ಕ ಪೈಪೋಟಿ ನೀಡುವಲ್ಲಿ ಯಶಸ್ವಿಯಾಯಿತು.

ಎಜುಕೇಷನ್ ಸಿಟಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಗೋಲು ಗಳಿಸುವ ಹಲವು ಉತ್ತಮ ಅವಕಾಶಗಳನ್ನು ಸೃಷ್ಟಿಸಿದರೂ 'ಫಿನಿಷಿಂಗ್'ನಲ್ಲಿ ನಿಖರತೆ ತೋರಲಿಲ್ಲ.

ಡೆನ್ಮಾರ್ಕ್– ಟ್ಯುನಿಷಿಯಾ ಪಂದ್ಯ ವೀಕ್ಷಿಸಿದ ಅಭಿಮಾನಿಗಳು –ಎಎಫ್‌ಪಿ ಚಿತ್ರ

ಡೆನ್ಮಾರ್ಕ್‌ನ ಆಂಡ್ರೆಸ್ ಕಾರ್ನಿಲಸ್ ಅವರಿಗೆ ಗೋಲು ಗಳಿಸುವ ಸೊಗಸಾದ ಅವಕಾಶ ಒದಗಿಬಂದಿತ್ತು. ಆದರೆ ಚೆಂಡು ಗೋಲುಕಂಬಕ್ಕೆ ಬಡಿಯಿತು. ಪಂದ್ಯ ಕೊನೆಗೊಳ್ಳಲು ಕೆಲವೇ ನಿಮಿಷಗಳು ಇದ್ದಾಗ ಡೆನ್ಮಾರ್ಕ್ ಆಟಗಾರರು 'ಹ್ಯಾಂಡ್‌ಬಾಲ್' ಕಾರಣ ಮುಂದಿಟ್ಟು ಪೆನಾಲ್ಟಿ ಕಿಕ್‌ಗೆ ಮನವಿ ಮಾಡಿದರು. ಆದರೆ ರೀಪ್ಲೆ ವೀಕ್ಷಿಸಿದ ರೆಫರಿ ಸೆಸಾರ್ ರಾಮೋಸ್ ಅವರು ಮನವಿಯನ್ನು ತಿರಸ್ಕರಿಸಿದರು.

ಟ್ಯುನಿಷಿಯಾ ತಂಡ ತನಗೆ ದೊರೆತ ಎರಡು ಉತ್ತಮ ಅವಕಾಶಗಳನ್ನು ಬಳಸಿಕೊಂಡಿದ್ದರೆ, ಅಚ್ಚರಿಯ ಫಲಿತಾಂಶ ಮೂಡಿಬರುತ್ತಿತ್ತು.

ಇಂದಿನ ಪಂದ್ಯ

ಪಂದ್ಯ	ಸಮಯ
ಮೊರೊಕ್ಕೊ Vs ಕ್ರೊವೇಷ್ಯಾ	ಮಧ್ಯಾಹ್ನ 3.30
ಜರ್ಮನಿ Vs ಜಪಾನ್	ಸಂಜೆ 6.30
ಸ್ಪೇನ್ Vs ಕೋಸ್ಟರಿಕಾ	ರಾತ್ರಿ 9.30
ಬೆಲ್ಜಿಯಂ Vs ಕೆನಡಾ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಸಂಕ್ಷಿಪ್ತ ಸುದ್ದಿ

ಕ್ರೊವೇಷ್ಯಾ ತಂಡ ಇಂದು ಕಣಕ್ಕೆ

ಲೂಕಾ ಮ್ಯಾಡ್ರಿಚ್

ಕತಾರ್ (ರಾಯಿಟರ್ಸ್): ಹಾಲಿ ರನ್ನರ್ಸ್ ಅಪ್ ಕ್ರೊವೇಷ್ಯಾ ತಂಡವು ವಿಶ್ವಕಪ್ ಟೂರ್ನಿಯಲ್ಲಿ ಬುಧವಾರ ಅಭಿಯಾನ ಆರಂಭಿಸಲಿದೆ.

ಎಫ್ ಗುಂಪಿನಲ್ಲಿ ಕ್ರೊವೇಷ್ಯಾ ತಂಡವು ಮೊರಕ್ಕೊ ತಂಡವನ್ನು ಎದುರಿಸಲಿದೆ. 2018ರಲ್ಲಿ ಫೈನಲ್‌ನಲ್ಲಿ ಫ್ರಾನ್ಸ್ ಎದುರು ಸೋತಿದ್ದ ಕ್ರೊವೇಷ್ಯಾ ತಂಡವನ್ನು ಲುಕಾ ಮಾಡ್ರಿಚ್ ಮುನ್ನಡೆಸಲಿದ್ದಾರೆ.

ಅರ್ಹತಾ ಟೂರ್ನಿಯಲ್ಲಿ ಹಾಗೂ ತಮ್ಮದೇಶದ ನ್ಯಾಷನಲ್ ಲೀಗ್‌ನಲ್ಲಿ ಉತ್ತಮವಾಗಿ ಆಡಿರುವ ಲೂಕಾ ಬಳಗವು ಆತ್ಮವಿಶ್ವಾಸದಲ್ಲಿದೆ.

ಟೂರ್ನಿಯ ಬಲಿಷ್ಠವೆಂದೇ ಬಿಂಬಿತವಾಗಿರುವ ಕೆಲವು ತಂಡಗಳು ಕೂಡ ಇದೇ ದಿನ ಕಣಕ್ಕಿಳಿಯುತ್ತಿವೆ. ಜರ್ಮನಿ ತಂಡವು ಜಪಾನ್ ವಿರುದ್ಧ; ಸ್ಪೇನ್ ಬಳಗವು ಕೋಸ್ಟರಿಕಾ ಎದುರು ಹಾಗೂ ಬೆಲ್ಜಿಯಂ ತಂಡವು ಕೆನಡಾ ಎದುರು ಸೆಣಸಲಿವೆ.

ಮ್ಯಾಂಚೆಸ್ಟರ್ ಯುನೈಟೆಡ್ ತೊರೆದ ರೊನಾಲ್ಡೊ

ದೋಹಾ (ಎಪಿ): ಪೋರ್ಚುಗಲ್ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು 'ಮ್ಯಾಂಚೆಸ್ಟರ್ ಯುನೈಟೆಡ್' ಕ್ಲಬ್ ತೊರೆದಿದ್ದಾರೆ. ಪ್ರೀಮಿಯರ್ ಲೀಗ್‌ನ ಕ್ಲಬ್ ಮಂಗಳವಾರ ಈ ವಿಷಯ ತಿಳಿಸಿದೆ.

ಮ್ಯಾಂಚೆಸ್ಟರ್ ಯುನೈಟೆಡ್ ಹಾಗೂ ಅದರ ಮ್ಯಾನೇಜರ್ ಎರಿಕ್ ಟೆನ್ ಹಾಗ್ ವಿರುದ್ಧ ರೊನಾಲ್ಡೊ ಇತ್ತೀಚೆಗೆ ಹರಿಹಾಯ್ದಿದ್ದರು.

ಹಾಕಿ: ಮೈಸೂರು ಮೇಲುಗೈ

ಮಡಿಕೇರಿ: ಮೈಸೂರು ವಿಭಾಗ ತಂಡಗಳು ಭಾರತ ಕ್ರೀಡಾ ಪ್ರಾಧಿಕಾರದ ಹಾಕಿ ಮೈದಾನದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ, ಬಾಲಕಿಯರ ರಾಜ್ಯ ಮಟ್ಟದ ಹಾಕಿ ಟೂರ್ನಿಯಲ್ಲಿ ಮೇಲುಗೈ ಸಾಧಿಸಿದವು.

ಮಂಗಳವಾರ ನಡೆದ ಪ್ರೌಢಶಾಲಾ ಬಾಲಕರ ವಿಭಾಗದಲ್ಲಿ ಬೆಂಗಳೂರು 4–1ರಿಂದ ಬೆಳಗಾವಿಯನ್ನು ಮಣಿಸಿದರೆ, ಪ್ರಾಥಮಿಕ ಬಾಲಕಿಯರ ವಿಭಾಗದಲ್ಲಿ ಬೆಳಗಾವಿಯು 2–0 ಗೋಲುಗಳಿಂದ ಬೆಂಗಳೂರನ್ನು ಸೋಲಿಸಿತು. ಪ್ರಾಥಮಿಕ ಬಾಲಕರ ವಿಭಾ ಗದಲ್ಲಿ ಬೆಂಗಳೂರನ್ನು ಕಲಬುರಗಿಯು 5–0ಯಿಂದ ಮಣಿಸಿತು. 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಮೈಸೂರು ಕಲಬುರಗಿಯನ್ನು 6–1ರಿಂದ ಮಣಿಸಿತು.

17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಮೈಸೂರು ತಂಡವು ಬೆಂಗಳೂರು ತಂಡವನ್ನು 9–0 ಗೋಲಿನಿಂದ ಸೋಲಿಸಿ ಪಾರಮ್ಯ ಮೆರೆಯಿತು.

ಈಸ್ಟ್ ಇಂಡಿಯಾ ಜಯಭೇರಿ

ಬೆಂಗಳೂರು: ಈಸ್ಟ್ ಇಂಡಿಯಾ ಕ್ಲಬ್ ಮತ್ತು ಡೆಲ್ಲಿ ಪಬ್ಲಿಕ್ ಸ್ಕೂಲ್ ಈಸ್ಟ್ (ಡಿಪಿಎಸ್‌ಇ) ತಂಡಗಳು ರಾಜ್ಯ ಸಿ ಡಿವಿಷನ್ ಹಾಕಿ ಲೀಗ್ ಚಾಂಪಿಯನ್ ಷಿಪ್‌ನಲ್ಲಿ ಜಯ ಗಳಿಸಿದವು.ಮಂಗಳವಾರ ಈಸ್ಟ್ ಇಂಡಿಯಾ 1–0ಯಿಂದ ಸಹ್ಯಾದ್ರಿ ಹಾಕಿ ಕ್ಲಬ್, ಎದುರು ಗೆಲುವು ಪಡೆಯಿತು. ವಿಜೇತ ತಂಡಕ್ಕಾಗಿ ಸುಜಿತ್ (30ನೇ ನಿ.) ಗೋಲು ಹೊಡೆದರು. ಡಿಪಿಎಸ್‌ಇ 2–1ರಿಂದ ಬ್ಲ್ಯೂಸ್ಟಾರ್ ಕ್ಲಬ್ ತಂಡವನ್ನು ಸೋಲಿಸಿತು.

ತಲೈವಾಸ್‌ಗೆ ಮತ್ತೊಂದು ಗೆಲುವು

ಹೈದರಾಬಾದ್: ತಮಿಳು ತಲೈವಾಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಸತತ ಎರಡನೇ ಗೆಲುವು ಪಡೆದರು.

ಗಚಿಬೌಳಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ತಲೈವಾಸ್ 34–20 ರಲ್ಲಿ ಯು ಮುಂಬಾ ತಂಡವನ್ನು ಮಣಿಸಿತು. ಸಾಗರ್ (8) ಮತ್ತು ನರೇಂದರ್ (7) ಮಿಂಚಿದರು. ವಿರಾಮದ ವೇಳೆಗೆ ತಲೈವಾಸ್ 18–10 ರಲ್ಲಿ ಮುನ್ನಡೆಯಲ್ಲಿತ್ತು.

ರೋಚಕ ಪೈಪೋಟಿ ನಡೆದ ದಿನದ ಎರಡನೇ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 36–35 ರಲ್ಲಿ ತೆಲುಗು ಟೈಟನ್ಸ್ ವಿರುದ್ಧ ಗೆದ್ದಿತು. 14 ಪಾಯಿಂಟ್ಸ್ ತಂದಿತ್ತ ಸಚಿನ್ ಅವರು ಪೈರೇಟ್ಸ್ ಗೆಲುವಿನ ರೂವಾರಿ ಎನಿಸಿದರು.

ಟೈಟನ್ಸ್ ಎರಡನೇ ಅವಧಿಯಲ್ಲಿ ಹೋರಾಟ ನಡೆಸಿದರೂ ಸೋಲು ತಪ್ಪಿಸಲು ಆಗಲಿಲ್ಲ. ತಂಡದ ಸಿದ್ಧಾರ್ಥ್ ದೇಸಾಯಿ 15 ಪಾಯಿಂಟ್ಸ್ ಗಳಿಸಿದರು.

ಇಂದಿನ ಪಂದ್ಯಗಳು: ಜೈಪುರ ಪಿಂಕ್ ಪ್ಯಾಂಥರ್ಸ್– ಪುಣೇರಿ ಪಲ್ಟನ್ ಬೆಂಗಾಲ್ ವಾರಿಯರ್ಸ್– ಬೆಂಗಳೂರು ಬುಲ್ಸ್

ಪಾಯಿಂಟ್ಸ್ ಪಟ್ಟಿ

(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	16	10	4	2	59
ಬೆಂಗಳೂರು	16	10	5	1	57
ಜೈಪುರ	15	10	5	0	53
ಯುಪಿ	16	8	6	2	50
ತಲೈವಾಸ್	16	7	6	3	48
ಪಟ್ನಾ	16	7	6	3	47

ಬಾಕ್ಸಿಂಗ್: ಸೆಮಿಗೆ ರವೀನಾ

ನವದೆಹಲಿ (ಪಿಟಿಐ): ರವೀನಾ, ವಿಶ್ವನಾಥ್ ಸುರೇಶ್, ವಂಶಜ್ ಸೇರಿ ಭಾರತದ ಏಳು ಮಂದಿ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದು, ಪದಕ ಖಚಿತಪಡಿಸಿದ್ದಾರೆ.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳೆಯರ 63 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ರವೀನಾ ಅವರು ರುಮೇನಿಯಾದ ಅಲೆಕ್ಸಾಂಡ್ರಾ ಕ್ರೆಟು ಅವರನ್ನು ಸೋಲಿಸಿದರು.

ಪುರುಷರ ವಿಭಾಗದ ಎಂಟರ ಘಟ್ಟದ ಸೆಣಸಾಟಗಳಲ್ಲಿ ವಿಶ್ವನಾಥ್ (48 ಕೆಜಿ), ವಂಶಜ್ (63.5 ಕೆಜಿ) ಕ್ರಮವಾಗಿ ಆಸ್ಟ್ರೇಲಿಯಾದ ಜೈರ್ ಕೆರ್ ಮತ್ತು ಕಿರ್ಗಿಸ್ತಾನದ ಉಮರ್ ಲಿವಿಯಾ ಎದುರು ಜಯ ಸಾಧಿಸಿದರು.

ಭಾವನಾ ಶರ್ಮಾ (48 ಕೆಜಿ), ಕುಂಜರಾಣಿ ದೇವಿ ಥೊಂಗಮ್ (60 ಕೆಜಿ), ಲಾಶು ಯಾದವ್ (70 ಕೆಜಿ), ಆಶಿಶ್ (54 ಕೆಜಿ) ಸೆಮಿಫೈನಲ್ ತಲುಪಿದ ಇನ್ನುಳಿದ ಬಾಕ್ಸರ್‌ಗಳು.

ಬ್ಯಾಲಿಸ್ಟಿಕ್ ಕ್ಷಿಪಣಿ ನಿಗ್ರಹ ಪ್ರಯೋಗ ಯಶಸ್ವಿ

ಸೋಲ್ (ರಾಯಿಟರ್ಸ್): ದಕ್ಷಿಣ ಕೊರಿಯಾವು ತನ್ನ ಹೊಸ ಬ್ಯಾಲಿಸ್ಟಿಕ್ ಕ್ಷಿಪಣಿ ವಿರೋಧಿ ಇಂಟರ್‌ಸೆಪ್ಟರ್ ವ್ಯವಸ್ಥೆಯ ಪರೀಕ್ಷೆಯನ್ನು ಈ ತಿಂಗಳ ಆರಂಭದಲ್ಲಿ ಯಶಸ್ವಿಯಾಗಿ ನಡೆಸಿದೆ ಎಂದು ಮಂಗಳವಾರ ಮಾಧ್ಯಮಗಳು ವರದಿ ಮಾಡಿವೆ.

ಉತ್ತರ ಕೊರಿಯಾದ ಕ್ಷಿಪಣಿಗಳ ನಿರಂತರ ಪ್ರಯೋಗದ ಎದುರು ತನ್ನ ರಕ್ಷಣಾ ವ್ಯವಸ್ಥೆ ಬಲಪಡಿಸಲು ದಕ್ಷಿಣ ಕೊರಿಯಾ ಇಟ್ಟಿರುವ ಇತ್ತೀಚಿನ ಮಹತ್ವದ ಹೆಜ್ಜೆ ಇದಾಗಿದೆ.

'ಪದಕ ಮಾರಿದ ಇಮ್ರಾನ್ ಖಾನ್'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಭಾರತದಿಂದ ಪಡೆದಿದ್ದ ಚಿನ್ನದ ಪದಕ ಮಾರಾಟ ಮಾಡಿದ್ದಾರೆ ಎಂದು ರಕ್ಷಣಾ ಸಚಿವ ಖವಾಜ ಆಸಿಫ್ ಆರೋಪಿಸಿದ್ದಾರೆ. ಟಿ.ವಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು ಈ ವಿಷಯ ತಿಳಿಸಿದ್ದಾರೆ. ಆದರೆ ಈ ಕುರಿತ ಹೆಚ್ಚಿನ ಮಾಹಿತಿ ನೀಡಿಲ್ಲ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

ಇಂಡೊನೇಷ್ಯಾದ ಜಾವಾ ದ್ವೀಪದಲ್ಲಿ ಸಂಭವಿಸಿದ ಭೂಕಂಪ

ಮೃತರ ಸಂಖ್ಯೆ 268ಕ್ಕೆ ಏರಿಕೆ

ಸಿಯಾಂಜೂರ್ (ಇಂಡೊನೇಷ್ಯಾ) (ಎಪಿ/ಎಎಫ್‌ಪಿ): ಇಲ್ಲಿನ ಜಾವಾ ದ್ವೀಪದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಸತ್ತವರ ಸಂಖ್ಯೆ ಮಂಗಳವಾರ 268ಕ್ಕೆ ಏರಿದೆ. ಕುಸಿದ ಕಟ್ಟಡಗಳ ಅವಶೇಷಗಳಡಿ ಎರಡನೇ ದಿನ ಮತ್ತಷ್ಟು ಶವಗಳು ದೊರೆತಿವೆ. ಇನ್ನೂ 151 ಜನರು ಕಾಣೆಯಾಗಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮತ್ತು ಶೋಧ ಕಾರ್ಯ ಕ್ಷಿಪ್ರಗತಿಯಲ್ಲಿ ಮುಂದುವರಿದಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಏಜೆನ್ಸಿ ತಿಳಿಸಿದೆ.

ರಕ್ಷಣಾ ತಂಡಗಳು ಸೋಮವಾರ ಒಂದೇ ದಿನದಲ್ಲಿ 162 ಶವಗಳನ್ನು ಅವಶೇಷಗಳ ಅಡಿಯಿಂದ ಹೊರ ತೆಗೆದಿದ್ದವು. ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡಿದ್ದ ನಾಗರಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದವು. ಹೆಚ್ಚಿನ ಗಾಯಾಳುಗಳಿಗೆ ಜಕಾರ್ತದ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ನೀಡಲಾಯಿತು.

ಭಗ್ನಾವಶೇಷಗಳಡಿ ಸಿಲುಕಿದವರಲ್ಲಿ ಕೆಲವರು ಜೀವಂತವಿರಬಹುದೆಂಬ ನಿರೀಕ್ಷೆಯಲ್ಲಿ ರಕ್ಷಣಾ ತಂಡಗಳು ಶೋಧ ಕಾರ್ಯಾಚರಣೆ ಮುಂದುವರಿಸಿವೆ. ಹೆಚ್ಚಾಗಿ ಗ್ರಾಮೀಣ, ಪರ್ವತ ಪ್ರದೇಶದ ಕೆಲವು ಭಾಗಗಳಲ್ಲಿ ರಸ್ತೆ ಸಂಪರ್ಕ ಕಡಿದು ಹೋಗಿರುವುದು, ವಿದ್ಯುತ್ ನಿಲುಗಡೆಯಾಗಿರುವುದು ಶೋಧ ಕಾರ್ಯಾಚರಣೆಗೆ ಸವಾಲೊಡ್ಡಿತು.

ಅವಶೇಷಗಳ ಅಡಿ ಸಿಲುಕಿದ್ದ ಮೃತದೇಹವನ್ನು ರಕ್ಷಣಾ ತಂಡದವರು ಹೊರತೆಗೆದರು

ಹೆಚ್ಚು ಜನನಿಬಿಡ ಪಶ್ಚಿಮ ಜಾವಾ ದ್ವೀಪದ ಸಿಯಾಂಜೂರ್ ನಗರದ ಬಳಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಪ್ರಬಲ ಭೂಕಂಪ ನೂರಾರು ಜನರ ಜೀವ ಬಲಿ ಪಡೆದಿದೆ. ಅಲ್ಲದೆ 1,083 ಜನರು ಗಾಯಗೊಂಡಿದ್ದಾರೆ ಎಂದು ಏಜೆನ್ಸಿಯ ಮುಖ್ಯಸ್ಥ ಸುಹಾರಿಯಂಟೊ ತಿಳಿಸಿದರು.

ಮೃತಪಟ್ಟವರಲ್ಲಿ ಹೆಚ್ಚಿನವರು ಶಾಲಾ ಮಕ್ಕಳು. ಮಧ್ಯಾಹ್ನ 1 ಗಂಟೆ ಸುಮಾರಿಗೆ ಶಾಲಾ ತರಗತಿಗಳು ನಡೆಯುತ್ತಿದ್ದಾಗಲೇ ಭೂಕಂಪ ಸಂಭವಿಸಿತ್ತು. ಮಕ್ಕಳು ಹೊರಗೆ ಓಡಿಬರಲಾಗದೆ, ಕುಸಿದ ಶಾಲಾ ಕಟ್ಟಡಗಳ ಅವಶೇಷಗಳಡಿ ಸಿಲುಕಿ ಮೃತಪಟ್ಟಿದ್ದಾರೆ ಎಂದು ರಾಷ್ಟ್ರೀಯ ರಕ್ಷಣಾ ಏಜೆನ್ಸಿ ಬಸಾರ್ನಾಸ್ ಹೇಳಿದೆ.

ಭಾರತೀಯ ವನ್ಯಜೀವಿ ತಜ್ಞೆಗೆ ಅತ್ಯುನ್ನತ ಪ್ರಶಸ್ತಿ

ಡಾ. ಪೂರ್ಣಿಮಾ

ವಿಶ್ವಸಂಸ್ಥೆ (ಪಿಟಿಐ): ಭಾರತೀಯ ವನ್ಯಜೀವಿ ತಜ್ಞೆ, ಅಸ್ಸಾಂನ ಡಾ. ಪೂರ್ಣಿಮಾ ದೇವಿ ಬರ್ಮನ್ ಅವರಿಗೆ ವಿಶ್ವ ಸಂಸ್ಥೆಯು ಅತ್ಯುನ್ನತ ಪರಿಸರ ಗೌರವ ಪ್ರಶಸ್ತಿ 'ಚಾಂಪಿಯನ್ಸ್ ಆಫ್ ದಿ ಅರ್ಥ್–2022' ಪ್ರಶಸ್ತಿ ಲಭಿಸಿದೆ.

ಪರಿಸರ ಜೀವವೈವಿಧ್ಯತೆ ಅವನತಿ ತಡೆಗಟ್ಟಲು ಅವರು ಕೈಗೊಂಡ ಪರಿವರ್ತನಾ ಕ್ರಮಗಳನ್ನು ವಿಶ್ವಸಂಸ್ಥೆ ಗುರುತಿಸಿದೆ. ಅಳಿವಿನಂಚಿನಿಂದ ಗ್ರೇಟರ್ ಅಡ್ಜುಟೆಂಟ್ ಸ್ಟಾರ್ಕ್ (ಕೊಕ್ಕರೆ ಜಾತಿಯ ಪಕ್ಷಿ) ರಕ್ಷಿಸಲು ಮಹಿಳೆಯರೇ ಇರುವ 'ಹರ್ಗೀಲಾ ಆರ್ಮಿ'ಯನ್ನು ಅವರು ಮುನ್ನಡೆಸುತ್ತಿದ್ದಾರೆ. ಬರ್ಮನ್ ಅವರು ಅರಣ್ಯಕದ ಅವಿಫೌನಾ ಸಂಶೋಧನಾ ಮತ್ತು ಸಂರಕ್ಷಣಾ ವಿಭಾಗದ ಹಿರಿಯ ಯೋಜನಾ ವ್ಯವಸ್ಥಾಪಕಿಯಾಗಿದ್ದಾರೆ.

11 ನಿಮಿಷಕ್ಕೆ ಒಬ್ಬ ಯುವತಿ ಅಥವಾ ಮಹಿಳೆ ಆಪ್ತರಿಂದಲೇ ಹತ್ಯೆ!

ವಿಶ್ವಸಂಸ್ಥೆ(ಪಿಟಿಐ): ನಿಕಟ ಸಂಗಾತಿ ಅಥವಾ ಕುಟುಂಬದ ಸದಸ್ಯರಿಂದಲೇ ಪ್ರತಿ 11 ನಿಮಿಷಕ್ಕೆ ಒಬ್ಬ ಮಹಿಳೆ ಅಥವಾ ಯುವತಿಯ ಹತ್ಯೆ ನಡೆಯುತ್ತಿದೆ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಹೇಳಿದ್ದಾರೆ.

ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿದ್ದು ಮಾನವ ಹಕ್ಕುಗಳ ಉಲ್ಲಂಘನೆಯೂ ವ್ಯಾಪಕವಾಗಿದೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಎಲ್ಲ ದೇಶಗಳು ರಾಷ್ಟ್ರೀಯ ಕ್ರಿಯಾ ಯೋಜನೆ ರೂಪಿಸಬೇಕು ಎಂದು ಅವರು ಕರೆ ನೀಡಿದ್ದಾರೆ. ಇಡೀ ದೇಶವನ್ನು ಬೆಚ್ಚಿಬೀಳಿಸಿದ ದೆಹಲಿಯ ಶ್ರದ್ಧಾ ವಾಲಕರ್ ಹತ್ಯೆ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

ನವೆಂಬರ್ 25ರಂದು ನಡೆಯುವ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ದಿನದ ಹಿನ್ನೆಲೆಯಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.



ಆಂಟೊನಿಯೊ ಗುಟೆರೆಸ್

'ಮಹಿಳೆಯರು ಮತ್ತು ಯುವತಿಯರ ಮೇಲಿನ ದೌರ್ಜನ್ಯವು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಕೋವಿಡ್ ಸಾಂಕ್ರಾಮಿಕದಿಂದ ಆರ್ಥಿಕ ಪ್ರಕ್ಷುಬ್ಧತೆ ಮತ್ತು ಇತರ ಒತ್ತಡಗಳು ಇನ್ನಷ್ಟು ದೈಹಿಕ ಮತ್ತು ಮಾನಸಿಕ ಕಿರುಕುಳಕ್ಕೆ ಕಾರಣವಾಗುತ್ತಿದೆ ಎಂದಿದ್ದಾರೆ.

ಲೈಂಗಿಕ ದೌರ್ಜನ್ಯ, ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಚಿತ್ರಗಳನ್ನು ಅಪ್‌ಲೋಡ್ ಮಾಡುವುದು ಸೇರಿದಂತೆ ಮಹಿಳೆಯರು ಮತ್ತು ಯುವತಿಯರಿಗೆ ಕಿರುಕುಳ ನೀಡಲಾಗುತ್ತಿದೆ. ಈ ರೀತಿಯ ತಾರತಮ್ಯ, ಹಿಂಸಾಚಾರ ಮತ್ತು ನಿಂದನೆಯಿಂದಾಗಿ ಎಲ್ಲಾ ಹಂತಗಳಲ್ಲಿ ಮಹಿಳೆಯರು ಮತ್ತು ಯುವತಿಯರ ಭಾಗವಹಿಸುವಿಕೆ ಸೀಮಿತವಾಗುವಂತಾಗಿದೆ. ಅಲ್ಲದೆ ಅವರ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಮಹಿಳಾ ಹಕ್ಕುಗಳ ಸಂಘಟನೆಗಳು ಮತ್ತು ಚಳವಳಿಗಳಿಗೆ ಸರ್ಕಾರ ನೀಡುವ ನೆರವು 2026ರ ವೇಳೆಗೆ ಶೇ 50ರಷ್ಟು ಹೆಚ್ಚಾಗಬೇಕು. ಮಹಿಳಾ ಹಕ್ಕುಗಳ ಪರವಾಗಿ ನಾವೆಲ್ಲ ಧ್ವನಿ ಎತ್ತಬೇಕು. 'ನಾವೆಲ್ಲರೂ ಸ್ತ್ರೀವಾದಿಗಳು' ಎಂದು ಹೆಮ್ಮೆಯಿಂದ ಘೋಷಿಸಬೇಕು ಎಂದು ಅವರು ಒತ್ತಾಯಿಸಿದರು.

ಚೀನಾದಲ್ಲಿ ಭಾರಿ ಅಗ್ನಿ ದುರಂತ: 38 ಸಾವು

ಬೀಜಿಂಗ್ (ಪಿಟಿಐ): ಚೀನಾದ ಹನನ್ ಪ್ರಾಂತ್ಯದ ಅನ್ಯಾಂಗ್ ನಗರದ ವಸ್ತ್ರ ತಯಾರಿಕಾ ಘಟಕದಲ್ಲಿ ಸೋಮವಾರ ಭಾರಿ ಅಗ್ನಿ ಆಕಸ್ಮಿಕ ಸಂಭವಿಸಿದ್ದು ಸುಮಾರು 38 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿಗೆ ಸುಮಾರು 4 ಗಂಟೆ ಸಮಯ ತಗುಲಿತು. ಗಾಯಗೊಂಡ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ಷಣಾ ಕಾರ್ಯಕ್ಕಾಗಿ 63 ವಾಹನಗಳನ್ನು ಮತ್ತು 240 ಸಿಬ್ಬಂದಿಯನ್ನು ದುರಂತ ನಡೆದ ಸ್ಥಳಕ್ಕೆ ಕಳುಹಿಸಲಾಗಿತ್ತು ಎಂದು ಅಲ್ಲಿಯ ಪತ್ರಿಕೆ ವರದಿ ಮಾಡಿದೆ.

ಬೆಸುಗೆಹಾಕುವ ಕೆಲಸ ನಡೆಯುತ್ತಿದ್ದ ವೇಳೆ ಹೊರಬಂದ ಕಿಡಿಗಳಿಂದ ಬಟ್ಟೆಗಳಿಗೆ ಬೆಂಕಿ ಹೊತ್ತಿ ಈ ದುರಂತ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಗಳಿಂದ ತಿಳಿದುಬಂದಿದೆ.

ಮಳೆಯಾಟ; ಭಾರತ–ನ್ಯೂಜಿಲೆಂಡ್ ಪಂದ್ಯ ಟೈ; ಹಾರ್ದಿಕ್ ಬಳಗಕ್ಕೆ ಸರಣಿ

ಸಿರಾಜ್, ಅರ್ಷದೀಪ್ ಅಬ್ಬರ

ನೇಪಿಯರ್ (ಪಿಟಿಐ): ನ್ಯೂಜಿಲೆಂಡ್ ನೆಲದಲ್ಲಿ ಹಾರ್ದಿಕ್ ಪಾಂಡ್ಯ ನೇತೃತ್ವದ ಭಾರತ ತಂಡವು ಸರಣಿ ಜಯದ ಸಂಭ್ರಮ ಆಚರಿಸಿತು.

ಮೂರು ಪಂದ್ಯಗಳ ಸರಣಿಯಲ್ಲಿ ಭಾರತವು 1–0ಯಿಂದ ಜಯಿಸಿತು. ಸರಣಿಯ ಮೊದಲ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಎರಡನೇ ಪಂದ್ಯದಲ್ಲಿ ಭಾರತ ಗೆದ್ದಿತ್ತು. ಮಂಗಳವಾರ ನಡೆದ ಮೂರನೇ ಪಂದ್ಯಕ್ಕೂ ಮಳೆ ಅಡ್ಡಿ ಯಾಯಿತು. ಡಕ್ವರ್ಥ್ ಲೂಯಿಸ್ ನಿಯಮದಡಿಯಲ್ಲಿ ಪಂದ್ಯವನ್ನು ಟೈ ಮಾಡಿಕೊಳ್ಳುವಲ್ಲಿ ಹಾರ್ದಿಕ್ ಬಳಗ ಯಶಸ್ವಿಯಾಯಿತು.

ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಭಾರತದ ವೇಗದ ಜೋಡಿ ಮೊಹಮ್ಮದ್ ಸಿರಾಜ್ ಹಾಗೂ ಅರ್ಷದೀಪ್ ಸಿಂಗ್ ತಲಾ ನಾಲ್ಕು ವಿಕೆಟ್ ಗಳಿಸಿ ವಿಜೃಂಭಿಸಿದರು. ಇದರಿಂದಾಗಿ ನ್ಯೂಜಿಲೆಂಡ್ 19.4 ಓವರ್‌ಗಳಲ್ಲಿ 160 ರನ್ ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನಟ್ಟಿದ ಭಾರತ ತಂಡವು 9 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 75 ರನ್ ಗಳಿಸಿತು.

ಈ ಸಂದರ್ಭದಲ್ಲಿ ಮಳೆ ಸುರಿಯಿತು. ನಂತರದ ಹಂತದಲ್ಲಿ ಪಂದ್ಯವನ್ನು ಮುಂದುವರಿಸಲು ಅವಕಾಶವಾಗಲಿಲ್ಲ. ಆದ್ದರಿಂದ ಡಕ್ವರ್ಥ್ –ಲೂಯಿಸ್ ನಿಯಮದ ಲೆಕ್ಕಾಚಾರ ನಡೆಸಲಾಯಿತು. ಭಾರತವು ಸಮಬಲಕ್ಕೆ ಅಗತ್ಯವಾಗಿದ್ದ ಸ್ಕೋರ್ ಗಳಿಸಿದ್ದರಿಂದ ಪಂದ್ಯ ಟೈ ಎಂದು ಘೋಷಿಸಲಾಯಿತು. ಹಾರ್ದಿಕ್ (ಔಟಾಗದೆ 30; 18ಎ, 4X3, 6X1) ಮತ್ತು ಸೂರ್ಯಕುಮಾರ್ ಯಾದವ್ (13; 10ಎ, 4X1, 6X1) ಮಿಂಚಿನ ಆಟವಾಡಿದ್ದು ಫಲ ನೀಡಿತು. ಕಿವೀಸ್ ನೆಲದಲ್ಲಿ ಮೂರನೇ ಬಾರಿ ಸರಣಿ ಜಯದ ಸಾಧನೆಯನ್ನು ಭಾರತ ಮಾಡಿತು.

ಟಿ20 ಸರಣಿ ಜಯಿಸಿದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಪಿ/ಪಿಟಿಐ ಚಿತ್ರ

ಮೊಹಮ್ಮದ್ ಸಿರಾಜ್–ಅರ್ಷದೀಪ್ ಸಿಂಗ್ ಜೊತೆಯಾಟ!: ಬೌಲಿಂಗ್‌ನಲ್ಲಿ ಸಿರಾಜ್ ಮತ್ತು ಅರ್ಷದೀಪ್ ಜೊತೆಯಾಟವು ರಂಗೇರಿತು. ನ್ಯೂಜಿಲೆಂಡ್ ತಂಡವು 15.5 ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ 130 ರನ್ ಗಳಿಸಿತ್ತು. ಆದರೆ ನಂತರದ 30 ರನ್‌ಗಳನ್ನು ಗಳಿಸುವಷ್ಟರಲ್ಲಿ ತಂಡದ ಏಳು ವಿಕೆಟ್‌ಗಳು ಪತನವಾದವು. ಇದಕ್ಕೆ ಕಾರಣ ಸಿರಾಜ್ ಹಾಗೂ ಅರ್ಷದೀಪ್. ಪಂದ್ಯದ ಆರಂಭದಲ್ಲಿಯೇ ಎಡಗೈ ವೇಗಿ ಅರ್ಷದೀಪ್ ಫಿನ್ ಅಲೆನ್ ವಿಕೆಟ್ ಕಬಳಿಸಿದರು. ಆರನೇ ಓವರ್‌ನಲ್ಲಿ ಸಿರಾಜ್ ಎಸೆತದಲ್ಲಿ ಚಾಪ್‌ಮನ್ ಔಟಾದರು.

ಈ ಹಂತದಲ್ಲಿ ಜೊತೆಗೂಡಿದ ಡೆವೊನ್ ಕಾನ್ವೆ ಹಾಗೂ ಗ್ಲೆನ್ ಫಿಲಿಪ್ಸ್ 86 ರನ್ ಸೇರಿಸಿದರು. ಇಬ್ಬರೂ ಅರ್ಧಶತಕ ದಾಖಲಿಸಿದರು. ಈ ಜೊತೆಯಾಟವನ್ನು 16ನೇ ಓವರ್‌ನಲ್ಲಿ ಗ್ಲೆನ್ ವಿಕೆಟ್ ಗಳಿಸಿದ ಸಿರಾಜ್ ಜೊತೆಯಾಟ ಮುರಿದರು. ಇಲ್ಲಿಂದ ಬೌಲರ್‌ಗಳ ಅಬ್ಬರ ಹೆಚ್ಚಿತು. ದೊಡ್ಡ ಮೊತ್ತ ಗಳಿಸುವ ಕಿವೀಸ್ ಯೋಜನೆ ಕಮರಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 19.4 ಓವರ್‌ಗಳಲ್ಲಿ 160 (ಡೆವೊನ್ ಕಾನ್ವೆ 59, ಗ್ಲೆನ್ ಫಿಲಿಪ್ಸ್ 54, ಅರ್ಷದೀಪ್ ಸಿಂಗ್ 37ಕ್ಕೆ4, ಮೊಹಮ್ಮದ್ ಸಿರಾಜ್ 17ಕ್ಕೆ4, ಹರ್ಷಲ್ ಪಟೇಲ್ 28ಕ್ಕೆ1) ಭಾರತ: 9 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 75 (ಹಾರ್ದಿಕ್ ಪಾಂಡ್ಯ ಔಟಾಗದೆ 30, ಟಿಮ್ ಸೌಥಿ 27ಕ್ಕೆ2) ಫಲಿತಾಂಶ: ಪಂದ್ಯ ಟೈ (ಡಕ್ವರ್ಥ್–ಲೂಯಿಸ್ ನಿಯಮ). ಭಾರತ ತಂಡಕ್ಕೆ 1–0ಯಿಂದ ಸರಣಿ ಗೆಲುವು.

ಅಂಧರ ಚೆಸ್: ಬಸಲಿಂಗಪ್ಪಗೆ ಪ್ರಶಸ್ತಿ

ಮೈಸೂರು: ರಾಯಚೂರಿನ ಬಸಲಿಂಗಪ್ಪ ಮರಡ್ಡಿ, ಪಡುವಾರಹಳ್ಳಿಯ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಮುಕ್ತಾಯಗೊಂಡ ರಾಜ್ಯಮಟ್ಟದ ಅಂಧರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದರು.

ಬಸಲಿಂಗಪ್ಪ ಅವರು ಒಟ್ಟು ಏಳು ಅಂಕ ಗಳಿಸಿ ₹ 6 ಸಾವಿರ ಬಹುಮಾನದ ಜೊತೆಗೆ ಪ್ರಶಸ್ತಿ ಗಳಿಸಿದರು. ಕಲಬುರಗಿಯ ಕಿರಣಕುಮಾರ್ ಎ.ಸಿಂಪಿ ದ್ವಿತೀಯ ಹಾಗೂ ಧಾರವಾಡದ ಎನ್.ಎಂ.ಶಿವನಗೌಡ ತೃತೀಯ ಸ್ಥಾನ ಗಳಿಸಿದರು. ರಾಯಚೂರಿನ ಕೆಂಚಪ್ಪ ನಾಲ್ಕನೇ ಹಾಗೂ ಬೆಂಗಳೂರಿನ ಜಿ.ಎಚ್.ಸಾಗರ್ ಐದನೇ ಸ್ಥಾನ ಗಳಿಸಿದರು.

18 ವರ್ಷದೊಳಗಿನವರ ವಿಭಾಗದಲ್ಲಿ ರಾಯಚೂರಿನ ಮಲ್ಲೇಶ್ ಪ್ರಶಸ್ತಿ ಜಯಿಸಿದರೆ, ವಿಜಯಪುರದ ಕುಶಾಲ್ ರಾಮಣ್ಣ ಜಗಲಿ ಎರಡನೇ ಹಾಗೂ ಬೀದರ್‌ನ ಪಿ.ಅವಿನಾಶ್ ಮೂರನೇ ಸ್ಥಾನ ಪಡೆದರು.

ಮಹಿಳಾ ವಿಭಾಗದಲ್ಲಿ ರಾಯಚೂರಿನ ಶಾಹಿಸ್ತಾ ಬೇಗಂ ಪ್ರಶಸ್ತಿ ಜಯಿಸಿದರು. ಬೆಂಗಳೂರಿನ ಕೆ.ಎಸ್.ಶೀಲವತಿ, ರಾಯಚೂರಿನ ಶಿವಲಿಂಗಮ್ಮ, ನಾಗಮ್ಮ, ಬೆಂಗಳೂರಿನ ಜ್ಯೋತಿ ನಂತರದ ಸ್ಥಾನ ಪಡೆದರು.

‘ಬೆಂಗಳೂರಿನಲ್ಲಿ ಜ.5,6 ಹಾಗೂ 7ರಂದು ನಡೆಯುವ ದಕ್ಷಿಣ ವಲಯ ಚಾಂಪಿಯಷಿಪ್‌ನಲ್ಲಿ ಸೀನಿಯರ್ ವಿಭಾಗದಲ್ಲಿ 15 ಮಂದಿ, 18 ವರ್ಷದೊಳಗಿನವರ ವಿಭಾಗದಲ್ಲಿ 10 ಹಾಗೂ ಮಹಿಳಾ ವಿಭಾಗದಲ್ಲಿ 5 ಮಂದಿ ಸ್ಪರ್ಧಿಸಲಿದ್ದಾರೆ’ ಎಂದು ಟೂರ್ನಿಯ ಮುಖ್ಯ ತೀರ್ಪುಗಾರ ಎಂ.ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ಚೆಸ್: ಭಾರತಕ್ಕೆ ಮಿಶ್ರ ಫಲ

ಜೆರುಸಲೆಂ (ಪಿಟಿಐ): ಭಾರತ ತಂಡವು ಫಿಡೆ ವಿಶ್ವ ಟೀಮ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮಿಶ್ರ ಫಲ ಕಂಡಿತು. ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಿ ಗುಂಪಿನ ಮೂರನೇ ಸುತ್ತಿನಲ್ಲಿ ಅಜರ್‌ಬೈಜಾನ್ ಎದುರು ಗೆದ್ದರೆ, ನಾಲ್ಕನೇ ಸುತ್ತಿನಲ್ಲಿ ಉಜ್ಬೆಕಿಸ್ತಾನಕ್ಕೆ ತಂಡಕ್ಕೆ ಮಣಿಯಿತು.

ಸೋಮವಾರ ರಾತ್ರಿ ನಡೆದ ಅಜರ್‌ಬೈಜಾನ್ ವಿರುದ್ಧದ ಸೆಣಸಾಟದ ಮೊದಲ ಪಂದ್ಯದಲ್ಲಿ ಭಾರತದ ವಿದಿತ್ ಸಂತೋಷ್ ಗುಜರಾತಿ ಅವರು ತನಗಿಂತ ಮೇಲಿನ ರ್‍ಯಾಂಕ್‌ನ ಶಕ್ರಿಯಾರ್ ಮಮೆದ್ಯರೊವ್ ಎದುರು ಗೆದ್ದರು. ಉಳಿದ ಮೂರು ಪಂದ್ಯಗಳಲ್ಲಿ ಆಡಿದ ನಿಹಾಲ್ ಸರಿನ್, ಎಸ್.ಎಲ್. ನಾರಾಯಣನ್ ಮತ್ತು ಕೆ. ಶಶಿಕಿರಣ್ ಡ್ರಾ ಮಾಡಿಕೊಂಡರು. ತಂಡವು 2.5–1.5ನಿಂದ ಗೆಲುವು ಒಲಿಸಿಕೊಂಡಿತು.

ಉಜ್ಬೆಕಿಸ್ತಾನ ಎದುರಿನ ಪಂದ್ಯದಲ್ಲಿ ಭಾರತ 0.5–3.5ರಿಂದ ಸೋಲು ಕಂಡಿತು. ನಾರಾಯಣನ್ ಮಾತ್ರ ಡ್ರಾ ಸಾಧಿಸಿದರು. ವಿದಿತ್, ಸರಿನ್ ಮತ್ತು ಅಭಿಜೀತ್ ಗುಪ್ತಾ ಎದುರಾಳಿಗಳ ವಿರುದ್ಧ ಸೋಲನುಭವಿಸಿದರು.

ವಿದಿತ್ ಗುಜರಾತಿ –ಟ್ವಿಟರ್ ಚಿತ್ರ

ಈ ಫಲಿತಾಂಶಗಳೊಂದಿಗೆ ಭಾರತದ ಕ್ವಾರ್ಟರ್‌ಫೈನಲ್ ಆಸೆ ಕ್ಷೀಣಿಸಿದೆ. ಬಿ ಗುಂಪಿನಿಂದ ಉಜ್ಬೆಕಿಸ್ತಾನ ಮಾತ್ರ ಎಂಟರಘಟ್ಟ ತಲುಪುವ ಸಾಧ್ಯತೆಯಿದೆ.

ಯುವರಾಜ್ ಸಿಂಗ್‌ಗೆ ನೋಟಿಸ್

ಪಣಜಿ (ಪಿಟಿಐ): ಇಲ್ಲಿಯ ಮೋರ್ಜಿಮ್‌ನಲ್ಲಿ ಅಕ್ರಮವಾಗಿ ವಿಲ್ಲಾ ನಿರ್ಮಿಸಿದ ಆರೋಪದ ಮೇಲೆ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ಅವರಿಗೆ ರಾಜ್ಯ ಪ್ರವಾಸೋದ್ಯಮ ಇಲಾಖೆ ನೋಟಿಸ್ ನೀಡಿದೆ.

ಆನ್‌ಲೈನ್ ಹೋಮ್‌ಸ್ಟೇ ನಡೆಸುವುದಕ್ಕಾಗಿ ಯುವರಾಜ್ ಅವರು ವಿಲ್ಲಾ ನಿರ್ಮಿಸಿದ್ದು, ಸಂಬಂಧಿಸಿದ ರಾಜ್ಯದ ಅಧಿಕಾರಿಗಳ ಬಳಿ ಇದನ್ನು ನೋಂದಾಯಿಸಿಲ್ಲ ಎನ್ನಲಾಗಿದೆ. ಈ ಕುರಿತು ಡಿಸೆಂಬರ್ 8ರಂದು ವಿಚಾರಣೆಗೆ ಹಾಜರಾಗುವಂತೆ ಪ್ರವಾಸೋದ್ಯಮ ಇಲಾಖೆ ಯುವರಾಜ್ ಅವರಿಗೆ ಸೂಚಿಸಿದೆ.

ಹೋಮ್‌ಸ್ಟೇ ನಡೆಸಲು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡುವುದನ್ನು ಗೋವಾ ರಾಜ್ಯದಲ್ಲಿ ಕಡ್ಡಾಯಗೊಳಿಸಲಾಗಿದೆ.

ಹೊಸ ಮಾದರಿಯಲ್ಲಿ 2024ರ ಟಿ20 ವಿಶ್ವಕಪ್

ನವದೆಹಲಿ (ಪಿಟಿಐ): ಮುಂದಿನ ಬಾರಿಯ ಪುರುಷರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯು ಹೊಸ ಮಾದರಿಯಲ್ಲಿ ನಡೆಯಲಿದೆ.

2024ರಲ್ಲಿ ನಡೆಯುವ ಟೂರ್ನಿಯು 20 ತಂಡಗಳನ್ನು ಒಳಗೊಂಡಿರಲಿದ್ದು, 5 ತಂಡಗಳ 4 ಗುಂಪುಗಳನ್ನಾಗಿ ವಿಂಗಡಿಸಲಾಗುತ್ತದೆ. ಮೊದಲ ಸುತ್ತಿನ ಪಂದ್ಯಗಳು ಮುಗಿದ ಬಳಿಕ ಸೂಪರ್ 8 ಮಾದರಿಯಲ್ಲಿ ಸ್ಪರ್ಧೆ ನಡೆಸಲಾಗುತ್ತದೆ.

2021 ಮತ್ತು 2022ರ ಆವೃತ್ತಿಗಳಲ್ಲಿ ಮೊದಲ ಸುತ್ತಿನ ಪಂದ್ಯಗಳ ಬಳಿಕ ಸೂಪರ್ 12 ಹಂತ ಆಡಿಸಲಾಗಿತ್ತು. ಆದರೆ ಮುಂಬರುವ ಆವೃತ್ತಿಯಲ್ಲಿ ಪ್ರತಿ ನಾಲ್ಕು ಗುಂಪಿನಿಂದ ಅಗ್ರ ಎರಡು ತಂಡಗಳು ಸೂಪರ್ 8 ಹಂತಕ್ಕೆ ಪ್ರವೇಶಿಸಲಿವೆ. ಮತ್ತೆ ಅವುಗಳನ್ನು ನಾಲ್ಕು ತಂಡಗಳ ಎರಡು ಗುಂಪುಗಳಾಗಿ ವಿಭಜಿಸಲಾಗುತ್ತದೆ. ಈ ಎರಡೂ ಗುಂಪಿನ ಅಗ್ರ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸಲಿದ್ದು, ಆ ಬಳಿಕ ಫೈನಲ್ ನಡೆಯಲಿದೆ.

ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಆಡಲು ಈಗಾಗಲೇ 12 ತಂಡಗಳು ಸ್ಥಾನ ಪಡೆದಿವೆ. ಇತ್ತೀಚೆಗೆ ಆಸ್ಟ್ರೇಲಿಯಾದಲ್ಲಿ ಕೊನೆಗೊಂಡ ಟಿ20 ವಿಶ್ವಕಪ್‌ನಲ್ಲಿ ಚಾಂಪಿಯನ್ ಆದ ಇಂಗ್ಲೆಂಡ್ ಮತ್ತು ರನ್ನರ್ಸ್ ಅಪ್ ಪಾಕಿಸ್ತಾನ ಸೇರಿದಂತೆ ಎಂಟು ತಂಡಗಳು ಅರ್ಹತೆ ಪಡೆದಿವೆ. ರ್‍ಯಾಂಕಿಂಗ್ ಆಧಾರದಲ್ಲಿ ಅಫ್ಗಾನಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳೂ ಅರ್ಹತೆ ಗಿಟ್ಟಿಸಿವೆ.

ಆತಿಥೇಯ ದೇಶಗಳಾಗಿ ವೆಸ್ಟ್ ಇಂಡೀಸ್, ಅಮೆರಿಕ ಸ್ಥಾನ ಪಡೆದಿವೆ.



72198 21111 | BAJAJ FINANCE LTD - AF | BAJAJ SECURE · AMC · ROAD SIDE ASSISTANCE

ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಆಯ್ದ ವಲಯಗಳಲ್ಲಿ ಆಯ್ದ ಮಾಡೆಲ್‌ಗಳ ಮೇಲೆ ಕೊಡುಗೆ ಲಭ್ಯವಿದೆ. #CT 125X ಡ್ರಮ್ ಶ್ರೇಣಿಯ ಮೇಲೆ ಕರ್ನಾಟಕದಲ್ಲಿ ಎಕ್ಸ್‌ಶೋರೂಮ್‌ನ ಬೆಲೆಯಾಗಿದೆ. ##ಡೌನ್ ಪೇಮೆಂಟ್ CT 125X ಡ್ರಮ್ ಶ್ರೇಣಿಯದ್ದಾಗಿದೆ. ಡಿಸಿಸಿ ಶುಲ್ಕಗಳು, ಪ್ರೊಸೆಸಿಂಗ್ ಫೀಗಳು ಮತ್ತು ಇತರ ಶುಲ್ಕಗಳನ್ನು ಹೊರತುಪಡಿಸಿ ಡೌನ್ ಪೇಮೆಂಟ್ ಇದೆ. ಹಣಕಾಸು ಸೌಲಭ್ಯವು ಫೈನಾನ್ಶಿಯರ್ ವಿವೇಚನೆಗೆ ಒಳಪಟ್ಟಿರುತ್ತದೆ. ಮೊದಲೇ ಸೂಚನೆ ನೀಡದೇ ಯಾವುದೇ ಅಥವಾ ಎಲ್ಲ ಕೊಡುಗೆಗಳನ್ನು ಹಿಂಪಡೆಯಲು ಬಜಾಜ್ ಆಟೋ ಹಕ್ಕು ಕಾಯ್ದಿರಿಸಿದೆ. RSA ಮತ್ತು MMCಗಾಗಿ ಬಜಾಜ್ ಆಟೋ ಡೀಲರ್ ಬಳಿ ಪರಿಶೀಲಿಸಿ. RSA ಅನ್ನು ತೃತೀಯ ಪಕ್ಷಗಳು ಒದಗಿಸುತ್ತವೆ ಮತ್ತು ಇದು ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. *ಡಿಸ್ಕ್ ಬ್ರೇಕ್ ಐಚ್ಛಿಕ ಸೌಲಭ್ಯವಾಗಿದ್ದು, CT 125X ಡಿಸ್ಕ್ ವೇರಿಯಂಟ್‌ನೊಂದಿಗೆ ಮಾತ್ರ ಇರುತ್ತದೆ. ಡ್ರಮ್ ಬ್ರೇಕ್ ವೇರಿಯಂಟ್ ಕೂಡಾ ಲಭ್ಯವಿದೆ.

Authorised Dealers For Bajaj Auto Ltd.: Bangalore Bommanahalli Amba Bajaj 9535411100 • **HSR Layout** Amba Bajaj 8884333732 • **Sarjapur** Amba Bajaj 7406688884 • **BTM Layout** Amba Bajaj 9513926221 • **Madiwala** Amba Bajaj 9945000048 • **Electronic City** Amba Bajaj 8971711118 • **Nayandahalli Mysore Rd** RV Bajaj 6360308373 • **Chandra Layout Moodalapalya** RV Bajaj 9740444545 • **Kengeri** RV Bajaj 7353763305 • **Giri Nagar** RV Bajaj 7353763302 • **Vijaynagar** RV Bajaj 7353763307 • **Banashankari** Popular Bajaj 9945111874 • **Rajajinagar** Popular Bajaj 6366554001 • **Koramangala** Popular Bajaj 9845589079 • **Konankunte** Popular Bajaj 7760967834 • **Ramnagara** Popular Bajaj 7760967832 • **Kanakpura** Popular Bajaj 9972533890 • **Channapatna** Popular Bajaj 9901947666 • **Uttarahalli** Popular Bajaj 9972095890 • **Gottigere** Popular Bajaj 7760996891 • **Mekhri Circle** Kalyani Bajaj 8884413595 • **Yelahanka** Kalyani Bajaj 9449849618 • **Mathikere** Kalyani Bajaj 8884430126 • **Chickbellapur** Kalyani Bajaj 8884413594 • **Devenhalli** Kalyani Bajaj 9449849624 • **Marathahalli** Khivraj Bajaj 9036091986 • **Kasturba Rd** Khivraj Bajaj 9035060140 • **Indiranagar** Khivraj Bajaj 9035060139 • **Hennur** Khivraj Bajaj 9742155225 • **Banaswadi** Khivraj Bajaj 9035060147 • **Yeshwanthpur** Khivraj Bajaj 9449404098 • **Hesargatta** Khivraj Bajaj 9035060148 • **Whitefield** Khivraj Bajaj 8618840097 • **Hoskote** Khivraj Bajaj 9035005075 • **Magadi Rd** Anant Bajaj 9980009166 • **Laggere** Anant Bajaj 7022984402 • **Hubli** Channamma Bajaj 9620614106 • **Arvind Nagar Branch** 8884771881 • **Gadag** Channamma Bajaj 9620747153 • **Sirsi** Channamma Bajaj 8884645609 • **Haveri** Channamma Bajaj 8151884422 • **Belgaum** Jagajampi Bajaj 988690116 • **Jagashree Bajaj** 7349773962 • **Chikodi** Jagajampi Bajaj 9449736406 • **Gokak** Jagajampi Bajaj 7022425616 • **Bellary** AADI Bajaj 9606050246 • **Raichur** Shree Balaji Automobiles 9964626515 • **Koppal** I A Bajaj 8123712938 • **Hospet** AADI Bajaj 9731361414 • **Hagaribommanahalli** AADI Bajaj 9900363010 • **Siruguppa** AADI Bajaj 9110217558 • **Bijapur** Bijjargi Bajaj Blde Road 6362877793 • **Bus Stand Road** 8884000970 • **Bagalkot** Bijjargi Bikes 9148448324 • **Sindagi** Bijjargi Bajaj 8861946802 • **Bidar** Sindol Bajaj 9513226555 • **Chitradurga** BTV Bajaj 8310553554 • **Hiriyur** BTV Bajaj 8310553554 • **Challakere** BTV Bajaj 8310553554 • **Davangere** Jain Bajaj 9343636805 • **Harihara** Jain Bajaj 9632300444 • **Gulbarga** VKG Bajaj 9632018700 • **Yadgir** VKG Bajaj 8722182492 • **Humnabad** VKG Bajaj 8050889160 • **Shimoga** Supreme Bajaj 8105000999 • **Sagar** Supreme Bajaj 9008339799 • **Bhadravathi** Supreme Bajaj 9008352799 • **Chikkamagalur** Supreme Bajaj 9008379799 • **Tarikere** Supreme Bajaj 9008569799 • **Hosanagar** Supreme Bajaj 9731767799 • **Anandpura** Supreme Bajaj 9663501499 • **Hassan** Arpita Bajaj 9902439255 • **Arsikere** Arpita Bajaj 9964094535 • **Kolar** Shree Kamakshi Bajaj 9845784351 • **Malur** Shree Kamakshi Bajaj 9665524409 • **KGF** Shree Kamakshi Bajaj 9900235758 • **Mulbagalu** Shree Kamakshi Bajaj 8892616586 • **Bangarapet** Shree Kamakshi Bajaj 8970688361 • **Tumkur** Akshaya Bajaj 7259040212 • **Tiptur** Akshaya Bajaj 7259040226 • **Sira** Akshaya Bajaj 7259040328 • **Kunigal** Akshaya Bajaj 7338662706 • **Madhugiri** Akshaya Bajaj 7259040340 • **BH Road** 7338662687 • **Mysore Saraswathipuram** Popular Bajaj 9148101113 • **Chamarajapuram** Popular Bajaj 7259786271 • **Vontikoppal** Star Bajaj 9886959722 • **Mandya** Popular Bajaj 7760967900 • **Chamarajanagara** Patel Bajaj 9480494888 • **Hunsur** Star Bajaj 8884374777 • **Kushalnagar** Popular Bajaj 7259786276 • **Nanjangud** Star Bajaj 9742100252 • **NR Mohalla** Star Bajaj 8095777706 • **Balmatta** Supreme Bajaj 9606973192 **Kuloor** Supreme Bajaj 9606237547 • **Surathkal** Supreme Bajaj 9606973193 • **Thokottu** 9606702429 • **B C Road** 7618715273 • **Bidar** Sindol Bajaj 9513226555 • **Udupi** Saanvi Bajaj 8861135225.